ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕೇಂದ್ರ ಸರ್ಕಾರದ ಜೊತೆ ಚರ್ಚೆ: ಸಕ್ಕರೆ ಸಚಿವ ಮುನೇನಕೊಪ್ಪ ಭರವಸೆ

‘ಕಬ್ಬಿನ ಎಫ್‌ಆರ್‌ಪಿ ಹೆಚ್ಚಳ’

ಪ್ರಜಾವಾಣಿ ವಾರ್ತೆ

ಮುನೇನಕೊಪ್ಪ

ಮುಖ್ಯಾಂಶಗಳು

- ರೈತರ ಹಿತ ಕಾಪಾಡಲು ಸರ್ಕಾರ ಬದ್ಧ
- ರಾಜ್ಯದಲ್ಲಿ ಏಕಕಾಲಕ್ಕೆ ಕಬ್ಬಿನ ಕಾರ್ಖಾನೆಗಳ ಆರಂಭ
- ಬಾಕಿ ಪಾವತಿಸದ ಕಾರ್ಖಾನೆಗಳಿಗೆ ನೋಟಿಸ್

ಬೆಂಗಳೂರು: ‘ಕಬ್ಬಿನ ದರ ಹೆಚ್ಚಿಸುವ ಕುರಿತು ಕೇಂದ್ರ ಸರ್ಕಾರದ ಜೊತೆ ಮಾತುಕತೆ ನಡೆಸಿ ತೀರ್ಮಾನ ತೆಗೆದುಕೊಳ್ಳಲಾಗುವುದು. ಕಬ್ಬು ಬೆಳೆಗಾರರು ಆತಂಕಪಡಬೇಕಿಲ್ಲ’ ಎಂದು ಸಕ್ಕರೆ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಭರವಸೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ‘ನ್ಯಾಯಸಮ್ಮತ ಮತ್ತು ಪ್ರೋತ್ಸಾಹದಾಯಕ ದರ (ಎಫ್‌ಆರ್‌ಪಿ) ಹೆಚ್ಚಳದ ಬಗ್ಗೆ ಕೇಂದ್ರ ಸರ್ಕಾರದ ಜೊತೆ ಚರ್ಚೆ ಮಾಡಬೇಕಾಗುತ್ತದೆ. ನಾನು ಸಚಿವನಾದ ಮೇಲೆ ಎರಡು ಬಾರಿ ಕೇಂದ್ರ ಸಕ್ಕರೆ ಸಚಿವರ ಜೊತೆ ಮಾತುಕತೆ ನಡೆಸಿದ್ದೇನೆ. ರೈತರ ಹಿತ ಕಾಪಾಡಲು ಸರ್ಕಾರ ಬದ್ಧವಾಗಿದೆ’ ಎಂದರು.

‘ಇನ್ನು ಮುಂದೆ ರಾಜ್ಯದಲ್ಲಿ ಏಕಕಾಲಕ್ಕೆ ಕಬ್ಬಿನ ಕಾರ್ಖಾನೆಗಳನ್ನು ಆರಂಭಿಸಬೇಕು. ಈ ಬಗ್ಗೆ ಈಗಾಗಲೇ ಎಲ್ಲ ಕಬ್ಬು ಕಾರ್ಖಾನೆ ಮಾಲೀಕರ ಜೊತೆ ಮಾತಾಡಿದ್ದೇನೆ. ಕೆಲವರು ತಮಗೆ ಬೇಕಾದ ಸಮಯದಲ್ಲಿ ಕಾರ್ಖಾನೆ ಆರಂಭಿಸುತ್ತಾರೆ. ಇದರಿಂದ ಅನೇಕ ಸಮಸ್ಯೆ ಆಗುತ್ತಿದೆ. ಆದಷ್ಟು ಬೇಗ ಮತ್ತೊಂದು ಸಭೆ ಮಾಡಿ ಈ ಬಗ್ಗೆ ನಿರ್ಧಾರ ಮಾಡಲಾಗುವುದು’ ಎಂದು ಭರವಸೆ ನೀಡಿದರು.

‘ರೈತರ ಹಣ ಬಾಕಿ ಪಾವತಿ ಬಗ್ಗೆ ಬೆಳಗಾವಿ ಮತ್ತು ಬೆಂಗಳೂರಿನಲ್ಲಿ ಸಭೆ ನಡೆಸಿದ್ದೇನೆ. ಈ ವರ್ಷ ₹ 42.17 ಕೋಟಿ ಬಾಕಿ ಇತ್ತು. ಸೂಚನೆ ನೀಡಿದ ಕಾರಣ ಕಾರ್ಖಾನೆಗಳು ಮೂರು ದಿನಗಳ ಒಳಗಾಗಿ ₹ 26.26 ಕೋಟಿ ಪಾವತಿ ಮಾಡಿವೆ. ಬಸವೇಶ್ವರ ಶುಗರ್ಸ್ ₹ 9.50 ಕೋಟಿ, ಕೋರ್ ಗ್ರೀನ್ ಶುಗರ್ಸ್ ಕಾರ್ಖಾನೆಯಿಂದ ₹ 6.41 ಕೋಟಿ ಬಾಕಿ ಇದೆ. ಈ ಕಾರ್ಖಾನೆಗಳಿಗೆ ನೋಟಿಸ್ ನೀಡಲಾಗಿದೆ’ ಎಂದು ಸಚಿವರು ತಿಳಿಸಿದರು.

₹45 ಲಕ್ಷದ ಫ್ಲ್ಯಾಟ್‌ಗೆ ಶೇ 3 ನೋಂದಣಿ ಶುಲ್ಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿನ ಫ್ಲ್ಯಾಟ್ ಖರೀದಿಯನ್ನು ಪ್ರೋತ್ಸಾಹಿಸಲು ಮುಂದಾಗಿರುವ ರಾಜ್ಯ ಸರ್ಕಾರ, ₹45 ಲಕ್ಷದವರೆಗಿನ ಮೌಲ್ಯದ ಫ್ಲ್ಯಾಟ್ ಮುದ್ರಾಂಕ ಶುಲ್ಕವನ್ನು (ಸ್ಟ್ಯಾಂಪ್ ಡ್ಯೂಟಿ) ಶೇ 5ರಿಂದ ಶೇ 3ಕ್ಕೆ ಇಳಿಸಿದೆ.

ಇತ್ತೀಚೆಗೆ ನಡೆದ ವಿಧಾನಮಂಡಲ ಅಧಿವೇಶನದಲ್ಲಿ ಈ ಉದ್ದೇಶಕ್ಕಾಗಿಯೇ ‘ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ಮಸೂದೆ–2021’ಗೆ ಅಂಗೀಕಾರ ನೀಡಲಾಗಿತ್ತು. ಮಸೂದೆಗೆ ರಾಜ್ಯಪಾಲರು ಅಂಕಿತ ಹಾಕಿದ್ದು, ಇದು ಕಾಯ್ದೆಯಾಗಿ ಜಾರಿಗೆ ಬಂದಿದೆ.

‘ಪ್ರಜಾವಾಣಿ ಫೋನ್ ಇನ್ ಕಾರ್ಯಕ್ರಮ’ದಲ್ಲಿ ಪಾಲ್ಗೊಂಡಿದ್ದ ಕಂದಾಯ ಸಚಿವ ಆರ್. ಅಶೋಕ ಅವರು, ಕೇಳುಗರ ಪ್ರಶ್ನೆಗೆ ಉತ್ತರಿಸಿ ಸದ್ಯದಲ್ಲೇ ಈ ಸಂಬಂಧ ಆದೇಶ ಹೊರಡಿಸಲಾಗುವುದು ಎಂದು ಭರವಸೆ ನೀಡಿದ್ದನ್ನೂ ಇಲ್ಲಿ ಸ್ಮರಿಸಬಹುದು.

ಇಲ್ಲಿಯವರೆಗೆ ₹35 ಲಕ್ಷ ಮೌಲ್ಯದ ಫ್ಲ್ಯಾಟ್ ಖರೀದಿಸುವವರು ಶೇ 3ರಷ್ಟು ಮುದ್ರಾಂಕ ಶುಲ್ಕ ಪಾವತಿಸುವ ಅವಕಾಶವಿತ್ತು. ಅದಕ್ಕಿಂತ ಹೆಚ್ಚಿನ ಮೌಲ್ಯದ ಫ್ಲ್ಯಾಟ್ ಖರೀದಿಗೆ ಶೇ 5ರಷ್ಟು ಪಾವತಿಸಬೇಕಿತ್ತು. ಆಸ್ತಿ ಮೌಲ್ಯ ಹೆಚ್ಚಳದಿಂದಾಗಿ ಮಧ್ಯಮ ವರ್ಗದವರಿಗೆ ಕೈಗೆಟುಕುವ ದರದಲ್ಲಿ ಫ್ಲ್ಯಾಟ್ ಖರೀದಿಸುವವರಿಗೆ ಈ ಸೌಲಭ್ಯ ಸಿಗುತ್ತಿರಲಿಲ್ಲ. ಈ ಕಾರಣದಿಂದಾಗಿ ಮುದ್ರಾಂಕ ಶುಲ್ಕವನ್ನು ಶೇ 2ರಷ್ಟು ಇಳಿಸುವುದಾಗಿ ಸರ್ಕಾರ ಘೋಷಿಸಿತ್ತು.

ಬಹುತೇಕ ಪೂರ್ಣ; ಹೈಕೋರ್ಟ್‌ಗೆ ಸರ್ಕಾರದ ಮಾಹಿತಿ

ಪಠ್ಯಪುಸ್ತಕ ಮುದ್ರಣ, ಪೂರೈಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ವಿದ್ಯಾರ್ಥಿಗಳಿಗೆ ಪೂರೈಸುವ ಪಠ್ಯಪುಸ್ತಕಗಳ ಮುದ್ರಣ ಮತ್ತು ವಿತರಣೆ ಕಾರ್ಯ ಬಹುತೇಕ ಪೂರ್ಣಗೊಂಡಿದೆ’ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಈ ಕುರಿತಂತೆ ಎ.ಎ. ಸಂಜೀವ್ ನಾರಾಯಣ ಹಾಗೂ ಇತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ ಚಂದ್ರ

ಶರ್ಮಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲ ವಿ. ಶ್ರೀನಿಧಿ, ‘ಕರ್ನಾಟಕ ಪಠ್ಯಪುಸ್ತಕ ಸಂಘ ನೀಡಿರುವ ಮಾಹಿತಿಯಂತೆ, 2021–22ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 1ರಿಂದ 10ನೇ ತರಗತಿ ಮಕ್ಕಳಿಗೆ ಪಠ್ಯಪುಸ್ತಕ ಪೂರೈಸುವ ನಿಟ್ಟಿನಲ್ಲಿ ಈಗಾಗಲೇ ಶೇ 99.74ರಷ್ಟು ಮುದ್ರಣ ಕಾರ್ಯ ಪೂರ್ಣಗೊಂಡಿದೆ. ಶೇ 98.86ರಷ್ಟು ಪ್ರಮಾಣದ ಪಠ್ಯಪುಸ್ತಕ ಹಂಚಿಕೆಯಾಗಿದೆ. ಇನ್ನೊಂದು ವಾರದಲ್ಲಿ ಉಳಿದ ಕಾರ್ಯ ಪೂರ್ಣಗೊಳಿಸಲಾಗುವುದು’ ಎಂದು ತಿಳಿಸಿದರು.

ಇದನ್ನು ದಾಖಲಿಸಿಕೊಂಡ ನ್ಯಾಯಪೀಠ, ಮುದ್ರಣ ಮತ್ತು ಹಂಚಿಕೆ ಕಾರ್ಯವನ್ನು ತ್ವರಿತಗೊಳಿಸುವಂತೆ ನಿರ್ದೇಶಿಸಿ ಇದೇ 23ಕ್ಕೆ ವಿಚಾರಣೆ ಮುಂದೂಡಿದೆ.

ಬಡವರಿಗೆ 3.30 ಲಕ್ಷ ಮನೆ ವಿತರಣೆ: ವಿ.ಸೋಮಣ್ಣ

ಮೈಸೂರು: ‘ಬಡವರಿಗಾಗಿ ರಾಜ್ಯದಲ್ಲಿ 3.30 ಲಕ್ಷ ಮನೆಗಳನ್ನು ನಿರ್ಮಿಸಿ ಹಕ್ಕುಪತ್ರ ವಿತರಿಸಲಾಗುತ್ತಿದೆ. ಮೈಸೂರು, ಬೆಂಗಳೂರು ಹಾಗೂ ಹುಬ್ಬಳ್ಳಿಯಲ್ಲಿ ಈ ಕಾರ್ಯಕ್ಕೆ ಚಾಲನೆ ನೀಡಲಾಗಿದೆ’ ಎಂದು ವಸತಿ ಸಚಿವ ವಿ.ಸೋಮಣ್ಣ ಮಂಗಳವಾರ ತಿಳಿಸಿದರು.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಮನೆಗಳ ನೋಂದಣಿ ಶುಲ್ಕವನ್ನು ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ₹ 1 ಸಾವಿರ, ಇತರೆ ಸಮುದಾಯದವರಿಗೆ ₹ 2 ಸಾವಿರ ನಿಗದಿಪಡಿಸಲಾಗುವುದು’ ಎಂದರು.

ಪರಿಷತ್: ರುದ್ರೇಗೌಡ ₹23 ಲಕ್ಷ, ಶರವಣ ₹12 ಲಕ್ಷ ವೈದ್ಯಕೀಯ ವೆಚ್ಚ

3 ವರ್ಷದಲ್ಲಿ ₹ 1.31 ಕೋಟಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ಮೂರು ವರ್ಷಗಳಲ್ಲಿ (2019ರಿಂದ 2021ರ ಸೆಪ್ಟೆಂಬರ್ ವರೆಗೆ) ವಿಧಾನಪರಿಷತ್ ಸದಸ್ಯರ ವೈದ್ಯಕೀಯ ವೆಚ್ಚಕ್ಕೆ ಸರ್ಕಾರದ ಬೊಕ್ಕಸದಿಂದ ₹ 1,30,73,084 ಮರು ಪಾವತಿ ಆಗಿದೆ.

ಕೋವಿಡ್ ಮೊದಲ ಮತ್ತು ಎರಡನೇ ಅಲೆಯಲ್ಲಿ ಸೋಂಕು ತಗಲಿದ ಕಾರಣಕ್ಕೆ ನಾಲ್ವರು ಸದಸ್ಯರು ಮತ್ತು ಅವರ ಪತ್ನಿ ಹಾಗೂ ಇತರ ನಾಲ್ವರು ಸದಸ್ಯರು ತಮ್ಮ ಚಿಕಿತ್ಸೆಗೆ ಸಂಬಂಧಿಸಿದಂತೆ ₹ 26,00,267 ಕ್ಲೇಮ್ ಮಾಡಲಾಗಿದೆ!

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯ ಈ ವೆಚ್ಚವನ್ನು ದೃಢೀಕರಿಸಿದ್ದು, ಸದಸ್ಯರಿಗೆ ಹಣವನ್ನು ಮರು ಪಾವತಿಸಲಾಗಿದೆ. ಸಾಮಾಜಿಕ ಕಾರ್ಯಕರ್ತ ಎಚ್.ಎಂ. ವೆಂಕಟೇಶ್ ಎಂಬವರು ವಿಧಾನ ಪರಿಷತ್ ಸಚಿವಾಲಯದಿಂದ ಮಾಹಿತಿ ಹಕ್ಕು ಕಾಯ್ದೆಯಡಿ ಈ ಮಾಹಿತಿ ಪಡೆದುಕೊಂಡಿದ್ದಾರೆ.

ಹಲವು ಸದಸ್ಯರು ಒಂದೇ ವರ್ಷ 3-4 ಬಾರಿ ಪ್ರತ್ಯೇಕ, ಪ್ರತ್ಯೇಕ ವೈದ್ಯಕೀಯ ಬಿಲ್‌ಗಳನ್ನು ಸಲ್ಲಿಸಿ ಹಣ ಕ್ಲೇಮ್ ಮಾಡಿಕೊಂಡಿದ್ದಾರೆ. 6-7 ಬಾರಿ ಕ್ಲೇಮ್ ಮಾಡಿಕೊಂಡ ಸದಸ್ಯರೂ ಇದ್ದಾರೆ.

ಕೋವಿಡ್ ವೈದ್ಯಕೀಯ ವೆಚ್ಚ ಪಡೆದವರು

ಹೆಸರು	ಮೊತ್ತ (₹ ಗಳಲ್ಲಿ)
ಪಿ.ಆರ್. ರಮೇಶ್, ಪತ್ನಿ	4,20,469
ಕೆ.ಎ. ತಿಪ್ಪೇಸ್ವಾಮಿ, ಪತ್ನಿ	4,27,202
ಸುನೀಲ್ ವಲ್ಯಾಪುರೆ, ಪತ್ನಿ	2,90,324
ಸುನೀಲ್‌ಗೌಡ ಪಾಟೀಲ, ಪತ್ನಿ	3,21,391
ಕೆ.ಸಿ. ಕೊಂಡಯ್ಯ	3,94,232
ಸಂದೇಶ ನಾಗರಾಜು	3,33,917
ಅರವಿಂದಕುಮಾರ್ ಅರಳಿ	3,50,646
ಕೆ.ಟಿ. ಶ್ರೀಕಂಠೇಗೌಡ	62,086
ಒಟ್ಟು	26,00,267

ಪರಿಷತ್ ಸಚಿವಾಲಯ ನೀಡಿದ ದಾಖಲೆಗಳ ಪ್ರಕಾರ, 2020ರಲ್ಲಿ ಒಂದೇ ಬಾರಿಗೆ ಅತೀ ಹೆಚ್ಚು ವೈದ್ಯಕೀಯ ವೆಚ್ಚವನ್ನು ಬಿಜೆಪಿಯ ಎಸ್. ರುದ್ರೇಗೌಡ ಅವರು ನ. 4ರಂದು ₹ 8,09,948 ಮರು ಪಾವತಿಸಿಕೊಂಡಿದ್ದಾರೆ. ಅಲ್ಲದೆ ಅವರು, ಅದೇ ವರ್ಷ ಜೂನ್ 26ರಂದು ₹ 34,523, ಆಗಸ್ಟ್ 17ರಂದು ₹ 5,73,175 ಕ್ಲೇಮ್ ಮಾಡಿಕೊಂಡಿದ್ದಾರೆ. 2021ರ ಏಪ್ರಿಲ್ 18ರಂದು ರುದ್ರೇಗೌಡ ಮತ್ತೆ ₹ 8,67,034 ವೈದ್ಯಕೀಯ ವೆಚ್ಚ ಪಡೆದುಕೊಂಡಿದ್ದಾರೆ. ಅಲ್ಲದೆ, ಅದಕ್ಕೂ ಮೊದಲು 2019ರಲ್ಲಿ ಒಮ್ಮೆ ₹ 8,016 ಮತ್ತೊಮ್ಮೆ ₹ 9,842 ಕ್ಲೇಮ್ ಮಾಡಿಕೊಂಡಿದ್ದು, ಹೀಗೆ ಮೂರು ವರ್ಷಗಳ ಅವಧಿಯಲ್ಲಿ ಅವರು ಒಟ್ಟು ₹ 23,02,538 ಮೊತ್ತ ಕ್ಲೇಮ್ ಮಾಡಿದ್ದಾರೆ.

> **ಕೆಲವು ಸದಸ್ಯರು ಪತ್ನಿಗೆ ಕೋವಿಡ್ ಆಗಿದೆ ಎಂದೂ ವೈದ್ಯಕೀಯ ವೆಚ್ಚ ಪಡೆದುಕೊಂಡಿದ್ದಾರೆ. ಪತ್ನಿ ಆರೋಗ್ಯ ನೋಡಿಕೊಳ್ಳಲು ಕೂಡಾ ಸರ್ಕಾರದ ಹಣವೇ ಬೇಕೇ?**
> **ಎಚ್.ಎಂ. ವೆಂಕಟೇಶ್**
> ಸಾಮಾಜಿಕ ಕಾರ್ಯಕರ್ತ

ಪ್ರಜಾವಾಣಿ ವಿಶೇಷ

ಪರಿಷತ್ ಸದಸ್ಯರಾಗಿದ್ದ ಜೆಡಿಎಸ್‌ನ ಟಿ.ಎ. ಶರವಣ ಅವರು ಎರಡು ವರ್ಷಗಳಲ್ಲಿ ಒಟ್ಟು ₹ 12.07 ಲಕ್ಷ ವೈದ್ಯಕೀಯ ವೆಚ್ಚ ಮರು ಪಾವತಿಸಿಕೊಂಡಿದ್ದಾರೆ. ಅವರು 2019ರಲ್ಲಿ ಸೆ. 27ರಂದು ₹ 1.23,429 ಹಾಗೂ ಅ. 24ರಂದು ಮತ್ತೆ ₹ 7,04,797 ಸೇರಿ, ಆ ವರ್ಷ ಬೇರೆ ದಿನಗಳಲ್ಲಿ ಐದು ಬಾರಿ ಮತ್ತು 2020ರಲ್ಲಿ ಬೇರೆ ಬೇರೆ ದಿನಗಳಲ್ಲಿ ಆರು ಬಾರಿ ಸೇರಿ ಒಟ್ಟು 11 ಬಾರಿ ಈ ಒಟ್ಟು ಮೊತ್ತವನ್ನು ತಮ್ಮ ಖಾತೆಗೆ ಜಮೆ ಮಾಡಿಸಿಕೊಂಡಿದ್ದಾರೆ.

2019ರಲ್ಲಿ ಒಂದೇ ಬಾರಿ (ಜೂನ್ 1ರಂದು ಅತೀ ಹೆಚ್ಚು ವೈದ್ಯಕೀಯ ವೆಚ್ಚ ₹ 8,29,836 ಕಾಂಗ್ರೆಸ್ ಸದಸ್ಯ ಎಚ್.ಎಂ. ರೇವಣ್ಣ ಪಡೆದುಕೊಂಡಿದ್ದಾರೆ. ಅಲ್ಲದೆ, ಅದೇ ವರ್ಷ ಮೇ 21ರಂದು ಅವರು ₹ 1,35,581 ಮರು ಪಾವತಿಸಿಕೊಂಡಿದ್ದಾರೆ. 2020ರಲ್ಲಿ ಜೂನ್ 26ರಂದು ರೇವಣ್ಣ ಮತ್ತೆ ₹ 1,20,420 ಸೇರಿ ಎರಡು ವರ್ಷಗಳಲ್ಲಿ ₹ 10,85,737 ಕ್ಲೇಮ್ ಮಾಡಿಕೊಂಡಿದ್ದಾರೆ.

‘ಇಷ್ಟೆಲ್ಲ ಆರೋಗ್ಯ ಸಮಸ್ಯೆ ಇರುವವರು ಆಸ್ಪತ್ರೆಯಲ್ಲೇ ಇರಬೇಕು. ಆದರೆ, ಇವರೆಲ್ಲ ವಿಧಾನ ಪರಿಷತ್ ಕಲಾಪಕ್ಕೆ, ಇತರ ಕಾರ್ಯಕ್ರಮಗಳಿಗೆ ದೊಡ್ಡ ದೊಡ್ಡ ಕಾರುಗಳಲ್ಲಿ ಓಡಾಡುತ್ತಾರಲ್ಲ. ವೈದ್ಯಕೀಯ ವೆಚ್ಚ ಕ್ಲೇಮ್ ನಿಯಮಗಳಿಗೆ ತಿದ್ದುಪಡಿ ಆಗಬೇಕು’ ಎಂದೂ ಅವರು ಆಗ್ರಹಿಸಿದರು.

₹ 16 ಸಾವಿರ ತಲುಪಿದ ಹತ್ತಿ ಬೆಲೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಹತ್ತಿ ಬೆಲೆ ನಿರಂತರವಾಗಿ ಏರಿಕೆ ಆಗುತ್ತಲೇ ಇದ್ದು, ಚಿತ್ರದುರ್ಗ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಮಂಗಳವಾರ ಒಂದು ಕ್ವಿಂಟಲ್ ಹತ್ತಿ ₹ 16,061ಕ್ಕೆ ಮಾರಾಟವಾಗಿದೆ. ಇದು ಈವರೆಗಿನ ಸಾರ್ವಕಾಲಿಕ ದಾಖಲೆಯ ದರವಾಗಿದೆ.

ಬೆಲೆ ಏರಿಕೆಯ ಬೆನ್ನಲ್ಲೇ ಹತ್ತಿ ಆವಕವೂ ಹೆಚ್ಚುತ್ತಿದೆ. ಮಂಗಳವಾರ 4,170 ಚೀಲ ಹತ್ತಿ ಮಾರುಕಟ್ಟೆಗೆ ಬಂದಿದೆ. ಸರಾಸರಿ ₹11,690 ಬೆಲೆ ಸಿಕ್ಕಿದೆ. ಡಿಸಿಎಚ್ ಮತ್ತು ಬನ್ನಿ ತಳಿಯ ಹತ್ತಿಗೆ ಉತ್ತಮ ಬೆಲೆ ಸಿಗುತ್ತಿರುವುದರಿಂದ ರೈತರು ಹರ್ಷಗೊಂಡಿದ್ದಾರೆ.

ಚಿತ್ರದುರ್ಗ ಎಪಿಎಂಸಿಯಲ್ಲಿ ದಿನ ಬಿಟ್ಟು ದಿನ ಹತ್ತಿ ಮಾರುಕಟ್ಟೆ ನಡೆಯುತ್ತದೆ. ದಾವಣಗೆರೆ, ತುಮಕೂರು ಹಾಗೂ ಆಂಧ್ರಪ್ರದೇಶದ ಹಲವು ಭಾಗಗಳಿಂದಲೂ ಇಲ್ಲಿಗೆ ಹತ್ತಿ ಬರುತ್ತದೆ. ದೇಶದ ಹಲವೆಡೆ ಅತಿವೃಷ್ಟಿಗೆ ಹತ್ತಿ ಬೆಳೆ ಹಾಳಾಗಿರುವ ಪರಿಣಾಮ ಉತ್ಪಾದನೆಯಲ್ಲಿ ಕುಸಿತವಾಗಿದೆ.

ಹತ್ತಿ

2020ರಲ್ಲಿ ಹತ್ತಿಗೆ ಗರಿಷ್ಠ ₹ 8 ಸಾವಿರ ದರ ಸಿಕ್ಕಿತ್ತು. 2021ರ ಮಾರ್ಚ್ ತಿಂಗಳಲ್ಲಿ ಕ್ವಿಂಟಲ್ ಹತ್ತಿ ₹ 8,833ಕ್ಕೆ ಮಾರಾಟವಾಗಿತ್ತು. ಸೆಪ್ಟೆಂಬರ್ ತಿಂಗಳಲ್ಲಿ ಈ ಬೆಲೆ ₹ 13 ಸಾವಿರಕ್ಕೆ ತಲುಪಿತ್ತು. ಆಗಸ್ಟ್ ಮೊದಲ ವಾರವೂ ಹತ್ತಿ ದರದಲ್ಲಿ ಏರಿಕೆ ಆಗುತ್ತಲೇ ಇದೆ.

ನೌಕರರ ವಿರುದ್ಧ ಶಿಸ್ತು ಕ್ರಮಕ್ಕೆ ಕಾಲಮಿತಿ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರ ವಿರುದ್ಧದ ಅಕ್ರಮಗಳು ಮತ್ತು ದುರ್ನಡತೆ ಆರೋಪಕ್ಕೆ ಸಂಬಂಧಿಸಿದಂತೆ ಶಿಸ್ತು ಕ್ರಮ ಜರುಗಿಸುವಲ್ಲಿ ಆಗುವ ವಿಳಂಬವನ್ನು ತಡೆಗಟ್ಟಲು ಗರಿಷ್ಠ ಕಾಲಮಿತಿ ನಿಗದಿಪಡಿಸಿ ಆದೇಶ ಹೊರಡಿಸಲಾಗಿದೆ.

ನೌಕರನ ದುರ್ನಡತೆ ಬಗ್ಗೆ ವಿಚಾರಣೆ ನಡೆಸಿ ಶಿಸ್ತಿನ ಕ್ರಮ ಜರುಗಿಸಲು ಒಟ್ಟು 9 ತಿಂಗಳ ಕಾಲಮಿತಿಯನ್ನು ನಿಗದಿ ಮಾಡಲಾಗಿದೆ. ಸರ್ಕಾರದ ಕಾರ್ಯದರ್ಶಿಗಳು ಮತ್ತು ಇಲಾಖಾ ಮುಖ್ಯಸ್ಥರು ಈ ಸೂಚನೆಗಳನ್ನು ಚಾಚೂ ತಪ್ಪದೇ ಕಡ್ಡಾಯವಾಗಿ ಪಾಲಿಸಬೇಕು ಎಂದು ಸೂಚಿಸಲಾಗಿದೆ.

ಅಕ್ರಮಗಳು ಮತ್ತು ದುರ್ನಡತೆಗಳು ಶಿಸ್ತು ಪ್ರಾಧಿಕಾರದ ಗಮನಕ್ಕೆ ಬಂದ ದಿನಾಂಕದಿಂದ ದೋಷಾರೋಪಣ ಪಟ್ಟಿ ತಯಾರಿಸಲು ದಾಖಲೆಗಳನ್ನು ಪಡೆಯಲು/ಆರಂಭಿಕ ತನಿಖೆ, ವಿಚಾರಣೆ ಅಂತಿಮಗೊಳಿಸಲು/ ದೋಷಾರೋಪಣ ಪಟ್ಟಿ ತಯಾರಿಸಿ ಜಾರಿಗೊಳಿಸಲು 1 ತಿಂಗಳು ನಿಗದಿ ಮಾಡಲಾಗಿದೆ.

ದೋಷಾರೋಪಣ ಪಟ್ಟಿಗೆ ಸರ್ಕಾರಿ ನೌಕರನಿಂದ ವಿವರಣೆ ಪಡೆಯಲು, ವಿಚಾರಣಾ ಅಧಿಕಾರಿಯನ್ನು ನೇಮಿಸಲು1 ತಿಂಗಳು, ವಿಚಾರಣೆ ನಡೆಸಿ ಮತ್ತು ವರದಿ ಮಂಡಿಸಲು 4 ತಿಂಗಳು, ವಿಚಾರಣಾ ವರದಿಯನ್ನು ನಡೆಸಲು ಮತ್ತು ಅದನ್ನು ಸ್ವೀಕರಿಸುವ ಬಗ್ಗೆ ನಿರ್ಣಯಿಸಲು 1 ತಿಂಗಳು, ಕಾರಣ ಕೇಳುವ 2 ನೇ ಸೂಚನಾ ಪತ್ರವನ್ನು ವಿಚಾರಣಾ ವರದಿಯ ಜೊತೆಗೆ ಆಪಾದಿತ ನೌಕರನಿಗೆ ನೀಡಲು 1 ತಿಂಗಳು ಮತ್ತು ಅಂತಿಮ ಆದೇಶ ಹೊರಡಿಸಲು ಗರಿಷ್ಠ ಕಾಲಮಿತಿ 1 ತಿಂಗಳು ನಿಗದಿ ಮಾಡಲಾಗಿದೆ.

ತಾಂತ್ರಿಕ ಶಿಕ್ಷಣ ಆಧಾರಿತ ಪ್ರೌಢಶಾಲೆ ಆರಂಭ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಪ್ರೌಢಶಾಲಾ ಹಂತದಿಂದಲೇ ತಾಂತ್ರಿಕ ಶಿಕ್ಷಣ ಸಿಗುವಂತಾಗಬೇಕು. ಆ ನಿಟ್ಟಿನಲ್ಲಿ ತಾಂತ್ರಿಕ ಶಿಕ್ಷಣ ಆಧಾರಿತ ಶಾಲೆಗಳನ್ನು ಆರಂಭಿಸಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಹುಬ್ಬಳ್ಳಿಯ ಡೆನಿಸನ್ಸ್ ಹೋಟೆಲ್‌ನಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ವತಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ಬಿಯಾಂಡ್ ಬೆಂಗಳೂರು 'ಇನ್ನೋವೇಷನ್ ಆ್ಯಂಡ್ ಇಂಪ್ಯಾಕ್ಟ್ ಹುಬ್ಬಳ್ಳಿ' ಕಾರ್ಯಕ್ರಮವನ್ನು ವರ್ಚುವಲ್ ಆಗಿ ಉದ್ಘಾಟಿಸಿ ಅವರು ಮಾತನಾಡಿದರು.



‘1960ರಲ್ಲಿಯೇ ಹುಬ್ಬಳ್ಳಿಯಲ್ಲಿ ತಾಂತ್ರಿಕ ಶಿಕ್ಷಣ ನೀಡುವ ಪ್ರೌಢಶಾಲೆ ಇತ್ತು. ಮುಂದೆ ಅದು ಬಂದ್ ಆಯಿತು. ಮಕ್ಕಳಲ್ಲಿ ಗ್ರಹಿಸುವ ಸಾಮರ್ಥ್ಯ ಚೆನ್ನಾಗಿರುತ್ತದೆ. ಅವರಿಗೆ ಆ ಹಂತದಿಂದಲೇ ತಾಂತ್ರಿಕ ಶಿಕ್ಷಣ ನೀಡುವ ಕೆಲಸ ಮಾಡಲಾಗುವುದು’ ಎಂದರು.

‘ಉತ್ತರ ಕರ್ನಾಟಕದಲ್ಲಿ ಪ್ರತಿಭೆಗಳಿವೆ. ಅವರಿಗೆ ಅವಕಾಶ ಕಲ್ಪಿಸಬೇಕಿದೆ. ಬೆಂಗಳೂರು, ಪುಣೆ ಮುಂತಾದೆಡೆ ಆಗಿರುವ ಐಟಿ, ಬಿಟಿ ಕ್ರಾಂತಿಯಲ್ಲಿ ಉತ್ತರ ಕರ್ನಾಟಕದ ಪ್ರತಿಭೆಗಳ ಕೊಡುಗೆ ದೊಡ್ಡ ಪ್ರಮಾಣದಲ್ಲಿದೆ’ ಎಂದರು.

ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥ ನಾರಾಯಣ ಮಾತನಾಡಿ, ಹುಬ್ಬಳ್ಳಿಯಲ್ಲಿ ಎ.ಐ. (ಕೃತಕ ಬುದ್ಧಿಮತ್ತೆ) ಮತ್ತು ಡಾಟಾ ಎಂಜಿನಿಯರಿಂಗ್‌ಗೆ ಸಂಬಂಧಿಸಿದಂತೆ ಸೆಂಟರ್ ಆಫ್ ಎಕ್ಸಲೆನ್ಸ್ ಕೇಂದ್ರವನ್ನು ಶೀಘ್ರವೇ ಸ್ಥಾಪಿಸಲಾಗುವುದು. ಸಾಫ್ಟ್‌ವೇರ್ ಪಾರ್ಕ್ ನಿರ್ಮಾಣಕ್ಕೆ 50 ಎಕರೆ ಜಮೀನು ಒದಗಿಸಲಾಗುವುದು ಎಂದು ಹೇಳಿದರು.

‘ಪ್ರೌಢಶಾಲೆ ಹಂತದಿಂದಲೇ ಕೋಡಿಂಗ್ ಕಲಿಸಲಾಗುವುದು. ಅದಕ್ಕೆ ಅಗತ್ಯವಿರುವ ಶಿಕ್ಷಕರ ನೇಮಕ ಮಾಡಿಕೊಳ್ಳಲಾಗುವುದು’ ಎಂದರು.

ಡೆಂಗಿ: 10 ದಿನಗಳಲ್ಲಿ 350 ಮಂದಿಗೆ ಜ್ವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡೆಂಗಿ ಜ್ವರಕ್ಕೆ ಒಳಪಡುವವರ ಸಂಖ್ಯೆ ಏರಿಕೆ ಕಂಡಿದ್ದು, 10 ದಿನಗಳಲ್ಲಿ 350 ಪ್ರಕರಣಗಳು ವರದಿಯಾಗಿವೆ. ಈವರೆಗೆ ದೃಢಪಟ್ಟ ಒಟ್ಟು ಪ್ರಕರಣಗಳ ಸಂಖ್ಯೆ 3,736ಕ್ಕೆ ಏರಿಕೆಯಾಗಿದೆ.

ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ವರದಿಯಾಗಿವೆ. 13 ಜಿಲ್ಲೆಗಳಲ್ಲಿ ಸೋಂಕಿತರ ಸಂಖ್ಯೆ ಮೂರಂಕಿಯಲ್ಲಿದೆ. ಈ ವರ್ಷ ಮೊದಲ ಆರು ತಿಂಗಳ ಅವಧಿಯಲ್ಲಿ ಡೆಂಗಿ ನಿಯಂತ್ರಣದಲ್ಲಿತ್ತು. ಮಳೆ ಚುರುಕುಗೊಂಡ ಬಳಿಕ ಈ ಜ್ವರಕ್ಕೆ ಒಳಪಡುವವರ ಸಂಖ್ಯೆ ಏರುಗತಿ ಪಡೆದುಕೊಂಡಿದೆ. ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ ಈ ವರ್ಷ ರಾಜ್ಯದಲ್ಲಿ ಯಾವುದೇ ಡೆಂಗಿ ಮರಣ ಪ್ರಕರಣ ವರದಿಯಾಗಿಲ್ಲ.

ಕಳೆದ ವರ್ಷ 3,823 ಮಂದಿಯಲ್ಲಿ ಡೆಂಗಿ ಜ್ವರ ಕಾಣಿಸಿಕೊಂಡಿತ್ತು. ಅವರಲ್ಲಿ 5 ಮಂದಿ ಮೃತಪಟ್ಟಿದ್ದರು.

ಕೃಷಿ ಇಲಾಖೆಯಲ್ಲಿ ₹ 1.25 ಕೋಟಿ ಅಕ್ರಮ

ಜಂಟಿ ನಿರ್ದೇಶಕರ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಕೋಲಾರ: ಕೃಷಿ ಇಲಾಖೆಯಲ್ಲಿ ನಡೆದಿರುವ ಸುಮಾರು ₹ 1.25 ಕೋಟಿ ಅಕ್ರಮದ ಸಂಬಂಧ ಇಲಾಖೆಯ ಹಿಂದಿನ ಜಂಟಿ ನಿರ್ದೇಶಕ ಎಚ್.ಕೆ.ಶಿವಕುಮಾರ್ ಸೇರಿದಂತೆ 3 ಮಂದಿ ವಿರುದ್ಧ ನಗರದ ಗಲ್‌ಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸದ್ಯ ಬೆಂಗಳೂರಿನಲ್ಲಿ ಕೃಷಿ ಇಲಾಖೆ ಜಾಗೃತ ಕೋಶದಲ್ಲಿರುವ ಶಿವಕುಮಾರ್ ಈ ಹಿಂದೆ 2017ರಿಂದ 2020ರವರೆಗೆ ಜಿಲ್ಲೆಯಲ್ಲಿ ಸೇವೆಯಲ್ಲಿದ್ದರು. ಆ ಅವಧಿಯಲ್ಲಿ ಇಲಾಖೆಯ ದೈನಂದಿನ ಹಣಕಾಸು ವ್ಯವಹಾರದಲ್ಲಿ ನಡೆದಿರುವ ಅಕ್ರಮಕ್ಕೆ ಸಂಬಂಧಪಟ್ಟಂತೆ ಶಿವಕುಮಾರ್, ಪ್ರಥಮ ದರ್ಜೆ ಸಹಾಯಕ ಮಂಜುನಾಥ್ ಮತ್ತು ಹೊರ ಗುತ್ತಿಗೆ ನೌಕರ ಆದರ್ಶ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

2020ರಲ್ಲಿ ಅಕ್ರಮ ಬೆಳಕಿಗೆ ಬಂದಾಗ ಶಿವಕುಮಾರ್ ಅವರು ಇಲಾಖೆಯ ನಿವೃತ್ತ ಸೂಪರಿಂಟೆಂಡೆಂಟ್ ಸತ್ಯನಾರಾಯಣ ಪ್ರಸಾದ್ ಮತ್ತು ಹೊರ ಗುತ್ತಿಗೆ ನೌಕರ ನಯಾಜ್ ಅಹಮ್ಮದ್ ಅವರು ತಮ್ಮ ಡಿಜಿಟಲ್ ಸಿಗ್ನೇಚರ್ ಸರ್ಟಿಫಿಕೇಟ್ ಕೀ (ಡಿಎಸ್‌ಇ) ದುರ್ಬಳಕೆ ಮಾಡಿಕೊಂಡು ಅವ್ಯವಹಾರ ನಡೆಸಿದ್ದಾರೆ ಎಂದು ಆರೋಪಿಸಿ ಗಲ್‌ಪೇಟೆ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಬಳಿಕ ಪೊಲೀಸರು ಸತ್ಯನಾರಾಯಣ ಪ್ರಸಾದ್ ಮತ್ತು ನಯಾಜ್ ಅಹಮ್ಮದ್‌ರನ್ನು ಬಂಧಿಸಿದ್ದರು.

ಎಚ್.ಕೆ. ಶಿವಕುಮಾರ್

ಆ ನಂತರ ಇಲಾಖೆ ಉನ್ನತ ಅಧಿಕಾರಿಗಳ ತಂಡವು ಪ್ರಕರಣ ಸಂಬಂಧ ವಿಶೇಷ ಲೆಕ್ಕ ತಪಾಸಣೆ ನಡೆಸಿದಾಗ ಅಕ್ರಮದಲ್ಲಿ ಶಿವಕುಮಾರ್, ಮಂಜುನಾಥ್ ಮತ್ತು ಆದರ್ಶ್ ಭಾಗಿಯಾಗಿರುವ ಸಂಗತಿ ಬಯಲಾಗಿತ್ತು. ನಂತರ ಜಾಮೀನಿನ ಮೇಲೆ ಬಿಡುಗಡೆಯಾದ ಸತ್ಯನಾರಾಯಣ ಪ್ರಸಾದ್ ಅವರು ಉನ್ನತ ಅಧಿಕಾರಿಗಳ ತಂಡದ ವಿಶೇಷ ಲೆಕ್ಕ ತಪಾಸಣಾ ವರದಿಯೊಂದಿಗೆ ಶಿವಕುಮಾರ್ ಸೇರಿದಂತೆ ಮೂವರ ವಿರುದ್ಧ ನೀಡಿದ ದೂರು ಆಧರಿಸಿ ಪೊಲೀಸರು ಸೋಮವಾರ ಪ್ರಕರಣ ದಾಖಲಿಸಿದ್ದಾರೆ.

ನದಿ ಸಮುದ್ರ ಸೇರುವ ಸ್ಥಳದಲ್ಲಿ ತಡೆಗೋಡೆ

‘ಕಾಲ್ಯಾಂಡ್’ ಯೋಜನೆಗೆ ₹1,500 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ನದಿಗಳು ಸಮುದ್ರ ಸೇರುವ ಜಾಗದಲ್ಲಿ ತಡೆಗೋಡೆ ನಿರ್ಮಿಸುವ ₹1,500 ಕೋಟಿಯ ‘ಕಾಲ್ಯಾಂಡ್’ ಯೋಜನೆಗೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಲಾಗಿದೆ.

ಮಾಧುಸ್ವಾಮಿ

ಸಚಿವ ಸಂಪುಟ ಸಭೆಯ ಬಳಿಕ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

ಈ ಯೋಜನೆಯಡಿ ತಡೆಗೋಡೆ ನಿರ್ಮಿಸುವುದರಿಂದ ಸಮುದ್ರದ ನೀರು ನದಿಗೆ ನುಗ್ಗಿ ಉಪ್ಪಾಗುವುದನ್ನು ತಡೆಯಲಾಗುತ್ತದೆ. ಸಂಗ್ರಹವಾಗುವ ಸಿಹಿ ನೀರನ್ನು ಕೃಷಿ, ಸಿಗಡಿ ಸಾಕಾಣಿಕೆ ಮತ್ತು ಕುಡಿಯುವ ನೀರಿನ ಉದ್ದೇಶಕ್ಕೆ ಬಳಸಲು ಉದ್ದೇಶಿಸಲಾಗಿದೆ. ಈ ಯೋಜನೆಯಡಿ ಮೂರು ತಾಲ್ಲೂಕುಗಳಿಗೆ ತಲಾ ₹100 ಕೋಟಿಯಂತೆ ಒಟ್ಟು ₹300 ಕೋಟಿ ನೀಡಲು ಒಪ್ಪಿಗೆ ನೀಡಲಾಗಿದೆ ಎಂದರು.

ಇದು ಯಶಸ್ವಿಯಾದರೆ, ಮುಂದಿನ ಹಂತದಲ್ಲಿ ಮಾಸ್ಟರ್ ಪ್ಲ್ಯಾನ್ ಯೋಜನೆಯಡಿ ₹1,500 ಕೋಟಿ ವೆಚ್ಚದಲ್ಲಿ ಉತ್ತರ ಕನ್ನಡ ಮತ್ತು ಉಡುಪಿಯಲ್ಲಿ ಕೈಗೆತ್ತಿಕೊಳ್ಳಲಾಗುವುದು. ಇದರಿಂದ ಸುಮಾರು 2-3 ತಿಂಗಳು ಸಿಹಿ ನೀರು ಶೇಖರಣೆಯಾಗುತ್ತದೆ ಎಂದು ಹೇಳಿದರು.

ಪ್ರಮುಖ ತೀರ್ಮಾನಗಳು

- ಉಡುಪಿ -ಖಾನಾಪುರ ಹೆದ್ದಾರಿಯಲ್ಲಿ 5 ಕಿ.ಮೀ ದ್ವಿಪಥ ನಿರ್ಮಿಸಲು ₹15 ಕೋಟಿ ಅನುದಾನಕ್ಕೆ ಒಪ್ಪಿಗೆ.
- ಬೆಳಗಾವಿ ಜಿಲ್ಲೆಯ ಸವದತ್ತಿಯಲ್ಲಿ 32 ಎಕರೆ ಪ್ರದೇಶವನ್ನು ಪವನ ವಿದ್ಯುತ್ ಘಟಕ ಸ್ಥಾಪಿಸಲು ರೋಹನ್ ಸೋಲಾರ್ ಕಂಪನಿಗೆ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲು ಅನುಮೋದನೆ.
- ಉಡುಪಿ ಜಿಲ್ಲೆಯ ಹೆಬ್ರಿ ತಾಲ್ಲೂಕಿನಲ್ಲಿ ಒಂದು ಹೋಬಳಿ ಸೃಷ್ಟಿಸಲು ಒಪ್ಪಿಗೆ.
- ಸಂಧ್ಯಾ ಸುರಕ್ಷಾ ಯೋಜನೆಯಡಿ 60 ವರ್ಷದವರಿಗೆ ನೀಡುತ್ತಿರುವ ₹600 ಮಾಸಾಶನವನ್ನು ₹800 ಕ್ಕೂ 65 ವರ್ಷ ಮೇಲ್ಪಟ್ಟವರಿಗೆ ನೀಡುವ ₹1,000 ಮಾಸಾಶನವನ್ನು ₹1,200 ಕ್ಕೆ ಹೆಚ್ಚಿಸುವ ಕಾರ್ಯಕ್ರಮಕ್ಕೆ ಘಟನೋತ್ತರ ಅನುಮತಿ. 36 ಲಕ್ಷ ಜನರಿಗೆ ಇದರಿಂದ ಅನುಕೂಲವಾಗಲಿದ್ದು, ಸರ್ಕಾರಕ್ಕೆ ₹207 ಕೋಟಿ ವೆಚ್ಚವಾಗಲಿದೆ.
- ಮೈಸೂರು ಸಾಬೂನು ಮತ್ತು ಮಾರ್ಜಕ ಕಾರ್ಖನೆ ವತಿಯಿಂದ ಶಾಲಾ ವಿದ್ಯಾರ್ಥಿನಿಯರಿಗೆ ಶುಚಿ ಕಿಟ್ ಪೂರೈಕೆಗೆ ನಿರ್ಧಾರ.
- ಹಿಪ್ಪರಗಿ ಬ್ಯಾರೇಜ್ ರಕ್ಷಣೆಗೆ ತಡೆಗೋಡೆ ನಿರ್ಮಿಸಲು ₹28.2 ಕೋಟಿ ಅನುದಾನಕ್ಕೆ ಒಪ್ಪಿಗೆ.
- ಪೊಲೀಸ್ ಆಧುನೀಕರಣ ಯೋಜನೆ ಅಡಿ ₹14.5 ಕೋಟಿ ವೆಚ್ಚದಲ್ಲಿ ಇಲಾಖೆಗೆ ನಿಸ್ತಂತು ಸಂಪರ್ಕ ಜಾಲವನ್ನು ಮೇಲ್ದರ್ಜೆಗೇರಿಸಲು ಅನುಮತಿ.

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ

ಎನ್‌ಎಫ್‌ಟಿಯಿಂದ ಮೂಲ ಕಲಾಕಾರರಿಗೆ ಇರುವ ಅನುಕೂಲವೆಂದರೆ, ಇದನ್ನು ಯಾರು ಬೇಕಾದರೂ ಖರೀದಿ ಮಾಡಬಹುದು ಮತ್ತು ಮಾರಬಹುದು. ಹಾಗೆ, ಪ್ರತಿ ಬಾರಿ ಕೈ ಬದಲಾದಾಗಲೂ ಕಲಾಕಾರರಿಗೆ ಒಂದು ಭಾಗ ಹಣ ಪಾವತಿಯಾಗುತ್ತದೆ.



ವಿದ್ಯುತ್: ನಾಲ್ಕು ದಿನಕ್ಕಾಗುವಷ್ಟು ಮಾತ್ರ ಕಲ್ಲಿದ್ದಲು 13

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,744 ▲	17,822 ▲	₹48,150 (ಬೆಂಗಳೂರು) ▲	₹62,300 (ಬೆಂಗಳೂರು) ▲	74.44 ▼

ಪೈಲಟ್‌ಗೆ ಎಐಸಿಸಿ ಅಧ್ಯಕ್ಷ ಗಿರಿ?: ಸಿದ್ದರಾಮಯ್ಯ – ಸೋನಿಯಾ ಚರ್ಚೆ

ಕಾಂಗ್ರೆಸ್ ಪುನಶ್ಚೇತನಕ್ಕೆ ಮುನ್ನುಡಿ

• ಸಿದ್ದಯ್ಯ ಹಿರೇಮಠ

ನವದೆಹಲಿ: ಪಕ್ಷದ ಪುನಶ್ಚೇತನ ಪ್ರಕ್ರಿಯೆಗೆ ಕೊನೆಗೂ ಚಾಲನೆ ಕೊಟ್ಟಿರುವ ಎಐಸಿಸಿ ಉಸ್ತುವಾರಿ ಅಧ್ಯಕ್ಷೆ ಸೋನಿಯಾಗಾಂಧಿ, ಸಂಘಟನೆಯಲ್ಲಿ ನಿಷ್ಕ್ರಿಯವಾಗಿರುವ 'ಹಿರಿತಲೆ'ಗಳಿಗೆ ಕಡ್ಡಾಯ ನಿವೃತ್ತಿ ನೀಡಿ, ರಾಜಕಾರಣದಲ್ಲಿ ಸಕ್ರಿಯವಾಗಿರುವ ಪಕ್ಷ ನಿಷ್ಠರಿಗೆ ರಾಷ್ಟ್ರೀಯ ಮಟ್ಟದ ಹುದ್ದೆ ಕಲ್ಪಿಸುವತ್ತ ಅಡಿ ಇಟ್ಟಿದ್ದಾರೆ.

ಸೋನಿಯಾ ಗಾಂಧಿ

ಇದರ ಭಾಗವಾಗಿ ಕರ್ನಾಟಕದ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಮಂಗಳವಾರ ದಿಢೀರ್ ಕರೆಸಿಕೊಂಡಿರುವ ಸೋನಿಯಾ, ಸುದೀರ್ಘ ಸಮಾಲೋಚನೆ ನಡೆಸಿದ್ದಾರೆ. ಎಐಸಿಸಿ ಅಧ್ಯಕ್ಷರಾಗಿ ಕೇಂದ್ರದ ಮಾಜಿ ಸಚಿವ ಸಚಿನ್ ಪೈಲಟ್ ಅವರನ್ನು ನೇಮಕ ಮಾಡುವುದು, ಅವರ ಕೈ ಬಲಪಡಿಸಲು ನಾಲ್ವರು ಕಾರ್ಯಾಧ್ಯಕ್ಷರ ನೇಮಕದ ಬಗ್ಗೆಯೂ ಚರ್ಚೆ ನಡೆದಿದೆ. ಒಂದು ಕಾರ್ಯಾಧ್ಯಕ್ಷ ಹುದ್ದೆಯನ್ನು (ದಕ್ಷಿಣ ವಲಯ) ಕರ್ನಾಟಕಕ್ಕೆ ನೀಡಲು ಸೋನಿಯಾ ಒಲವು ತೋರಿದ್ದು, ಈ ಬಗ್ಗೆಯೂ ಸಿದ್ದರಾಮಯ್ಯ ಅವರಿಂದ ಅಭಿಪ್ರಾಯ ಕೇಳಿದ್ದಾರೆ ಎಂದು ಗೊತ್ತಾಗಿದೆ.

2019ರ ಲೋಕಸಭೆ ಚುನಾವಣೆ ನಂತರ ಖಾಲಿ ಇರುವ ರಾಷ್ಟ್ರೀಯ ಅಧ್ಯಕ್ಷ ಸ್ಥಾನವೂ ಸೇರಿದಂತೆ ಇತರ ಪದಾಧಿಕಾರಿಗಳ ಆಯ್ಕೆಗೆ ಕ್ರಮ ಕೈಗೊಳ್ಳುವ ಮೂಲಕ, ಪಕ್ಷವನ್ನು ಬಲಪಡಿಸಲು ಆಲೋಚಿಸಿದ್ದಾರೆ.

2ನೇ ಪುಟ ನೋಡಿ

'ರಾಷ್ಟ್ರ ರಾಜಕಾರಣದ ಪ್ರಶ್ನೆಯೇ ಇಲ್ಲ'

'ನಾನು ರಾಷ್ಟ್ರ ರಾಜಕಾರಣ ಪ್ರವೇಶಿಸುವ ಪ್ರಶ್ನೆಯೇ ಇಲ್ಲ. ಈ ಬಗ್ಗೆ ವರಿಷ್ಠರೊಂದಿಗೆ ಚರ್ಚೆಯನ್ನೂ ನಡೆಸಿಲ್ಲ. ರಾಜ್ಯ ರಾಜಕಾರಣದಲ್ಲೇ ಮುಂದುವರಿಯುವೆ. ಈ ಬಗ್ಗೆ ಸಂಶಯ ಬೇಡ' ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಸೋನಿಯಾ ಗಾಂಧಿ ಅವರನ್ನು ಭೇಟಿ ಮಾಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ ಎರಡು ವಿಧಾನಸಭೆ ಕ್ಷೇತ್ರಗಳ ಉಪಚುನಾವಣೆ ಹಾಗೂ ರಾಜ್ಯ ರಾಜಕೀಯ ಬೆಳವಣಿಗೆಗಳ ಬಗ್ಗೆ ಚರ್ಚಿಸಲಾಗಿದೆ ಎಂದರು.

'ರಾಹುಲ್ ಗಾಂಧಿ ಅವರು ಈ ಹಿಂದೆಯೇ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಆಹ್ವಾನ ನೀಡಿದ್ದರು. ಅದನ್ನು ನಿರಾಕರಿಸಿದ್ದಲ್ಲದೆ, ಕಾಂಗ್ರೆಸ್ ಕಾರ್ಯಕಾರಿಣಿ ಸಮಿತಿ ಸದಸ್ಯತ್ವಕ್ಕೂ ರಾಜೀನಾಮೆ ನೀಡಿದ್ದೆ. ಈಗ ಮತ್ತೆ ರಾಷ್ಟ್ರ ರಾಜಕಾರಣಕ್ಕೆ ಬರುವ ವಿಚಾರ ಮಾಡುವುದಿಲ್ಲ' ಎಂದು ಅವರು ಹೇಳಿದರು.

ಮಾನೆ, ಮನಗೂಳಿಗೆ ಟಿಕೆಟ್

ಶ್ರೀನಿವಾಸ ಮಾನೆ

ಅಶೋಕ ಮನಗೂಳಿ

ಹಾನಗಲ್ ನಿಂದ ವಿಧಾನ ಪರಿಷತ್ ಸದಸ್ಯ ಶ್ರೀನಿವಾಸ ಮಾನೆ ಹಾಗೂ ಸಿಂದಗಿಯಿಂದ ಅಶೋಕ ಮನಗೂಳಿ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡಲಾಗಿದೆ. ಅಶೋಕ ಮನಗೂಳಿ ಅವರನ್ನು ಸಿದ್ದ-ರಾಮಯ್ಯನವರೇ ಪಕ್ಷಕ್ಕೆ ಕರೆತಂದಿದ್ದರು. ಹಾನಗಲ್ ಕ್ಷೇತ್ರದಲ್ಲಿ ಶ್ರೀನಿವಾಸ ಮಾನೆಗೆ ಟಿಕೆಟ್ ನೀಡಬೇಕು ಎಂದು ಸಿದ್ದರಾಮಯ್ಯ ಪಟ್ಟು ಹಿಡಿದಿದ್ದರು. ಕೆಪಿಸಿಸಿ ಅಧ್ಯಕ್ಷ ಶಿವಕುಮಾರ್ ಅವರು, ಮನೋಹರ ತಹಶೀಲ್ದಾರ್‌ಗೆ ಟಿಕೆಟ್ ಕೊಡಿಸುವಲ್ಲಿ ಆಸ್ಥೆ ತೋರಿದ್ದರು.

2ನೇ ಪುಟ ನೋಡಿ

ಎಎಸ್‌ಐ ಬಡ್ತಿ: ಕಡ್ಡಾಯ ಸೇವಾವಧಿ ಇಳಿಕೆ

ಬೆಂಗಳೂರು: ಪೊಲೀಸ್ ಇಲಾಖೆಯಲ್ಲಿ ಸಹಾಯಕ ಸಬ್ ಇನ್‌ಸ್ಪೆಕ್ಟರ್‌ಗಳಿಗೆ (ಎಎಸ್‌ಐ) ಮುಂದಿನ ಶ್ರೇಣಿಗೆ ಬಡ್ತಿ ಪಡೆಯಲು ಇದ್ದ ಐದು ವರ್ಷಗಳ ಕನಿಷ್ಠ ಸೇವಾ ಅವಧಿಯನ್ನು ನಾಲ್ಕು ವರ್ಷಗಳಿಗೆ ಇಳಿಸಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಇದಕ್ಕಾಗಿ ಪೊಲೀಸ್ ಲಿಪಿಕ ಸೇವೆ ನೇಮಕ ಕಾಯ್ದೆ ತಿದ್ದುಪಡಿಗೆ ಒಪ್ಪಿಗೆ ನೀಡಲಾಗಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ ಸುದ್ದಿಗಾರರಿಗೆ ತಿಳಿಸಿದರು.

ಬಡ್ತಿಗೆ ಅರ್ಹ ಅಭ್ಯರ್ಥಿಗಳು ಇಲ್ಲದಾಗ ಉಳಿದವರಿಗೆ ಬಡ್ತಿ ನೀಡಲು ಎಂಟು ವರ್ಷಗಳ ಕಡ್ಡಾಯ ಸೇವೆಯನ್ನು ಐದು ವರ್ಷಗಳಿಗೆ ಇಳಿಸಲಾಗಿತ್ತು. ಅದನ್ನು ಈಗ ನಾಲ್ಕು ವರ್ಷಗಳಿಗೆ ಇಳಿಸಲಾಗಿದೆ ಎಂದು ಮಾಧುಸ್ವಾಮಿ ತಿಳಿಸಿದರು.

ಲಖಿಂಪುರ: ಅಂತ್ಯ ಸಂಸ್ಕಾರಕ್ಕೆ ಒಪ್ಪದ ಮೃತರ ಕುಟುಂಬ

'ಒಬ್ಬ ರೈತ ಗುಂಡೇಟಿಗೆ ಬಲಿ'

ಲಖಿಂಪುರ ಖೇರಿ/ಬಹರೈಚ್ (ಪಿಟಿಐ): ಉತ್ತರ ಪ್ರದೇಶದ ಲಖಿಂಪುರ-ಖೇರಿಯ ಹಿಂಸಾಚಾರವು ಮಂಗಳವಾರ ಬೇರೊಂದು ತಿರುವು ಪಡೆದಿದೆ. ಭಾನುವಾರ ಮೃತಪಟ್ಟ ನಾಲ್ವರಲ್ಲಿ ಒಬ್ಬರನ್ನು ಗುಂಡು ಹಾರಿಸಿ ಕೊಲ್ಲಲಾಗಿದೆ. ಅವರು ವಾಹನಕ್ಕೆ ಸಿಲುಕಿ ಮೃತಪಟ್ಟಿಲ್ಲ ಎಂದು ಮೃತ ವ್ಯಕ್ತಿಯ ಕುಟುಂಬದ ಸದಸ್ಯರು ಆರೋಪಿಸಿದ್ದಾರೆ. ಮೃತದೇಹದ ಅಂತ್ಯ ಸಂಸ್ಕಾರಕ್ಕೆ ಕುಟುಂಬವು ಒಪ್ಪಿಲ್ಲ. ಎರಡನೇ ಬಾರಿ ಮರಣೋತ್ತರ ಪರೀಕ್ಷೆ ನಡೆಸಬೇಕು ಎಂದು ಆಗ್ರಹಿಸ-ಲಾಗಿದೆ.

'ಎರಡನೇ ಮರಣೋತ್ತರ ಪರೀಕ್ಷೆ ನಡೆಸದೆ ಗುರ್‌ವಿಂದರ್ ಸಿಂಗ್ (22) ಅಂತ್ಯ ಸಂಸ್ಕಾರ ಮಾಡುವುದಿಲ್ಲ. ಈಗ ಸಿಕ್ಕಿರುವುದು ಹುಸಿ ಮರಣೋತ್ತರ ಪರೀಕ್ಷೆ ವರದಿ' ಎಂದು ಕುಟುಂಬದ ಸದಸ್ಯರು ಹೇಳಿದ್ದಾರೆ. ರೈತರ ಪ್ರತಿಭಟನೆಗೆ ಆರಂಭದಿಂದಲೂ ಬೆಂಬಲ ನೀಡಿರುವ ಪಂಜಾಬಿ ಸಿನಿಮಾ ನಟಿ ಸೋನಿಯಾ ಮಾನ್ ಅವರು ಸ್ಥಳಕ್ಕೆ ಬಂದಿದ್ದಾರೆ. ಕುಟುಂಬದ ಬೇಡಿಕೆಗೆ ಅವರೂ ಬೆಂಬಲ ಕೊಟ್ಟಿದ್ದಾರೆ.

ಭಾನುವಾರ ಮೃತಪಟ್ಟ ಲವ್‌ಪ್ರೀತ್ ಸಿಂಗ್ (19), ನಚ್ಚತ್ತರ್ ಸಿಂಗ್ (65) ಮತ್ತು ದಲ್ಜೀತ್ ಸಿಂಗ್ (42) ಅವರ ಅಂತ್ಯಸಂಸ್ಕಾರ ಮಂಗಳವಾರ ನಡೆದಿದೆ. ಪೊಲೀಸ್ ಅಧಿಕಾರಿಗಳು ಮತ್ತು ಭಾರತೀಯ ಕಿಸಾನ್ ಯೂನಿಯನ್ ನಾಯಕ ರಾಕೇಶ್ ಟಿಕಾಯತ್ ಅವರ ನಡುವೆ ಹಲವು ತಾಸು ಮಾತುಕತೆಯ ಬಳಿಕ ಅಂತ್ಯ ಸಂಸ್ಕಾರ ನಡೆಯಿತು.

ಕೇಂದ್ರ ಗೃಹ ಖಾತೆಯ ರಾಜ್ಯ ಸಚಿವ ಅಜಯ್ ಮಿಶ್ರಾ ಅವರ ಮಗ ಆಶಿಶ್ ಮಿಶ್ರಾ ಅವರು ಚಲಾಯಿಸಿದ್ದಾರೆ ಎನ್ನಲಾದ ಎಸ್‌ಯುವಿ ಹರಿದು ಪ್ರತಿಭಟನೆ ನಡೆಸುತ್ತಿದ್ದ ನಾಲ್ವರು ರೈತರು ಭಾನುವಾರ ಮೃತಪಟ್ಟಿದ್ದಾರೆ. ಇದರಿಂದ ಆಕ್ರೋಶಗೊಂಡ ರೈತರು ಹಿಂಸಾಚಾರ ನಡೆಸಿದ್ದರು. ಈ ಹಿಂಸೆಯಲ್ಲಿ ನಾಲ್ವರು ಮೃತರಾಗಿದ್ದಾರೆ. ಮೃತರ ಕುಟುಂಬಕ್ಕೆ ತಲಾ ₹45 ಲಕ್ಷ ಪರಿಹಾರ ಮತ್ತು ನ್ಯಾಯಾಂಗ ತನಿಖೆಯ ಭರವಸೆಯ ಬಳಿಕ ರೈತರು ಪ್ರತಿಭಟನೆಯನ್ನು ಸೋಮವಾರ ಹಿಂದಕ್ಕೆ ಪಡೆದಿದ್ದಾರೆ.

ಆಶಿಶ್ ವಿರುದ್ಧ ಕೊಲೆ ಪ್ರಕರಣ ದಾಖಲಿಸಲಾಗಿದೆ. ಆದರೆ, ಅವರನ್ನು ಇನ್ನೂ ಬಂಧಿಸಲಾಗಿಲ್ಲ.

ಇನ್ನಷ್ಟು ಸುದ್ದಿಗಳು 12

ಛತ್ತೀಸಗಡ ಮುಖ್ಯಮಂತ್ರಿಗೆ ತಡೆ

ಉತ್ತರ ಪ್ರದೇಶದ ರಾಜಧಾನಿ ಲಖನೌ ವಿಮಾನ ನಿಲ್ದಾಣಕ್ಕೆ ಬಂದಿಳಿದ ಛತ್ತೀಸಗಡ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರನ್ನು ಉತ್ತರ ಪ್ರದೇಶ ಪೊಲೀಸರು ಮಂಗಳವಾರ ತಡೆದರು. ಅದನ್ನು ವಿರೋಧಿಸಿ ಬಘೇಲ್ ಅವರು ವಿಮಾನ ನಿಲ್ದಾಣದಲ್ಲಿಯೇ ಧರಣಿ ನಡೆಸಿದರು.

ನಿಷೇಧಾಜ್ಞೆ ಇರುವ ಲಖಿಂಪುರ-ಖೇರಿಗೆ ಹೋಗುತ್ತಿಲ್ಲ. ಸೀತಾಪುರದಲ್ಲಿ ಬಂಧನದಲ್ಲಿರುವ ಪ್ರಿಯಾಂಕಾ ಗಾಂಧಿ ಅವರನ್ನು ನೋಡಲು ಹೋಗುತ್ತಿರುವೆ ಎಂದರೂ ಪೊಲೀಸರು ಅವರನ್ನು ನಿಲ್ದಾಣದಿಂದ ಹೊರಬರಲು ಬಿಡಲಿಲ್ಲ.

ಆಳ-ಅಗಲ

ಐ ಟಿ ಪೋರ್ಟಲ್ ಬಗೆಹರಿಯದ ಬವಣೆ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಮೈಸೂರಿಗೆ ಮಾತ್ರ ವಿನಾಯಿತಿ: ಮಾಸ್ಕ್ ಧರಿಸದಿದ್ದರೆ ಕ್ರಮ

ದಸರೆ: 400 ಜನರಿಗೆ ಸೀಮಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಾದ್ಯಂತ ಇದೇ 7ರಿಂದ 15ರವರೆಗೆ ನಡೆಯಲಿರುವ ನಾಡಹಬ್ಬ ದಸರಾ, ದುರ್ಗಾ ಪೂಜೆ ಆಚರಣೆ ವೇಳೆ ಮೈಸೂರು ಬಿಟ್ಟು ಉಳಿದ ಕಡೆಗಳಲ್ಲಿ 400ಕ್ಕಿಂತ ಹೆಚ್ಚು ಜನ ಸೇರುವಂತಿಲ್ಲ ಎಂದು ರಾಜ್ಯ ಸರ್ಕಾರ ನಿರ್ಬಂಧ ವಿಧಿಸಿದೆ. ವ್ಯಕ್ತಿಗತ ಅಂತರ ಕಡ್ಡಾಯವಾಗಿ ಪಾಲಿಸಬೇಕು ಎಂದೂ ಸೂಚಿಸಲಾಗಿದೆ.

ಅಲ್ಲದೆ, ದಸರಾ ಆಚರಣೆಯಲ್ಲಿ ವ್ಯಕ್ತಿಗತ ಅಂತರ ಇಲ್ಲದೆ ನಡೆಯುವ ಕಾರ್ಯಕ್ರಮಗಳಿಗೂ ನಿಷೇಧ ಹೇರಲಾಗಿದೆ. ಕೋವಿಡ್ ಸೋಂಕು ಹರಡುತ್ತಿರುವುದನ್ನು ತಡೆಗಟ್ಟುವ ಉದ್ದೇಶದಿಂದ ಈ ವರ್ಷ ಕೂಡಾ ಅತ್ಯಂತ ಸರಳವಾಗಿ ದಸರಾ ಆಚರಿಸುವಂತೆ ಕೆಲವು ನಿರ್ಬಂಧಗ-ಳನ್ನು ವಿಧಿಸಿ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಮಂಗಳವಾರ ಮಾರ್ಗಸೂಚಿ ಹೊರಡಿಸಿದ್ದಾರೆ.

ಸಾರ್ವಜನಿಕರಿಗೆ ಪ್ರವೇಶ ನಿರ್ಬಂಧ: ಮೈಸೂರು ದಸರಾ ಹಬ್ಬದ ಆಚರಣೆಯನ್ನು ದೃಶ್ಯ ಸಂವಹನ (ವರ್ಚುವಲ್) ಮೂಲಕ ವೀಕ್ಷಿಸಲು ಅವಕಾಶ ಕಲ್ಪಿಸಿರುವುದರಿಂದ, ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರ ಪ್ರವೇಶಕ್ಕೆ ನಿರ್ಬಂಧ ವಿಧಿಸಲಾಗಿದೆ.

ಇದೇ 7ರಂದು ಚಾಮುಂಡಿ ಬೆಟ್ಟದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಗಣ್ಯರಿಂದ ಮೈಸೂರು ದಸರಾ ಉದ್ಘಾಟನೆ ನಡೆಯಲಿದೆ. ಈ ಸಂದರ್ಭದಲ್ಲಿ ಅಧಿಕಾರಿಗಳು, ಸಿಬ್ಬಂದಿ, ಕಲಾವಿದರು, ಮಾಧ್ಯಮದವರು ಸೇರಿ 100 ಜನರಿಗೆ ಮಾತ್ರ ಅವಕಾಶ ನೀಡಲಾಗುವುದು. 15ರಂದು ಅರಮನೆ ಆವರಣದಲ್ಲಿ ನಡೆಯಲಿರುವ ಜಂಬೂ ಸವಾರಿಯಲ್ಲಿ 500 ಜನರಿಗೆ ಮಾತ್ರ ಪ್ರವೇಶ ಅವಕಾಶ ಕಲ್ಪಿಸಲಾಗಿದೆ.

7ರಿಂದ 15ರವರೆಗೆ ಅರಮನೆ ಆವರಣದಲ್ಲಿ ಸಂಜೆ ನಡೆಯಲಿರುವ 2 ಗಂಟೆ ಅವಧಿಯ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಗರಿಷ್ಠ 500 ಜನರಿಗೆ ಅನುಮತಿ ನೀಡಲಾಗಿದೆ. ದಸರಾ ಆಚರಣೆಯಲ್ಲಿ ಭಾಗವಹಿಸುವ-ವರು ಅ. 4ರ ನಂತರ ಕೋವಿಡ್ ತಪಾಸಣೆ (ಆರ್‌ಟಿಪಿಸಿಆರ್) ನಡೆಸಿ ಸೋಂಕು ಇಲ್ಲದಿರುವ ಬಗ್ಗೆ ಪ್ರಮಾಣಪತ್ರ ಪಡೆಯಲೇಬೇಕು. ಕನಿಷ್ಠ ಒಂದು ಡೋಸ್ ಕೋವಿಡ್ ಲಸಿಕೆ ಪಡೆದಿರಬೇಕು.

ಮಾಸ್ಕ್ ಧರಿಸದವರ ವಿರುದ್ಧ ನಿಯಮಾನುಸಾರ ಕ್ರಮ ತೆಗೆದುಕೊ-ಳ್ಳಲಾಗುವುದು. ಈ ಷರತ್ತುಗಳಲ್ಲ-ದೆ, ಹಬ್ಬದ ಆಚರಣೆಗೆ ಅಗತ್ಯವಾದ ಸುರಕ್ಷತಾ ಕ್ರಮಗಳನ್ನು ಜಿಲ್ಲಾಡಳಿತ ವಹಿಸಬೇಕು ಎಂದೂ ಮಾರ್ಗಸೂಚಿ-ಯಲ್ಲಿ ತಿಳಿಸಲಾಗಿದೆ.

'ಗೊಂಡ'ರಿಗೆ ಉದ್ಯೋಗ ಕೈತಪ್ಪುವ ಆತಂಕ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಸರ್ಕಾರಿ ಹುದ್ದೆಗೆ ಆಯ್ಕೆಯಾದರೂ ಜಾತಿ ಸಿಂಧುತ್ವ ಪ್ರಮಾಣಪತ್ರ ಸಿಗದೆ 'ಗೊಂಡ' ಸಮುದಾಯದ (ಎಸ್.ಟಿ) ಅಭ್ಯರ್ಥಿಗಳು ಅತಂತ್ರರಾಗಿದ್ದು, ಉದ್ಯೋಗವೇ ಕೈತಪ್ಪುವ ಆತಂಕ-ದಲ್ಲಿದ್ದಾರೆ.

'ಗೊಂಡ' ಸಮುದಾಯಕ್ಕೆ ಕೆಲವು ಜಿಲ್ಲೆಗಳಲ್ಲಿ ಪರಿಶಿಷ್ಟ ಪಂಗಡದ ಪ್ರಮಾಣ ಪತ್ರವನ್ನು ಹಿಂದಿನಿಂದ ನೀಡಲಾಗುತ್ತಿದೆ. ಪರಿಶಿಷ್ಟ ಪಂಗಡದ ವಿದ್ಯಾರ್ಥಿ ವೇತನ, ವಿದ್ಯಾರ್ಥಿ ನಿಲಯ, ಸರ್ಕಾರಿ ಉದ್ಯೋಗ ಸೇರಿ ಎಲ್ಲ ರೀತಿಯ ಸೌಲ-ಭ್ಯಗಳನ್ನು ಈ ಸಮುದಾಯ ಪಡೆದುಕೊಂಡು ಬಂದಿದೆ.

ಆದರೆ, 2021ರ ಜನವರಿ 16ರಂದು ಸರ್ಕಾರ ಹೊರಡಿಸಿರುವ ಆದೇಶದ ಪ್ರಕಾರ, ಜಾತಿ ಪ್ರಮಾಣ ಪತ್ರ ಇದ್ದರೂ, ಪರಿಶಿಷ್ಟ ಪಂಗಡದಲ್ಲಿ ಇರುವ 12 ಮತ್ತು ಪರಿಶಿಷ್ಟ ಜಾತಿಯಲ್ಲಿರುವ 6 ಸಮುದಾಯಗಳಿಗೆ ಜಾತಿ ಸಿಂಧುತ್ವ ಪ್ರಮಾಣ ಪತ್ರ ನೀಡುವ ಮೊದಲು ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ (ಜಾಗೃತ ಕೋಶ) ವರದಿಯನ್ನು ಜಿಲ್ಲಾಧಿಕಾರಿ ಅಧ್ಯಕ್ಷತೆಯ ಸಮಿತಿ ಪಡೆದುಕೊ-ಳ್ಳಬೇಕು.

ಪ್ರಜಾವಾಣಿ ವಿಶೇಷ

ಪೊಲೀಸ್, ಎಫ್‌ಡಿಎ, ಎಸ್‌ಡಿಎ, ಪಿಎಸ್‌ಐ, ಕೆಪಿಟಿಸಿಎಲ್, ಕೆಎಸ್‌ಆರ್‌ಟಿಸಿ, ಬಿಎಂಟಿಸಿಯಲ್ಲಿ ನೌಕರರಾಗಿ ಆಯ್ಕೆಯಾಗಿರುವ 85ಕ್ಕೂ ಹೆಚ್ಚು ಅಭ್ಯರ್ಥಿಗಳು ಈಗ ಅತಂತ್ರರಾಗಿದ್ದಾರೆ.

2ನೇ ಪುಟ ನೋಡಿ

ಬಾಬಾಬುಡನ್ ಗಿರಿ: ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಮಗಳೂರು ಜಿಲ್ಲೆಯ 'ಶ್ರೀಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾ'ದಲ್ಲಿ ಪೂಜೆಗೆ ಮುಜಾವರ್ ನೇಮಕ ಮಾಡಿ 2018 ರಲ್ಲಿ ಸರ್ಕಾರ ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ರದ್ದುಗೊಳಿಸಿದ ಬೆನ್ನಲ್ಲೇ, ಮುಂದಿನ ನಡೆಯ ಬಗ್ಗೆ ತೀರ್ಮಾನಿಸಲು ಸಚಿವ ಸಂಪುಟ ಉಪಸಮಿತಿ ರಚಿಸಲಾಗಿದೆ.

ಈ ಸಮಿತಿಯಲ್ಲಿ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ, ಕಂದಾಯ ಸಚಿವ ಆರ್. ಅಶೋಕ, ಕನ್ನಡ ಮತ್ತು ಸಂಸ್ಕೃತಿ, ಇಂಧನ ಸಚಿವ ವಿ.ಸುನಿಲ್‌ಕುಮಾರ್ ಮತ್ತು ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ಸದಸ್ಯರಾಗಿದ್ದಾರೆ.

ಹೈಕೋರ್ಟ್ ನೀಡಿರುವ ತೀರ್ಪಿನ ಅನುಷ್ಠಾನದ ಸಾಧಕ-ಬಾಧಕಗಳ ಬಗ್ಗೆ ಚರ್ಚಿಸಿ ವರದಿ ಪಡೆಯಲಾಗುವುದು. ಬಳಿಕ ನ್ಯಾಯಾಲಯಕ್ಕೆ ಪ್ರಮಾಣಪತ್ರ ಸಲ್ಲಿಸಲಾಗುವುದು ಎಂದು ಸಚಿವ ಸಂಪುಟ ಸಭೆಯ ಬಳಿಕ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

ನ್ಯಾಯಾಲಯ ಹೇಳಿದ್ದೇನು?: 2018 ರಲ್ಲಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗ ಮೋಹನ ದಾಸ್ ನೇತೃತ್ವದ ಉನ್ನತ ಮಟ್ಟದ ಸಮಿತಿ ನೀಡಿದ್ದ ವರದಿಯನ್ನು ಉಲ್ಲೇಖಿಸದೆ ಕಾನೂನಿನ ಪ್ರಕಾರ 'ಮರುಪರಿಶೀಲನೆ' ನಡೆಸುವಂತೆ ನ್ಯಾಯಮೂರ್ತಿ ಪಿ.ಎಸ್. ದಿನೇಶ್‌ಕುಮಾರ್ ಅವರಿದ್ದ ಪೀಠ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು.

'2018 ರಲ್ಲಿ ಸರ್ಕಾರ ಮುಕ್ತ ಮನಸಿನಿಂದ ಆದೇಶ ಮಾಡಿರಲ್ಲಿಲ್ಲ ಮತ್ತು ಉನ್ನತ ಮಟ್ಟದ ಸಮಿತಿ ವರದಿ ಕೂಡ ಪಕ್ಷಪಾತದಿಂದ ಮುಕ್ತವಾದಂತೆ ಕಾಣಿಸುತ್ತಿಲ್ಲ' ಎಂದು ಪೀಠ ಅಭಿಪ್ರಾ-ಯಪಟ್ಟಿತು.

2ನೇ ಪುಟ ನೋಡಿ

for a test drive, call on 1800 315 4444. select variants available in CSD. special offers for defence personnel, government, PSU and corporate employees. for bulk enquiries, contact corpsales@renault.com for fur

terms and conditions apply. #prices mentioned above are for base variant for ex-showroom Bengaluru for each model and are exclusive of local taxes. ^the benefits up to ₹ 40 000/- for Kwid include cash benefit of up to ₹ 10 000/-, exchange benefit of up to ₹ 20 000/- & corporate benefit of up to ₹ 10 000/- on select versions. ^^the bene
of required proof by the customer. ##loyalty benefits applicable on buying additional / exchange with Renault Model. for detail on loyalty benefits on each models and T&Cs visit www.renault.co.in/offers. * buy now, pay in 2022 corresponds to EMI holiday of 6 months from the date of disbursal of loan, applicable till 31st October, 2
including without limitation. finance at the sole discretion of Renault finance. offers may vary across variants and cities. model/accessories shown may not be a part of the standard fitment. the above mentioned offers & benefits are valid till 31st October, 2021 and are through Renault dealership. for detailed offers, visit www.rena
applicable laws of India and court at Gurugram shall have the exclusive jurisdiction. for detailed terms and conditions, please visit www.renault.co.in

SHOWROOMS: KARNATAKA: BENGALURU: RENAULT Mysore Road Mob: +91 8527240549, RENAULT Palace Orchards Mob: +91 8527240717, RENAULT Silk Board Mob: +91 8527240654, RENAULT Whitefield Mob: +91 8527240685, RENAULT JP Nagar Mob: +91

‘ಗಾಂಧಿ ನಡಿಗೆ ಕೃಷ್ಣೆಯ ಕಡೆಗೆ’ ಕುರಿತು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಹೇಳಿಕೆ

ಕಾಂಗ್ರೆಸ್ ಪಾದಯಾತ್ರೆ ಚುನಾವಣಾ ಗಿಮಿಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗಾಂಧಿ ನಡಿಗೆ ಕೃಷ್ಣೆಯ ಕಡೆಗೆ’ ಎಂಬ ಕಾಂಗ್ರೆಸ್‌ನವರ ಪಾದಯಾತ್ರೆ ಹಾನಗಲ್ ಮತ್ತು ಸಿಂದಗಿ ಕ್ಷೇತ್ರಗಳ ಉಪ ಚುನಾವಣೆ ಹಿನ್ನೆಲೆಯಲ್ಲಿ ಒಂದು ಗಿಮಿಕ್. ಇಂಥ ಗಿಮಿಕ್‌ಗಳಿಗೆ ಜನ ಮೋಸ ಹೋಗುವುದಿಲ್ಲ’ ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಹೇಳಿದರು.

ಗೋವಿಂದ ಕಾರಜೋಳ

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ಬಿಜೆಪಿ ಯಾವಾಗಲೂ ‘ಕೃಷ್ಣೆಯ ನಡಿಗೆ ಸತ್ಯದ ಕಡೆಗೆ’ ಎಂಬುದನ್ನು ಪರಿಪಾಲಿಸುತ್ತಾ ಬಂದಿದೆ. ಉಪಚುನಾವಣೆ ಇರಲಿಲ್ಲ ಎಂದಿದ್ದರೆ, ಕಾಂಗ್ರೆಸ್‌ನವರ ‘ಗಾಂಧಿ ನಡಿಗೆ ಕೃಷ್ಣೆಯ ಕಡೆಗೆ’ ಇರುತ್ತಿರಲಿಲ್ಲ. ಅದು ನಿರ್ಲಕ್ಷ್ಯದ ಕಡೆಗೆ ಇರುತ್ತಿತ್ತು’ ಎಂದು ವ್ಯಂಗ್ಯವಾಡಿದರು.

‘ಕೃಷ್ಣೆ ಕಾಂಗ್ರೆಸ್‌ನವರ ಪಾಪದ ಕೂಸು ಎಂದು ನಾನು ಹೇಳಿದ್ದೇನೆಂದು ಮಾಜಿ ನೀರಾವರಿ ಸಚಿವರೂ ಆಗಿರುವ ಶಾಸಕ ಎಂ.ಬಿ. ಪಾಟೀಲ ಸುಳ್ಳು ಹೇಳಿದ್ದಾರೆ. ನಾನು ಯಾವತ್ತೂ ಆ ರೀತಿ ಹೇಳಿಲ್ಲ, ಹೇಳುವವನೂ ಅಲ್ಲ. ನಾನು ಈ ರೀತಿ ಹೇಳಿದ್ದೇನೆಂದು ಎಂ.ಬಿ. ಪಾಟೀಲರು ಸಾಬೀತುಪಡಿಸಬೇಕು. ಇಲ್ಲದಿದ್ದರೆ ಅವರು ಬಹಿರಂಗವಾಗಿ ಕ್ಷಮೆ ಕೇಳಬೇಕು’ ಎಂದು ಆಗ್ರಹಿಸಿದರು.

‘ಕಾಂಗ್ರೆಸ್‌ನವರು ಕೃಷ್ಣಾ ಮೇಲ್ದಂಡೆ ಯೋಜನೆಗಳಿಗೆ ಯಾವುದೇ ರೀತಿಯ ಸಮರ್ಪಕ ಹಣಕಾಸು ಒದಗಿಸಲಿಲ್ಲ. ಆದ್ದರಿಂದ ಈ ಯೋಜನೆಗಳು ಕುಂಟುತ್ತಾ ತೆವಳುತ್ತಾ ಸಾಗಿದೆ. 2008ರಿಂದ 2013ರವರೆಗೆ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇದ್ದಾಗ ಜಲ ಸಂಪನ್ಮೂಲ ಸಚಿವರಾಗಿದ್ದ ಈಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಿಂದಗಿ ಕ್ಷೇತ್ರಕ್ಕೆ ಅನುಕೂಲವಾಗುವ ಇಂಡಿ ಶಾಖಾ ಕಾಲುವೆ ಮತ್ತು ಗುತ್ತಿ ಬಸವಣ್ಣ ಏತ ನೀರಾವರಿ ಕಾಮಗಾರಿ ಪೂರ್ಣಗೊಳಿಸಿದರು. ಈ ಎರಡೂ ಯೋಜನೆಗಳಿಗೆ ₹ 1,000 ಕೋಟಿ ಖರ್ಚಾಗಿದ್ದು 80 ಸಾವಿರ ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ’ ಎಂದು ಸಚಿವರು ವಿವರಿಸಿದರು.

‘ಉಪಚುನಾವಣೆ ಮತ್ತು ಡಿಸೆಂಬರ್ ಹೊತ್ತಿಗೆ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್ತಿನ ಚುನಾವಣೆ ಬರುವುದರಿಂದ ಕಾಂಗ್ರೆಸ್‌ನವರು ಪಾದಯಾತ್ರೆಯಂಥ ಹೊಸ ನಾಟಕ ಆರಂಭಿಸಿದ್ದಾರೆ. ಆದರೆ, ಸಿಂದಗಿಯಲ್ಲಿ ಬಿಜೆಪಿ ಗೆಲುವು ನಿಶ್ಚಿತ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

‘ರಾಜ್ಯ ಸರ್ಕಾರ ಹೆಚ್ಚು ದಿನ ಉಳಿಯುವುದಿಲ್ಲ’

ಹಾವೇರಿ: ‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸರ್ಕಾರ ಹೆಚ್ಚು ದಿನ ಉಳಿಯುವುದಿಲ್ಲ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್ ಹೇಳಿದರು

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ‘ಪಕ್ಷಕ್ಕೆ ದುಡಿದ ಹಿರಿಯರನ್ನು ಕಸದ ಬುಟ್ಟಿಗೆ ಹಾಕುವುದು ಬಿಜೆಪಿ ಸಂಸ್ಕೃತಿ’ ಎಂದು ಟೀಕಿಸಿದ ಅವರು, ‘ಕೇಂದ್ರ ಸರ್ಕಾರ ತೊಂದರೆ ಕೊಟ್ಟಿತು’ ಎಂದು ಕಣ್ಣೀರು ಹಾಕಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಿ.ಎಸ್.ಯಡಿಯೂರಪ್ಪನವರ ಕಣ್ಣೀರಿನ ಕತೆ ರಾಜ್ಯದ ಜನರಿಗೆ ಗೊತ್ತಾಗಬೇಕಿದೆ’ ಎಂದರು.

‘ಬಿಜೆಪಿ ಯಾವ ಪುರುಷಾರ್ಥಕ್ಕೆ ‘ಜನಾಶೀರ್ವಾದ ಯಾತ್ರೆ’ ಮಾಡಿತು ಎಂಬುದು ತಿಳಿಯಲಿಲ್ಲ. ಕೇಂದ್ರ ಮತ್ತು ರಾಜ್ಯದ ಸಚಿವರು ಜನರ ಕ್ಷಮೆ ಕೇಳದಿದ್ದರೆ ಜನರು ‘ಆಕ್ರೋಶ ಯಾತ್ರೆ’ ಮಾಡಲಿದ್ದಾರೆ’ ಎಂದು ಎಚ್ಚರಿಸಿದರು.

‘ಹಾನಗಲ್ ಉಪಚುನಾವಣೆಗೆ ಅಲ್ಪಸಂಖ್ಯಾತ ಅಭ್ಯರ್ಥಿಯನ್ನು ಘೋಷಣೆ ಮಾಡಿದ ಬಗ್ಗೆ ಪುನರ್ ಪರಿಶೀಲನೆ ಮಾಡಿ, ಜಾತ್ಯತೀತ ಮತಗಳನ್ನು ಒಡೆಯಬೇಡಿ ಎಂದು ಎಚ್‌.ಡಿ.ದೇವೇಗೌಡರಿಗೆ ಮನವಿ ಮಾಡಿದ್ದೆ. ಆದರೆ, ಜೆಡಿಎಸ್ ಅವಕಾಶವಾದಿ ರಾಜಕಾರಣ ಮಾಡುತ್ತಿದೆ’ ಎಂದು ದೂರಿದರು.

ಬಿಜೆಪಿಗೆ ಲಾಭ ಮಾಡಲು ಮುಸ್ಲಿಂ ಅಭ್ಯರ್ಥಿ ಕಣಕ್ಕೆ: ಚಲುವರಾಯಸ್ವಾಮಿ

ಬೆಂಗಳೂರು: ‘ಹಾನಗಲ್, ಸಿಂದಗಿ ಉಪ ಚುನಾವಣೆಯಲ್ಲಿ ಬಿಜೆಪಿಗೆ ಲಾಭ ಮಾಡಲು ಆ ಕ್ಷೇತ್ರಗಳಲ್ಲಿ ಎಚ್‌.ಡಿ. ಕುಮಾರಸ್ವಾಮಿ ಅವರು ಮುಸ್ಲಿಂ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದಾರೆ’ ಎಂದು ಕಾಂಗ್ರೆಸ್ ಮುಖಂಡ ಎನ್. ಚಲುವರಾಯಸ್ವಾಮಿ ಆರೋಪಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ‘ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ. ಹೀಗಾಗಿ ಕಾಂಗ್ರೆಸ್ ಸೋಲಿಸಲು ಅವರು ತಂತ್ರ ಮಾಡುತ್ತಿದ್ದಾರೆ’ ಎಂದರು.

‘ಉಪ ಚುನಾವಣೆಗೆ ಮುನ್ನವೇ ಬಿಜೆಪಿ ಜೊತೆ ಹೊಂದಾಣಿಕೆ ಭಾಗವಾಗಿ ಈ ತಂತ್ರ ಫಲಿಸಬಹುದು. ಆದರೆ, ಸಾರ್ವತ್ರಿಕ ಚುನಾವಣೆಯಲ್ಲಿ ಸಾಧ್ಯವಿಲ್ಲ. ಮುಸ್ಲಿಂ ಸಮುದಾಯ ಇದನ್ನು ಅರ್ಥ ಮಾಡಿಕೊಳ್ಳಲಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮೊದಲು ಪರಿಹಾರ ಕೊಡಲಿ: ‘ಕಂದಾಯ ಸಚಿವ ಆರ್. ಅಶೋಕ ಅವರು ಪ್ರಚಾರ ಬಿಟ್ಟು, ಪ್ರಾಮಾಣಿಕವಾಗಿ ಇಲಾಖೆಯಲ್ಲಿ ಕೆಲಸ ಮಾಡಲಿ. ಕೋವಿಡ್‌ನಿಂದ ಸತ್ತವರ ಪಿಂಡ ಪ್ರದಾನ ಮಾಡಿದರೆ ನೆಮ್ಮದಿ ಸಿಗುವುದಿಲ್ಲ. ಮೃತರ ಕುಟುಂಬಕ್ಕೆ ಪರಿಹಾರ ನೀಡಬೇಕು’ ಎಂದು ಆಗ್ರಹಿಸಿದರು.

‘ಕೋವಿಡ್ ಚಿಕಿತ್ಸೆಯಲ್ಲಿ ಸಾಕಷ್ಟು ಲೋಪದೋಷಗಳಾಗಿವೆ. ಸರ್ಕಾರ ನಡೆಸುವವರು ಕೋವಿಡ್‌ನಲ್ಲಿ ದುಡ್ಡು ಮಾಡಲು ನಿಂತುಕೊಂಡರು. ಔಷಧ ಖರೀದಿ ಸೇರಿದಂತೆ ನಾನಾ ರೀತಿಯಿಂದ ಹಣ ಮಾಡಿದರು. ಖಾಸಗಿ ಆಸ್ಪತ್ರೆಗಳ ಜತೆ ಶಾಮೀಲಾಗಿ ಕಿಕ್ ಬ್ಯಾಕ್ ಪಡೆದರು’ ಎಂದೂ ಅವರು ಆರೋಪಿಸಿದರು.

ಪ್ರಜಾವಾಣಿ
ಫೋನ್-ಇನ್
ಕಾರ್ಯಕ್ರಮ

ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಸಾಧಕ ಬಾಧಕಗಳೇನು?

- ಶಿಕ್ಷಣ ನೀತಿಯ ಬಗ್ಗೆ ಸಂದೇಹಗಳಿವೆಯೇ?
- ನೂತನ ನೀತಿಯಿಂದ ವಿದ್ಯಾರ್ಥಿಗಳಿಗೆ ಆಗುವ ಅನುಕೂಲಗಳೇನು?
- ಎನ್‌ಇಪಿ ವಿದ್ಯಾರ್ಥಿಗಳ ಭವಿಷ್ಯಕ್ಕೆ ಮಾರಕವೇ–ಪೂರಕವೇ?
- ತರಾತುರಿಯಲ್ಲಿ ನೀತಿ ಜಾರಿ ಮಾಡಿದ್ದರ ಬಗ್ಗೆ ಆಕ್ಷೇಪ ಇದೆಯೇ?

ನಿಮ್ಮ ಪ್ರಶ್ನೆಗಳಿಗೆ ಉತ್ತರಿಸಲಿದ್ದಾರೆ

ಡಾ.ಸಿ.ಎನ್. ಅಶ್ವತ್ಥನಾರಾಯಣ
ಉನ್ನತ ಶಿಕ್ಷಣ ಸಚಿವ

ಶಿಕ್ಷಣ ನೀತಿ ಬಗ್ಗೆ ಮಾತ್ರ ಪ್ರಶ್ನೆ ಕೇಳಲು ಅವಕಾಶ

07.10.2021, ಗುರುವಾರ
ಸಮಯ: ಬೆಳಿಗ್ಗೆ 11ರಿಂದ ಮಧ್ಯಾಹ್ನ 12ರವರೆಗೆ
ದೂರವಾಣಿ ಸಂಖ್ಯೆ 08045557230
facebook LIVE facebook.com/prajavani.net

ಉಪ ಚುನಾವಣೆ: ‘ಕೈ’ ತಂಡ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ ಚುನಾವಣೆ ನಡೆಯಲಿರುವ ಸಿಂದಗಿ ಮತ್ತು ಹಾನಗಲ್ ಕ್ಷೇತ್ರಗಳನ್ನು ‘ಕೈ’ ವಶ ಮಾಡಿಕೊಳ್ಳಲು ಕಾರ್ಯತಂತ್ರ ರೂಪಿಸುತ್ತಿರುವ ಕಾಂಗ್ರೆಸ್ ನಾಯಕರು, ಎರಡೂ ಕ್ಷೇತ್ರಗಳಿಗೆ ಪಕ್ಷದಿಂದ ಚುನಾವಣಾ ಉಸ್ತುವಾರಿಗಳು ಮತ್ತು ವೀಕ್ಷಕರ ದೊಡ್ಡ ತಂಡವನ್ನೇ ರಚಿಸಿದೆ.

ಸಿಂದಗಿ ಕ್ಷೇತ್ರಕ್ಕೆ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ ನೇತೃತ್ವದಲ್ಲಿ 38 ಮಂದಿಯ ತಂಡ ಹಾಗೂ ಪಕ್ಷದ ಬಾಗಲಕೋಟೆ, ಚಿಕ್ಕೋಡಿ, ಬೆಳಗಾವಿ, ಬಳ್ಳಾರಿ, ಕಲಬುರ್ಗಿ, ಕೊಪ್ಪಳ, ರಾಯಚೂರು ಯಾದಗಿ ಜಿಲ್ಲಾ ಘಟಕಗಳ ಅಧ್ಯಕ್ಷರನ್ನು ನೇಮಿಸಲಾಗಿದೆ. ಜಿ. ಪರಮೇಶ್ವರ, ಈಶ್ವರ ಖಂಡ್ರೆ, ಕೆ. ಆರ್. ರಮೇಶ್‌ಕುಮಾರ್, ಎಂ.ಬಿ. ಪಾಟೀಲ, ಕೆ.ಜೆ. ಜಾರ್ಜ್ ಮತ್ತಿತರರು ಈ ತಂಡದಲ್ಲಿ ಇದ್ದಾರೆ.

ಹಾನಗಲ್ ಕ್ಷೇತ್ರಕ್ಕೆ ಪಕ್ಷದ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ನೇತೃತ್ವದಲ್ಲಿ 52 ಮಂದಿಯ ತಂಡ ಹಾಗೂ ಪಕ್ಷದ ಚಿತ್ರದುರ್ಗ, ಧಾರವಾಡ, ದಾವಣಗೆರೆ, ಧಾರವಾಡ, ಕಲಬುರ್ಗಿ, ಹಾವೇರಿ, ಶಿವಮೊಗ್ಗ, ಉತ್ತರಕನ್ನಡ, ಹುಬ್ಬಳ್ಳಿ–ಧಾರವಾಡ ಜಿಲ್ಲಾ ಘಟಕಗಳ ಅಧ್ಯಕ್ಷರನ್ನು ನೇಮಿಸಲಾಗಿದೆ. ಸತೀಶ ಜಾರಕಿಹೊಳಿ, ಆರ್.ವಿ. ದೇಶಪಾಂಡೆ, ಎಚ್‌.ಕೆ. ಪಾಟೀಲ, ರಾಮಲಿಂಗಾರೆಡ್ಡಿ, ದಿನೇಶ್ ಗುಂಡೂರಾವ್ ಮತ್ತಿತರರು ಈ ತಂಡದಲ್ಲಿದ್ದಾರೆ.‘ಹಾನಗಲ್ ಕ್ಷೇತ್ರದ ಅಭ್ಯರ್ಥಿ ಶ್ರೀನಿವಾಸ ಮಾನೆ ಇದೇ 7ರಂದು ನಾಮಪತ್ರ ಸಲ್ಲಿಸಲಿದ್ದಾರೆ. ಅದೇ ದಿನ ಸಂಜೆ 5 ಗಂಟೆಗೆ ಹುಬ್ಬಳ್ಳಿಯ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಹೋಟೆಲ್ ಕ್ಯೂಬಿಕ್‌ನಲ್ಲಿ ಚುನಾವಣಾ ಉಸ್ತುವಾರಿ ತಂಡದ ಸಭೆ ನಡೆಯಲಿದೆ. ಮರುದಿನ ಸಿಂದಗಿ ಕ್ಷೇತ್ರದ ಅಭ್ಯರ್ಥಿ ಅಶೋಕ ಮನಗೂಳಿ ನಾಮಪತ್ರ ಸಲ್ಲಿಸಲಿದ್ದು,

ಅಂದು ಸಂಜೆ ವಿಜಯಪುರ ನಗರದ ಶೋಲಾಪುರ ರಸ್ತೆಯಲ್ಲಿರುವ ಹೋಟೆಲ್ ಸ್ಪೂರ್ತಿಯಲ್ಲಿ ಈ ಕ್ಷೇತ್ರದ ಉಸ್ತುವಾರಿಗಳ ಸಭೆ ನಡೆಯಲಿದೆ. ಎರಡೂ ಸಭೆಗಳಲ್ಲಿ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಶಾಸಕಾಂಕ ಪಕ್ಷದ ನಾಯಕ ಸಿದ್ದರಾಮಯ್ಯ ಭಾಗವಹಿಸಲಿದ್ದಾರೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಬಾಬಾಬುಡನ್ ಗಿರಿ: ಸಮಿತಿ ರಚನೆ

ಒಂದನೇ ಪುಟದಿಂದ

‘ಮೊದಲನೆಯದಾಗಿ ಹಿಂದೂಸಮುದಾಯದವರು ತಮ್ಮ ನಂಬಿಕೆಯಂತೆ ಪೂಜೆ,ಅರ್ಚನೆ ಮಾಡುವ ಹಕ್ಕನ್ನು ಕಸಿದುಕೊಳ್ಳಲಾಗಿದೆ. ಎರಡನೆಯದಾಗಿ ಮುಜಾವರ್ ತನ್ನ ನಂಬಿಕೆಗೆ ವಿರುದ್ಧ ಪಾದುಕೆ ಪೂಜೆ ಮತ್ತು ನಂದಾ ದೀಪ ಬೆಳಗಲು ಆದೇಶಿಸಿದೆ. ಎರಡೂ ಸಮುದಾಯದವರ ಹಕ್ಕನ್ನೂ ಕಸಿದುಕೊಳ್ಳಲಾಗಿದೆ. ಇದು ಸಂವಿಧಾನದ ಪರಿಚ್ಛೇದ 25ರ ಉಲ್ಲಂಘನೆ’ ಎಂದು ಪೀಠ ಅಭಿಪ್ರಾಯಪಟ್ಟಿತ್ತು.

ಸುನೀಲ್‌ಗೆ ಸ್ಥಾನ: ಬಾಬಾಬುಡನ್‌ಗಿರಿ ದರ್ಗಾವನ್ನು ‘ದತ್ತಪೀಠ’ವಾಗಿ ಪರಿವರ್ತಿಸಬೇಕು ಎಂಬ ಹೋರಾಟದ ಮುಂಚೂಣಿಯಲ್ಲಿ ಸಿ.ಟಿ. ರವಿ, ವಿ. ಸುನೀಲ್ ಕುಮಾರ್ ಅವರೆಲ್ಲ ಇದ್ದರು. ಸುನೀಲ್ ಕುಮಾರ್ ಈಗ ಸಚಿವರಾಗಿದ್ದು, ಅವರೂ ಸಮಿತಿಯಲ್ಲಿದ್ದಾರೆ.

ಮೈಶುಗರ್‌ಗೂ ಸಂಪುಟ ಉಪಸಮಿತಿ

ಮಂಡ್ಯದ ಮೈಶುಗರ್ ಸಕ್ಕರೆ ಕಾರ್ಖಾನೆಯನ್ನು ಖಾಸಗಿಯವರು ನಡೆಸಬೇಕೇ ಅಥವಾ ಸರ್ಕಾರ ನಡೆಸಬೇಕೆ ಎಂಬ ಬಗ್ಗೆ ವರದಿ ಪಡೆಯಲು ಸಂಪುಟ ಉಪಸಮಿತಿ ರಚಿಸಲು ತೀರ್ಮಾನಿಸಲಾಗಿದೆ.

ಆದಷ್ಟು ಬೇಗ ವರದಿ ಪಡೆದು ಅದರ ಆಧಾರದಲ್ಲಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಈ ಸಮಿತಿಯಲ್ಲಿ ಸಕ್ಕರೆ ಸಚಿವ ಶಂಕರ ಪಾಟೀಲ ಮುನೇನಕೊಪ್ಪ, ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ನಾರಾಯಣ ಗೌಡ, ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಮತ್ತು ಕಂದಾಯ ಸಚಿವ ಆರ್. ಅಶೋಕ ಸದಸ್ಯರಾಗಿರುತ್ತಾರೆ ಎಂದು ಮಾಧುಸ್ವಾಮಿ ಹೇಳಿದರು.

ಸಚಿವ ಸಂಪುಟ ಸಭೆಗೂ ಮುನ್ನ ಸುದ್ದಿಗಾರರ ಜತೆ ಮಾತನಾಡಿದ್ದ ಸಕ್ಕರೆ ಸಚಿವ ಶಂಕರ ಪಾಟೀಲ ಮುನೇನಕೊಪ್ಪ, ‘ಮೈಶುಗರ್ ಸಕ್ಕರೆ ಕಾರ್ಖಾನೆಯ ವಿಚಾರದಲ್ಲಿ ಕೆಲವರು ಪ್ರತಿಷ್ಠೆಗೆ ಬಿದ್ದಿದ್ದಾರೆ. ಈ ಕಾರ್ಖಾನೆಗೆ ₹ 550 ಕೋಟಿ ಹಣ ನೀಡಲಾಗಿದೆ. ಆ ಹಣದ ಲೆಕ್ಕ ಬರಬೇಕು. ಸಚಿವ ಸಂಪುಟ ಸಭೆಯಲ್ಲಿ ಕೆಲವು ಆಂತರಿಕ ವಿಚಾರಗಳನ್ನು ಚರ್ಚಿಸಿ ನಿರ್ಧಾರ ಮಾಡಬೇಕಿದೆ’ ಎಂದು ಹೇಳಿದ್ದರು.

ಟ್ರಸ್ಟ್ ಆಸ್ತಿ ಮಾರಾಟ ಯತ್ನ

ಮೈಸೂರು: ‘ನಗರದ ಬೋಗಾದಿ ರೈಲ್ವೆ ಬಡಾವಣೆ ಸಮೀಪದ ಶ್ರೀಸಾಯಿ ಸರಸ್ವತಿ ವಿದ್ಯಾಕೇಂದ್ರದ ಗುರುಕುಲ ಯೋಗಾಶ್ರಮ ಟ್ರಸ್ಟ್‌ನ ಆಸ್ತಿಯನ್ನು, ರಾಮಚಂದ್ರಾಪುರ ಮಠ ಅಕ್ರಮವಾಗಿ ಮಾರಾಟ ಮಾಡಲು ಮುಂದಾಗಿದೆ’ ಎಂದು ವಕೀಲ ಅ.ಮ.ಭಾಸ್ಕರ್ ಮಂಗಳವಾರ ಇಲ್ಲಿ ಆರೋಪಿಸಿದರು.

‘₹ 17 ಕೋಟಿ ಮೌಲ್ಯದ 7,908 ಚದರ ಮೀಟರ್ ಜಾಗವನ್ನು, ಕೇವಲ ₹ 6.5 ಕೋಟಿಗೆ ಮಾರಾಟ ಮಾಡಲು ಟ್ರಸ್ಟ್‌ನ ಹಾಲಿ ಧರ್ಮದರ್ಶಿಯಾಗಿರುವ ರಾಘವೇಶ್ವರ ಭಾರತಿ ಸ್ವಾಮೀಜಿ, ಬಿ.ಕೆ.ರಾಜು ಎಂಬುವರಿಗೆ ಜಿಪಿಎ ಮಾಡಿಕೊಟ್ಟಿದ್ದಾರೆ’ ಎಂದು ನಗರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ದೂರಿದರು.

‘1990ರಲ್ಲಿ ಕೃಷ್ಣಭಟ್, ನಾರಾಯಣಭಟ್ ಎಂಬುವರು ಶೈಕ್ಷಣಿಕ ಉದ್ದೇಶಕ್ಕಾಗಿ ಗುರುಕುಲ ಯೋಗಾಶ್ರಮ ಟ್ರಸ್ಟ್ ರಚಿಸಿದ್ದರು. ಶೈಕ್ಷಣಿಕ ಹಾಗೂ ಚಾರಿಟಬಲ್ ಉದ್ದೇಶಕ್ಕೆ ಬೋಗಾದಿಯ ಸರ್ವೆ ನಂಬರ್ 10/1 ಬಿ ನಲ್ಲಿನ 2.10 ಎಕರೆ ಜಮೀನಿನ ಮಾಲೀಕತ್ವವನ್ನು ಕೃಷ್ಣಭಟ್ ಹೊಂದಿದ್ದರು. ದುರ್ಬಳಕೆಯಾದಲ್ಲಿ ಜಮೀನನ್ನು ವಾಪಸ್ ಪಡೆಯುವ ಷರತ್ತನ್ನು ಸರ್ಕಾರ ನಮೂದಿಸಿತ್ತು’ ಎಂದು ಅವರು ಹೇಳಿದರು.

‘ಇಲ್ಲಿ ಆರಂಭವಾದ ಶ್ರೀಸಾಯಿ ಸರಸ್ವತಿ ವಿದ್ಯಾಕೇಂದ್ರ ಬೋಗಾದಿ ಸುತ್ತಮುತ್ತಲಿನ ಬಡ ಮಕ್ಕಳಿಗೆ ವಿದ್ಯಾಭ್ಯಾಸ ನೀಡುತ್ತಿತ್ತು. ಗೋಶಾಲೆಯೂ ಇಲ್ಲಿತ್ತು. ಟ್ರಸ್ಟ್‌ನ ಮುಖ್ಯ ಧರ್ಮದರ್ಶಿಯಾಗಿದ್ದ ನಾರಾಯಣ ಭಟ್ ನಿಧನರಾದ ನಂತರ, ಸ್ವಾಮೀಜಿ ಮುಖ್ಯ ಧರ್ಮದರ್ಶಿಗಳಾದರು. ಸರ್ಕಾರಿ ಆದೇಶವನ್ನು ಮುಚ್ಚಿಟ್ಟು ಮಾರಾಟ ಮಾಡಲು ಮುಂದಾಗಿದ್ದಾರೆ’ ಎಂದು ಭಾಸ್ಕರ್ ದೂರಿದರು.

ಶ್ರೀ ಚಾಮುಂಡೇಶ್ವರಿ ಗೆಳೆಯರ ಪ್ರಗತಿಪರ ಸೇವಾ ಪ್ರತಿಷ್ಠಾನದ ಅಧ್ಯಕ್ಷ ಶ್ರೀನಿವಾಸ ಮಾತನಾಡಿ, ‘ಸರ್ಕಾರದ ಆದೇಶ ಉಲ್ಲಂಘಿಸಿರುವ ಸ್ವಾಮೀಜಿಯನ್ನು ಧರ್ಮದರ್ಶಿ ಸ್ಥಾನದಿಂದ ವಜಾಗೊಳಿಸಬೇಕು. ನಿವೇಶನವನ್ನು ಪ್ರತಿಷ್ಠಾನಕ್ಕೆ ನೀಡಬೇಕು’ ಎಂದು ಕೋರಿದರು. ಹೋರಾಟಗಾರ ಸೋಮು, ವಕೀಲ ಸಚಿನ್ ಇದ್ದರು.

ಖಾಸಗಿ ಆಸ್ತಿ: ‘ಶಾಲೆಯಿರುವ ಆಸ್ತಿ ಸರ್ಕಾರದ್ದಲ್ಲ. ಖಾಸಗಿಯದ್ದು. ರಾಘವೇಶ್ವರ ಭಾರತಿ ಸ್ವಾಮೀಜಿ ಸಹ ಒಬ್ಬ ಟ್ರಸ್ಟಿಯಷ್ಟೇ. ಮಾರಾಟ ಮಾಡುವುದು ಟ್ರಸ್ಟಿಗಳ ನಿರ್ಧಾರ. ಶಾಲೆ ನಿರ್ವಹಣೆ ಮಾಡೋದು ಕಷ್ಟವಾಗಿದ್ದರಿಂದ ಮಾರಾಟ ಮಾಡಲಾಗುತ್ತಿದೆ. ಈ ಹಣವನ್ನು ಗೋಕರ್ಣದಲ್ಲಿ ಗುರುಕುಲ, ವಿಶ್ವವಿದ್ಯಾನಿಲಯ ನಿರ್ಮಾಣಕ್ಕೆ ಬಳಸಲಾಗುವುದು’ ಎಂದು ರಾಮಚಂದ್ರಾಪುರ ಮಠದ ಗೋ ಪರಿವಾರದ ಭಕ್ತ ರಾಕೇಶ್ ಭಟ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಗೊಂಡ’ರಿಗೆ ಉದ್ಯೋಗ ಕೈತಪ್ಪುವ ಆತಂಕ

ಒಂದನೇ ಪುಟದಿಂದ

ಸಿಂಧುತ್ವ ನೀಡದಿದ್ದರೆ ಆಯ್ಕೆ ರದ್ದು ಪಡಿಸುವುದಾಗಿ ನೇಮಕಾತಿ ಪ್ರಾಧಿಕಾರಗಳು ನೋಟಿಸ್ ನೀಡಲು ಆರಂಭಿಸಿವೆ.

‘ವರದಿ ಕೇಳಿ ಜಿಲ್ಲಾಧಿಕಾರಿಗಳ ಮೂಲಕ ಪ್ರಸ್ತಾವನೆಗಳು ಸಲ್ಲಿಕೆಯಾಗುತ್ತಿದ್ದು, ಗೊಂಡ ಸಮುದಾಯಕ್ಕೆ ವ್ಯತಿರಿಕ್ತವಾದ ವರದಿಗಳು ಅಲ್ಲಿಂದ ಬರುತ್ತಿವೆ. ಇದರಿಂದಾಗಿ ಉದ್ಯೋಗದಿಂದಲೇ ವಂಚಿತರಾಗುವ ಆತಂಕ ಎದುರಾಗಿದೆ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಭ್ಯರ್ಥಿಗಳು ಹೇಳುತ್ತಾರೆ.

‘ಪರಿಶಿಷ್ಟ ಪಂಗಡದ ಜಾತಿ ಪ್ರಮಾಣ ಪತ್ರವನ್ನು ನಾವು ಹಿಂದಿನಿಂದ ಪಡೆದುಕೊಂಡು ಬಂದಿದ್ದೇವೆ. ಬೀದರ್ ಜಿಲ್ಲೆಯಲ್ಲೇ ಹೆಚ್ಚಿನ ಸಂಖ್ಯೆಯಲ್ಲಿರುವ ನಮ್ಮ (ಗೊಂಡ) ಸಮುದಾಯದ ಸಾವಿರಾರು ಮಂದಿ ಉದ್ಯೋಗವನ್ನೂ ಪಡೆದುಕೊಂಡಿದ್ದಾರೆ. ಈಗ ನಮಗೆ ಪರಿಶಿಷ್ಟ ಪಂಗಡದ ಜಾತಿ ಸಿಂಧುತ್ವ ನೀಡಲು ನಿರಾಕರಿಸಲಾಗುತ್ತಿದೆ’ ಎಂದರು.

> ಜಾತಿ ಸಿಂಧುತ್ವ ಪ್ರಮಾಣ ಪತ್ರ ನೀಡುವ ವಿಷಯದಲ್ಲಿ ಆಯಾ ಜಿಲ್ಲಾಧಿಕಾರಿ ನೇತೃತ್ವದ ಸಮಿತಿ ನಿರ್ಧಾರ ಕೈಗೊಳ್ಳಲಿದೆ.
> **ರವಿಕುಮಾರ್ ಸುರಪುರ,**
> ಸಮಾಜ ಕಲ್ಯಾಣ ಇಲಾಖೆ ಆಯುಕ್ತ

‘2015ರಲ್ಲೂ ಇದೇ ರೀತಿಯ ಆದೇಶವನ್ನು ಸರ್ಕಾರ ಹೊರಡಿಸಿತ್ತು. ಬಳಿಕ ವಾಪಸ್ ಪಡೆಯಿತು. 2021ರ ಜನವರಿಯಲ್ಲಿ ಹೊಸದಾಗಿ ಆದೇಶ ಹೊರಡಿಸಲಾಗಿದೆ. ಆದರೆ, ನಾವು 2017ರಿಂದ ವಿವಿಧ ನೇಮಕಾತಿಗೆ ಅರ್ಜಿ ಹಾಕಿದ್ದೇವೆ. ಪರೀಕ್ಷೆ ನಡೆಸಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳುವಷ್ಟರಲ್ಲಿ 2021ಕ್ಕೆ ಬಂದಿದ್ದೇವೆ. ಅರ್ಜಿ ಸಲ್ಲಿಸುವಾಗ ಎಸ್.ಟಿ ಎಂದು ನಮೂದಿಸಿದ್ದೇವೆ. ಈಗ ಅದೇ ಜಾತಿಯ ಸಿಂಧುತ್ವ ಪ್ರಮಾಣ ಪತ್ರ ಒದಗಿಸದಿದ್ದರೆ ಆಯ್ಕೆಯನ್ನು ಆ ಪ್ರಾಧಿಕಾರಗಳು ರದ್ದು ಮಾಡಲಿವೆ’ ಎಂದು ಆತಂಕ ವ್ಯಕ್ತಪಡಿಸಿದರು.

‘ಪರಿಶಿಷ್ಟ ಪಂಗಡ ಎಂದು ನಮೂದಿಸಿದ್ದರೂ, ಕೆಲವರು ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಕಾರಣಕ್ಕೆ ಸಾಮಾನ್ಯ ವರ್ಗದಲ್ಲಿ ಆಯ್ಕೆಯಾಗಿದ್ದಾರೆ. ಆದರೆ, ಜಾತಿ ನಮೂದಿಸಿರುವ ಕಾರಣ ಸಿಂಧುತ್ವ ಪ್ರಮಾಣ ಪತ್ರ ಒದಗಿಸಬೇಕಾಗುತ್ತದೆ. ಕೈಗೆ ಬಂದ ತುತ್ತು ಬಾಯಿಗೆ ಬರದಂತೆ ಆಗಿದೆ’ ಎಂದರು.

‘ಹಿಂದಿನಿಂದ ಸರ್ಕಾರವೇ ಈ ಸಮುದಾಯಕ್ಕೆ ಪರಿಶಿಷ್ಟ ಪಂಗಡದ ಪ್ರಮಾಣ ಪತ್ರ ನೀಡಿದೆಯೇ ಹೊರತು ನಾವು ನಕಲಿ ಪ್ರಮಾಣ ಪತ್ರ ಪಡೆದಿಲ್ಲ. ಈಗ ಯಾವ ಜಾತಿಯ ಪ್ರಮಾಣ ಪತ್ರ ಪಡೆದುಕೊಳ್ಳಬೇಕು ಎಂಬ ಗೊಂದಲಕ್ಕೆ ಸರ್ಕಾರ ನಮ್ಮನ್ನು ತಳ್ಳಿದೆ’ ಎಂದರು.

ಕೆಲ ಸಮುದಾಯಗಳನ್ನು ಗುರಿಯಾಗಿಸಿಕೊಂಡು ಹೊರಡಿಸಿರುವ ಈ ಆದೇಶ ಹಿಂದಕ್ಕೆ ಪಡೆಯಬೇಕು ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಈ ಹಿಂದೆಯೇ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

ಕಾಂಗ್ರೆಸ್ ಪುನಶ್ಚೇತನಕ್ಕೆ ಮುನ್ನುಡಿ

ಒಂದನೇ ಪುಟದಿಂದ

ಜತೆಗೆ, ಕರ್ನಾಟಕದಲ್ಲಿ ಸದ್ಯ ನಡೆಯಲಿರುವ ಉಪಚುನಾವಣೆ, ಮುಂದಿನ ವಿಧಾನಸಭೆ ಚುನಾವಣೆಯ ಗೆಲುವಿನ ತಂತ್ರಗಾರಿಕೆ ಮತ್ತು ಪಕ್ಷದ ಸಂಘಟನೆಯಲ್ಲಿನ ಮಿತಿಗಳ ಬಗ್ಗೆಯೂ ಸಿದ್ದರಾಮಯ್ಯ ಜತೆಗಿನ ಮಾತುಕತೆ ವೇಳೆ ಮಾಹಿತಿ ಸಂಗ್ರಹಿಸಿದ ಸೋನಿಯಾ, ರಾಷ್ಟ್ರ ರಾಜಕಾರಣಕ್ಕೆ ಬರುವ ಬಗ್ಗೆ ಆಸಕ್ತಿ ಇದೆಯೇ ಎಂದು ಪ್ರಸ್ತಾಪಿಸಿದ್ದಾರೆ.

ರಾಜ್ಯ ರಾಜಕಾರಣದಲ್ಲಿನ ತಮ್ಮ ಮಹತ್ವದ ಬಗ್ಗೆ ವರಿಷ್ಠರಿಗೆ ಮನವರಿಕೆ ಮಾಡಿರುವ ಸಿದ್ದರಾಮಯ್ಯ, 2023ರಲ್ಲಿ ನಡೆಯಲಿರುವ ರಾಜ್ಯ ವಿಧಾನಸಭೆ ಚುನಾವಣೆಯನ್ನು ದೃಷ್ಟಿಯಲ್ಲಿರಿಸಿಕೊಂಡು ಸೂಕ್ತ ನಿರ್ಧಾರ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ. ರಾಜ್ಯದಲ್ಲಿ ಆಡಳಿತ ವಿರೋಧಿ ಅಲೆ ಇದೆ. ಅದರ ಲಾಭವನ್ನು ಪಡೆದು ಸರ್ಕಾರ ರಚಿಸಲು ತಮ್ಮ ಅಗತ್ಯ ಇದೆ ಎಂದು ಮನವರಿಕೆ ಮಾಡಿಕೊಟ್ಟಿದ್ದಾಗಿ ತಿಳಿದುಬಂದಿದೆ.

ಪಕ್ಷ ಪದಾಧಿಕಾರಿಗಳ ಪಟ್ಟಿಯನ್ನು ಅಂತಿಮಗೊಳಿಸುವ ವಿಷಯದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ಮಧ್ಯೆ ಶೀತಲ ಸಮರ ಕೆಲವು ದಿನಗಳಿಂದ ನಡೆಯುತ್ತಲೇ ಇದೆ. ಪಟ್ಟಿಯನ್ನು ಅಂತಿಮಗೊಳಿಸುವ ಮೂಲಕ, ಪಕ್ಷದೊಳಗಿರುವ ಸಣ್ಣಪುಟ್ಟ ಗೊಂದಲವನ್ನು ಬಗೆಹರಿಸುವಂತೆ ಸೋನಿಯಾ ಬಳಿ ಸಿದ್ದರಾಮಯ್ಯ ಕೋರಿದ್ದಾರೆ.

ಪದಾಧಿಕಾರಿಗಳನ್ನು ಆಯ್ಕೆ ಮಾಡುವ ಕುರಿತು ಉಭಯ ಮುಖಂಡರೂ ಪ್ರತ್ಯೇಕ ಪಟ್ಟಿಯನ್ನು ಹೈಕಮಾಂಡ್‌ಗೆ ಸಲ್ಲಿಸಿದ್ದಾರೆ.

ಈ ನಿಟ್ಟಿನಲ್ಲಿ ಯಾರ ಕೈ ಮೇಲಾಗಲಿದೆ ಎಂಬುದೂ ಈಗ ಯಕ್ಷಪ್ರಶ್ನೆಯಾಗಿದೆ.

ಮಾನೆ, ಮನಗೂಳಿಗೆ ಟಿಕೆಟ್

ಒಂದನೇ ಪುಟದಿಂದ

ಮಾನೆ ಹಾಗೂ ತಹಶೀಲ್ದಾರ್ ಜತೆಗೆ ಕ್ಷೇತ್ರದ ಪ್ರಮುಖರೊಂದಿಗೆ ಹಲವು ಸುತ್ತಿನ ಸಂಧಾನ ಸಭೆ ನಡೆಸಿದ್ದ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಕೊನೆಗೆ ಒಮ್ಮತಕ್ಕೆ ಬಂದಿದ್ದರು. ಮಾನೆಗೆ ಟಿಕೆಟ್ ಘೋಷಣೆ ಮಾಡಿರುವುದರಿಂದಾಗಿ ಸಿದ್ದರಾಮಯ್ಯ ಅವರೇ ಮೇಲುಗೈ ಸಾಧಿಸಿದಂತಾಗಿದೆ. ಸಿಂದಗಿ ಕ್ಷೇತ್ರದ ಜೆಡಿಎಸ್ ಶಾಸಕರಾಗಿದ್ದ ಎಂ.ಸಿ. ಮನಗೂಳಿ ಅವರ ಪುತ್ರ ಅಶೋಕ ಮನಗೂಳಿ ಅವರೇ ಪಕ್ಷದ ಅಭ್ಯರ್ಥಿ ಎಂದು ಈ ಮೊದಲೇ ಘೋಷಿಸಲಾಗಿತ್ತು. ಅಧಿಕೃತ ಪ್ರಕಟಣೆ ಹೊರಬಿದ್ದಿದೆ.

rther details, visit renault.co.in

efits up to ₹ 60 000/- for Triber include cash benefit of up to ₹ 25 000/-, exchange benefit of up to ₹ 25 000/- & corporate benefit of up to ₹ 10 000/- on select versions. corporate/PSU/defence personnel/government employee/professionals benefits applicable for each model are basis eligibility of the customer and based on submission 021. **the gift vouchers scheme is applicable on all Renault cars, valid till 31st October,2021. for detailed terms & conditions, visit www.renault.co.in. Renault India Pvt. Ltd. reserves the right at its absolute discretion to terminate this scheme or vary, delete or add to any of these terms and conditions from time to time without notice ult.co.in/offers. Renault India Pvt. Ltd. reserves the right to change or modify the mentioned schemes and conditions without prior notice. Renault India Pvt. Ltd. shall not be liable for any loss or damage arising from your failure to comply or understand the offer details. in the event of any dispute, all matters shall be governed by all

8527240626, RENAULT Kalyan Nagar Mob: +91 8527236137, RENAULT Sarjapura Mob: +91 8448481374, RENAULT Yelahanka Mob: +91 8527234592, RENAULT Yeswanthpur Mob: +91 9311832962. **TUMKUR:** RENAULT Tumkur Mob: +91 8527234251.

L&K | SAATCHI & SAATCHI

‘ಆರ್‌ಎಸ್‌ಎಸ್ ನಿರ್ದೇಶನದಂತೆ ಸರ್ಕಾರ’

ಪ್ರಜಾವಾಣಿ ವಾರ್ತೆ

ರಾಮನಗರ: ಪ್ರಧಾನಮಂತ್ರಿ ನರೇಂದ್ರ ಮೋದಿ ಆರ್‌ಎಸ್‌ಎಸ್ ಕೀಲುಗೊಂಬೆಯಾಗಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಮರಾಜಪೇಟೆಯ ಕೇಶವ ಕೃಪದ ಕೃಪಾಕಟಾಕ್ಷ ಮತ್ತು ನಿರ್ದೇಶನದಂತೆ ಕೆಲಸ ಮಾಡುತ್ತಿದ್ದಾರೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

ಬಿಡದಿಯಲ್ಲಿ ಮಂಗಳವಾರ ಪತ್ರಕರ್ತರ ಜೊತೆ ಅವರು ಮಾತನಾಡಿದರು. ‘ಕಳೆದ ಹಲವು ದಿನಗಳಿಂದ ಆರ್‌ಎಸ್‌ಎಸ್ ಬಗ್ಗೆ ಅಧ್ಯಯನ ಕುಮಾರಸ್ವಾಮಿ ಮಾಡುತ್ತಿದ್ದೇನೆ. ಈ ಸಂಘಟನೆ ಹೇಗೆ ಕೆಲಸ ಮಾಡುತ್ತದೆ ಹಾಗೂ ಚುನಾಯಿತ ಸರ್ಕಾರಗಳನ್ನು ಹೇಗೆ ಕಪಿಮುಷ್ಟಿಯಲ್ಲಿ ಇಟ್ಟುಕೊಳ್ಳುತ್ತದೆ ಎಂಬುದನ್ನು ತಿಳಿದು ಆಘಾತ ಆಯಿತು. ಸಂಘದ ಐಡಿಯಾಲಜಿ ಹೊಂದಿರುವ ಅಧಿಕಾರಿಗಳನ್ನು ತನ್ನ ತಾಳಕ್ಕೆ ತಕ್ಕಂತೆ ಬಳಸಿಕೊಳ್ಳಲಾಗುತ್ತಿದೆ. ದೇಶದ ನಾಗರಿಕಸೇವೆ ಅಧಿಕಾರಿಗಳು ಸೇರಿದಂತೆ ನಾಲ್ಕು ಸಾವಿರಕ್ಕೂ ಹೆಚ್ಚು ಅಧಿಕಾರಿಗಳು ಸಂಘದ ತರಬೇತಿ ಪಡೆದು ಕೆಲಸ ಮಾಡುತ್ತಿದ್ದಾರೆ’ ಎಂದರು.

ಕೇಂದ್ರ ಮತ್ತು ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ನಾಯಕರಿಗೆ ಸ್ವಾತಂತ್ರ್ಯ ಇಲ್ಲ. ನಮ್ಮ ರಾಜ್ಯದ ಬಿಜೆಪಿ ಸರ್ಕಾರದ ಎರಡನೇ ಮುಖ್ಯಮಂತ್ರಿ ಕೇಶವಕೃಪಕ್ಕೆ ಏಕೆ ಹೋಗುತ್ತಾರೆ? ಎಲ್ಲಿಯೇ ಹೋದರೂ ಆರೆಸ್ಸೆಸ್ ಕಚೇರಿಗಳಿಗೆ ಯಾಕೆ ಹೋಗುತ್ತಾರೆ?’ ಎಂದು ಪ್ರಶ್ನಿಸಿದ ಕುಮಾರಸ್ವಾಮಿ ‘ರಾಜ್ಯದಲ್ಲಿ ಇರುವುದು ಸಂಪೂರ್ಣ ಆರ್‌ಎಸ್‌ಎಸ್ ಸರ್ಕಾರ. ಆದರೆ ಕೇಶವಕೃಪಕ್ಕೆ ಜನ ಮತ ಹಾಕಿಲ್ಲ ಎಂಬುದನ್ನು ಆಡಳಿತ ನಡೆಸುವವರು ಅರ್ಥ ಮಾಡಿಕೊಳ್ಳಬೇಕು ಎಂದರು.

ಹಿಂದುತ್ವ ಹಾಗೂ ಕೋಮುವಾದವನ್ನು ಹರಡುವ ಕೆಲಸವನ್ನು ಬಿಟ್ಟರೆ ಬೇರೆ ಯಾವ ಸಾಧನೆಯನ್ನೂ ಅದು ಮಾಡಿಲ್ಲ. ದೇಶದ ಬಡತನದ ಬಗ್ಗೆ, ಸಮಸ್ಯೆಗಳ ಬಗ್ಗೆ ಆರ್‌ಎಸ್‌ಎಸ್ ಸಭೆಗಳಲ್ಲಿ ಚರ್ಚೆ ಆಗಿಲ್ಲ. ದೇಶವನ್ನು ಕಪಿಮುಷ್ಟಿಯಲ್ಲಿ ಇಟ್ಟುಕೊಳ್ಳುವುದು ಒಂದೇ ಅವರ ಅಜೆಂಡಾ. ಆರ್‌ಎಸ್‌ಎಸ್ ಅನ್ನೇ ಕೇಂದ್ರಬಿಂದು ಆಗಿಸಿಕೊಂಡು ಬಿಜೆಪಿ ಕೆಲಸ ಮಾಡುತ್ತಿದೆ. ರಾಜಕೀಯವಾಗಿ ಪಕ್ಷಕ್ಕೆ ಸ್ವಾತಂತ್ರ್ಯ ಇಲ್ಲ. ಕೆಲ ವರ್ಷಗಳ ಹಿಂದೆ ಬಿಜೆಪಿಯನ್ನೇ ವಿಸರ್ಜಿಸಿ ಹೊಸ ಪಕ್ಷ ರಚನೆಯತ್ತ ಅದು ಆಲೋಚನೆ ಮಾಡಿತ್ತು ಎಂದು ಕುಮಾರಸ್ವಾಮಿ ದೂರಿದರು.

ವಿಶ್ವಾಸ ಮೂಡಿಸಿ: ರಾಜ್ಯದಲ್ಲಿ ಮತಾಂತರ ನಿಷೇಧ ವಿಧೇಯಕದಿಂದ ಮತಾಂತರವನ್ನು ನಿಲ್ಲಿಸಲು ಸಾಧ್ಯವಿಲ್ಲ. ಶಿಕ್ಷಣ, ಆರೋಗ್ಯ, ವಸತಿ ಮುಂತಾದ. ಸೌಲಭ್ಯಗಳನ್ನು ಉತ್ತಮವಾಗಿ ಒದಗಿಸಿದ್ದಿದ್ದರೆ ಮತಾಂತರ ಎನ್ನುವ ಶಬ್ದವೇ ಕೇಳುತ್ತಿರಲಿಲ್ಲ. ಸ್ವಯಂ ಪ್ರೇರಿತರಾಗಿ ಬೇರೆ ಧರ್ಮಕ್ಕೆ ಜನ ಹೋಗುತ್ತಿರುವ ಉದಾಹರಣೆ ಇದೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರೇ ಬೌದ್ಧ ಧರ್ಮಕ್ಕೆ ಹೋದರು. ಇದು ಇಂದಿನ ಸಮಸ್ಯೆ ಅಲ್ಲ ಎಂದರು.

‘ಐಎಎಸ್ ಅಧಿಕಾರಿಯಾದರೆ ತಪ್ಪೇನು’

ಹೊಸದುರ್ಗ: ‘ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಾರ್ಯಕರ್ತರು ಶ್ರಮಪಟ್ಟು ಓದಿ ಐಎಎಸ್, ಐಪಿಎಸ್ ಅಧಿಕಾರಿಗಳಾಗುವುದರಲ್ಲಿ ತಪ್ಪೇನಿದೆ’ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಅಶ್ವತ್ಥನಾರಾಯಣ್ ಅವರು ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರನ್ನು ಪ್ರಶ್ನಿಸಿದ್ದಾರೆ.

ಅಶ್ವತ್ಥನಾರಾಯಣ್

ಪಟ್ಟಣದಲ್ಲಿ ಮಂಗಳವಾರ ನಡೆದ ಸೇವೆ ಮತ್ತು ಸಮರ್ಪಣ ಅಭಿಯಾನ ಪ್ರಚಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ರಾಷ್ಟ್ರೀಯ ಸ್ವಯಂ ಸೇವಕ ಸಂಘದ 4,000ರಿಂದ 5,000 ಮಂದಿ ವ್ಯವಸ್ಥಿತವಾಗಿ ಐಎಎಸ್, ಐಪಿಎಸ್ ಅಧಿಕಾರಿಗಳನ್ನಾಗಿ ಮಾಡಿದ್ದಾರೆ ಎಂದು ಕುಮಾರಸ್ವಾಮಿ ಬೇಜವಾಬ್ದಾರಿತನದ ಹೇಳಿಕೆ ನೀಡಿದ್ದಾರೆ. ಆರ್‌ಎಸ್‌ಎಸ್ ಕಾರ್ಯಕರ್ತನನ್ನು ಪ್ರಧಾನಿಯನ್ನಾಗಿ ಮಾಡಿರುವಾಗ ಐಎಎಸ್, ಐಪಿಎಸ್ ಅಧಿಕಾರಿಗಳನ್ನಾಗಿ ಮಾಡುವುದು ಕಷ್ಟವೇನೂ ಅಲ್ಲ’ ಎಂದರು.

‘ಕುಮಾರಸ್ವಾಮಿ ತಂದೆ ಪ್ರಧಾನಿಯಾಗಬಹುದು, ರಾಜ್ಯದ ಮುಖ್ಯಮಂತ್ರಿ ಆಗಬಹುದು, ಪತ್ನಿ ಎಂಎಲ್‌ಎ ಆಗಬಹುದು, ಮಗ ಎಂಪಿ ಅಭ್ಯರ್ಥಿಯಾಗಿ ನಿಲ್ಲಬಹುದು, ರೇವಣ್ಣ ಎಂಎಲ್‌ಎ ಹಾಗೂ ಮಂತ್ರಿ ಆಗಬಹುದು, ಭವಾನಿ ಜಿಲ್ಲಾ ಪಂಚಾಯಿತಿ ಸದಸ್ಯೆಯಾಗಬಹುದು. ಹೀಗೆ ಇವರ ಕುಟುಂಬದವರು ಪ್ರಧಾನಿ, ಎಂಪಿ, ಎಂಎಲ್‌ಎ, ಮಂತ್ರಿ ಆಗಬಹುದು. ಆರ್‌ಎಸ್‌ಎಸ್ ಕಾರ್ಯಕರ್ತರು ಶ್ರಮಪಟ್ಟು ಐಎಎಸ್, ಐಪಿಎಸ್ ಅಧಿಕಾರಿಗಳಾದರೆ ನಿಮಗೇನು ಕಷ್ಟ? ಈ ರೀತಿ ಅಪಪ್ರಚಾರ ಮಾಡುವುದು ಬಿಡಿ’ ಎಂದು ಕುಮಾರಸ್ವಾಮಿ ಹೇಳಿಕೆಗೆ ತಿರುಗೇಟು ನೀಡಿದರು.

ಟ್ವೀಟ್ ಮೂಲಕ ಸ್ಪಷ್ಟನೆ: ಎಚ್‌ಡಿಕೆ

ಆರ್‌ಎಸ್‌ಎಸ್ ವಿರುದ್ಧ ವಾಗ್ದಾಳಿ ಬೆನ್ನಲ್ಲೇ ಈ ಕುರಿತು ಟ್ವೀಟ್ ಮೂಲಕ ಕುಮಾರಸ್ವಾಮಿ ಸ್ಪಷ್ಟನೆ ನೀಡಿದ್ದಾರೆ.

‘ಯಾವುದೇ ಸಂಘ, ಪಕ್ಷದ ವಿರುದ್ಧ ನಾನು ಟೀಕೆ ಮಾಡಿಲ್ಲ. ಆರ್‌ಎಸ್‌ಎಸ್ ಕುರಿತು ಕೆಲವು ಲೇಖಕರು ಬರೆದ ಪುಸ್ತಕಗಳನ್ನು ಓದಿದ್ದು, ಆ ಅಂಶಗಳನ್ನಷ್ಟೇ ಹೇಳಿದ್ದೇನೆ. ಪ್ರಸ್ತುತ ದೇಶ ಹೋಗುತ್ತಿರುವ ಹಾದಿ ಗಮನಿಸಿದರೆ ಜನರ ಮುಂದೆ ಸತ್ಯ ಇಡುವುದು ಅಗತ್ಯವೆಂದು ನನಗೆ ಅನಿಸಿತು. ಸತ್ಯ ಹೇಳಲು ನನಗೆ ಯಾವ ಹಿಂಜರಿಕೆಯೂ ಇಲ್ಲ. ಈ ಬಗ್ಗೆ ಚರ್ಚೆ ಆಗಬೇಕು ಎಂಬುದು ನನ್ನ ಅಭಿಲಾಷೆ’ ಎಂದು ಹೇಳಿದ್ದಾರೆ.

ಶಾರುಕ್ ಮಗನಿಗೆ ಧಾರವಾಡದ ವಕೀಲರ ವಕಾಲತ್ತು

ಪ್ರಜಾವಾಣಿ ವಾರ್ತೆ

ಧಾರವಾಡ: ಡ್ರಗ್ಸ್ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ಬಾಲಿವುಡ್ ನಟ ಶಾರುಕ್ ಖಾನ್ ಅವರ ಪುತ್ರ ಆರ್ಯನ್ ಖಾನ್ ಪರವಾಗಿ ವಕಾಲತ್ತು ವಹಿಸಿರುವವರು ಧಾರವಾಡ ಮೂಲದ ವಕೀಲ ಸತೀಶ ಮಾನಶಿಂಧೆ.

ಈಗಾಗಲೇ ಸ್ಟಾರ್ ನಟರ ಹಲವು ಪ್ರಕರಣಗಳಲ್ಲಿ ಜಾಮೀನು ಕೊಡಿಸಿದ ಖ್ಯಾತಿ ಹೊಂದಿರುವ ಇವರು, ಧಾರವಾಡದ ಕರ್ನಾಟಕ ಕಲಾ ಕಾಲೇಜಿನಲ್ಲಿ ಪದವಿ ಹಾಗೂ ಸರ್ ಸಿದ್ದಪ್ಪ ಕಂಬಳಿ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ವ್ಯಾಸಂಗ ಮಾಡಿದವರು.

ಸತೀಶ ಮಾನಶಿಂಧೆ

ಗದಗ ಹಾಗೂ ರೋಣದಲ್ಲಿ ಸರ್ಕಾರಿ ಶಾಲೆಯಲ್ಲಿ ಕಲಿತ ಇವರು ನಂತರ ವಿಜಯಪುರದ ಸೈನಿಕ ಶಾಲೆಯಲ್ಲಿ ಶಿಕ್ಷಣ ಪಡೆದಿದ್ದಾರೆ.

ಕಾನೂನು ಪದವಿ ಹಂತದಲ್ಲಿ ನಡೆಸುವ ಅಣಕು ನ್ಯಾಯಾಲಯದಲ್ಲಿ ಸತೀಶ ಅವರು ವಾದ ಮಂಡಿಸುತ್ತಿದ್ದ ರೀತಿ ಸಾಕಷ್ಟು ಪ್ರಸಿದ್ಧಿ ಪಡೆದಿತ್ತು. ಅಪರಾಧಶಾಸ್ತ್ರದಲ್ಲಿ ಪರಿಣತಿ ಹೊಂದಿರುವ ಅವರು ರಾಮ್ ಜೇಠ್ಮಲಾನಿ ಅವರ ಬಳಿ 10 ವರ್ಷ ಕೆಲಸ ಮಾಡಿ ಅನುಭವ ಪಡೆದರು. ನಂತರ ಪೂರ್ಣ ಪ್ರಮಾಣದಲ್ಲಿ ವಕೀಲರಾದ ಸತೀಶ್ ಅವರು, ಶಸ್ತ್ರಾಸ್ತ್ರ ಪ್ರಕರಣದಲ್ಲಿ ಬಂಧಿತರಾಗಿದ್ದ ನಟ ಸಂಜಯ ದತ್, ಪಾದಚಾರಿ ಮಾರ್ಗದಲ್ಲಿ ಮಲಗಿದ್ದವರ ಮೇಲೆ ಕಾರು ಓಡಿಸಿದ ಪ್ರಕರಣದಲ್ಲಿ ಆರೋಪಿಯಾಗಿದ್ದ ನಟ ಸಲ್ಮಾನ್ ಖಾನ್ ಹಾಗೂ ನಟ ಸುಶಾಂತ್ ಸಿಂಗ್ ರಜಪೂತ್ ಆತ್ಮಹತ್ಯೆ ಪ್ರಕರಣದಲ್ಲಿ ಆರೋಪ ಎದುರಿಸುತ್ತಿದ್ದ ರಿಯಾ ಚಕ್ರವರ್ತಿಗೆ ಜಾಮೀನು ಕೊಡಿಸಲು ಸತೀಶ್ ಅವರೇ ವಕಾಲತ್ತು ವಹಿಸಿದ್ದರು.

ಸತೀಶ ಅವರ ಹಿರಿಯ ಸಹೋದರ ಕ್ಯಾಪ್ಟನ್ ಸುರೇಶ ಮಾನಶಿಂಧೆ ಅವರೂ ವಿಜಯಪುರ ಸೈನಿಕ ಶಾಲೆಯ ವಿದ್ಯಾರ್ಥಿ. ಇವರ ಕಿರಿಯ ಸಹೋದರ ಸುನೀಲ್ ಮಾನಶಿಂಧೆ ಕಡಲು ಕಾವಲುಪಡೆಯ ಅಧಿಕಾರಿ. ಇಂದಿಗೂ ಧಾರವಾಡದ ನಂಟು ಹೊಂದಿರುವ ಅವರು ಹಳೆಯ ಸಂಬಂಧಗಳ ಕುರಿತು ಆಗಾಗ ಮೆಲುಕು ಹಾಕುತ್ತಾರೆ ಎಂದು ಅವರ ಸ್ನೇಹಿತ, ನಿವೃತ್ತ ಸೇನಾಧಿಕಾರಿ ಮಹೇಶ ನೆನಪಿಸಿಕೊಂಡರು.

ಆರ್ಯನ್ ಖಾನ್ ಪರವಾಗಿ ವಕಾಲತ್ತು ವಹಿಸಿರುವ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ವಕೀಲ ಸತೀಶ ಮಾನಶಿಂಧೆ, ‘ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಹೇಳಿಕೆಯನ್ನು ಈಗ ನೀಡಲಾಗದು’ ಎಂದರು.

ಅಪರೂಪದ ಗಿಣಿ ಹಪ್ಪಟೆ ಹಾವು ಪತ್ತೆ



ಹೊಸನಗರ: ತಾಲ್ಲೂಕಿನಲ್ಲಿ ಮಂಗಳವಾರ ಅಪರೂಪದ ಗಿಣಿ ಹಪ್ಪಟೆ ಅಥವಾ ಗುಳಿ ಮಂಡಲ ಹಾವು (ಮಲಬಾರ್ ವೈಪರ್ ಸ್ನೇಕ್) ಕಾಣಿಸಿಕೊಂಡಿದೆ.

ಜಯನಗರದ ವರ್ತಕ ಗೋಪಿನಾಥ್ ಅವರ ಮನೆ ಹಿತ್ತಲಿನಲ್ಲಿ ಪತ್ತೆಯಾಗಿದೆ. ಈ ಹಾವು ಕಾಳಿಂಗ ಸರ್ಪಕ್ಕಿಂತ ವಿಷಕಾರಿ. ಮಲೆನಾಡಿನಲ್ಲಿ ಗಿಣಿ ಹಪ್ಪಟೆ ಸಂತತಿ ಈಚಿನ ದಿನಗಳಲ್ಲಿ ತೀರಾ ಅಪರೂಪ ಎಂದು ಸ್ಥಳೀಯರಾದ ನಾರಾಯಣ ಕಾಮತ್ ಮಾಹಿತಿ ನೀಡಿದರು.



ನಿರಾಕರಣೆ : *ಎಲ್ಲ ಸಾಲಗಳು ಕೇವಲ ಎಚ್‌ಡಿಎಫ್‌ಸಿ ಲಿಮಿಟೆಡ್‌ನ ವಿವೇಚನೆಗೆ ಒಳಪಟ್ಟಿವೆ. ಷರತ್ತು ಮತ್ತು ನಿಬಂಧನೆಗಳ ವಿವರಗಳಿಗಾಗಿ ಭೇಟಿ ನೀಡಿ : www.hdfc.com
CIN: L70100MH1977PLC019916.
HDFC2211-21 Kan

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ ಮಂಗಳವಾರ ಬೆಂಗಳೂರಿನಲ್ಲಿ ಆಯೋಜಿಸಿದ್ದ ಉತ್ತಮ ವಾಣಿಜ್ಯ ಯೋಜನೆ ಸಿದ್ಧಪಡಿಸುವ ‘ಮಂಥನ್–2021’ ಸ್ಪರ್ಧೆಯ ಅಂತಿಮ ಸುತ್ತಿನಲ್ಲಿ ಹುಬ್ಬಳ್ಳಿಯ ಕೆಎಲ್‌ಇ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ವಿದ್ಯಾರ್ಥಿಗಳು ಮೊದಲ ಬಹುಮಾನ ತಮ್ಮದಾಗಿಸಿಕೊಂಡರು. ಎಫ್‌ಕೆಸಿಸಿಐ ಅಧ್ಯಕ್ಷ ಪೆರಿಕಲ್ ಎಂ. ಸುಂದರ್, ಕಾನೂನು ಸಚಿವ ಜೆ.ಸಿ ಮಾಧುಸ್ವಾಮಿ, ಸಂಗೀತ ನಿರ್ದೇಶಕ ಗುರುಕಿರಣ್, ಎಫ್‌ಕೆಸಿಸಿಐ ನಿಯೋಜಿತ ಅಧ್ಯಕ್ಷ ಐ.ಎಸ್. ಪ್ರಸಾದ್, ನಿಯೋಜಿತ ಉಪಾಧ್ಯಕ್ಷ ಬಿ.ವಿ. ಗೋಪಾಲ ರೆಡ್ಡಿ, ಮಂಥನ್–2021ರ ಅಧ್ಯಕ್ಷ ಕೆ.ಪಿ. ನಾಗೇಶ್ ಇದ್ದರು.

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಮಹಿಳೆ ಶವವಿಟ್ಟು ಪ್ರತಿಭಟನೆ

ಸುರಪುರ (ಯಾದಗಿರಿ ಜಿಲ್ಲೆ): ತಾಲ್ಲೂಕಿನ ಗ್ರಾಮವೊಂದರ ಮಹಿಳೆ ಮೇಲೆ ಅತ್ಯಾಚಾರಕ್ಕೆ ಯತ್ನಿಸಿ ಬಳಿಕ ಪೆಟ್ರೋಲ್ ಹಾಕಿ ಹತ್ಯೆಮಾಡಿದ ಆರೋಪಿಗಳನ್ನು ಬಂಧಿಸಬೇಕು ಎಂದು ಆಗ್ರಹಿಸಿ ‘ದಲಿತ ಸಾಮೂಹಿಕ ಸಂಘಟನೆ’ಗಳ ಕಾರ್ಯಕರ್ತರು ಗಾಂಧಿ ವೃತ್ತದಲ್ಲಿ ಮಂಗಳವಾರ ಶವವಿಟ್ಟು ಪ್ರತಿಭಟನೆ ನಡೆಸಿದರು.

ಕಲಬುರ್ಗಿಯಿಂದ ತಂದ ಮಹಿಳೆಯ ಶವವನ್ನು ಬೈಕ್ ರ‍್ಯಾಲಿ ಮೂಲಕ ಮೆರವಣಿಗೆ ಮಾಡಲಾಯಿತು. ಶವ ಗಾಂಧಿವೃತ್ತ ತಲುಪುತ್ತಿದ್ದಂತೆ ಸಂಬಂಧಿಕರ ಆಕ್ರಂದನ, ಪ್ರತಿಭಟನಾಕಾರರ ಆಕ್ರೋಶ ಮುಗಿಲು ಮಟ್ಟಿತ್ತು. ಸುಮಾರು ನಾಲ್ಕು ಗಂಟೆ ರಸ್ತೆ ತಡೆ ನಡೆಸಲಾಯಿತು.

‘ಮೃತಳ ಕುಟುಂಬಕ್ಕೆ ₹25 ಲಕ್ಷ ಪರಿಹಾರ, ಕುಟುಂಬಸ್ಥರಿಗೆ ರಕ್ಷಣೆ ಜತೆಗೆ ಸಕಲ ಸೌಲಭ್ಯ ಒದಗಿಸಬೇಕು. ಸರ್ಕಾರ ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಿ ಎಲ್ಲ ಆರೋಪಿಗಳನ್ನು ಬಂಧಿಸುವವರೆಗೂ ಪ್ರತಿಭಟನೆ ಹಿಂಪಡೆಯುವುದಿಲ್ಲ. ಅಂತ್ಯಕ್ರಿಯೆಗೆ ಅವಕಾಶ ನೀಡುವುದಿಲ್ಲ’ ಎಂದರು.

ಪ್ರತಿಭಟನೆ ಹಿಂಪಡೆದು ಶವ ಸಂಸ್ಕಾರಕ್ಕೆ ಅವಕಾಶ ನೀಡುವಂತೆ ತಹಶೀಲ್ದಾರ್, ಪೊಲೀಸ್ ಅಧಿಕಾರಿಗಳು ಹೋರಾಟಗಾರರಿಗೆ ಮನವಿ ಮಾಡಿಕೊಂಡರೂ ಅವರು ಒಪ್ಪಲಿಲ್ಲ. ಪೊಲೀಸ್ ವರಿಷ್ಠಾಧಿಕಾರಿ ಸ್ಥಳಕ್ಕೆ ಆಗಮಿಸಿ ಲಿಖಿತ ಭರವಸೆ ನೀಡಬೇಕು ಎಂದು ಪಟ್ಟು ಹಿಡಿದರು.

ಸಂಜೆ 5 ಗಂಟೆಗೆ ಸ್ಥಳಕ್ಕೆ ಬಂದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ವೇದಮೂರ್ತಿ, ‘ಈಗಾಗಲೇ ಮುಖ್ಯ ಆರೋಪಿ ಗಂಗಪ್ಪನನ್ನು ಬಂಧಿಸಲಾಗಿದೆ. ತನಿಖೆ ನಡೆಸಿ ಶೀಘ್ರದಲ್ಲಿ ಉಳಿದ ಆರೋಪಿಗಳನ್ನು ಬಂಧಿಸಲಾಗುವುದು’ ಎಂದು ಭರವಸೆ ನೀಡಿದ ನಂತರ ಪ್ರತಿಭಟನೆ ಹಿಂಪಡೆಯಲಾಯಿತು.

ಶವವನ್ನು ಗ್ರಾಮಕ್ಕೆ ತೆಗೆದುಕೊಂಡು ಹೋಗಿ ರಾತ್ರಿ ಅಂತ್ಯಕ್ರಿಯೆ ನಡೆಸಲಾಯಿತು ಎಂದು ಸಂಘಟನೆಯ ಮುಖಂಡರು ತಿಳಿಸಿದರು.

ಸಚಿವ ಈಶ್ವರಪ್ಪ ಹೆಸರಲ್ಲಿ ಉದ್ಯಮಿಗಳಿಗೆ ₹ 36 ಲಕ್ಷ ವಂಚನೆ

ಶಿವಮೊಗ್ಗ: ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಅವರ ಆಪ್ತ ಕಾರ್ಯದರ್ಶಿಗಳು ಎಂದು ಹೇಳಿಕೊಂಡು ಇಬ್ಬರು ಉದ್ಯಮಿಗಳಿಗೆ ಒಟ್ಟು ₹ 36 ಲಕ್ಷ ವಂಚಿಸಿರುವ ಆರೋಪದ ಮೇಲೆ ಐವರ ವಿರುದ್ಧ ಇಲ್ಲಿನ ಸಿಇಎನ್ ಠಾಣೆಯಲ್ಲಿ ಎರಡು ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ. ಮಂಗಳೂರಿನ ಮೊಹಮದ್ ರೆಹಮಾನ್, ಶಿವಮೊಗ್ಗದ ವಿಠಲ್ ರಾವ್, ಮಂಜುನಾಥ್, ಖಾಜಿವಲೀಸ್, ಹಾಸನ ಜಿಲ್ಲೆ ಅರಸಿಕೆರೆಯ ಮೊಹಮದ್ ಮುಫಾಸಿರ್ ವಂಚಿಸಿರುವ ಆರೋಪಿಗಳು.

ಇನ್‌ಸ್ಪೆಕ್ಟರ್ ಕೆ.ಟಿ. ಗುರುರಾಜ್ ಕರ್ಕಿ ಮತ್ತು ತಂಡವು ವಿಠಲ್ ರಾವ್, ಖಾಜಿವಲೀಸ್ ಅವರನ್ನು ಬಂಧಿಸಿದೆ. ಮೂವರು ತಲೆ ಮರೆಸಿಕೊಂಡಿದ್ದಾರೆ.

‘ವಿಲ್ಲಾ ಪ್ರಾಜೆಕ್ಟ್‌ಗಾಗಿ ಸಚಿವರ ಮೂಲಕ ₹100 ಕೋಟಿ ಸರ್ಕಾರದ ನೆರವು ಕೊಡಿಸುವುದಾಗಿ ನಂಬಿಸಿ 2020ರ ಫೆಬ್ರುವರಿಯಲ್ಲಿ ₹10 ಲಕ್ಷ ಮುಂಗಡ ಪಡೆದಿದ್ದರು. ನಂತರ ಕೈಗೆ ಸಿಗದೆ ಅಲೆದಾಡಿಸುತ್ತಿದ್ದರು. ವಂಚನೆಗೆ ಒಳಗಾಗಿರುವುದು ಖಚಿತವಾದ ನಂತರ ಹಣ ಹಿಂದಿರುಗಿಸಲು ಕೇಳಿದರೆ ಜೀವ ಬೆದರಿಕೆ ಹಾಕಿದ್ದರು’ ಎಂದು ಮೈಸೂರಿನ ಹೆಬ್ಬಾಳದ ಎಂಜಿನಿಯರ್ ಸಿ.ರಾಜೇಶ್ ಪ್ರಕರಣ ದಾಖಲಿಸಿದ್ದಾರೆ.

‘ಬೆಂಗಳೂರು ನಗರದಲ್ಲಿ ಶುದ್ಧ ನೀರಿನ ಘಟಕಗಳನ್ನು ಸ್ಥಾಪಿಸಲು ಕೆ.ಎಸ್. ಈಶ್ವರಪ್ಪ ಅವರ ಮೂಲಕ ಟೆಂಡರ್ ಕೊಡಿಸುವುದಾಗಿ ನಂಬಿಸಿ ಜುಲೈ 2019ರಲ್ಲಿ ₹ 26.25 ಲಕ್ಷ ಪಡೆದು ವಂಚಿಸಿದ್ದಾರೆ’ ಎಂದು ಸಾಗರ ತಾಲ್ಲೂಕಿನ ಬರೂರು–ಮುತ್ತಲ್‌ಬೈಲಿನ ಗುತ್ತಿಗೆದಾರ ಬಿ.ಲಕ್ಷ್ಮಣ್ ಮತ್ತೊಂದು ದೂರು ದಾಖಲಿಸಿದ್ದಾರೆ.

abaran
TIMELESS JEWELLERY

ಅತ್ಯುತ್ತಮ
ಆಭರಣ ಮಳಿಗೆ
ಈಗ ಜೆ.ಪಿ.ನಗರದಲ್ಲಿ

WALK-IN INTERVIEWS
ON SATURDAY 9TH OCTOBER. 2021

ಆಭರಣ ಟೈಮ್‌ಲೆಸ್ ಜ್ಯೂವೆಲರಿ ಪ್ರೈವೆಟ್ ಲಿಮಿಟೆಡ್

ಬೆಂಗಳೂರು ದಕ್ಷಿಣದ ಜೆ.ಪಿನಗರದಲ್ಲಿ ನಾವು ನಮ್ಮ 3ನೇ ಶೋರೂಂಅನ್ನು ಶೀಘ್ರದಲ್ಲಿ ಪ್ರಾರಂಬಿಸುತ್ತಿದ್ದೇವೆ.

ನೂತನವಾಗಿ ದಕ್ಷಿಣ ಬೆಂಗಳೂರಿನ ಜೆ.ಪಿ.ನಗರದಲ್ಲಿ ಶೀಘ್ರವೇ ಆರಂಭವಾಗುವ ಆಭರಣ ಮಳಿಗೆಗೆ ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಕೆಳಕಂಡ ಹುದ್ದೆಗಳಿಗೆ ಎಸ್.ಎಸ್.–ಎಲ್.ಸಿ, ಪಿ.ಯು.ಸಿ ಹಾಗೂ ಪದವೀಧರರಿಗೆ (ಪುರುಷ ಹಾಗೂ ಮಹಿಳೆ) ಮುಖತಃ ನೇರ ಸಂದರ್ಶನ ಮಾಡಲಾಗುತ್ತದೆ. ಕಂಪ್ಯೂಟರ್ ಜ್ಞಾನ ಹೊಂದಿರಬೇಕು. ಕನ್ನಡ ಮತ್ತು ಇಂಗ್ಲೀಷ್ ಭಾಷೆಯ ಪರಿಣಿತರಿಗೆ ಪ್ರಾಮುಖ್ಯತೆ ಕೊಡಲಾಗುವುದು. ಜೆ.ಪಿ.ನಗರದ ಸುತ್ತಮುತ್ತ ವಾಸವಿರುವವರಿಗೆ ಮೊದಲ ಆಧ್ಯತೆ.

1. **ಸೇಲ್ಸ್ ಎಕ್ಸಿಕ್ಯೂಟೀವ್ಸ್**
2. **ಆಫೀಸ್ ಅಸಿಸ್ಟೆಂಟ್**
3. **ಡೇಟಾ ಎಂಟ್ರಿ ಆಪರೇಟರ್**
4. **ಟೆಲಿಫೋನ್ ಆಪರೇಟರ್**
5. **ಹೌಸ್ ಕೀಪಿಂಗ್**

ಈ ಮೇಲ್ಕಂಡ ಹುದ್ದೆಗಳಿಗೆ ಅರ್ಜಿ ಸಲ್ಲಿಸುವವರು ತಮ್ಮ ಬಯೋ–ಡೆಟಾ, ಪೋಟೊ ಹಾಗೂ ಅಂಕಪಟ್ಟಿಗಳ ಜೊತೆಗೆ ಸಂದರ್ಶನಕ್ಕಾಗಿ ಕೆಳಗಿನ ವಿಳಾಸಕ್ಕೆ ಮುಖತಃ ಬರುವುದು. **ಶನಿವಾರ 09 ನೇ ಆಕ್ಟೋಬರ್ 2021 ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 1 ರವರೆಗೆ.**

Abaran Timeless Jewellery Pvt. Ltd.
ಕಾರ್ಪೊರೇಟ್ ಆಫೀಸ್: ನಂ.192, ಮಹಾಲಕ್ಷ್ಮೀ ಲೇಔಟ್,
ವೆಸ್ಟ್ ಆಫ್ ಕಾರ್ಡ್ ರಸ್ತೆ, ಬೆಂಗಳೂರು–560086.

Your safety is our utmost priority. Our stores follow stringent safety measures.

9,10 ರಂದು ಬ್ರಾಹ್ಮಣ ವಧು–ವರರ ರಾಜ್ಯಮಟ್ಟದ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಪ್ತಪದಿ ಫೌಂಡೇಷನ್ ಟ್ರಸ್ಟ್ ಹಾಗೂ ಬ್ರಾಹ್ಮಣ ಸ್ವಯಂಸೇವಕ ಸಂಘದ ಸಹಯೋಗದಲ್ಲಿ ಇದೇ 9 ಮತ್ತು 10ರಂದು ರಾಜ್ಯಮಟ್ಟದ ಬ್ರಾಹ್ಮಣ ವಧು–ವರರ ಸಮಾವೇಶ ಹಮ್ಮಿಕೊಳ್ಳಲಾಗಿದೆ.

ಎನ್.ಆರ್.ಕಾಲೊನಿ ಬಸ್ ನಿಲ್ದಾಣದ ಎದುರು ಇರುವ ಡಾ. ಅಶ್ವಥ್ ಕಲಾ ಭವನದಲ್ಲಿ ಬೆಳಿಗ್ಗೆ 9ರಿಂದ ಸಮಾವೇಶ ಶುರುವಾಗಲಿದೆ.

ಆಸಕ್ತರು ಇದೇ 8ರೊಳಗೆ ತಮ್ಮ ಹೆಸರು ನೋಂದಾಯಿಸಿಕೊಳ್ಳಬೇಕು ಎಂದು ಪ್ರಕಟಣೆ ತಿಳಿಸಿದೆ.

ಹೆಚ್ಚಿನ ಮಾಹಿತಿಗೆ ಮೊಬೈಲ್ ಸಂಖ್ಯೆ 8217876335 ಅಥವಾ 9449425536ಕ್ಕೆ ಸಂಪರ್ಕಿಸಬಹುದು.

ಅಡಿಗಾಸ್ ಯಾತ್ರಾ

ಪ್ರವಾಸಿಗರ ಆಯ್ಕೆಗೆ ಭಾರತದಾದ್ಯಂತ 500ಕ್ಕೂ ಅಧಿಕ ಪ್ರವಾಸಗಳು

ಆಗ್ರಾ, ಜೈಪುರ, ದೆಹಲಿ, ಕಾಶ್ಮೀರ, ಸಿಕ್ಕಿಮ್, ಡಾರ್ಜಿಲಿಂಗ್, ಕೋಲ್ಕೊತ್ತಾ, ಆಸ್ಸಾಂ, ಅರುಣಾಚಲ, ಮೇಘಾಲಯ, ಗೋವಾ, ನೈನಿತಾಲ್, ಮಸ್ಸೋರಿ, ದಕ್ಷಿಣ ಭಾರತ ಪ್ರವಾಸಗಳು

ಪಂಚದ್ವಾರಕಾ ಮತ್ತು ಜ್ಯೋತಿರ್ಲಿಂಗದರ್ಶನ

27 ವರ್ಷಗಳ ವಿಶ್ವಾಸ ಅತ್ಯುತ್ತಮವಾದುದರಲ್ಲಿ ನಂಬಿಕೆ

ಈ ಪ್ರವಾಸದಲ್ಲಿಗುಜರಾತ್, ರಾಜಸ್ಥಾನ ಮತ್ತು ಮಧ್ಯಪ್ರದೇಶ ರಾಜ್ಯಗಳ ಪ್ರಯಾಣವಿದ್ದು ಪಂಚದ್ವಾರಕಗಳೆಂದು ಪ್ರತೀತಿ ಪಡೆದದ್ವಾರಕ, ಬೆಟ್‌ದ್ವಾರಕ, ಡಾಕೊರೆ, ನಾಥ್‌ದ್ವಾರಕ, ಕಂಕ್ರೋಲಿ, ಹಾಗೂ ಜ್ಯೋತಿರ್ಲಿಂಗಗಳಾದ ನಾಗೇಶ್ವರ, ಸೋಮನಾಥ, ಉಜ್ಜಯಿನಿಯ ಮಹಾಕಾಳೇಶ್ವರ, ಓಂಕಾರೇಶ್ವರ, ಮಾಮಲೇಶ್ವರದೊಂದಿಗೆ ಅಹಮದಾಬಾದ್, ವೀರಾವಳ್, ಪೋರ ಬಂದರು, ಮೌಂಟ್ ಅಬು, ಮಾತೃಗಯಾ, ಮೊಢೆರಾ ಸೂರ್ಯ ಮಂದಿರ, ಸರೋವರಗಳ ನಗರಿಉದಯಪುರ, ಇಂದೋರ್ ಗಳನ್ನು ವೀಕ್ಷಿಸಬಹುದು. ವಿಮಾನದಲ್ಲಿ14 ದಿನಗಳು ಹಾಗೂ ರೈಲಿನಲ್ಲಾದರೆ17 ದಿನಗಳ ಪ್ರವಾಸಇದಾಗಿದ್ದು, ವಸತಿ ಹಾಗೂ ಪ್ರಯಾಣಕ್ಕೆ ಬಸ್, ಸಸ್ಯಹಾರಿ ಊಟೋಪಹಾರ ಹಾಗೂ ನುರಿತ ಮಾರ್ಗದರ್ಶನ ವ್ಯವಸ್ಥೆ ಇರುತ್ತದೆ. ವಿವರಗಳಿಗೆ : **9449478944**

ಹೊರಡುವ ದಿನಾಂಕ : ನವೆಂಬರ್14, ಡಿಸೆಂಬರ್: 5,12.

ಚಾರಧಾಮ್ ಯಾತ್ರಾ ವಿವರಗಳಿಗೆ **9611600810**

ಕಾಶಿ-ಗಯಾ ಯಾತ್ರಾ

ಸಂಸ್ಥೆಯ ಜನಪ್ರಿಯ ಯಾತ್ರೆಗಳಲ್ಲೊಂದಾದ ಕಾಶಿ–ಗಯಾ ಯಾತ್ರೆಯು 9 ದಿನಗಳದ್ದಾಗಿದ್ದು, ಬೆಂಗಳೂರಿನಿಂದ ರೈಲು ಪ್ರಯಾಣ, ಎ.ಸಿ ರೂಮಿನ ವಸತಿ, ಎ.ಸಿ ಬಸ್ಸಿನಲ್ಲಿ ಪ್ರಯಾಣ ಸಸ್ಯಹಾರಿ ಊಟೋಪಹಾರ ಹಾಗೂ ನುರಿತ ಮಾರ್ಗದರ್ಶನ ವನ್ನು ಒಳಗೊಂಡ ಈ ಯಾತ್ರೆಯ ದರ ಕೇವಲ ರೂ. 23,900/- . ಯಾತ್ರೆಯಲ್ಲಿ ಕಾಶಿ ವಿಶ್ವನಾಥ, ವಿಶಾಲಾಕ್ಷಿ, ಅನ್ನಪೂರ್ಣ ಮಂದಿರ, ಕವಡೆಬಾಯಿ, ಕಾಲ ಭೈರವ, ತುಳಸಿ ಮಾನಸ ಮಂದಿರ, ಬನಾರಸ್ ಹಿಂದೂ ವಿಶ್ವ ವಿದ್ಯಾಲಯ, ಗಂಗಾಸ್ನಾನ, ವಾರಣಾಸಿಯ ಪವಿತ್ರ ಘಾಟ್‌ಗಳ ದರ್ಶನ, ದಶಾಶ್ವಮೇಧಘಾಟಿನಲ್ಲಿ ನಡೆಯುವ ಗಂಗಾರತಿ, ಪ್ರಯಾಗ್ ರಾಜ್ ನಲ್ಲಿ ತ್ರಿವೇಣಿ ಸಂಗಮದಲ್ಲಿ ಸ್ನಾನ, ಗಯಾದ ವಿಷ್ಣುಪಾದ ಮಂದಿರ, ಬೋಧಗಯಾದ ಮಹಾಬೋಧಿ ಮಂದಿರ, ಸಾರನಾಥದ ಬೌದ್ಧ ಸ್ತೂಪ ಇತ್ಯಾದಿಗಳನ್ನು ಸಂದರ್ಶಿಸಬಹುದು. ಪಿತೃಕಾರ್ಯ ಮಾಡುವವರಿಗೆ ವಿಶೇಷ ವ್ಯವಸ್ಥೆ ಕಲ್ಪಿಸಲಾಗುತ್ತದೆ. ವಿವರಗಳಿಗೆ 7022259003:

ಹೊರಡುವ ದಿನಾಂಕ: ನವಂಬರ್ 15, 22, ಡಿಸೆಂಬರ್ 6, 20, ಜನವರಿ 6, 20, 27

ಶಿಮ್ಲಾ– ಮನಾಲಿ – ವೈಷ್ಣೋದೇವಿ

ಸಂಸ್ಥೆಯ ಯಶಸ್ವಿ ಪ್ರವಾಸಗಳಲ್ಲೊಂದಾದ ಈ ಪ್ರವಾಸದಲ್ಲಿ ವಿಶ್ವ ವಿಖ್ಯಾತ ಗಿರಿಧಾಮಗಳಾದ ಶಿಮ್ಲಾ, ಮನಾಲಿ, ಧರ್ಮಶಾಲಾ, ಶಕ್ತಿ ಪೀಠಗಳಾದ ಚಾಮುಂಡಾ, ಜ್ವಾಲಾಜಿ, ಕಾಂಗ್ರಾ, ವಜ್ರೇಶ್ವರಿ, ಹಾಗೂ ವೈಷ್ಣೋದೇವಿಯ ದರ್ಶನ, ಬೈದನಾಥ್, ಕುರುಕ್ಷೇತ್ರದಂತ ಪುಣ್ಯ ಕ್ಷೇತ್ರಗಳು, ಚಂಡಿಗಢ ಹಾಗೂ ಅಮೃತಸರ ಗಳನ್ನು ವೀಕ್ಷಿಸಬಹುದಾಗಿದೆ. ವಿಮಾನದಲ್ಲಿ 14 ದಿನಗಳು ಹಾಗೂ ರೈಲಿನಲ್ಲಾದರೆ 17 ದಿನಗಳ ಪ್ರವಾಸಇದಾಗಿದ್ದು ಹೊರಡುವ ದಿನಾಂಕ: ನವೆಂಬರ್ 15, 29, ಡಿಸೆಂಬರ್ 13.

ಅಡಿಗಾಸ್ ಯಾತ್ರಾ ® ವಿವರಗಳಿಗೆ 7022259008

ಗುಜರಾತ್ ಪ್ರವಾಸಕ್ಕೆ ಈಗ ಸಕಾಲ

ಅಹಮದಾಬಾದ್, ಕೇವಾಡಿಯಾ–ಏಕತೆಯ ಪ್ರತಿಮೆ (ಸರ್ದಾರ ವಲ್ಲಭ ಬಾಯಿ ಪಟೇಲ), ಭಾವನಗರ ನಿಷ್ಕಳಂಕ ಮಹಾದೇವ, ಸೋಮನಾಥ ಮತ್ತು ನಾಗೇಶ್ವರ ಜ್ಯೋತಿರ್ಲಿಂಗಗಳು, ದ್ವಾರಕ, ಬೆಟ್‌ದ್ವಾರಕ, ಗಿರ್ ಅಭಯಾರಣ್ಯ, ಮೊಢೇರಾ, ಪೋರಬಂದರ್, ರನ್ ಆಫ್ ಕಚ್, ಕಾಲಾದುಂಗರ್, ಭುಜ್, ಮಾಂಡವಿ ಬೀಚ್, ವಿಜಯವಿಲಾಸ ಪ್ಯಾಲೇಸ್

3 ದಿನಗಳಿಂದ 28 ದಿನಗಳವರೆಗಿನ ವೈವಿಧ್ಯಮಯ ಪ್ರವಾಸಗಳು

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ಬಸವನಗುಡಿ : 080-26616678 / , ಮಲ್ಲೇಶ್ವರ : 080 - 23346678 / ಹುಬ್ಬಳ್ಳಿ : 0836 -2256678 / ವೆಬ್ಸೈಟ್ : www.adigasyatra.com

7022259008, 7022259009, 8095800301,

ಹಿಮಾಚಲ ಪ್ರದೇಶ ಪ್ರವಾಸಿಗರ ಸ್ವರ್ಗ

ಶಿಮ್ಲಾ, ಕುಲು–ಮನಾಲಿ, ಧರ್ಮಶಾಲಾ, ಡಾಲ್‌ಹೌಸಿ, ಖಜ್ಜಿಯಾರ್ ರಮಣೀಯ ದೃಶ್ಯ, ಜ್ವಾಲಾಮುಖಿ, ಚಾಮುಂಡಾ, ಬೈಜನಾಥ, ಕಾಂಗ್ರಾ, ವಜ್ರೇಶ್ವರಿ, ಅಮೃತಸರ, ವೈಷ್ಣೋದೇವಿ ಪ್ರವಾಸಗಳು ಲಭ್ಯ

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ : 144, ದುರ್ಗಾ ಮೆನ್ಶನ್, ಡಿ.ವಿ.ಜಿ. ರೋಡ, ಬಸವನಗುಡಿ, ಬೆಂಗಳೂರು. 080-26616678 / 7022259008 ಮಲ್ಲೇಶ್ವರ : 080 - 23346678 ಹುಬ್ಬಳ್ಳಿ : 0836 -2256678 ವೆಬ್ಸೈಟ್: www.adigasyatra.com ವೀಕ್ಷಿಸಿ

ಅಂಡಮಾನ್ ದ್ವೀಪಗಳು

ಪೋರ್ಟ್‌ಬ್ಲೇರ್, ಹ್ಯಾವಲಾಕ್, ರೊಸ್, ನೀಲ್, ಬಾರಟಾಂಗ್, ನಾರ್ಥಬೇ ದ್ವೀಪಗಳು, ಸೆಲ್ಯುಲಾರ್ ಜೇಲ್

ವಿವರಗಳಿಗೆ ಸಂಪರ್ಕಿಸಿರಿ: 7022259008, 9611600810

ರಾಜಸ್ಥಾನ ಅರಮನೆಗಳು ಮತ್ತು ಕೋಟೆಗಳು

ಜೈಪುರ್, ಉದಯಪುರ, ಜೋದಪುರ, ಜೈಸಲ್ಮೇರ್‌ನ ಮರುಭೂಮಿ, ಬೀಕಾನೇರ್, ಚಿತ್ತೋರಗಢ, ಪುಷ್ಕರ, ಅಬು, 25ಕ್ಕೂ ಅಧಿಕ ಪ್ರವಾಸಗಳು.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ : ಬಸವನಗುಡಿ: 080-26616678 / 7022259008 ಮಲ್ಲೇಶ್ವರ : 080 - 23346678 / 7022259003 ಹುಬ್ಬಳ್ಳಿ : 0836 -2256678 / 9611600810 ವೆಬ್ಸೈಟ್: www.adigasyatra.com

ನೇಪಾಳ–ಪಶುಪತಿನಾಥ–ಮುಕ್ತಿನಾಥ

ಲುಂಬಿನಿ (ಬುದ್ಧನ ಜನ್ಮಸ್ಥಳ) ಪೋಖಾರಾ, ಫಿವಾಲೇಕ್, ಜೊಮ್ಸವ್, ಮುಕ್ತಿನಾಥ, ಮನೋಕಾಮನ, ಕೇಬಲ್‌ಕಾರ್, ಕಠ್ಮಂಡು, ಡೋಲೆಶ್ವರ್ ಮಹಾದೇವ್, (ಕೇದಾರನಾಥದ ಭಾಗ) ಪಶುಪತಿನಾಥ್, ಭಕ್ತಪುರ, ಪಟಾನ್, ಸ್ವಯಂಭುನಾಥ, ಚಿತ್ವಾನ್, ನ್ಯಾಶನಲ್ ಪಾರ್ಕ್, ಜನಕ್‌ಪುರ (ಸೀತೆಯ ಜನ್ಮಸ್ಥಳ) ಇತ್ಯಾದಿ

ಹೊರಡುವ ದಿನಾಂಕ ಹಾಗೂ ವಿವರಗಳಿಗೆ ಸಂಪರ್ಕಿಸಿರಿ: 7022259008, 7022259003, 9611600810, ವೆಬ್ಸೈಟ್: www.adigasworld.in ವೀಕ್ಷಿಸಿ

ಮಧ್ಯ ಪ್ರದೇಶ ಎಲ್ಲವೂ ಲಭ್ಯ

ಜ್ಯೋತಿರ್ಲಿಂಗಗಳಾದ ಉಜ್ಜಯಿನಿ, ಮಹಾಕಾಲೇಶ್ವರ, ಓಂಕಾರೇಶ್ವರ, ಇಂದೋರ್, ಮಾಹೇಶ್ವರ, ಮಾಂಡು, ಭೋಪಾಲ್, ಗ್ವಾಲಿಯರ್, ಖಜುರಾಹೋ, ಜಬಲ್‌ಪುರ್, ಬೇಡಾಘಾಟ್, ಪಾಚ್‌ಮಾರಿ ಹಾಗೂ ನ್ಯಾಷನಲ್ ಪಾರ್ಕಗಳಾದ ಭಾಂದವಾಘಡ್, ಪನ್ನಾ, ಪೆಂಚ್, ಕನ್ಹಾ ಇತ್ಯಾದಿ.

ಹೊರಡುವ ದಿನಾಂಕ ಹಾಗೂ ವಿವರಗಳಿಗೆ ಸಂಪರ್ಕಿಸಿರಿ: 7022259003, 9611600810, ವೆಬ್ಸೈಟ್: www.adigasyatra.com ವೀಕ್ಷಿಸಿ

ಲಖಿಂಪುರ್– ಖೇರಿ ಜಿಲ್ಲೆಯಲ್ಲಿ ನಡೆದ ರೈತರ ಹತ್ಯೆ ಪ್ರಕರಣ

ಸಚಿವರ ವಜಾಕ್ಕಾಗಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

'ಕೇಂದ್ರ ಸಚಿವ ಅಜಯ್ ಕುಮಾರ್ ಮಿಶ್ರಾ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸಬೇಕು' ಎಂದು ಒತ್ತಾಯಿಸಿ ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಎಸ್‌ಯುಸಿಐ–ಕಮ್ಯುನಿಸ್ಟ್) ಪಕ್ಷದ ಕಾರ್ಯಕರ್ತರು ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಬೆಂಗಳೂರು: 'ಉತ್ತರ ಪ್ರದೇಶದ ಲಖಿಂಪುರ್– ಖೇರಿ ಜಿಲ್ಲೆಯಲ್ಲಿ ನಡೆದ ರೈತರ ಹತ್ಯೆಗೆ ಕಾರಣವಾಗಿರುವ ಕೇಂದ್ರ ಸಚಿವ ಅಜಯ್ ಕುಮಾರ್ ಮಿಶ್ರಾ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸಬೇಕು' ಎಂದು ಒತ್ತಾಯಿಸಿ ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಎಸ್‌ಯುಸಿಐ–ಕಮ್ಯುನಿಸ್ಟ್) ಪಕ್ಷದ ಕಾರ್ಯಕರ್ತರು ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಮೈಸೂರು ಬ್ಯಾಂಕ್ ವೃತ್ತದಲ್ಲಿ ಸೇರಿದ್ದ ಪ್ರತಿಭಟನಕಾರರು, ರೈತರ ಹತ್ಯೆಯನ್ನು ಖಂಡಿಸಿ ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು.

ಪಕ್ಷದ ರಾಜ್ಯ ಘಟಕದ ಕಾರ್ಯದರ್ಶಿ ಕೆ. ಉಮಾ, 'ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದ ರೈತರ ಮೇಲೆ ವಾಹನ ಹರಿಸಿ ಹತ್ಯೆ ಮಾಡಿರುವುದು ಅಮಾನೀಯ. ಇದನ್ನು ನಾವೆಲ್ಲರೂ ಖಂಡಿಸುತ್ತೇವೆ' ಎಂದರು.

'ಕೇಂದ್ರ ಸರ್ಕಾರ ಹಾಗೂ ಉತ್ತರ ಪ್ರದೇಶ ಸರ್ಕಾರ, ತಮ್ಮನ್ನು ಪ್ರಶ್ನಿಸುವವರ ಬಾಯಿ ಮುಚ್ಚಿಸುವ ಹಿಂಸಾತ್ಮಕ ದಾಳಿಯಲ್ಲಿ ತೊಡಗಿದೆ. ಇಂತಹ ಜನ ವಿರೋಧಿ ಸರ್ಕಾರಗಳಿಗೆ ಅಧಿಕಾರ ನಡೆಸಲು ಯಾವುದೇ ನೈತಿಕ ಹಕ್ಕಿಲ್ಲ. ಉತ್ತರ ಪ್ರದೇಶದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹಾಳಾಗಿದೆ. ಮಹಿಳೆಯರ ಮೇಲಿನ ದೌರ್ಜನ್ಯಗಳು, ಕೋಮು ಗಲಭೆಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ' ಎಂದೂ ದೂರಿದರು.

ಪಕ್ಷದ ಸದಸ್ಯ ವಿ. ಜ್ಞಾನಮೂರ್ತಿ, 'ಬಿಜೆಪಿ ಸರ್ಕಾರ, ರೈತ ಹಾಗೂ ಜನ ವಿರೋಧಿ ನೀತಿ ಅನುಸರಿಸುತ್ತಿದೆ. ದೇಶದಲ್ಲಿ ಇದುವರೆಗೂ ನಾಲ್ಕು ಲಕ್ಷಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ರೈತಪರ ಕಾಳಜಿ ಇಲ್ಲದ ಕೇಂದ್ರ ಸರ್ಕಾರ, ಬಹುರಾಷ್ಟ್ರೀಯ ಕಂಪನಿಗಳ ಸೇವೆ ಮಾಡುತ್ತಿದೆ. ಇಂಥ ಸರ್ಕಾರದ ವಿರುದ್ಧ ನಮ್ಮ ಹೋರಾಟ ಮುಂದುವರಿಯಲಿದೆ' ಎಂದು ಎಚ್ಚರಿಸಿದರು.

ಸಂಕ್ಷಿಪ್ತ ಸುದ್ದಿ

'ಶಾಖೆಗೆ ಬಂದು ಅಧ್ಯಯನ ಮಾಡಿ'

ಬೆಂಗಳೂರು: 'ರಾಜಕೀಯ ಕಾರಣಕ್ಕೆ ಆರ್‌ಎಸ್‌ಎಸ್ ದೂಷಿಸುವುದನ್ನು ಬಿಟ್ಟು ಸಂಘದ ಶಾಖೆಗೆ ಬಂದು ಅಲ್ಲಿನ ಸಿದ್ಧಾಂತಗಳನ್ನು ಅಧ್ಯಯನ ಮಾಡಿ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ತಿರುಗೇಟು ನೀಡಿದ್ದಾರೆ.

'ಆರ್‌ಎಸ್‌ಎಸ್ ಬದ್ಧತೆಯ ಬಗ್ಗೆ ಮಾತನಾಡುವ ಮೊದಲು ಆರ್‌ಎಸ್‌ಎಸ್ ಎಂದರೇನು, ಅದರ ಮಹತ್ವ ಏನು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಚುನಾವಣೆ ಬಂದಾಗ ಜನರ ಸಂಕಷ್ಟಗಳು ನಿಮಗೆ ನೆನಪಾಗುವುದು ಹೊಸದೇನೂ ಅಲ್ಲ. ಆರ್‌ಎಸ್‌ಎಸ್ ಕಾರ್ಯಕರ್ತರು ಸಂಕಷ್ಟದ ಜನರ ಮಧ್ಯೆಯೇ ಬೆಳೆದು ಬಂದವರು. ಜನರ ನೋವುಗಳು ಏನೆಂಬ ಅರಿವಿದೆ. ಸೈನಿಕರ ಬಗ್ಗೆ, ಆರ್‌ಎಸ್‌ಎಸ್ ಕಾರ್ಯಕರ್ತರ ಬಗ್ಗೆ ಮಾತನಾಡುವ ನೈತಿಕತೆ ಕಳೆದುಕೊಂಡಿರುವ ಅವರಿಗೆ ಮುಂದಿನ ದಿನಗಳಲ್ಲಿ ಜನರೇ ತಕ್ಕ ಉತ್ತರ ನೀಡಲಿದ್ದಾರೆ' ಎಂದಿದ್ದಾರೆ.

ಕೆಎಎಸ್ ಪರೀಕ್ಷೆಗೆ ಉಚಿತ ತರಬೇತಿ

ಬೆಂಗಳೂರು: ಕೆಎಎಸ್, ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಎಫ್‌ಡಿಎ ಹಾಗೂ ಎಸ್‌ಡಿಎ ಪರೀಕ್ಷೆಗಳನ್ನು ಎದುರಿಸಲಿರುವ ಬಡ ವಿದ್ಯಾರ್ಥಿಗಳಿಗೆ ಆರ್.ಎಲ್.ಜಾಲಪ್ಪ ಅಕಾಡೆಮಿಯು ತರಬೇತಿಯನ್ನು ಉಚಿತವಾಗಿ ನೀಡಲಿದ್ದು, ಇದಕ್ಕಾಗಿ ಅರ್ಹರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

'ನೆಲಮಂಗಲದಿಂದ 15 ಕಿ.ಮೀ. ದೂರದಲ್ಲಿರುವ ಸೋಲೂರಿನಲ್ಲಿ ಅಕಾಡೆಮಿ ಇದ್ದು, ನಾಲ್ಕು ತಿಂಗಳು ತರಬೇತಿ ನೀಡಲಾಗುತ್ತದೆ. ತರಬೇತಿ ಅವಧಿಯಲ್ಲಿ ವಸತಿ ಮತ್ತು ಊಟದ ವ್ಯವಸ್ಥೆಯನ್ನೂ ಉಚಿತವಾಗಿ ಮಾಡಲಾಗುತ್ತದೆ. ಇದೇ 20ರಿಂದ ತರಬೇತಿ ಆರಂಭವಾಗಲಿದೆ' ಎಂದು ಪ್ರಕಟಣೆ ತಿಳಿಸಿದೆ.

ಆಸಕ್ತರು www.rljacademy.in ವೆಬ್‌ಸೈಟ್ ಮೂಲಕ ಇದೇ 10ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ 9900606042 ಅಥವಾ 9902004438.

ರಸ್ತೆಗಳ ಲೆಕ್ಕಪರಿಶೋಧನೆಗೆ ಪಿ.ಆರ್.ರಮೇಶ್ ಆಗ್ರಹ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಡಾಂಬರೀಕರಣಗೊಂಡಿರುವ ಎಲ್ಲ ರಸ್ತೆಗಳನ್ನು ಲೆಕ್ಕಪರಿಶೋಧನೆ ಮಾಡಬೇಕು ಎಂದು ವಿಧಾನ ಪರಿಷತ್ ಸದಸ್ಯ ಪಿ.ಆರ್.ರಮೇಶ್ ಆಗ್ರಹಿಸಿದ್ದಾರೆ.

ಈ ಸಂಬಂಧ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರಿಗೆ ಪತ್ರ ಬರೆದಿರುವ ರಮೇಶ್ ಅವರು, 'ಪಾಲಿಕೆಯ ವ್ಯಾಪ್ತಿಯ 11,283 ಕಿ.ಮೀ. ಡಾಂಬರೀಕರಣ ರಸ್ತೆ ನಿರ್ಮಾಣ ಹಾಗೂ ನಿರ್ವಹಣೆಗೆ ಕಳೆದ ಐದು ವರ್ಷಗಳಲ್ಲಿ ₹20,060 ಕೋಟಿ ವೆಚ್ಚ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೇ ಹೇಳಿದ್ದಾರೆ. ಈ ರಸ್ತೆಗಳ ಲೆಕ್ಕಪರಿಶೋಧನೆ ನಡೆಸಲಾಗುವುದು ಎಂದು ಮುಖ್ಯಮಂತ್ರಿಯವರು ಭರವಸೆ ನೀಡಿದ್ದಾರೆ. ಪಾಲಿಕೆಯ ಎಂಟು ವಲಯಗಳು ಒಳಗೊಂಡಂತೆ ರಸ್ತೆ ಮೂಲಸೌಕರ್ಯ ನೀಡುವ ಇಲಾಖೆಯ ಸಿಬ್ಬಂದಿಯನ್ನು ಹೊಣೆಗಾರರನ್ನಾಗಿ ಮಾಡಬೇಕು. ಲೆಕ್ಕಪರಿಶೋಧನೆ ಪ್ರಕ್ರಿಯೆಗೆ ಒಳಪಡಿಸದೆ ಡಾಂಬರೀಕರಣ ಕೈಗೊಂಡ ಗುತ್ತಿಗೆದಾರರಿಗೆ ಯಾವುದೇ ಹಣವನ್ನು ಬಿಡುಗಡೆ ಮಾಡಬಾರದು ಎಂದು ಆಗ್ರಹಿಸಿದ್ದಾರೆ.

ನನ್ನ ಜೀವನದಲ್ಲಿ ಎಲ್ಲವೂ ಆಕಸ್ಮಿಕವೇ: ಅರುಂಧತಿ ನಾಗ್

ಅರುಂಧತಿ ನಾಗ್

ಪ್ರಜಾವಾಣಿ ಸೆಲೆಬ್ರಿಟಿ LIVE

ಬೆಂಗಳೂರು: 'ನನ್ನ ಜೀವನದಲ್ಲಿ ಎಲ್ಲವೂ ಆ್ಯಕ್ಸಿಡೆಂಟ್‌ಗಳೇ. ದೆಹಲಿಯಲ್ಲಿ ಕುಲೀನ ಕುಟುಂಬದಲ್ಲಿ ಹುಟ್ಟಿದ್ದು, ಮುಂಬೈ ರಂಗಭೂಮಿಯಲ್ಲಿ ಶಂಕರನ ಭೇಟಿಯಾದದ್ದು, ಮದುವೆಯಾಗಿ ಬೆಂಗಳೂರನ್ನೇಮನೆಮಾಡಿಕೊಂಡದ್ದು, ಅಕಾಲದಲ್ಲಿ ಅವನನ್ನು ಅಪಘಾತದಲ್ಲಿ ಕಳೆದುಕೊಂಡದ್ದು, ರಂಗಶಂಕರವನ್ನು ಕಟ್ಟಿ ಬೆಳೆಸಿದ್ದು- ಎಲ್ಲವೂ ಆಕ್ಸಿಡೆಂಟ್‌ಗಳೇ. ಜೀವನದಲ್ಲಿ ಕೆಲವು ಒಳ್ಳೆಯ ಆ್ಯಕ್ಸಿಡೆಂಟ್‌ಗಳಾದರೆ, ಇನ್ನು ಕೆಲವು ಕೆಟ್ಟ ಆ್ಯಕ್ಸಿಡೆಂಟ್‌ಗಳು..!"

-ಚಿತ್ರನಟಿ, ರಂಗಕರ್ಮಿ ಆರುಂಧತಿ ನಾಗ್ ಹಳೆಯ ನೆನಪುಗಳನ್ನು ಮೊಗೆಮೊಗೆದು ಹೇಳುತ್ತಾ ಹೋದಂತೆ ಅವರ ಕಣ್ಣಾಲಿಗಳೂ ಒದ್ದೆಯಾದವು, ವೀಕ್ಷಕರೂ ಕಣ್ಣೀರಾದರು.

ಮಂಗಳವಾರ ಪ್ರಜಾವಾಣಿಯ 'ಸೆಲೆಬ್ರಿಟಿ ಲೈವ್' ಸಂದರ್ಶನದಲ್ಲಿ ಅವರು ಪ್ರಶ್ನೆಗಳಿಗೆ ಉತ್ತರಿಸುತ್ತಾ ಹೋದಂತೆ ಉದ್ದಕ್ಕೂ ಪತಿ ಶಂಕರನಾಗ್ ಅವರ ನೆನಪುಗಳ ಮೆರವಣಿಗೆಯೇ ನಡೆಯಿತು. ಶಂಕರನಾಗ್ ನಿರ್ದೇಶನದ 'ಆ್ಯಕ್ಸಿಡೆಂಟ್' ಚಿತ್ರದ ಮಾದರಿಯಲ್ಲೇ ಎರಡು ದಿನಗಳ ಹಿಂದೆ ಉತ್ತರ ಪ್ರದೇಶದಲ್ಲಿ ನಡೆದ ಅಪಘಾತದಲ್ಲಿ ಎಂಟು ಜನ ಜೀವ ಕಳೆದುಕೊಂಡ ಪ್ರಸ್ತಾಪವೂ ಬಂತು.

'ನಾನು ಹುಟ್ಟಿದ್ದು ದೆಹಲಿಯಲ್ಲಿ. 10ನೇ ವಯಸ್ಸಿಗೇ ಕುಟುಂಬ ಮುಂಬೈಗೆ ಬಂತು. ಕಾಲೇಜು ಕಲಿಯುತ್ತಿದ್ದಾಗ ರಂಗಭೂಮಿಯ ಹುಚ್ಚು. ನನ್ನ ಕಾಲೇಜು ಬೇರೆ, ಶಂಕರ್ ಕಲಿಯುತ್ತಿದ್ದ ಕಾಲೇಜು ಬೇರೆ. ಆದರೆ ನಾಟಕ ಸ್ಪರ್ಧೆ ಸಮಯದಲ್ಲಿ ಭೇಟಿಯಾಗುತ್ತಿದ್ದೆವು. ಅಲ್ಲೇ ಪರಿಚಯ ಬೆಳೆಯಿತು. ನಾನು ಆತನಿಗೆ ಮೊದಲ ನೋಟಕ್ಕೇ ಮಾರುಹೋಗಿದ್ದೆ. ಆದರೆ ನಮ್ಮ ಪರಿಚಯವಾದ ಆರು ವರ್ಷಗಳ ನಂತರ ಶಂಕರ ಬೆಂಗಳೂರಿಗೆ ವಾಪಸಾಗಿದ್ದಾಗ ಮದುವೆಯ ಪ್ರಸ್ತಾಪ ಮುಂದಿಟ್ಟ' ಎಂದು ಆರುಂಧತಿ ನೆನಪುಗಳನ್ನು ಕೆದಕುತ್ತಾ ಹೋದರು.

ಮುಂಬೈಯಲ್ಲಿದ್ದಾಗ ಮರಾಠಿ, ಗುಜರಾತಿ, ಹಿಂದಿ, ತಮಿಳು ಮತ್ತು ಇಂಗ್ಲಿಷ್ ನಾಟಕಗಳಲ್ಲಿ ಅಭಿನಯಿಸಿದ್ದೆ. ಬೆಂಗಳೂರಿಗೆ ಬಂದ ಬಳಿಕ ಕನ್ನಡ, ಮಲಯಾಳಂ ನಾಟಕಗಳ ಜೊತೆಗೆ ಬೆಳೆದೆ. 'ರಂಗಶಂಕರ'ದ ಮೂಲಕ ಇವತ್ತು ಶಂಕರನ ನೆನಪುಗಳು ಭದ್ರವಾಗಿವೆ. ಅವನು ಇದ್ದಿದ್ದರೂ ಇದನ್ನೇ ಮಾಡುತ್ತಿದ್ದ. ಇದು ಮಾತ್ರವಲ್ಲ ಅವನು ಇದ್ದಿದ್ದರೆ ಒಂದು ಕನ್ನಡ ಪತ್ರಿಕೆಯನ್ನೂ, ಒಂದು ಕನ್ನಡ ಸುದ್ದಿ ವಾಹಿನಿಯನ್ನೂ ಮಾಡುತ್ತಿದ್ದನೇನೋ! ಅವನ ಕನಸುಗಳು ಹಾಗಿದ್ದವು ಎಂದು ಆರುಂಧತಿ ಹೇಳಿದರು.

ಏಳು ಭಾಷೆಗಳಲ್ಲಿ ನಾಟಕಗಳಲ್ಲಿ ನಟಿಸಿದ ತನ್ನ ರಂಗಸಾಮರ್ಥ್ಯದ ಬಗ್ಗೆ ಕೇಳಿದ ಪ್ರಶ್ನೆಗೆ ಅವರು ಉತ್ತರಿಸಿದ್ದು ಹೀಗೆ- "ತರಗತಿಯಲ್ಲಿ ಗಣಿತದಲ್ಲಿ ನಾನು ಬಹಳ ಹಿಂದೆ ಇದ್ದೆ. ಏಳನೇ ತರಗತಿಯಲ್ಲಿ ಗ್ರೇಸ್ ಮಾರ್ಕ್ಸ್ ಸಿಗುವ ಸಂಭವವೇ ಇರಲಿಲ್ಲ. ಆದರೆ ವಿವಿಧ ಭಾಷೆಗಳನ್ನು ಕಲಿತುಕೊಂಡು ಆ ಭಾಷೆಗಳಲ್ಲಿ ನಾಟಕ ಆಡಿದ್ದು ನನ್ನೊಳಗೆ ಭಾಷೆಯೇ ಗಣಿತವಾದದ್ದನ್ನು ಅನುಭವಕ್ಕೆ ತಂದಿತು. ಮುಂಬೈಗೆ ಕುಟುಂಬ ವಲಸೆ ಬಂದಾಗ ನನಗೆ ಮರಾಠಿ ಗೊತ್ತಿರಲಿಲ್ಲ. ಸುತ್ತಲಿದ್ದವರು ಅದನ್ನೇ ತಮಾಷೆ ಮಾಡುತ್ತಿದ್ದರು. ಗುಜರಾತಿ, ಮರಾಠಿ, ತಮಿಳು ಎಲ್ಲವನ್ನೂ ಕಲಿತೆ. ಬೆಂಗಳೂರಿಗೆ ಬಂದು ಕನ್ನಡ ಕಲಿತೆ. ಅಷ್ಟೆಲ್ಲ ಭಾಷೆಯ ರಂಗದ ಮೇಲಿನ ಪಾತ್ರಗಳನ್ನು ಹೇಗೆ ನಿರ್ವಹಿಸಿದ್ದೆ ಎಂದು ಈಗ ಯೋಚಿಸಿದರೆ ಅಚ್ಚರಿಯಾಗುತ್ತದೆ. ನಟರಿಗೆ ಎಷ್ಟು ಹೆಚ್ಚು ಭಾಷೆಗಳು ಬಂದರೂ ಒಳ್ಳೆಯದೇ."

"ದೆಹಲಿ, ಮುಂಬೈಯ ಹಿನ್ನೆಲೆ ಇದ್ದರೂ ನಾನು ಪೂರ್ತಿಯಾಗಿ ಅರಳಿದ್ದು ಬೆಂಗಳೂರಿನಲ್ಲಿ. ಕನ್ನಡ ರಂಗಭೂಮಿಯೇ ನನ್ನ ಉಸಿರು. ಆದರೆ ಈಗಲೂ ಅನಸ್ತೇಷಿಯಾ ಪಡೆದು ಮರಳಿ ಎದ್ದರೆ ನನ್ನ ಬಾಯಿಗೆ ಬರುವುದು ಹಿಂದಿ. ಅದು ಬಾಲ್ಯದಲ್ಲೇ ಅಪ್ಪ- ಅಮ್ಮ ಅಭ್ಯಾಸ ಮಾಡಿಸಿದ ಭಾಷೆ. ರಂಗಭೂಮಿಗೆ ಅದರದ್ದೇ ಆದ ಆತ್ಮವೊಂದಿದೆ. ಅದನ್ನು ವ್ಯಾಪಾರಿ ಉದ್ದೇಶಗಳಿಗಾಗಿ ಹಾಳುಗೆಡವಬಾರದು. ಕನ್ನಡ ಸಹಿತ ಹಲವು ಭಾಷೆಗಳ ನಾಟಕಗಳು ರಂಗಶಂಕರದಲ್ಲಿ ನಡೆಯುತ್ತವೆ. ಅಲ್ಲೇಕೆ ಫ್ಯಾಷನ್ ಷೋ ಮಾಡಬಾರದು ಎಂದವರಿದ್ದಾರೆ. ಅದು ಸಾಧ್ಯವಿಲ್ಲ. ರಂಗಶಂಕರ ಪೂರ್ತಿಯಾಗಿ ರಂಗಭೂಮಿಗೇ ಮೀಸಲಾದ ಕೇಂದ್ರ" ಎಂದು ಆರುಂಧತಿ ದೃಢವಾಗಿ ಹೇಳಿದರು.

ಡಾ. ರಾಜ್‌ಕುಮಾರ್ ಅವರ ಜೊತೆಗೆ ಶಂಕರನಾಗ್ ಅವರಿಗಿದ್ದ ನಂಟು, 'ಒಂದು ಮುತ್ತಿನ ಕಥೆ'ಯ ಸಂದರ್ಭದ ನೆನಪುಗಳನ್ನೂ ಆರುಂಧತಿ ಬಿಚ್ಚಿಟ್ಟರು. ಗಿರೀಶ್ ಕಾರ್ನಾಡ್ ಬರೆದ ನಾಟಕಗಳು ಮತ್ತು ಅವರ ನಿರ್ದೇಶನದಲ್ಲಿ ನಟಿಸಿದ್ದು, ಶೌಕತ್ ಕೈಫಿ ಮತ್ತು ಎಂ.ಎಸ್.ಸತ್ಯು ಅವರ ಮಾರ್ಗದರ್ಶನ, ಅಮಿತಾಭ್ ಜೊತೆಗೆ "ಪಾ" ಚಿತ್ರದಲ್ಲಿ ನಟಿಸಿದಾಗಿನ ಅನುಭವ, ಕನ್ನಡ 'ಜೋಗಿ' ಚಿತ್ರದ ಪಾತ್ರದ ತಮಾಷೆ, ಶಂಕರ್ ಅವರಿಗಿದ್ದ ಪತ್ರ ಬರೆಯುವ ಮತ್ತು ವ್ಯವಸ್ಥಿತವಾಗಿ ಪುಸ್ತಕಗಳನ್ನು ಓದುವ ಅಭ್ಯಾಸ- ಹೀಗೆ ನೂರೆಂಟು ನೆನಪುಗಳು ಅವರ ಮಾತುಗಳಲ್ಲಿ ಹಾದುಹೋದವು. ಪ್ರಜಾವಾಣಿಯ ಸಹ ಸಂಪಾದಕ ಬಿ.ಎಂ.ಹನೀಫ್ ಸಂದರ್ಶನ ನಡೆಸಿದರು.

(ಪೂರ್ಣ ಸಂದರ್ಶನ ವೀಕ್ಷಿಸಲು https://youtu.be/kOVzswr_324 ನೋಡಿ)

ಮಲ್ಲೇಶ್ವರ ದಸರಾ ಉತ್ಸವಕ್ಕೆ ನಾಳೆ ಚಾಲನೆ

ಬೆಂಗಳೂರು: ದಸರಾ ಅಂಗವಾಗಿ ಮಲ್ಲೇಶ್ವರದ ಆರ್ಯವೈಶ್ಯ ಸಂಘವು ಮಲ್ಲೇಶ್ವರದ ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ಅ.7ರಿಂದ 16ರವರೆಗೆ ಮಲ್ಲೇಶ್ವರ ದಸರಾ ಉತ್ಸವವನ್ನು ಆಯೋಜಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ದೇವಸ್ಥಾನದ ಕಾರ್ಯದರ್ಶಿ ರವಿಶಂಕರ್,'ದಸರಾ ಉತ್ಸವಕ್ಕೆ ಅ.7ರಂದು ಸಂಜೆ 6 ಗಂಟೆಗೆ ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ, ಸಂಸದರಾದ ಪಿ.ಸಿ. ಮೋಹನ್ ಹಾಗೂ ಡಿ.ವಿ.ಸದಾನಂದ ಗೌಡ ಅವರು ಚಾಲನೆ ನೀಡಲಿದ್ದಾರೆ' ಎಂದು ಮಾಹಿತಿ ನೀಡಿದರು.

'ಪ್ರತಿ ವರ್ಷವೂ ದೇವಾಲಯದಲ್ಲಿ ವಿಶೇಷ ರೀತಿಯ ಸೆಟ್ ಹಾಕಿ ದಸರಾ ಆಚರಿಸಲಾಗುವುದು. ಈ ಬಾರಿ 'ಸಾಗರ ಕನ್ಯೆ ಶ್ರೀವಾಸವಿ' ಎಂಬ ಪರಿಕಲ್ಪನೆಯಡಿ 50 ಕುಶಲಕರ್ಮಿಗಳಿಂದ ಸಾಗರ ಗರ್ಭದ ವಿಸ್ಮಯಗಳ ಸೆಟ್ ಹಾಕಲಾಗಿದೆ' ಎಂದರು.

'ನವರಾತ್ರಿ ವಿಶೇಷವಾಗಿ 800ಕ್ಕೂ ಹೆಚ್ಚು ಗೊಂಬೆಗಳನ್ನು ಕೂರಿಸಲಾಗಿದೆ. 10 ಅಡಿ ಎತ್ತರದ ಅಂಬಾರಿ ಮಾಡಲಾಗಿದೆ. ಉತ್ಸವದ ಅವಧಿಯಲ್ಲಿ ಪ್ರತಿದಿನ ಬೆಳಿಗ್ಗೆ 6ರಿಂದ ಸಂಜೆ 9 ರವರೆಗೂ ಭಕ್ತರಿಗೆ ಪ್ರವೇಶ ಇರಲಿದೆ. ಏಕಕಾಲಕ್ಕೆ 20 ಜನರಿಗೆ ಮಾತ್ರ ದರ್ಶನಕ್ಕೆ ಅವಕಾಶ ಕಲ್ಪಿಸಲಾಗುವುದು' ಎಂದು ಹೇಳಿದರು.

ಪಿಇಎಸ್‌ನಲ್ಲಿ ರಕ್ತದಾನ ಶಿಬಿರ

ಶಿಬಿರದಲ್ಲಿ ಸಾರ್ವಜನಿಕರು ರಕ್ತದಾನ ಮಾಡಿದರು

ಬೆಂಗಳೂರು: ಗಾಂಧಿ ಜಯಂತಿ ಅಂಗವಾಗಿ ಪಿಇಎಸ್ ವಿಶ್ವವಿದ್ಯಾಲಯದ ರೋಟರಾಕ್ಟ್ ಕ್ಲಬ್ ಹಾಗೂ ರೋಟರಿ ಕ್ಲಬ್ ಬನಶಂಕರಿ ಸಹಯೋಗದಲ್ಲಿ 'ಬೃಹತ್ ರಕ್ತದಾನ ಶಿಬಿರ'ವನ್ನು ವಿಶ್ವವಿದ್ಯಾಲಯದ ಆವರಣದಲ್ಲಿ ಆಯೋಜಿಸಲಾಗಿತ್ತು.

ಶಿಬಿರವನ್ನು ರೋಟರಿ ಕ್ಲಬ್–ಆರ್‌ಐ 3190ನೇ ಜಿಲ್ಲಾ ಗವರ್ನರ್ ಫಜಲ್ ಮಹಮೂದ್ ಉದ್ಘಾಟಿಸಿದರು.

ಪಿಇಎಸ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ರಕ್ತದಾನ ಶಿಬಿರದಲ್ಲಿ ಸುಮಾರು 250 ಯೂನಿಟ್‌ಗಳಷ್ಟು ರಕ್ತ ಸಂಗ್ರಹಿಸಿದರು. ಸ್ವಯಂಪ್ರೇರಿತವಾಗಿ ರಕ್ತದಾನ ಮಾಡಿದ ದಾನಿಗಳಿಗೆ ಪ್ರಮಾಣಪತ್ರ ಮತ್ತು ಟಿ-ಶರ್ಟ್ ವಿತರಿಸಲಾಯಿತು.

ವಿಶ್ವವಿದ್ಯಾಲಯದ ಕುಲಾಧಿಪತಿ ಡಾ. ಎಂ. ಆರ್. ದೊರೆಸ್ವಾಮಿ, ಕುಲಪತಿ ಡಾ.ಜೆ.ಸೂರ್ಯ ಪ್ರಸಾದ್, ಕುಲಸಚಿವ ಕೆ.ಎಸ್.ಶ್ರೀಧರ್, ರೋಟರಿ ಬೆಂಗಳೂರು ಬನಶಂಕರಿಯ ಅಧ್ಯಕ್ಷ ರೋಟೇರಿಯನ್ ರೋಹಿತ್ ನಾಗೇಶ್, ಕಾರ್ಯದರ್ಶಿ ರೋಟೇರಿಯನ್ ತಾರಾನಾಥ್ ಹಾಗೂ ಇತರರು ಭಾಗವಹಿಸಿದ್ದರು.

‘ಬೆಂಗಳೂರು– ದಿಂಡಿಗಲ್ ಚತುಷ್ಪಥ ರಸ್ತೆ 2022ರ ಜೂನ್‌ಗೆ ಪೂರ್ಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಷ್ಟ್ರೀಯ ಹೆದ್ದಾರಿ 209ರಲ್ಲಿ ಕನಕಪುರ ರಸ್ತೆಯಿಂದ ಮಳವಳ್ಳಿವರೆಗೆ ಚತುಷ್ಪಥ (ಬೆಂಗಳೂರು– ದಿಂಡಿಗಲ್ ರಸ್ತೆ) ಮತ್ತು ಬೈಪಾಸ್ ರಸ್ತೆಯ ಕಾಮಗಾರಿ ತ್ವರಿತಗೊಳಿಸಲು ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು. 2022ರ ಜೂನ್ ವೇಳೆಗೆ ಈ ಕಾಮಗಾರಿ ಪೂರ್ಣಗೊಳ್ಳುವ ಸಾಧ್ಯತೆ ಇದೆ’ ಎಂದು ಮಾಜಿ ಸಚಿವ ಪಿ.ಜಿ.ಆರ್. ಸಿಂಧ್ಯ ಅವರಿಗೆ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಮಾಹಿತಿ ನೀಡಿದ್ದಾರೆ.

ಕಳೆದ ಮಾರ್ಚ್ 16ರಂದು ಗಡ್ಕರಿ ಅವರಿಗೆ ಪತ್ರ ಬರೆದಿದ್ದ ಪಿ.ಜಿ. ಆರ್. ಸಿಂಧ್ಯ, ‘ಬೆಂಗಳೂರು-ಕನಕಪುರ-ಬಿಳಿಗಿರಿರಂಗನಬೆಟ್ಟ-ದಿಂಡಿಗಲ್ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಗುತ್ತಿಗೆದಾರರ ಹಣದ ಕೊರತೆಯಿಂದ ನಿಂತಿದೆ. ರಸ್ತೆ ಕಾಮಗಾರಿ ತ್ವರಿತಗೊಳಿಸಲ ಕ್ರಮ ತೆಗೆದುಕೊಳ್ಳಬೇಕು’ ಎಂದು ಮನವಿ ಮಾಡಿದ್ದರು.

ಎ.ವಿ. ಆನಂದ್‌ಗೆ ‘ಸಂಗೀತ ವಿದ್ವಾನ್ ಗೌರವ ಪ್ರಶಸ್ತಿ’



ಬೆಂಗಳೂರು: ರಾಜ್ಯ ಸರ್ಕಾರವು ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ನೀಡುವ ‘ರಾಜ್ಯ ಸಂಗೀತ ವಿದ್ವಾನ್ ಗೌರವ ಪ್ರಶಸ್ತಿ’ಗೆ ಮೃದಂಗ ವಿದ್ವಾಂಸ ಎ.ವಿ. ಆನಂದ್ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಯು ₹ 5 ಲಕ್ಷ ನಗದು ಹಾಗೂ ಸರಸ್ವತಿ ಪುತ್ಥಳಿಯನ್ನು ಒಳಗೊಂಡಿದೆ. ಇದೇ 7ರಂದು ಮೈಸೂರಿನಲ್ಲಿ ನಡೆಯುವ ದಸರಾ ಉದ್ಘಾಟನಾ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಎಸಿಬಿ ಬಲೆಗೆ ಎಫ್‌ಡಿಎ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಸತಿ ಗೃಹಗಳಿಗೆ ಸರಬರಾಜು ಮಾಡಿದ ಪೀಠೋಪಕರಣದ ಬಿಲ್ ಪಾವತಿಗೆ ₹15 ಸಾವಿರ ಲಂಚ ಪಡೆಯುತ್ತಿದ್ದ ಬಿಬಿಎಂಪಿ ಕೇಂದ್ರ ಕಚೇರಿಯ ಉಪ ಆಯುಕ್ತರ ಆಡಳಿತ ವಿಭಾಗ ದಲ್ಲಿನ ಪ್ರಥಮ ದರ್ಜೆ ಸಹಾಯಕ ಎಚ್.ರಾಜು ಎಸಿಬಿ (ಭ್ರಷ್ಟಾಚಾರ ನಿಗ್ರಹ ದಳ) ಬಲೆಗೆ ಬಿದ್ದಿದ್ದಾರೆ.

ತಾವರೆಕೆರೆಯಲ್ಲಿನ ವಸತಿ ಗೃಹಕ್ಕೆ ಶೇಷಾದ್ರಿಪುರದ ನಿವಾಸಿಯೊಬ್ಬರು ಪೀಠೋಪಕರಣ ಸರಬರಾಜು ಮಾಡಿದ್ದರು. ಅದರ ಬಾಕಿ ಬಿಲ್ ಪಾವತಿಗೆ ರಾಜು ಲಂಚ ಪಡೆಯುವಾಗ ದಾಳಿ ನಡೆಸಿ ಬಂಧಿಸಲಾಗಿದೆ ಎಂದು ಎಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ನಾಳೆಯಿಂದ ವಿವಿಧೆಡೆ ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಸ್ಕಾಂ ವಿದ್ಯುತ್ ಕೇಂದ್ರಗಳಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ಅ.7ರಿಂದ 9ರವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ವ್ಯತ್ಯಯವಾಗುವ ಸ್ಥಳಗಳು: 7ರಂದು ದೇವರಬೀಸನಹಳ್ಳಿ, ಬೆಳ್ಳಂದೂರು ರಸ್ತೆ, ಕೈಕೊಂಡ್ರಹಳ್ಳಿ, ಸರ್ಜಾಪುರ ಮುಖ್ಯರಸ್ತೆ, ಕಸವನಹಳ್ಳಿ, ಇಬ್ಬಲೂರು, ಹರಳೂರು ರಸ್ತೆ, 8ರಂದು ಬೆಳ್ತೂರು, ಶಂಕರಪುರ, ಕಾಡುಗೋಡಿ, ಚನ್ನಸಂದ್ರ, ಪಟ್ಟಂದೂರು ಬಡಾವಣೆ, ಹಗದೂರು, ಇಮ್ಮಡಿಹಳ್ಳಿ ಮುಖ್ಯರಸ್ತೆ, ಗಾಂಧಿಪುರ, ವೈಟ್‌ಫೀಲ್ಡ್ ಮುಖ್ಯರಸ್ತೆ, ಎಚ್‌ಎಎಲ್ ಮೂರನೇ ಹಂತ, ಜೀವನ್‌ಬಿಮಾನಗರ, ಮುನಿಸ್ವಾಮಿ ಬಡಾವಣೆ, ಸುಧಾಮ ನಗರ, ಹೊಸ ತಿಪ್ಪಸಂದ್ರ, ಬಿಡಿಎ ಬಡಾವಣೆ (ಬೆಳಿಗ್ಗೆ 10ರಿಂದ ಸಂಜೆ 5). 9ರಂದು ರಾಮಯ್ಯ ಬಡಾವಣೆ, ಮಂಜುನಾಥ ನಗರ, ವಿನಾಯಕ ನಗರ, ಮಹಾಲಕ್ಷ್ಮಿ ಬಡಾವಣೆ, ಹೆಸರಘಟ್ಟ ಮುಖ್ಯರಸ್ತೆ, ಸೋಪ್ ಫ್ಯಾಕ್ಟರಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳು. (ಬೆಳಿಗ್ಗೆ 11ರಿಂದ ಮಧ್ಯಾಹ್ನ 1).

ಮಸೀದಿಗಳಲ್ಲಿನ ಧ್ವನಿವರ್ಧಕಗಳಿಂದ ಶಬ್ದ ಮಾಲಿನ್ಯ ಆರೋಪ

ಆಕ್ಷೇಪಣೆಗೆ ಕಾಲಾವಕಾಶ ಕೋರಿಕೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ
- ನವೆಂಬರ್ 16ಕ್ಕೆ ವಿಚಾರಣೆ ಮುಂದೂಡಿಕೆ

ಬೆಂಗಳೂರು: ‘ಮಸೀದಿಗಳ ಧ್ವನಿವರ್ಧಕಗಳಿಂದ ಶಬ್ದಮಾಲಿನ್ಯ ಉಂಟಾಗುತ್ತಿದೆ ಎಂದು ಆರೋಪಿಸಿದ ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು ನಾಲ್ಕು ವಾರ ಕಾಲಾವಕಾಶ ಬೇಕು’ ಎಂದು ರಾಜ್ಯ ಸರ್ಕಾರವು ಹೈಕೋರ್ಟ್‌ಗೆ ಮನವಿ ಮಾಡಿದೆ.

ಈ ಕುರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

‘ಮುಂದಿನ ವಿಚಾರಣೆ ದಿನದಂದು ಈ ಅರ್ಜಿಯ ವಿಚಾರಣಾ ಮಾನ್ಯತೆಯನ್ನು ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ನಿರ್ದೇಶನಗಳ ಪ್ರಕಾರ ಪರಿಶೀಲಿಸಲಾಗುವುದು’ ಎಂದು ತಿಳಿಸಿದ ನ್ಯಾಯಪೀಠ, ನವೆಂಬರ್ 16ಕ್ಕೆ ವಿಚಾರಣೆ ಮುಂದೂಡಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಶ್ರೀಧರಪ್ರಭು, ‘ಶಬ್ದ ಮಾಲಿನ್ಯ ನಿಯಂತ್ರಣ ನಿಯಮಗಳು-2000’ ಅನ್ವಯ ಲಿಖಿತ ಪರವಾನಿಗೆ ಪಡೆಯದ ಹೊರತು ಧ್ವನಿವರ್ಧಕಗಳನ್ನು ಬಳಸುವುದಿಲ್ಲ ಎಂದು ಸ್ಪಷ್ಟಪಡಿಸಿ ಪ್ರಮಾಣಪತ್ರ ಸಲ್ಲಿಸುವಂತೆ ಥಣಿಸಂದ್ರ ಹಾಗೂ ಸುತ್ತಲಿನ 16 ಮಸೀದಿಗಳಿಗೆ ನ್ಯಾಯಾಲಯ ನಿರ್ದೇಶನ ನೀಡಿತ್ತು’ ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ಮಸೀದಿಗಳ ಆಡಳಿತ ಮಂಡಳಿ ಪರ ವಕೀಲರು, ’ಎಲ್ಲಾ 16 ಮಸೀದಿಗಳಲ್ಲಿ ಶಬ್ದ ಮಿತಿ ನಿಯಂತ್ರಿಸುವ ಶಬ್ದ ಮತ್ತು ನಿಯಂತ್ರಣ ಮಾಪಕಗಳನ್ನು ಅಳವಡಿಸಲಾಗಿದೆ. ಒಂದೊಮ್ಮೆ ಮಿತಿಗಿಂತ ಅಧಿಕ ಶಬ್ದ ಉಂಟಾದರೆ ಅದು ನೇರವಾಗಿ ಸಂಬಂಧಪಟ್ಟ ಪೊಲೀಸ್ ಠಾಣೆಯ ಗಮನಕ್ಕೆ ಬರುತ್ತದೆ. ಆಗ ಪೊಲೀಸರು ಕ್ರಮ ಕೈಗೊಳ್ಳುತ್ತಾರೆ. ಅಲ್ಲದೇ ಧ್ವನಿವರ್ಧಕಗಳ ಬಳಕೆಗೆ ಲಿಖಿತ ಪರವಾನಿಗೆ ಪಡೆದುಕೊಳ್ಳಲಾಗಿದೆ’ ಎಂಬ ಅಂಶಗಳನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಪಿ.ರಾಕೇಶ್ ಮತ್ತು ಅಯ್ಯಪ್ಪ ದಾಸ್ ಬಾಲಗೋಪಾಲ್ ಸೇರಿದಂತೆ ಥಣಿಸಂದ್ರ ಮುಖ್ಯ ರಸ್ತೆಯ ಐಕಾನ್ ಅಪಾರ್ಟ್‌ಮೆಂಟ್‌ನ 32 ನಿವಾಸಿಗಳು ಸುತ್ತಲಿನ 16 ಮಸೀದಿಗಳ ವಿರುದ್ಧ ಈ ಅರ್ಜಿ ಸಲ್ಲಿಸಿದ್ದಾರೆ.

ಇನ್ನು ಬೆರಳ ತುದಿಯಲ್ಲಿ ಸಿಎಂಗೆ ಇಲಾಖೆಗಳ ಮಾಹಿತಿ

‘ಸಿಎಂ ಡ್ಯಾಷ್ ಬೋರ್ಡ್’ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ಕಚೇರಿಯಲ್ಲಿರುವ ಮಾದರಿಯಲ್ಲಿ ಡಿಜಿಟಲ್ ವೇದಿಕೆಯಲ್ಲಿ ವಿವಿಧ ಇಲಾಖೆಗಳ ಪ್ರಗತಿ ಮಾಹಿತಿ ನೀಡುವ ‘ಸಿಎಂ ಡ್ಯಾಷ್ ಬೋರ್ಡ್’ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಗಳವಾರ ಚಾಲನೆ ನೀಡಿದರು.

ಆ ಮೂಲಕ, ಇನ್ನು ಮುಂದೆ ವಿವಿಧ ಇಲಾಖೆಗಳ ಪ್ರಗತಿಯಲ್ಲಿರುವ ಯೋಜನೆಗಳ ಮಾಹಿತಿಯನ್ನು ಕ್ಷಣಾರ್ಧದಲ್ಲಿ ವೀಕ್ಷಿಸಬಹುದಾಗಿದೆ. ಈ ವ್ಯವಸ್ಥೆಗೆ ಚಾಲನೆ ನೀಡಿ, ಅದರ ಮೂಲಕ ಮುಖ್ಯಮಂತ್ರಿ ಕಂದಾಯ, ಬಿಬಿಎಂಪಿ, ಇಂಧನ, ಶಿಕ್ಷಣ, ವಸತಿ, ಗ್ರಾಮೀಣಾಭಿವೃದ್ಧಿ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸಿದರು.

ವಿವಿಧ ಇಲಾಖೆಗಳ ಪ್ರಮುಖ ಕಾರ್ಯಕ್ರಮಗಳ ಮಾಹಿತಿಯನ್ನು ಡ್ಯಾಷ್ ಬೋರ್ಡಿನಲ್ಲಿ ದಾಖಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ ಮುಖ್ಯಮಂತ್ರಿ, ‘ಮಾಹಿತಿ ದಾಖಲಿಸುವಾಗ ಸ್ಪಷ್ಟತೆ, ನಿಖರತೆ ಇರಬೇಕು. ನೋಡಲ್ ಅಧಿಕಾರಿಗಳು ಮತ್ತು ಸರ್ಕಾರದ ಹಂತದಲ್ಲಿ ಇಲಾಖೆಗಳ ಮುಖ್ಯಸ್ಥರು ಈ ಮಾಹಿತಿ ಕುರಿತು ವಿಶೇಷ ಆಸಕ್ತಿ ವಹಿಸಬೇಕು’ ಎಂದು ಸಲಹೆ ನೀಡಿದರು.

ಆರೋಗ್ಯ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್, ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ಮುಖ್ಯಮಂತ್ರಿಯ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್ ಇದ್ದರು.

ಶಾಸಕಿ ಲಕ್ಷ್ಮಿ ಹೆಬ್ಬಾಳಕರ ವಿರುದ್ಧ ಅವಹೇಳನಕಾರಿ ಹೇಳಿಕೆ: ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಳಗಾವಿ ಗ್ರಾಮೀಣ ಕ್ಷೇತ್ರದ ಶಾಸಕಿ ಲಕ್ಷ್ಮಿ ಹೆಬ್ಬಾಳಕರ ವಿರುದ್ಧ ಬಿಜೆಪಿ ಗ್ರಾಮಾಂತರ ಜಿಲ್ಲಾ ಘಟಕದ ಅಧ್ಯಕ್ಷ ಸಂಜಯ ಪಾಟೀಲ ನೀಡಿರುವ ಹೇಳಿಕೆ ಖಂಡನೀಯ. ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಮಹಿಳಾ ಘಟಕ ಹಾಗೂ ಚೆನ್ನಮ್ಮ ಬಳಗದ ಅಧ್ಯಕ್ಷೆ ವೀಣಾ ಕಾಶಪ್ಪನವರ್ ಒತ್ತಾಯಿಸಿದರು.

ಈ ಸಂಬಂಧ ಮಹಿಳಾ ಆಯೋಗದ ಅಧ್ಯಕ್ಷೆ ಆರ್.ಪ್ರಮೀಳಾ ನಾಯ್ಡು ಅವರಿಗೆ ಮಂಗಳವಾರ ದೂರು ನೀಡಿದ ಬಳಿಕ ಅವರು ಮಾತನಾಡಿದರು.

'ಬಿಜೆಪಿಯವರು ತಾವು ಈ ದೇಶದ ಸಂಸ್ಕೃತಿಯ ರಕ್ಷಕರು ಎಂದು ಬಿಂಬಿಸಿಕೊಳ್ಳುತ್ತಾರೆ. ಮಹಿಳೆಯರನ್ನು ಪೂಜಿಸುವುದಾಗಿ ಹೇಳುತ್ತಾರೆ. ಆದರೆ, ಆ ಪಕ್ಷದ ನಾಯಕರು ಮಹಿಳೆಯರ ಕುರಿತು ಕೀಳುಮಟ್ಟದ ಹೇಳಿಕೆಗಳನ್ನು ನೀಡುತ್ತಾರೆ. ಇದು ಆ ಪಕ್ಷದ ಸಂಸ್ಕೃತಿಯನ್ನು ಬಿಂಬಿಸುತ್ತದೆ. ಹೆಣ್ಣು ಮಗಳೊಬ್ಬಳು ಕಷ್ಟಪಟ್ಟು ಶಾಸಕಿಯಾಗಿದ್ದಾರೆ. ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದಾರೆ. ಅವರ ಏಳ್ಗೆ ಸಹಿಸದೇ ಅವರ ವಿರುದ್ಧ ನಿಕೃಷ್ಟವಾಗಿ ಮಾತನಾಡುವುದು ಎಷ್ಟು ಸರಿ. ಅವರ ಮನೆಯ ಹೆಣ್ಣು ಮಕ್ಕಳ ಜೊತೆಗೂ ಸಂಜಯ ಪಾಟೀಲ ಹೀಗೆ ನಡೆದುಕೊಳ್ಳುತ್ತಾರಾ' ಎಂದು ಪ್ರಶ್ನಿಸಿದರು.

'ರಾಜ್ಯದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಹೆಚ್ಚುತ್ತಿದೆ. ಅದನ್ನು ನಿಯಂತ್ರಿಸಲು ಬಿಜೆಪಿ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ. ಸಂಜಯ ಪಾಟೀಲ ವಿರುದ್ಧ ಕ್ರಮ ತೆಗೆದುಕೊಂಡಿದ್ದಾರೆಯೇ. ಮಹಿಳೆಯರು ರಾಜಕೀಯ ಕ್ಷೇತ್ರಕ್ಕೆ ಕಾಲಿಡುವುದು ತಪ್ಪೇ. ಸಂಜಯ ಪಾಟೀಲ ಬಹಿರಂಗ ಕ್ಷಮೆಯಾಚಿಸಬೇಕು. ಇಲ್ಲದಿದ್ದರೆ ರಾಜ್ಯದಾದ್ಯಂತ ಹೋರಾಟ ಮಾಡಲಾಗುತ್ತದೆ' ಎಂದು ಎಚ್ಚರಿಸಿದರು.

'ಈ ಬಗ್ಗೆ ಮಾಹಿತಿ ಪಡೆದು ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ. ಮಹಿಳೆಯರ ಹಕ್ಕಿಗೆ ಚ್ಯುತಿಯಾದರೆ ಮಹಿಳಾ ಆಯೋಗ ಕೈಕಟ್ಟಿ ಕೂರುವುದಿಲ್ಲ. ಹೆಣ್ಣು ಮಕ್ಕಳನ್ನು ಅಗೌರವದಿಂದ ನಡೆಸಿಕೊಳ್ಳುವುದು ತಪ್ಪು' ಎಂದು ಪ್ರಮೀಳಾ ನಾಯ್ಡು ಹೇಳಿದರು.

ಜಯನಗರ ಸುತ್ತಮುತ್ತಲ ಪ್ರದೇಶದ ಪಾದಚಾರಿ ಮಾರ್ಗಗಳಲ್ಲಿ ವಾಹನ ನಿಲುಗಡೆ

ವರದಿ ಸಲ್ಲಿಸಿ: ಬಿಬಿಎಂಪಿಗೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಯನಗರ ಸುತ್ತಮುತ್ತಲ ಪ್ರದೇಶದ ಪಾದಚಾರಿ ಮಾರ್ಗಗಳಲ್ಲಿ ನಿಲುಗಡೆ ಮಾಡಲಾಗುವ ವಾಹನಗಳ ತೆರವು ವಿಚಾರಕ್ಕೆ ಸಂಬಂಧಿಸಿದಂತೆ ಕ್ರಮ ಕೈಗೊಂಡು ನಾಲ್ಕು ವಾರಗಳಲ್ಲಿ ವರದಿ ಸಲ್ಲಿಸಿ' ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಹೈಕೋರ್ಟ್ ನಿರ್ದೇಶಿಸಿದೆ.

ಈ ಕುರಿತಂತೆ 'ಲೆಟ್ಜ್ ಕಿಟ್ ಫೌಂಡೇಷನ್' ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ಪೀಠ ಮಂಗಳವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಕೀಲ ಪುತ್ತಿಗೆ ರಮೇಶ್, 'ಬಿಬಿಎಂಪಿ ವ್ಯಾಪ್ತಿಯಲ್ಲಿನ ಪಾದಚಾರಿ ಮಾರ್ಗಗಳ ಒತ್ತುವರಿ ತೆರವು ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಲೇ ಇದೆ' ಎಂದು ಆಕ್ಷೇಪಿಸಿದರು.

'ಜಯನಗರ ಪ್ರದೇಶದಲ್ಲಿ ಪಾದಚಾರಿ ಮಾರ್ಗಗಳ ಒತ್ತುವರಿ ತೆರವುಗೊಳಿಸಲಾಗಿದೆ ಎಂದು ಬಿಬಿಎಂಪಿ ಪ್ರಮಾಣಪತ್ರ ಸಲ್ಲಿಸಿತ್ತು. ಆದರೆ, ಅಲ್ಲಿ ತೆರವು ಕಾರ್ಯ ನಡೆದಿಲ್ಲ. ಮಾಮೂಲಿನಂತೆ ಪಾದಚಾರಿ ಮಾರ್ಗಗಳಲ್ಲಿ ವಾಹನ ನಿಲುಗಡೆ ಮಾಡಲಾಗುತ್ತಿದೆ' ಎಂದು ಫೋಟೊ ಸಮೇತ ದಾಖಲೆಗಳನ್ನು ನ್ಯಾಯಪೀಠಕ್ಕೆ ನೀಡಿದರು.

ಅರ್ಜಿದಾರರ ಆಕ್ಷೇಪಕ್ಕೆ ಪ್ರತಿಕ್ರಿಯಿಸಿದ ಬಿಬಿಎಂಪಿ ಪರ ವಕೀಲರು, 'ಈ ಹಿಂದೆ ಅರ್ಜಿದಾರರು ನೀಡಿದ್ದ ಫೋಟೊಗಳನ್ನು ಆಧರಿಸಿ ತೆರವು ಕಾರ್ಯ ನಡೆಸಲಾಗಿತ್ತು. ವಾಹನಗಳ ಮಾಲೀಕರಿಗೆ ನೋಟಿಸ್ ಕೂಡಾ ನೀಡಲಾಗಿತ್ತು. ಆದರೆ, ತೆರವು ಮಾಡಲಾದ ಜಾಗಗಳಲ್ಲಿ ಕೆಲವೆಡೆ ಕುಂಡಗಳನ್ನು ಇರಿಸಲಾಗಿದೆ. ಆದ್ದರಿಂದ, ಈ ಕುರಿತಂತೆ ಅಧಿಕಾರಿಗಳಿಂದ ಹೆಚ್ಚಿನ ಮಾಹಿತಿ ಪಡೆದು ವಿವರ ಸಲ್ಲಿಸಲು ಕಾಲಾವಕಾಶ ನೀಡಬೇಕು' ಎಂದು ಕೋರಿದರು.

ಇದನ್ನು ಮನ್ನಿಸಿದ ನ್ಯಾಯಪೀಠ, 'ಅರ್ಜಿದಾರರು ಫೋಟೊದಲ್ಲಿ ತಿಳಿಸಿರುವ ಜಾಗಗಳಲ್ಲಿ ಪಾದಚಾರಿ ಒತ್ತುವರಿ ತೆರವು ಕಾರ್ಯ ಕೈಗೊಳ್ಳಲಾಗುವ ಕ್ರಮಗಳ ಬಗ್ಗೆ ನಾಲ್ಕು ವಾರಗಳಲ್ಲಿ ಅನುಪಾಲನಾ ವರದಿ ಸಲ್ಲಿಸಿ' ಎಂದು ಬಿಬಿಎಂಪಿಗೆ ಸೂಚಿಸಿ ನವೆಂಬರ್ 12ಕ್ಕೆ ವಿಚಾರಣೆ ಮುಂದೂಡಿದೆ.

ಅರ್ಜಿ ವಿಲೇವಾರಿ: ಪಾದಚಾರಿ ಮಾರ್ಗಗಳ ಒತ್ತುವರಿ ತೆರವು ಕೋರಿ ವಕೀಲ ಡಿ.ಎಸ್.ರಾಮಚಂದ್ರ ರೆಡ್ಡಿ ಸಲ್ಲಿಸಿದ್ದ ಪಿಐಎಲ್ ಅನ್ನು ನ್ಯಾಯಪೀಠ ಇದೇ ವೇಳೆ ವಿಲೇವಾರಿ ಮಾಡಿದೆ.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲ ಎ.ವಿಜಯಕುಮಾರ್ ಪಾಟೀಲ್, 'ಪಾದಚಾರಿ ಮಾರ್ಗಗಳಲ್ಲಿ ವಾಹನ ನಿಲುಗಡೆ ಮಾಡುವವರ ವಿರುದ್ಧ ಮೋಟಾರು ವಾಹನ ಕಾಯ್ದೆ ಅಡಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಿಕೊಂಡು ಕ್ರಮ ಕೈಗೊಳ್ಳಲು ಸರ್ಕಾರ ಹಾಗೂ ಬಿಬಿಎಂಪಿ ಈಗಾಗಲೇ ಸೂಕ್ತ ಆದೇಶಗಳನ್ನು ಹೊರಡಿಸಿವೆ. ಆದ್ದರಿಂದ, ಈ ಅರ್ಜಿಯನ್ನು ಇತ್ಯರ್ಥಪಡಿಸಬಹುದು' ಎಂದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಅರ್ಜಿ ವಿಲೇವಾರಿ ಮಾಡಿದೆ.

ಆಹಾರ ಕಿಟ್ ವಿತರಣೆ

ರಾಜಾಜಿನಗರ-ಕಾಮಾಕ್ಷಿಪಾಳ್ಯ ಭಾಗದ ಪ್ರದೇಶಗಳಲ್ಲಿ ಭಾರಿ ಮಳೆಯಿಂದ ಮನೆ ಕಳೆದುಕೊಂಡು ಸಂತ್ರಸ್ತರಾದ 600ಕ್ಕೂ ಹೆಚ್ಚು ಕುಟುಂಬಗಳಿಗೆ ರಾಜಾಜಿನಗರ ಕಾಂಗ್ರೆಸ್ ಮುಖಂಡ ರಘುವೀರ್ ಎಸ್. ಗೌಡ ಅವರು ಆಹಾರಧಾನ್ಯಗಳ ಕಿಟ್ ವಿತರಿಸಿದರು

ಪ್ರಜಾವಾಣಿ ಚಿತ್ರ

ಸ್ಥಾನಿಕ ವೈದ್ಯರ ಸೇವೆ ಬಹಿಷ್ಕಾರ ನಾಳೆ

ಬೆಂಗಳೂರು: ಕೋವಿಡ್ ಅಪಾಯ ಭತ್ಯೆ ಬಿಡುಗಡೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿರುವ ಸ್ಥಾನಿಕ ವೈದ್ಯರು, ಇದೇ ಗುರುವಾರ (ಅ.7) ಬೆಳಿಗ್ಗೆ 9ರಿಂದ ಸಂಜೆ 4 ಗಂಟೆಯವರೆಗೆ ಸೇವೆ ಬಹಿಷ್ಕರಿಸುವುದಾಗಿ ಘೋಷಿಸಿದ್ದಾರೆ.

'ತುರ್ತು ಚಿಕಿತ್ಸೆ, ತೀವ್ರ ನಿಗಾ ಘಟಕ ಸೇವೆ ಹಾಗೂ ಕೋವಿಡ್ ಚಿಕಿತ್ಸೆಯ ಮೇಲೆ ಸೇವಾ ಬಹಿಷ್ಕಾರ ಪರಿಣಾಮ ಬೀರದು. ಈ ಸೇವೆಯಲ್ಲಿರುವವರು ಎಂದಿನಂತೆ ಕರ್ತವ್ಯ ನಿರ್ವಹಿಸಲಿದ್ದಾರೆ' ಎಂದು ಕರ್ನಾಟಕ ಸ್ಥಾನಿಕ ವೈದ್ಯರ ಸಂಘ ತಿಳಿಸಿದೆ.

'ಕೋವಿಡ್ ಎರಡನೇ ಅಲೆಯಿಂದಾಗಿ ಹಲವಾರು ಜನರು ಸಮಸ್ಯೆ ಎದುರಿಸಿದ್ದಾರೆ. ಆಸ್ಪತ್ರೆಗಳಲ್ಲಿ ಹಾಸಿಗೆಗಳು ಭರ್ತಿಯಾಗಿದ್ದರಿಂದ ರೋಗಿಗಳಿಗೆ ಚಿಕಿತ್ಸೆ ಒದಗಿಸುವುದು ವೈದ್ಯರಿಗೂ ಸವಾಲಾಗಿತ್ತು. ಈ ಅವಧಿಯಲ್ಲಿ ಸೋಂಕಿತರನ್ನು ಉಳಿಸಿಕೊಳ್ಳಲು ನಮ್ಮ ವೈದ್ಯರು ಹಗಲಿರುಳು ಶ್ರಮಿಸಿದ್ದಾರೆ. ನಮ್ಮ ಸೇವೆಗೆ ಸರ್ಕಾರವು ಕೋವಿಡ್ ಅಪಾಯ ಭತ್ಯೆ ನೀಡುವುದಾಗಿ ಈ ಹಿಂದೆ ಘೋಷಿಸಿತ್ತು. ಆದರೆ, ಈವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ಸಂಘದ ಅಧ್ಯಕ್ಷೆ ಡಾ. ನಮ್ರತಾ ಸಿ. ಬೇಸರ ವ್ಯಕ್ತಪಡಿಸಿದ್ದಾರೆ.

'ಕೋವಿಡ್ ಪೀಡಿತರಿಗೆ ಗುಣಮಟ್ಟದ ಚಿಕಿತ್ಸೆ ನೀಡಿ, ಸಾವಿನ ಪ್ರಮಾಣ ತಗ್ಗಿಸುವಲ್ಲಿ ಸ್ಥಾನಿಕ ವೈದ್ಯರು ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಹೀಗಾಗಿ, ಸರ್ಕಾರ ಕೂಡಲೇ ಕೋವಿಡ್ ಅಪಾಯ ಭತ್ಯೆ ಬಿಡುಗಡೆಗೊಳಿಸಬೇಕು' ಎಂದು ಆಗ್ರಹಿಸಿದ್ದಾರೆ.

'ಕೋವಿಡ್ ಸಂದರ್ಭದಲ್ಲಿ ಶ್ರಮಿಸಿದ ಸ್ಥಾನಿಕ ವೈದ್ಯರ ಸೇವೆ ಪರಿಗಣಿಸಿ, ಶೈಕ್ಷಣಿಕ ಶುಲ್ಕವನ್ನು ಪುನರ್ ಪರಿಷ್ಕರಿಸಬೇಕು' ಎಂದು ಮನವಿ ಮಾಡಿದ್ದಾರೆ.

ರಂಗಕರ್ಮಿ ಪ್ರಸನ್ನ ಅಭಿಮತ • ಪವಿತ್ರ ವಸ್ತ್ರ ಅಭಿಯಾನ

'ಕೈಮಗ್ಗ ಉತ್ಪನ್ನದಿಂದ ಉದ್ಯೋಗ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೈಮಗ್ಗ ಉತ್ಪನ್ನಗಳ ಬಳಕೆಯಿಂದ ಹಳ್ಳಿ ಹಳ್ಳಿಗಳಲ್ಲಿಯೂ ಉದ್ಯೋಗ ಸೃಷ್ಟಿಯಾಗುತ್ತದೆ. ಹಾಗಾಗಿ, 'ಪವಿತ್ರವಸ್ತ್ರ ಅಭಿಯಾನ'ವನ್ನು ಹಮ್ಮಿಕೊಳ್ಳಲಾಗಿದೆ' ಎಂದು ರಂಗಕರ್ಮಿ ಪ್ರಸನ್ನ ತಿಳಿಸಿದರು.



ಪ್ರಸನ್ನ

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಚರಕ, ದೇಸಿ, ಅಖಿಲ ಭಾರತ ಕೈಮಗ್ಗ ಸಂಘಟನೆಗಳ ಒಕ್ಕೂಟ ಹಾಗೂ ಗ್ರಾಮ ಸೇವಾ ಸಂಘ ಒಟ್ಟಾಗಿ ಇದೇ 6ರಿಂದ 10ರವರೆಗೆ ಕುಮಾರಕೃಪಾ ರಸ್ತೆಯಲ್ಲಿರುವ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ 'ಪವಿತ್ರವಸ್ತ್ರ ಅಭಿಯಾನ'ವನ್ನು ಆಯೋಜಿಸಿವೆ. ಈ ಅಭಿಯಾನವನ್ನು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಉದ್ಘಾಟಿಸಲಿದ್ದಾರೆ. ಕರಕುಶಲ ಹಾಗೂ ಕೈಮಗ್ಗದ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಬೆಳಿಗ್ಗೆ 10ರಿಂದ ರಾತ್ರಿ 8 ಗಂಟೆಯವರೆಗೆ ನಡೆಯುತ್ತದೆ' ಎಂದು ಹೇಳಿದರು.

'ಖಾದಿ ಮತ್ತು ಕೈಮಗ್ಗ ಎನ್ನುವುದು ಪವಿತ್ರವಾದ ಬ್ರ್ಯಾಂಡ್. ಇದರ ಕಲಬೆರಕೆಯಿಂದ ನೂಲುಗಾರ್ತಿಯರು ಹಾಗೂ ನೇಕಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇದಕ್ಕೆ ಕಡಿವಾಣ ಹಾಕಿದರೆ ಮಾತ್ರ ಗ್ರಾಮೀಣ ಜನತೆಗೆ ನ್ಯಾಯ ಸಿಗಲಿದೆ. ಕೋವಿಡ್ ಕಾಣಿಸಿಕೊಂಡ ಬಳಿಕ ರೈತರು, ಕುಶಲಕರ್ಮಿಗಳು ಹಾಗೂ ಕಾರ್ಮಿಕರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಮಗ್ಗಗಳು ಹಾಗೂ ಸಣ್ಣ ಕಾರ್ಖಾನೆಗಳು ಸ್ಥಗಿತಗೊಂಡಿವೆ. ಲಕ್ಷಾಂತರ ಮೀಟರ್‌ಗಳಷ್ಟು ಬಟ್ಟೆಗಳು ಮಾರಾಟವಾಗದೆ ಉಳಿದಿವೆ' ಎಂದು ಬೇಸರ ವ್ಯಕ್ತಪಡಿಸಿದರು.

ಚರಕ ಸಂಸ್ಥೆಯ ಪದ್ಮಶ್ರೀ, ದೇಸಿ ಸಂಸ್ಥೆಯ ಕೃಷ್ಣ ಹಾಗೂ ಗ್ರಾಮಸೇವಾ ಸಂಘದ ಅಭಿಲಾಷ್ ಇದ್ದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Multiple Vacancy

NABARD CONSULTANCY SERVICES Pvt. Ltd.
(A wholly owned subsidiary of NABARD)
Corporate Office: NABARD Tower, 24 Rajendra Place New Delhi - 110125
Regional Office: 46, NABARD Towers, Kempegowda Rd, Bengaluru, Karnataka 560009

RECRUITMENT NOTICE
(Advt Ref No: NABCONS/CO-HR/ 007/PBCS/2021-22 Dated: 06.10.2021)

Online applications are invited from Indian citizens for vacancies as Project Based Contract Staff for the posts: (i) State Coordinator (01 Post), (ii) Project Consultant – Finance (01 Post), (iii) Project Consultant – Finance & Recovery (01 Post), (iv) Project Consultant- IT & MIS (01 Post), (v) Project Consultant – M&E (01 Post) & (vi) Associate Project Consultant (06 Post) in Bengaluru, Karnataka for execution of DDU-GKY Projects. For detailed advertisement and instructions, visit website: http://www.nabcons.com/Recruitment.aspx
Last date for submission of online application: 15 October 2021
Sd/-
Managing Director

JOBS AVAILABLE at Dr. Giridhara Kaje's Prashanthi Ayurvedic Centre, 31/ 85, Chord Road, 2 nd block , Rajajinagar : Receptionists for Rajajinagar Hospital Branch Assistants for : Banasawadi & HSR Layout 20 to 40 years Any Degree or Diploma Male / Female Walk in Interview at Rajajinagar Hospital 9.10.2021, 9 am to 6 pm & 10.10.2021, 9 am to 1 pm

OPPORTUNITY FOR Retd Officials,Bankers, VRS, NRI, Teachers,Professionals, CAs. Earn Salary+Incentives.Call: 8095301555

Security & Detectives

SECURITY AGENCY Requires Experienced STAFF. MANAGER with Operation & Marketing knowledge. FIELD OFFICER with work experience, Controlling Units & Sites domaperfect@gmail.com Mobile: 98868-33540

Advertising Agency

WANTED OFFICE Boys (Field Work), DTP Operator, for advt. agency near Hanumanthnagar - 41618530, 6361942572

General

REQUIRED LADY Accountant Experience in Tally with TDS & GST, And Sales Executive's for Petroleum Products Salary Rs.35000/- on target + Incentive Contact: 080-25207889 7338084555 E-mail: glprojects7889@gmail.com

Part-Time Jobs

LIMITED MNC COMPANY Lost Job, Provide Work From Home Earn 30K to35K: 7019215243/ 9886641282

CEO

IESC
Infrastructure Equipment Skill Council, is seeking to hire **Chief Executive Officer** to provide strategic leadership to the organization.
Location : Bengaluru.
Qualification: B.E. preferably MBA .
Exp: Min 20 Yrs in Infra Equipment Sector with exposure to Customer Support & Skill development .
Job description visit : www.iescindia.com
Last Date: 18th October 2021.

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

Hospital & Medical Jobs

WANTED PHARMACISTS to work all over Karnataka (with Diploma in Pharmacy Certificate) plz send the CV to email: raghu_sgr2@yahoo.co.in / poojyaya2005@gmail.com/
Or only WhatsApp : 9845996744 / 9341366744

Marketing & Sales

LOOKING FOR Sales Staff in Bangalore Showroom with 6 to 8 years experience in Jewellery. Salary starting from 25000 up to 35000. Food and Accommodation shall be provided by the Company. Contact B.B. Jewellers 9986577790

WANTED YOUTHS (PUC/ Diploma/Degree) to market Medical Product. Monthly consolidated income Rs.28000 to 35000 plus petrol allowance. 2-Wheeler must. Interested Candidates Contact: 6302029764.

Situation Required

JOB REQUIRED
India/Gulf
30 years experienced Male B.Tech Engineer having exp in Repairs / Maintenance / Logistic / Purchase of Vehicles / Heavy Construction Equipment in large reputed Construction Industry **seeks suitable Senior Level Placement.**
(Sr. Manager/ GM/ Vice President-Plant) Contact. No. 9207603957.

Manager

MANAGER REQUIRED for Owners' Association of a prestigious Multistoried Commercial Building on M.G. Road, Bangalore. Candidate should be with adequate knowledge and experience in Managing and Co-ordinating activities of Building maintenance, Administration, Security, Accounts (Billing/ Collection/ Banking/ Taxes/ Audit), etc. He should have good communication skill in English, Kannada, etc. Total Salary can be about Rs. 4 to 5 Lakhs per annum depending upon the caliber of the candidate. Apply immediately with Bio-Data and mentioning salary expected to Email ID :1991bcoa@gmail.com

Teachers/ Professors

LOWRY ADVENTIST College Opp. to KR Puram Railway Station, Dooravaninagar, Bengaluru-560016. Job Openings for Asst./Assoc. Professors. Must have: Min 1 year work exp. and regular, full-time Bachelor's & Master's Degrees. Subjects & Qualifications: Commerce & Management (B.Com+M.Com), Computer Science (BCA+MCA), English (BA+MA in English). Email your updated CV to hr.lowryinstitutions@gmail.com. or Call:9886441913

WANTED IMMEDIATELY TEACHERS for CBSE SCHOOL: English, Social, Science, Maths, Environmental Science to teach in HIGH SCHOOL & PRIMARY Classes. Accommodation Provided. THE FLORENCE PUBLIC SCHOOL, Baragur, Sira Taluk, Tumkur District. Send your resume to: theflorencepublicschool@gmail.com /Contact: 9886855684, 6163986064

WANTED EXPERIENCED LECTURERS MCA/ M.Sc (CS)/ M.Tech(CS), M.Com, Reservation as per Government Norms, Attractive Salary, Contact Principal with original Certificates between 10.00 am and 1.00 pm, SREE VENKATESHWARA DEGREE COLLEGE, Krishnarajapuram, Bangalore-36. Ph: 9036068144, 7411135627

NEW FLORENCE English School, 8th Main, Shivanagar, Rajajinagar, Bengaluru-10, Requires Lady Teachers to handle Maths, Physics, Computer (High School): 9620396782/ 9845346754

LADY PE Teachers needed for Chitrakoota CBSE School in Nagarbhavi, Kengeri Ring Road, with high salary. Immediately or for the next academic year. Call: 7829647333 Email: chitrakootajobs@gmail.com WALK IN Welcome

WANTED LADY Teacher's for Primary for all Subjects Coffee Board Layout, Hebbal. Contact: 9008981637/ 22330003

REQUIRED ECONOMICS Faculty (Part-time/Full-time)for A Reputed PU College Near Yelahanka. Contact: 9738719365 hrmvs1992@gmail.com

St. Mary's Public School
SINCE 1983 Inspiring Excellence.
(Affiliated to Council for the I.C.S.E, New Delhi)
VACANCIES FOR 2021-22
MIDDLE SCHOOL TEACHERS
HINDI
Graduate/Post Graduate with B.Ed. and minimum 5 years' experience of teaching in an ICSE School.
Please send CV & Recent Passport size photo to hr@stmaryspublicschool.co.in
www.stmaryspublicschool.co.in
#13, Queens Road, Bengaluru - 560052

SECAB ENGLISH MEDIUM SCHOOL, Kadirenahalli, Bengaluru Phone: 080-42136268/ 99160-87586 Requires TEACHERS with Fluency in English, Hindi for Primary. Contact: between 10- 2 pm

TEACHERS REQUIRED For Higher and Primary Classes (All Subjects) Platonic School of Education 7th Cross,Magadi Road, Bengaluru-23 Contact: 7899877568

WANTED LECTURERS in Kannada, Hindi, Commerce and Librarian for Vidyavana College, Tirumalashettyhalli, Whitefield, Bengaluru. Contact: 9663389388, vidyavanahr@gmail.com

Wanted

REQUIRED TRANSLATOR, Thirteen Pages Hindi Matter to be TRANSLATED in ENGLISH. CONTACT: 8904793540 R.T. Nagar.

OTHERS

Medical

HOME NURSES available/ Wanted for Home/ Hospital/ Patient Care 24/7 MAJ Gandhinagar. Contact: 7022399993/ 6366883838

REAL ESTATE BUYING

Agricultural Land

Multiple Locations

WANTED AGRICULTURE Land, Extent 5 to 20 Acres, with good water source, in & around Devanahalli/ Kanakapura/ Mysore road. Contact: 8618531791.

Sites

Banashankari

WANTED BDA Sites BANASHANKARI 6th Stage, Anjanapura, Vishweshwaraiah Layout, Any Block, Immediate Settlement, Contact: 9945835569

REAL ESTATE SELLING

Industrial & Factory

Multiple Locations

SALE INDUSTRIAL Converted land 3280 sft & 6200 sft near JP Nagar Metro Station & 2,30,868 sft Near Airport 2nd toll adjacent to NH-7. Verna Developers, MG-Road 9353128035/ 9620253180

Tumkur Road

SALE, LANDS near Dobespet to Koratagere main raod facing. 250/ 100/ 30 acres. 9141326819, 9972636255

BUSINESS

Business to Business

Business

INVEST IN MSME to get 12 %interest per annum. contact info@innovativesliding.com

Dairy & Poultry

POULTRY/ DAIRY- Entry Level Training (every Sunday) Soya Doc Bulk available. Doctor Swamy- Mahi Nutrition- 9342247637

Business Offers

Finance

NRI'S INVESTMENT AndFinance AvailableOn LowInterest AgainstProperties, Land & Building,Sites,Flats, Converted& AgricultureLandsCall: 7411265189

FINANCE AGAINST Land & Building Properties Industries Schools Hospitals Projects & NRI Funds.7358729820

PUBLIC NOTICE

PUBLIC NOTICE

My Clients, **M/s. MAGNUS POWER PRIVATE LIMITED**, No.36, 14th Block, 2nd Stage, Nagarbhavi, BENGALURU-560072, have entered into a Sale transaction in respect of the Schedule Property with the following, for valuable sale consideration: after scrutinizing the Documents of Title pertaining to the Schedule Property

1) **Mrs. MUTHAMMA @ RADHAMMA**, D/o. Late Buddanna, residing Near Government School, 1st Cross, Rajendranagar Slum, Koramangala, Bengaluru-560047, represented by her GPA Holder,

2) **Mrs. BHAVYA. R**, W/o Mr. Chikkarevanna, Residing at No. 255/N, Chikka gowdanapalya, Thalagattapura Post, Bengaluru-560062. (GPA Holder)

Our Clients, M/s. Magnus Power Pvt Ltd., Bengaluru-560072, propose to buy the Schedule Property from the above mentioned persons. Anybody having any kind of objection for purchasing the Schedule Property may submit their objections with relevant records to the undersigned within 10 days from the date of this publication. If, however, no objection in writing is received for the proposed sale, the Parties mentioned above will proceed further with the execution and registration of the Sale Deed in favour of our Clients and also to take delivery of the vacant possession of the Schedule Property.

SCHEDULE

All that piece and parcel of immovable property bearing BDA Site No. 35, New No. 35/35 (New PID No.129-W1011-2), in the Layout formed by Bangalore Development Authority, 14th Block, 2nd Stage, Nagarabhavi, Bengaluru, measuring East to West: 18.00 (Eighteen) Meters, North to South: 12.00 (Twelve) Meters, in all measuring 216.00 Square Meters and bounded by East by : Site No. 26, West by : Road, North by : Site No. 36, and South by : Site No. 34.

Y. VENKATESH,
Advocate & Consultant
513, 8th Main, 4th Cross, Vijayanagar, BENGALURU - 560040
Mob.No.9880228960

ಎಚ್ಚರಿಕೆ ಸೂಚನೆ

ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವ ಎಚ್ಚರಿಕೆ ಸೂಚನೆ ಏನೆಂದರೆ, ಶ್ರೀ ರಾಜುನಾಥ್ ಬಿನ್ ಲೇಟ್ ಶ್ರೀ ತುಳೇಶ್ವರನಾಥ್, ವಿಳಾಸ: ಎಫ್‌ಸಿಐ ಡಿಪೋ, ಕಮರಗಾಂವ್, ಸರಬೋಯ್ ಬಾರಪೇಟ್, ಅಸ್ಸಾಂ-781317 ಇವರು ನಮ್ಮ ಕಕ್ಷಿದಾರರಾದ ಮೆ. ಸ್ಪೇಸ್ ಕಾನ್ಸೆಪ್ಟ್ ಇಂಟೀರಿಯರ್, ವಿಳಾಸ: ನಂ. 30/1, ಸೈಂಟ್ ಮಾರ್ಕ್ ಅಡ್ಡರಸ್ತೆ, ಬೆಂಗಳೂರು-560001, ಇವರಲ್ಲಿ ಸೈಟ್ ಸೂಪರ್‌ವೈಸರ್ ಎಂದು ಕಾರ್ಯನಿರ್ವಹಿಸುತ್ತಿದ್ದರು, ಆದರೆ ಸದರಿಯವರು ನಮ್ಮ ಕಕ್ಷಿದಾರರ ಕಚೇರಿಯನ್ನು 24/09/2021 ರಿಂದಲೇ ತೊರೆದಿದ್ದಾರೆ ಮತ್ತು ಅವರಿಗೆ ಮೆ. ಸ್ಪೇಸ್ ಕಾನ್ಸೆಪ್ಟ್ ಇಂಟೀರಿಯರ್ ಸಂಸ್ಥೆಯಲ್ಲಿ ಯಾವುದೇ ಹುದ್ದೆ ಇರುವುದಿಲ್ಲ. ಆದ್ದರಿಂದ ಸಾಮಾನ್ಯ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವ ಎಚ್ಚರಿಕೆ ಸೂಚನೆ ಏನೆಂದರೆ, ಮೆ. ಸ್ಪೇಸ್ ಕಾನ್ಸೆಪ್ಟ್ ಇಂಟೀರಿಯರ್‌ನ ಪ್ರತಿನಿಧಿಯಾಗಿದ್ದ ಶ್ರೀ ರಾಜುನಾಥ್ ರವರೊಂದಿಗೆ ಯಾವುದೇ ವ್ಯವಹಾರ ಮಾಡದಿರಿ ಮತ್ತು ಶ್ರೀ ರಾಜುನಾಥ್ ಇವರೊಂದಿಗೆ 24/09/2021ರ ನಂತರ ಯಾರಾದರೂ ನಮ್ಮ ಸಂಸ್ಥೆಯ ಹೆಸರಿನಲ್ಲಿ ಯಾವುದೇ ವ್ಯವಹಾರ ಕೈಗೊಂಡಿದ್ದಲ್ಲಿ, ಅಂತಹ ವಹಿವಾಟು ಅವನ/ ಅವಳ/ಅವರ ಸ್ವಂತದ ಜವಾಬ್ದಾರಿ ಯಾಗಿರುತ್ತದೆ ಮತ್ತು ಅದಕ್ಕೆ ಸಂಬಂಧಿತ ಖರ್ಚು, ವೆಚ್ಚ, ಶುಲ್ಕಗಳು ಕೂಡ ಅವರದೇ ಜವಾಬ್ದಾರಿ ಯಾಗಿರುತ್ತದೆ ಹಾಗೂ ನಮ್ಮ ಕಕ್ಷಿದಾರರಾದ ಮೆ. ಸ್ಪೇಸ್ ಕಾನ್ಸೆಪ್ಟ್ ಇಂಟೀರಿಯರ್ ಇವರು ಇದಕ್ಕೆ ಸಂಬಂಧಿಸಿದಂತೆ ಯಾವುದೇ ಜವಾಬ್ದಾರಿಗಳಿಗೆ ಹೊಣೆಯಾಗಿರುವುದಿಲ್ಲ.

ಸಹಿ/– ಯಾಸೀನ್ ಬಾಬು,
ಕೆ.ಎಂ. ಲೀಗಲ್ ಅಡ್ವೊಕೇಟ್ಸ್,
ನಂ. 1ಬಿ, 'ವಿಲೊಕ್ರಿಸಾ', ನಂ.14, ರೆಸ್ಟ್ ಹೌಸ್ ಕ್ರೆಸೆಂಟ್ ರೋಡ್, ಬೆಂಗಳೂರು-560 001.
ಫೋನ್: 080-25592786
ಇಮೇಲ್: kmlegaladvocates@gmail.com
ಸ್ಥಳ: ಬೆಂಗಳೂರು
ದಿನಾಂಕ: 05/10/2021

ADMISSION CORNER

RV Institute of Management
Rashtreeya Sikshana Samithi Trust – RV INSTITUTIONS
Autonomus Institution, Affiliated to Bengaluru City University | Approved by AICTE. NAAC 'A+' Accredited
Go, change the world
Register for **PGCET/KMAT 2021**
one week intensive coaching for **MBA** now & get admission in your dream institution..
Mode of coaching **Hybrid** (Offline in the Campus & Online platform - Zoom)
Date **25th October to 30th October 2021** (One Week)
Time **9.00am to 2.00pm** (on all days)
Registration fee **Rs.500/-** (Includes certificate & study material)
Scan QR code below to register online & pay the fee
LIMITED SEATS! Last date to register for the Coaching class is 23rd October, 2021
SCAN ME
Can Pay through G Pay PhonePe UPI Paytm
Top Rankers / Scorers may be considered for scholarships......
Please call: 90089 60025 / 080 42540300 for information about the RVIM PGCET/KMAT 2021 intensive coaching classes E-mail : rvimpgcet@gmail.com

ಎಚ್ಚರಿಕೆ ಸೂಚನೆ

ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವ ಎಚ್ಚರಿಕೆ ಸೂಚನೆ ಏನೆಂದರೆ, ಶ್ರೀ. ಶ್ರೀಕಾಂತ್ ಎನ್. (ಶ್ರೀಕಾಂತ್ ಜಾನ್) ಬಿನ್ ಶ್ರೀ. ನಾಗಪ್ಪ, ವಿಳಾಸ: ನಂ.170, ಸಿಂಧನೂರ ತಾಲ್ಲೂಕು, ಹಸಮಕಲ್, ಗುಡದೂರ್, ರಾಯಚೂರು, ಕರ್ನಾಟಕ-584124, ಇವರು ನಮ್ಮ ಕಕ್ಷಿದಾರರಾದ ಮೆ. ಸ್ಪೇಸ್ ಕಾನ್ಸೆಪ್ಟ್ ಇಂಟೀರಿಯರ್, ವಿಳಾಸ ನಂ. 30/1, ಸೈಂಟ್ ಮಾರ್ಕ್ ಅಡ್ಡರಸ್ತೆ, ಬೆಂಗಳೂರು-560001, ಇವರಲ್ಲಿ ಡ್ರಾಫ್ಟ್ಸ್‌ಮನ್ ಮತ್ತು ಇಂಟೀರಿಯರ್ ಡಿಸೈನರ್ ಎಂದು ಕಾರ್ಯ ನಿರ್ವಹಿಸುತ್ತಿದ್ದರು, ಆದರೆ ಸದರಿಯವರು ನಮ್ಮ ಕಕ್ಷಿದಾರರ ಕಚೇರಿಯನ್ನು 24/09/2021 ರಿಂದಲೇ ತೊರೆದಿದ್ದಾರೆ ಮತ್ತು ಅವರಿಗೆ ಮೆ. ಸ್ಪೇಸ್ ಕಾನ್ಸೆಪ್ಟ್ ಇಂಟೀರಿಯರ್ ಸಂಸ್ಥೆಯಲ್ಲಿ ಯಾವುದೇ ಹುದ್ದೆ ಇರುವುದಿಲ್ಲ. ಆದ್ದರಿಂದ ಸಾಮಾನ್ಯ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವ ಎಚ್ಚರಿಕೆ ಸೂಚನೆ ಏನೆಂದರೆ, ಮೆ. ಸ್ಪೇಸ್ ಕಾನ್ಸೆಪ್ಟ್ ಇಂಟೀರಿಯರ್‌ನ ಪ್ರತಿನಿಧಿಯಾಗಿದ್ದ ಶ್ರೀ. ಶ್ರೀಕಾಂತ್ ಎನ್ ರವರೊಂದಿಗೆ ಯಾವುದೇ ವ್ಯವಹಾರ ಮಾಡದಿರಿ ಮತ್ತು ಶ್ರೀ. ಶ್ರೀಕಾಂತ್ ಎನ್ ಇವರೊಂದಿಗೆ 24/09/2021ರ ನಂತರ ಯಾರಾದರೂ ನಮ್ಮ ಸಂಸ್ಥೆಯ ಹೆಸರಿನಲ್ಲಿ ಯಾವುದೇ ವ್ಯವಹಾರ ಕೈಗೊಂಡಿದ್ದಲ್ಲಿ, ಅಂತಹ ವಹಿವಾಟು ಅವನ/ ಅವಳ/ಅವರ ಸ್ವಂತದ ಜವಾಬ್ದಾರಿಯಾಗಿರುತ್ತದೆ ಮತ್ತು ಅದಕ್ಕೆ ಸಂಬಂಧಿತ ಖರ್ಚು, ವೆಚ್ಚ, ಶುಲ್ಕಗಳು ಕೂಡ ಅವರದೇ ಜವಾಬ್ದಾರಿಯಾಗಿರುತ್ತದೆ ಹಾಗೂ ನಮ್ಮ ಕಕ್ಷಿದಾರರಾದ ಮೆ. ಸ್ಪೇಸ್ ಕಾನ್ಸೆಪ್ಟ್ ಇಂಟೀರಿಯರ್ ಇವರು ಇದಕ್ಕೆ ಸಂಬಂಧಿಸಿದಂತೆ ಯಾವುದೇ ಜವಾಬ್ದಾರಿಗಳಿಗೆ ಹೊಣೆಯಾಗಿರುವುದಿಲ್ಲ.

ಸಹಿ/– ಯಾಸೀನ್ ಬಾಬು,
ಕೆ.ಎಂ. ಲೀಗಲ್ ಅಡ್ವೊಕೇಟ್ಸ್,
ನಂ. 1ಬಿ, 'ವಿಲೊಕ್ರಿಸಾ', ನಂ.14, ರೆಸ್ಟ್ ಹೌಸ್ ಕ್ರೆಸೆಂಟ್ ರೋಡ್, ಬೆಂಗಳೂರು-560 001.
ಫೋನ್: 080-25592786
ಇಮೇಲ್: kmlegaladvocates@gmail.com
ಸ್ಥಳ: ಬೆಂಗಳೂರು
ದಿನಾಂಕ: 05/10/2021

CHANGE OF NAME

I, GAURAV, Resident of #14, Rukmanipuram, Faizullahganj, Lucknow have changed my name from **GAURAV to GAURAV SHRIVASTAV** vide affidavit IN-KA16755807788210T dated 28/09/2021, before Notary S. Samuel Solomon, Bangalore.

I, YASH SANJAY KAROGAL, have sworn to an affidavit to the effect that his father's name is mentioned as SANJAY N. KAROGAL in death certificate in my School Records my father's name is shown as SANJAY KAROGAL both the names SANJAY KAROGAL and SANJAY N. KAROGAL are one and the same before notary B.R. Shashikala, Bangalore on 4.10.2021.

I, DANUSH STANLEY, aged about 25 years, son of Mr. M. Lawrence and Mrs. A. Stella, residing at No. 389, 4th Cross, 8th Main, Viveknagar, Bangalore 560047, have changed my name as STANLEY LAWRENCE, vide Affidavit dated 01.10.2021, sworn before Advocate & Notary Sri. K.V. Mani, Bangalore and hereafter, I shall be called and known as STANLEY LAWRENCE.

I, D. SARLA aged 44 years Wife of Ex- Army No. 777496N, Havelder, C. Magandiran Residing at #1082, 11th Cross, Swarna Nagar, Robertson Pet, KGF-563122, have changed my name from D. SARLA to D.SARALA vide affidavit dated 04/10/2021,before notary Thangraj. S, KGF.

EDUCATIONAL

Admission

DIRECT FINAL: LLB (Can Practice) B.Tech/ M.Tech/ Diploma/ B.Pharm/ D.Pharm/ MBA/ BBA/ BCA/ B.Sc (IT, CS)/ B.Com. LIMITED SEATS. Call: 9448460103/ 7093438248.

PERSONAL

Change of Name

JC681907H SUB Diwan Singh ASC Centre and College, daughter's name Records KUMARI NAVITA instead of NAVITA, Notary KV Mani, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH ಪ್ರಜಾವಾಣಿ **Classifieds**
EFFECTIVE FROM JUNE 3rd, 2020

DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಬಿಬಿಎಂಪಿ ವಲಯ ಆಯುಕ್ತರು, ಜಂಟಿ ಆಯುಕ್ತರೊಂದಿಗೆ ಮುಖ್ಯ ಆಯುಕ್ತರ ಸಭೆ

ಮಳೆ: ಮುನ್ನೆಚ್ಚರಿಕೆ ವಹಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆಗಾಲದಲ್ಲಿ ರಾಜಕಾಲುವೆ ನೀರು ಉಕ್ಕುವ ಸ್ಥಳಗಳನ್ನು ಗುರುತಿಸಿ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಂತೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ವಲಯ ಆಯುಕ್ತರು ಮತ್ತು ಜಂಟಿ ಆಯುಕ್ತರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಭಾನುವಾರ ರಾತ್ರಿ ಸುರಿದ ಮಳೆಯಿಂದ ಆಗಿರುವ ಅವಾಂತರಗಳ ಕುರಿತು ಸಭೆ ನಡೆಸಿದ ಅವರು, 'ಮಳೆ ಬೀಳುವ ಮುನ್ಸೂಚನೆ ಇದ್ದರೆ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಬೇಕು' ಎಂದು ತಿಳಿಸಿದರು.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಮಳೆ ಸಾಧಾರಣವಾಗಿದ್ದರೆ ರಾಜಕಾಲುವೆಗಳಲ್ಲಿ ನೀರು ಸರಾಗವಾಗಿ ಹರಿದು ಹೋಗುತ್ತದೆ. ಭಾನುವಾರ ಅಸಾಧಾರಣವಾಗಿ ಮಳೆ ಸುರಿದಿದ್ದರಿಂದ ಸಮಸ್ಯೆ ಆಗಿದೆ. 750 ರಾಜಕಾಲುವೆಗಳಲ್ಲಿ ಶೇ 50ರಷ್ಟು ಕಾಲುವೆಗಳನ್ನು ಎತ್ತರಿಸುವ ಕೆಲಸ 15 ವರ್ಷಗಳಲ್ಲಿ ಆಗಿದೆ. ಮುಂದಿನ ದಿನಗಳಲ್ಲೂ ಅನುದಾನದ ಲಭ್ಯತೆ ನೋಡಿಕೊಂಡು ಈ ಕೆಲಸ ಮುಂದುವರಿಯಲಿದೆ' ಎಂದರು.

'ಭಾನುವಾರದ ಮಳೆಗೆ ರಾಜರಾಜೇಶ್ವರಿನಗರ ಮತ್ತು ಪಶ್ಚಿಮ ವಲಯದಲ್ಲಿ ಹೆಚ್ಚಿನ ಸಮಸ್ಯೆಯಾಗಿದೆ. ಮುಂದಿನ ದಿನಗಳಲ್ಲಿ ಅದೇ ಜಾಗದಲ್ಲಿ ಸಮಸ್ಯೆ ಆಗದಂತೆ ಕ್ರಮ ಕೈಗೊಳ್ಳಲಾಗುವುದು. ಅಗತ್ಯ ಇರುವ ಕಡೆ ರಾಜಕಾಲುವೆ ತಡೆಗೋಡೆಗಳನ್ನು ಎತ್ತರಿಸಲಾಗುವುದು' ಎಂದು ಹೇಳಿದರು.

ಜೋರು ಮಳೆ ಬಂದರೆ ನೀರು ನುಗ್ಗುವ ಜಾಗವನ್ನು ಅಧಿಕಾರಿಗಳು ಗುರುತಿಸಿಕೊಂಡಿರುತ್ತಾರೆ. 585 ಕಡೆ ಈ ರೀತಿಯ ಅಪಾಯದ ಸ್ಥಳಗಳನ್ನು ಗುರುತು ಮಾಡಲಾಗಿತ್ತು. ತಡೆಗೋಡೆ ಎತ್ತರಿಸುವ ಕೆಲಸ ಮಾಡಲಾಗುತ್ತಿದ್ದು, ಸದ್ಯ ಅವುಗಳ ಸಂಖ್ಯೆ 185ಕ್ಕೆ ಇಳಿದಿದೆ ಎಂದು ವಿವರಿಸಿದರು.

'ಮನೆಗಳಿಗೆ ನೀರು ಮತ್ತು ಕೆಸರು ಮಣ್ಣು ತುಂಬಿಕೊಂಡು ಆಗಿರುವ ಸಮಸ್ಯೆ ಬಗ್ಗೆ ಅಧಿಕಾರಿಗಳು ಮನೆ-ಮನೆಗೆ ಭೇಟಿ ನೀಡಿ ಸರ್ವೆ ನಡೆಸುತ್ತಿದ್ದಾರೆ. ಎಷ್ಟು ನಷ್ಟವಾಗಿದೆ, ಎಷ್ಟು ಪರಿಹಾರ ನೀಡಬೇಕು ಎಂಬುದರ ಕುರಿತು ವರದಿ ಸಲ್ಲಿಸಲಿದ್ದಾರೆ. ಅದನ್ನು ಆಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ತಿಳಿಸಿದರು.

'ರಸ್ತೆ ಗುಂಡಿ ಮುಚ್ಚುವ ಕೆಲಸ ನಡೆಯುತ್ತಿದೆ. ಕೆಲವೆಡೆ ಮಳೆ ನೀರು ನಿಲ್ಲುವುದರಿಂದ ಸಮಸ್ಯೆ ಆಗುತ್ತಿದೆ. ಗುಂಡಿ ಮುಚ್ಚಲು ಆದ್ಯತೆ ವಹಿಸಿ ಕೆಲಸ ಮಾಡುತ್ತಿದ್ದೇವೆ' ಎಂದರು.

'ಫ್ಲೆಕ್ಸ್ ಅಳವಡಿಸಿದರೆ ಕ್ರಮ'

ಗೌರವ್ ಗುಪ್ತ

ನಗರದಲ್ಲಿ ಫ್ಲೆಕ್ಸ್ ಅಳವಡಿಕೆ ನಿಷೇಧಿಸಲಾಗಿದೆ. ಆದರೂ ಅಕ್ರಮವಾಗಿ ಫ್ಲೆಕ್ಸ್ ಅಳವಡಿಸಿದರೆ ಪ್ರಕರಣ ದಾಖಲಿಸಲಾಗುವುದು ಎಂದು ಗೌರವ್ ಗುಪ್ತ ತಿಳಿಸಿದರು.

'ಯಾರೇ ಫ್ಲೆಕ್ಸ್ ಅಳವಡಿಸಿದರೂ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು. ರಾಜರಾಜೇಶ್ವರಿನಗರದಲ್ಲಿ ಶಾಸಕರೇ ಅಳವಡಿಸಿದ್ದರೆ ಪರಿಶೀಲನೆ ನಡೆಸಲಾಗುವುದು' ಎಂದು ಸ್ಪಷ್ಟಪಡಿಸಿದರು.

'ಮಕ್ಕಳಿಗೆ ಕೋವಿಡ್ ಲಸಿಕೆ ಹಾಕಿಸುವ ವಿಷಯದಲ್ಲಿ ಕೇಂದ್ರ ಸರ್ಕಾರದ ನಿರ್ದೇಶನ ಮತ್ತು ಲಸಿಕೆಗಾಗಿ ಕಾಯುತ್ತಿದ್ದೇವೆ. ಮೊದಲ ಹಂತದಲ್ಲಿ 12ರಿಂದ 17 ವರ್ಷದ ಮಕ್ಕಳಿಗೆ ಲಸಿಕೆ ಹಾಕುವ ಯೋಜನೆ ಇದೆ' ಎಂದರು.

ಟೆಕ್ ಮಹಿಂದ್ರಾದಿಂದ ಆಮ್ಲಜನಕ ಘಟಕ, ಆಂಬುಲೆನ್ಸ್ ಕೊಡುಗೆ

ಪ್ರಜಾವಾಣಿ ವಾರ್ತೆ

ಟೆಕ್ ಮಹಿಂದ್ರಾ ಪ್ರತಿಷ್ಠಾನ ಕೊಡುಗೆಯಾಗಿ ನೀಡಿರುವ ಆಂಬುಲೆನ್ಸ್‌ಗಳು.

ಬೆಂಗಳೂರು: ಕೋವಿಡ್ ವಿರುದ್ಧ ಹೋರಾಡಲು ಟೆಕ್ ಮಹಿಂದ್ರಾ ಪ್ರತಿಷ್ಠಾನವು ಆಮ್ಲಜನಕ ಉತ್ಪಾದಕ ಘಟಕ ಹಾಗೂ ಎರಡು ಆಂಬುಲೆನ್ಸ್ ವಾಹನಗಳನ್ನು ವಿವಿಧ ಆಸ್ಪತ್ರೆಗಳಿಗೆ ಕೊಡುಗೆಯಾಗಿ ನೀಡಿದೆ.

ನಗರದ ಶ್ರೀಕೃಷ್ಣ ಸೇವಾಶ್ರಮ ಆಸ್ಪತ್ರೆಗೆ ಒಂದು ಆಂಬುಲೆನ್ಸ್, ಸೇಂಟ್ ಫಿಲೋಮಿನಾ ಆಸ್ಪತ್ರೆಗೆ ಆಂಬುಲೆನ್ಸ್ ಹಾಗೂ ಆಮ್ಲಜನಕ ಉತ್ಪಾದಕ ಘಟಕವನ್ನು ನೀಡಿದ್ದು, ಪಾಲಿಕೆಯ ವಿಶೇಷ ಆಯುಕ್ತ ಡಿ.ರಂದೀಪ್ ಅವರು ಮಂಗಳವಾರ ಚಾಲನೆ ನೀಡಿದರು.

'ಕೋವಿಡ್ ತೀವ್ರಗೊಂಡಿದ್ದ ಸಮಯದಲ್ಲಿ ಆಂಬುಲೆನ್ಸ್ ಮತ್ತು ಆಮ್ಲಜನಕದ ಸಿಲಿಂಡರ್‌ಗಳಿಗಾಗಿ ಬೆಂಗಳೂರು ಕಠಿಣ ಸಂದರ್ಭವನ್ನು ಎದುರಿಸಿತು. ಮಹಿಂದ್ರಾದ ಈ ಕೊಡುಗೆಗಳು ಜನರಿಗೆ ಉಪಯುಕ್ತವಾಗಲಿವೆ' ಎಂದು ರಂದೀಪ್ ಹೇಳಿದರು.

ಟೆಕ್ ಮಹಿಂದ್ರಾ ಪ್ರತಿಷ್ಠಾನದ ಕಾರ್ಪೊರೇಟ್ ಸೇವೆ ವಿಭಾಗದ ಸೈಯದ್ ಅತೀಕ್,'ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಿ ಆಮ್ಲಜನಕದ ಕೊರತೆ ಹೆಚ್ಚಾಗಿತ್ತು. ಅದನ್ನು ಮನಗಂಡು ಭವಿಷ್ಯದ ದೃಷ್ಟಿಯಿಂದ ಆಸ್ಪತ್ರೆಗಳಲ್ಲಿ ಈ ಸೌಲಭ್ಯಗಳನ್ನು ಒದಗಿಸಿದೆ' ಎಂದರು.

ವಾಮಾಚಾರ ನೆಪ: ₹4.41 ಕೋಟಿ ವಂಚನೆ

ಬಸವನಗುಡಿ ಪೊಲೀಸರಿಂದ ಮಹಿಳೆ ಸೇರಿ ಇಬ್ಬರು ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: 'ವಾಮಾಚಾರ ಮಾಡಿಸಿದರೆ ಎಲ್ಲ ಸಮಸ್ಯೆಗಳು ಪರಿಹಾರವಾಗುತ್ತವೆ' ಎಂಬುದಾಗಿ ಹೇಳಿ ಪೂಜೆ ನೆಪದಲ್ಲಿ ₹ 4.41 ಕೋಟಿ ಪಡೆದು ವಂಚಿಸಿರುವ ಆರೋಪದಡಿ ಮಹಿಳೆ ಸೇರಿ ಇಬ್ಬರನ್ನು ಬಸವನಗುಡಿ ಪೊಲೀಸರು ಬಂಧಿಸಿದ್ದಾರೆ.

'ತ್ಯಾಗರಾಜನಗರದ ನಿವಾಸಿ ಗೀತಾ ಗುರುದೇವ್ ಎಂಬುವರು ತಮಗಾದ ವಂಚನೆ ಬಗ್ಗೆ ದೂರು ನೀಡಿದ್ದರು. ಆರೋಪಿಗಳಾದ ಜಯಶ್ರೀ ಹಾಗೂ ರಾಕೇಶ್ ಎಂಬುವರನ್ನು ಬಂಧಿಸಲಾಗಿದೆ. ಅವರಿಬ್ಬರಿಂದ 1 ಕೆ.ಜಿ ಚಿನ್ನ ಹಾಗೂ ₹ 10 ಲಕ್ಷ ನಗದು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ದೂರುದಾರರಾದ ಗೀತಾ ಅವರ ಮನೆಯ ಕೆಲಸಕ್ಕಾಗಿ ಆರೋಪಿ ಜಯಶ್ರೀ ಆಗಾಗ ಬಂದು ಹೋಗುತ್ತಿದ್ದರು. ಇದೇ ಸಂದರ್ಭದಲ್ಲಿ ತಮ್ಮ ಕಷ್ಟಗಳನ್ನು ಗೀತಾ, ಆರೋಪಿ ಬಳಿ ಹೇಳಿಕೊಳ್ಳುತ್ತಿದ್ದರು. ಇದನ್ನೇ ದುರುಪಯೋಗಪಡಿಸಿಕೊಂಡ ಜಯಶ್ರೀ, ಇತರೆ ಆರೋಪಿಗಳ ಜೊತೆ ಸೇರಿ ಗೀತಾ ಅವರನ್ನು ವಂಚಿಸಿದ್ದಳು. ಇಬ್ಬರು ಆರೋಪಿಗಳು ಮಾತ್ರ ಸಿಕ್ಕಿಬಿದ್ದಿದ್ದು, ಏಳು ಮಂದಿ ಆರೋಪಿಗಳು ತಲೆಮರೆಸಿಕೊಂಡಿದ್ದಾರೆ' ಎಂದರು.

ರಕ್ತಕಾರಿ ಸಾಯುವುದಾಗಿ ಭಯ ಹುಟ್ಟಿಸಿದ್ದಳು: 'ಗೀತಾ ಅವರ ಮುಗ್ಧತೆ ತಿಳಿದಿದ್ದ ಆರೋಪಿ ಜಯಶ್ರೀ, 'ನಿಮ್ಮ ಸಮಸ್ಯೆಗಳಿಗೆ ನನ್ನ ಬಳಿ ಪರಿಹಾರವಿದೆ. ನಿಮ್ಮ ಮೇಲೆ ಯಾರೋ ಮಾಟ ಮಂತ್ರ ಮಾಡಿಸಿದ್ದಾರೆ. ಅದರಿಂದ ಬಚಾವಾಗಬೇಕಾದರೆ ವಾಮಾಚಾರ ಮಾಡಿಸಬೇಕು' ಎಂದಿದ್ದಳು. 'ಶೀಘ್ರವೇ ವಾಮಾಚಾರ ಮಾಡಿಸದಿದ್ದರೆ, ನೀವು ಹಾಗೂ ನಿಮ್ಮ ಮನೆಯವರು ರಕ್ತಕಾರಿ ಸಾಯುತ್ತೀರಾ' ಎಂಬುದಾಗಿಯೂ ಭಯ ಹುಟ್ಟಿಸಿದ್ದಳು' ಎಂದು ಪೊಲೀಸರು ಹೇಳಿದರು.

'ಆರೋಪಿ ಮಾತು ನಂಬಿದ್ದ ಗೀತಾ, ವಾಮಾಚಾರ ಮಾಡಿಸಲು ಒಪ್ಪಿಕೊಂಡಿದ್ದರು. ಆರೋಪಿ ರಾಕೇಶ್ ಹಾಗೂ ಇತರರನ್ನು ಮನೆಗೆ ಕರೆಸಿದ್ದ ಜಯಶ್ರೀ, ವಾಮಾಚಾರ ಮಾಡಲು ಹೇಳಿದ್ದಳು. ಕೆಲ ವಸ್ತುಗಳನ್ನು ತಂದಿದ್ದ ಆರೋಪಿಗಳು, ಮನೆಯ ಮೂಲೆಯಲ್ಲಿಟ್ಟು ಪೂಜೆ ಮಾಡಿದ್ದರು. ಅದಕ್ಕೆ ಪ್ರತಿಯಾಗಿ ₹ 1.42 ಕೋಟಿ ಪಡೆದುಕೊಂಡು ಹೋಗಿದ್ದರು.'

'ಮೊದಲ ಪೂಜೆಯಿಂದ ಸಮಸ್ಯೆಗಳು ಪರಿಹಾರವಾಗಿರಲಿಲ್ಲ. ಆಗ ಜಯಶ್ರೀ, ಎರಡ್ಮೂರು ಬಾರಿ ಆರೋಪಿಗಳನ್ನು ಕರೆಸಿ ವಾಮಾಚಾರ ಮಾಡಿಸಿದ್ದಳು. ಆರೋಪಿಗಳು ಹಂತ ಹಂತವಾಗಿ ಗೀತಾ ಅವರಿಂದ ಒಟ್ಟು ₹ 4.41 ಕೋಟಿ ಪಡೆದುಕೊಂಡಿದ್ದರು. ಆರೋಪಿಗಳು ನೀಡಿದ್ದ 13 ಬ್ಯಾಂಕ್ ಖಾತೆಗಳಿಗೆ ಗೀತಾ ಹಣ ಜಮೆ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದೂ ಪೊಲೀಸರು ವಿವರಿಸಿದರು.

ಹಣ ವಾಪಸು ಕೇಳಿದ್ದಕ್ಕೆ ಜೀವ ಬೆದರಿಕೆ: 'ವಾಮಾಚಾರ ಮಾಡಿದ ಬಳಿಕವೂ ಸಮಸ್ಯೆಗಳು ಪರಿಹಾರ ಆಗಿರಲಿಲ್ಲ. ಅನುಮಾನಗೊಂಡ ಗೀತಾ, ಪತಿಗೆ ವಿಷಯ ತಿಳಿಸಿದ್ದರು. ಆರೋಪಿಗಳ ಮನೆಗೆ ದಂಪತಿ ಹೋಗಿ ಹಣ ವಾಪಸು ನೀಡುವಂತೆ ಒತ್ತಾಯಿಸಿದ್ದರು' ಎಂದು ಪೊಲೀಸರು ಹೇಳಿದರು.

'ಹಣ ನೀಡುವುದಿಲ್ಲವೆಂದು ಹೇಳಿದ್ದ ಆರೋಪಿಗಳು, ದಂಪತಿಗೆ ಜೀವ ಬೆದರಿಕೆಯೊಡ್ಡಿದ್ದರು. ಹಲ್ಲೆ ಸಹ ಮಾಡಿದ್ದರು' ಎಂದೂ ವಿವರಿಸಿದರು.

ತಾಯಿ ಜೊತೆಗಿನ ಸಲುಗೆ ಪ್ರಶ್ನಿಸಿದ್ದಕ್ಕೆ

‘ಮೆಗಾಫೋನ್’ ಕಿತ್ತ ಪೊಲೀಸರು: ಆಕ್ರೋಶ

'ಅಮಾನವೀಯ ವರ್ತನೆ' ಎಂದು ಖಂಡಿಸಿದ ವ್ಯಾಪಾರಿಗಳು

ಪ್ರಜಾವಾಣಿ ವಾರ್ತೆ

ತಳ್ಳುಗಾಡಿ ವ್ಯಾಪಾರಿಗಳಿಂದ ಜಪ್ತಿ ಮಾಡಲಾದ ಮೆಗಾಫೋನ್‌ಗಳು

ಬೆಂಗಳೂರು: ತಳ್ಳುಗಾಡಿ ವ್ಯಾಪಾರಿಗಳು ಬಳಸುವ ಮೆಗಾಫೋನ್‌ಗಳನ್ನು ಪೊಲೀಸರು ಏಕಾಏಕಿ ಜಪ್ತಿ ಮಾಡಿದ್ದು, ಈ ವರ್ತನೆಗೆ ನಗರದ ವ್ಯಾಪಾರಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಕೆಲ ಸಾರ್ವಜನಿಕರು ದೂರು ನೀಡಿದ್ದಾರೆ' ಎಂಬ ಕಾರಣ ನೀಡಿ ಪುಲಿಕೇಶಿನಗರ ಠಾಣೆ ವ್ಯಾಪ್ತಿಯಲ್ಲಿ ಸೋಮವಾರ ಕಾರ್ಯಾಚರಣೆ ನಡೆಸಿದ್ದ ಪೊಲೀಸರು, 15 ವ್ಯಾಪಾರಿಗಳ ಮೆಗಾಫೋನ್‌ಗಳನ್ನು ಜಪ್ತಿ ಮಾಡಿದ್ದಾರೆ. ವ್ಯಾಪಾರಿಗಳನ್ನು ಠಾಣೆಗೆ ಕರೆಸಿ, ಮೆಗಾಫೋನ್ ಬಳಸದಂತೆ ಎಚ್ಚರಿಕೆ ನೀಡಿ ಕಳುಹಿಸಿದ್ದಾರೆ.

ಪೊಲೀಸರ ಈ ವರ್ತನೆಯನ್ನು ಖಂಡಿಸಿರುವ ತಳ್ಳುಗಾಡಿ ವ್ಯಾಪಾರಿಗಳು, 'ಬೀದಿ ಬೀದಿ ಸುತ್ತಿ ನ್ಯಾಯಯುತವಾಗಿ ದುಡಿಯುತ್ತಿರುವ ನಮ್ಮ ಮೇಲೆ ಏಕೆ ನಿಮ್ಮ (ಪೊಲೀಸರು) ದರ್ಪ' ಎಂದು ಪ್ರಶ್ನಿಸುತ್ತಿದ್ದಾರೆ.

ಕಾರ್ಯಾಚರಣೆ ಬಗ್ಗೆ ಮಾಹಿತಿ ನೀಡಿದ ಪೂರ್ವ ವಿಭಾಗದ ಡಿಸಿಪಿ ಎಸ್.ಡಿ.ಶರಣಪ್ಪ, 'ತರಕಾರಿ, ಹೂವು, ಹಣ್ಣು ಹಾಗೂ ಇತರೆ ವಸ್ತುಗಳನ್ನು ಮಾರಲೆಂದು ವ್ಯಾಪಾರಿಗಳು ತಳ್ಳುಗಾಡಿಯಲ್ಲಿ ಸುತ್ತಾಡುತ್ತಿದ್ದಾರೆ. ಮೆಗಾಫೋನ್‌ಗಳನ್ನು ಬಳಸಿ ಜೋರಾಗಿ ಕೂಗುತ್ತಾರೆ. ಇದರಿಂದ ವೃದ್ಧರು, ಅನಾರೋಗ್ಯ ಪೀಡಿತರು ಹಾಗೂ ಆನ್‌ಲೈನ್ ಪಾಠ ಕೇಳುವ ವಿದ್ಯಾರ್ಥಿಗಳಿಗೆ ತೊಂದರೆ ಆಗುತ್ತಿರುವ ಬಗ್ಗೆ ದೂರುಗಳು ಬಂದಿದ್ದವು' ಎಂದರು.

'ಪುಲಿಕೇಶಿನಗರ ಠಾಣೆ ವ್ಯಾಪ್ತಿಯಲ್ಲಿ ಸೋಮವಾರ ಬೆಳಿಗ್ಗೆ 6.30 ಗಂಟೆಯಿಂದ 8.30 ಗಂಟೆವರೆಗಿನ ಅವಧಿಯಲ್ಲಿ ಪ್ರಾಯೋಗಿಕ ಕಾರ್ಯಾಚರಣೆ ನಡೆಸಲಾಯಿತು. ವ್ಯಾಪಾರಿಗಳಿಗೆ ಎಚ್ಚರಿಕೆ ನೀಡಿ ಜಾಗೃತಿ ಮೂಡಿಸಿ, ವಾಪಸು ಕಳುಹಿಸಲಾಗಿದೆ. ಎಲ್ಲ ಠಾಣೆ ವ್ಯಾಪ್ತಿಯಲ್ಲೂ ಕಾರ್ಯಾಚರಣೆ ಮುಂದುವರಿಯಲಿದೆ' ಎಂದರು.

ಪೊಲೀಸರದ್ದು ಅಮಾನವೀಯ ವರ್ತನೆ: ಪೊಲೀಸರ ವರ್ತನೆಯನ್ನು ಖಂಡಿಸಿರುವ ಬೆಂಗಳೂರು ಬೀದಿಬದಿ ವ್ಯಾಪಾರಿಗಳ ಸಂಘಟನೆಗಳ ಒಕ್ಕೂಟದ ವಿನಯ್ ಶ್ರೀನಿವಾಸ್, 'ಇದು ಪೊಲೀಸರ ಅಮಾನೀಯ ವರ್ತನೆ. ಇದನ್ನು ನಾವು ಸಹಿಸುವುದಿಲ್ಲ' ಎಂದರು.

'ಜನಸಂಪರ್ಕ ಸಭೆಯಲ್ಲಿ ಯಾರೋ ಒಬ್ಬರು ಹೇಳಿದ ಮಾತ್ರಕ್ಕೆ ತಳ್ಳುಗಾಡಿ ವ್ಯಾಪಾರಿಗಳ ವಿರುದ್ಧ ಕಾರ್ಯಾಚರಣೆ ನಡೆಸುವುದು ಸರಿಯಲ್ಲ. ಅಪಾರ್ಟ್‌ಮೆಂಟ್ ಸಮುಚ್ಚಯ, ಬಹುಮಹಡಿ ಕಟ್ಟಡಗಳಿಂದ ಕೂಡಿರುವ ಬೆಂಗಳೂರು ಸಾಕಷ್ಟು ಬೆಳೆದಿದೆ. ಕೇವಲ ಧ್ವನಿಯಿಂದ ಕೂಗಿ ವ್ಯಾಪಾರ ಮಾಡುವುದು ಕಷ್ಟ. ಆ ರೀತಿ ಮಾಡಿದರೆ, ವ್ಯಾಪಾರಿಗಳು ಅನಾರೋಗ್ಯಕ್ಕೆ ತುತ್ತಾಗಬೇಕಾಗುತ್ತದೆ' ಎಂದರು.

'ಕೋವಿಡ್ ಸಂದರ್ಭದಲ್ಲಿ ತಳ್ಳುಗಾಡಿ ವ್ಯಾಪಾರಿಗಳೇ ಮನೆ ಮನೆಗೆ ಹೋಗಿ ಜನರಿಗೆ ಅಗತ್ಯವಸ್ತುಗಳನ್ನು ಪೂರೈಕೆ ಮಾಡಿದ್ದರು. ಅವರೆಲ್ಲ ಕೊರೊನಾ ಯೋಧರು. ಅವರಿಗೆ ಪ್ರೋತ್ಸಾಹ ನೀಡಬೇಕಾದ ಪೊಲೀಸರು, ಅವರ ಅನ್ನವನ್ನೇ ಕಿತ್ತುಕೊಳ್ಳುವುದು ಯಾವ ನ್ಯಾಯ' ಎಂದೂ ಅವರು ಪ್ರಶ್ನಿಸಿದರು.

ವ್ಯಾಪಾರ ಆಗದಿದ್ದರೆ ಉಪವಾಸ: ಶಿವಾಜಿನಗರ ಹಾಗೂ ಸುತ್ತಮುತ್ತ ತಳ್ಳುಗಾಡಿಯಲ್ಲಿ ಹೂವು ಮಾರುವ ಲಕ್ಷ್ಮಮ್ಮ, 'ನನಗೆ 50 ವರ್ಷ. ಕೂಗಲು ಧ್ವನಿ ಇಲ್ಲ. ಹೀಗಾಗಿ, ಮೆಗಾಫೋನ್ ಬಳಸುತ್ತೇನೆ. ಈಗ ಪೊಲೀಸರು, ಮೆಗಾಫೋನ್ ಜಪ್ತಿ ಮಾಡಿದರೆ ವ್ಯಾಪಾರವೇ ಬಂದ್ ಆಗುತ್ತದೆ. ಹೂವು ವ್ಯಾಪಾರವನ್ನೇ ನಂಬಿರುವ ನಾನು ಬೀದಿಗೆ ಬೀಳಬೇಕಾಗುತ್ತದೆ' ಎಂದರು.

ಮಲ್ಲೇಶ್ವರದ ವ್ಯಾಪಾರಿ ಎಸ್. ಲೋಕೇಶ್, 'ತಳ್ಳುಗಾಡಿಯಲ್ಲಿ ಹೋಗಿ ಮೆಗಾಫೋನ್‌ನಲ್ಲಿ ಕೂಗಿದರೆ ಜನರು ಮನೆಯಿಂದ ಹೊರಬಂದು ವ್ಯಾಪಾರ ಮಾಡುತ್ತಾರೆ. ಇದುವರೆಗೂ ಯಾರೊಬ್ಬರೂ ಮೆಗಾಫೋನ್ ಬಗ್ಗೆ ತಗಾದೆ ತೆಗೆದಿಲ್ಲ. ಪೊಲೀಸರೇ ನಮ್ಮ ಬಳಿ ಬಂದು, ಮೆಗಾಫೋನ್ ಬಳಸದಂತೆ ಎಚ್ಚರಿಸುತ್ತಿದ್ದಾರೆ' ಎಂದರು.

'ಯಾರಿಗಾದರೂ ತೊಂದರೆ ಆಗಿದ್ದರೆ, ಅವರ ಮನೆ ಮುಂದೆ ಮೆಗಾಫೋನ್ ಬಳಸುವುದಿಲ್ಲ. ಆದರೆ, ಮೆಗಾಫೋನ್ ಬಳಸುವುದನ್ನೇ ಸಂಪೂರ್ಣ ನಿಷೇಧಿಸಿದರೆ ಮನೆ ಮಂದಿಯೆಲ್ಲ ಉಪವಾಸವಿರಬೇಕಾಗುತ್ತದೆ' ಎಂದೂ ಅಳಲು ತೋಡಿಕೊಂಡರು.

'ವ್ಯಾಪಾರ ಮಾಡಿದರೆ ತಿಳಿಯುತ್ತದೆ'

'ಹೊಟ್ಟೆ ತುಂಬಿಸಿಕೊಳ್ಳಲು ವ್ಯಾಪಾರವೇ ಆಧಾರ. ಬಿಸಿಲು, ಮಳೆ, ಚಳಿ ಎನ್ನದೇ ನಗರ ಸುತ್ತಾಡುತ್ತೇವೆ. ಅಗತ್ಯ ವಸ್ತುಗಳ ಮಾರಾಟದಿಂದ ಬಂದ ಲಾಭದಲ್ಲಿ ಜೀವನ ನಡೆಸುತ್ತೇವೆ. ಅಪರಾಧಗಳನ್ನು ತಡೆಯಬೇಕಾದ ಪೊಲೀಸರು, ನಮ್ಮ ಮೇಲೆ ಏಕೆ ದರ್ಪ ತೋರಿಸುತ್ತಿದ್ದಾರೆ' ಎಂದು ತಳ್ಳುಗಾಡಿ ವ್ಯಾಪಾರಿಗಳು ಪ್ರಶ್ನಿಸಿದರು.

'ಪೊಲೀಸ್ ಅಧಿಕಾರಿಗಳಿಗೆ ವ್ಯಾಪಾರಿಗಳ ಕಷ್ಟ ಗೊತ್ತಿಲ್ಲ. ಅವರೆಲ್ಲ ನಮ್ಮ ಹಾಗೆ ಬೀದಿಯಲ್ಲಿ ವ್ಯಾಪಾರಿ ಮಾಡಿ ಜೀವನ ಸಾಗಿಸಿದ್ದರೆ, ಕಷ್ಟ ಏನೆಂಬುದು ತಿಳಿಯುತ್ತಿತ್ತು. ಯಾರೋ ದೂರು ಕೊಟ್ಟ ಮಾತ್ರಕ್ಕೆ ನಗರದ ಬೀದಿಬದಿ ವ್ಯಾಪಾರಿಗಳ ವಿರುದ್ಧ ಕ್ರಮ ಕೈಗೊಳ್ಳುವುದು ಸರಿಯಲ್ಲ' ಎಂದೂ ಹೇಳಿದರು.

ತಾಯಿ ಜೊತೆಗಿನ ಸಲುಗೆ ಪ್ರಶ್ನಿಸಿದ್ದಕ್ಕೆ ಮಗನ ಕೊಲೆ

ಬೆಂಗಳೂರು: ಹಲಸೂರು ಠಾಣೆಯ ವ್ಯಾಪ್ತಿಯಲ್ಲಿ ನಂದು (17) ಎಂಬಾತನನ್ನು ಕೊಲೆ ಮಾಡಲಾಗಿದ್ದು, ಈ ಸಂಬಂಧ ಆರೋಪಿ ಶಕ್ತಿವೇಲು ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಮರ್ಫಿಟೌನ್ ಮನೆಯೊಂದರಲ್ಲಿ ಮಂಗಳವಾರ ಕೊಲೆ ನಡೆದಿದೆ. ಪ್ರಕರಣ ದಾಖಲಿಸಿಕೊಂಡು ಶಕ್ತಿಯನ್ನು ಬಂಧಿಸಲಾಗಿದೆ. ಕೃತ್ಯಕ್ಕೆ ಸಹಕಾರ ನೀಡಿದ್ದ ಆರೋಪದಡಿ ತಾಯಿಯನ್ನೂ ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸರು ಹೇಳಿದರು.

'ಆಟೊ ಚಾಲಕನಾಗಿದ್ದ ಆರೋಪಿ ಶಕ್ತಿವೇಲು, ಸಾಮಾಜಿಕ ಜಾಲತಾಣದ ಮೂಲಕ ಮೃತ ನಂದುನ ತಾಯಿ ಜೊತೆ ಸ್ನೇಹ ಬೆಳೆಸಿದ್ದ. ಆಗಾಗ ಮನೆಗೂ ಹೋಗಿ ಬರುತ್ತಿದ್ದ.'ಎಂದರು.

ಮದ್ಯದ ಪಾರ್ಟಿ: 'ಮಂಗಳವಾರವೂ ಮನೆಗೆ ಬಂದಿದ್ದ ಶಕ್ತಿವೇಲು, ಮಹಿಳೆ ಜೊತೆ ಮದ್ಯದ ಪಾರ್ಟಿ ಮಾಡಿದ್ದ ಎನ್ನಲಾಗಿದೆ. ಹೊರಗಡೆ ಹೋಗಿದ್ದ ನಂದು, ದಿಢೀರ್ ಮನೆಗೆ ವಾಪಸು ಬಂದಿದ್ದ. ಪಾರ್ಟಿ ನೋಡಿ ಆಕ್ರೋಶಗೊಂಡಿದ್ದ.'

'ಇಬ್ಬರ ನಡುವೆಯೂ ಜಗಳ ಶುರುವಾಗಿತ್ತು. ಇದೇ ಸಂದರ್ಭದಲ್ಲಿ ಆರೋಪಿ ಶಕ್ತಿವೇಲು, ಚಾಕುವಿನಿಂದ ನಂದುಗೆ ಇರಿದಿದ್ದ. ಕೊಲೆ ಮಾಡಿದ್ದಾನೆ' ಎಂದೂ ಪೊಲೀಸರು ತಿಳಿಸಿದರು.

ಆರ್‌.ಟಿ.ನಗರ ಠಾಣೆ ಪೊಲೀಸರಿಂದ ಬಂಧನ

ಬೆರಳಚ್ಚು ಸುಳಿವಿನಿಂದ ಸಿಕ್ಕಿಬಿದ್ದ ದಂಪತಿ

ಪ್ರಜಾವಾಣಿ ವಾರ್ತೆ

ಆರೋಪಿಗಳಿಂದ ಜಪ್ತಿ ಮಾಡಲಾದ ಚಿನ್ನಾಭರಣ

ಬೆಂಗಳೂರು: ಆರ್‌.ಟಿ.ನಗರ ಠಾಣೆ ವ್ಯಾಪ್ತಿಯ ಕೆಲ ಮನೆಗಳಲ್ಲಿ ಕಳವು ಮಾಡಿದ್ದ ಆರೋಪದಡಿ ದಂಪತಿಯನ್ನು ಬಂಧಿಸಿರುವ ಪೊಲೀಸರು, ಅವರಿಂದ ₹ 8.5 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಿದ್ದಾರೆ.

'ದೇವರ ಜೀವನಹಳ್ಳಿ (ಡಿ.ಜೆ.ಹಳ್ಳಿ) ನಿವಾಸಿ ಜಯಂತಿ ಅಲಿಯಾಸ್ ಕುಟ್ಟಿಯಮ್ಮ (30) ಹಾಗೂ ಅವರ ಪತಿ ಬಾಬು ಅಲಿಯಾಸ್ ಮಾರ್ಕೆಟ್ ಬಾಬು (33) ಬಂಧಿತರು. 2019ರಿಂದಲೇ ದಂಪತಿ ಕಳ್ಳತನ ಎಸಗುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಆರ್‌.ಟಿ.ನಗರ ಠಾಣೆ ವ್ಯಾಪ್ತಿಯ 6 ಕಡೆ ಕಳ್ಳತನ ನಡೆದಿತ್ತು. ಈ ಬಗ್ಗೆ ತನಿಖೆ ಕೈಗೊಂಡಿದ್ದ ವಿಶೇಷ ತಂಡ, ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯ ಪರಿಶೀಲಿಸಿತ್ತು. ಆದರೆ, ಯಾವುದೇ ಸುಳಿವು ಸಿಕ್ಕಿರಲಿಲ್ಲ. ಹೀಗಾಗಿ, ಕಳ್ಳತನ ಪ್ರಕರಣಗಳಲ್ಲಿ ಈ ಹಿಂದೆ ಬಂಧಿತರಾಗಿದ್ದ ಆರೋಪಿಗಳ ಬೆರಳಚ್ಚು ಪರಿಶೀಲನೆಗೆ ಮುಂದಾಗಿತ್ತು.'

'ಮಲ್ಲೇಶ್ವರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ 2019ರಲ್ಲಿ ದಂಪತಿ ಕಳ್ಳತನ ಎಸಗಿದ್ದರು. ಈ ಪ್ರಕರಣದಲ್ಲಿ ದಂಪತಿಯನ್ನು ಬಂಧಿಸಿದ್ದ ಪೊಲೀಸರು, ಬೆರಳಚ್ಚು ಸಂಗ್ರಹಿಸಿಟ್ಟುಕೊಂಡಿದ್ದರು. ಆರ್‌.ಟಿ. ನಗರ ಪ್ರಕರಣಗಳಲ್ಲಿ ಸಂಗ್ರಹಿಸಿದ್ದ ಬೆರಳಚ್ಚು ಮಾದರಿಯನ್ನು ಹೋಲಿಕೆ ಮಾಡಲಾಯಿತು. ಅವಾಗಲೇ ಆರೋಪಿಗಳ ಸುಳಿವು ಲಭ್ಯವಾಯಿತು' ಎಂದೂ ಪೊಲೀಸರು ತಿಳಿಸಿದರು.

'ಡಿ.ಜೆ.ಹಳ್ಳಿ ಬಳಿಯ ಕಾವಲ್‌ಬೈರಸಂದ್ರ ಬಳಿ ಆರೋಪಿಗಳು ವಾಸವಿದ್ದರು. ಮನೆ ಮೇಲೆ ದಾಳಿ ಮಾಡಿ ದಂಪತಿಯನ್ನು ಸೆರೆ ಹಿಡಿಯಲಾಗಿದೆ' ಎಂದೂ ಹೇಳಿದರು.

ಬಾಡಿಗೆ ಕೇಳುವ ನೆಪದಲ್ಲಿ ಸುತ್ತಾಟ: 'ಆರೋಪಿ ಜಯಂತಿ, ಸ್ಥಳೀಯ ಸಂಘಟನೆಯೊಂದರ ಸದಸ್ಯೆ ಆಗಿದ್ದರು. ಮನೆ ಬಾಡಿಗೆ ಕೇಳುವ ನೆಪದಲ್ಲಿ ನಗರದಲ್ಲಿ ಸುತ್ತಾಡುತ್ತಿದ್ದ ಆಕೆ, ಬೀಗ ಹಾಕಿರುತ್ತಿದ್ದ ಮನೆಗಳನ್ನು ಗುರುತಿಸುತ್ತಿದ್ದಳು. ಅದೇ ಮಾಹಿತಿಯನ್ನು ಪತಿ ಬಾಬುಗೆ ತಿಳಿಸುತ್ತಿದ್ದಳು' ಎಂದರು.

'ಬೀಗ ಮುರಿದು ಒಳಗೆ ನುಗ್ಗುತ್ತಿದ್ದ ಬಾಬು, ಚಿನ್ನಾಭರಣ ಹಾಗೂ ನಗದು ಕದ್ದು ಬರುತ್ತಿದ್ದ. ಜಯಂತಿ ಹೊರಗೆ ಕಾಯುತ್ತಿದ್ದರು. ಈ ಬಗ್ಗೆ ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ' ಎಂದರು.

'2021ರ ಮಾರ್ಚ್‌ನಲ್ಲಿ ಪ್ರಕರಣವೊಂದರಲ್ಲಿ ಸಿಕ್ಕಿಬಿದ್ದಿದ್ದ ಆರೋಪಿಗಳು, 15 ದಿನ ಜೈಲಿನಲ್ಲಿ ಇದ್ದರು. ಜಾಮೀನು ಮೇಲೆ ಹೊರಬಂದು ಪುನಃ ಕಳ್ಳತನಕ್ಕೆ ಇಳಿದಿದ್ದರು. ಆರ್‌.ಟಿ.ನಗರದ ಮಂಜುನಾಥ ಬಡಾವಣೆಯಲ್ಲಿರುವ ಮನೆಯೊಂದರಲ್ಲಿ ಸೆ. 16ರಂದು ಕಳ್ಳತನ ಮಾಡಿದ್ದರು. ಈ ಬಗ್ಗೆ ಪ್ರಕರಣ ದಾಖಲಾಗಿತ್ತು' ಎಂದೂ ಹೇಳಿದರು.

'ರಾಮಮೂರ್ತಿನಗರ, ಯಶವಂತಪುರ, ಅಶೋಕನಗರ, ಡಿ.ಜೆ.ಹಳ್ಳಿ, ಅನ್ನಪೂರ್ಣೇಶ್ವರಿನಗರ, ವಿವೇಕನಗರ, ಬೆಳ್ಳಂದೂರು, ವಿಧಾನಸೌಧ, ಕೊತ್ತನೂರು, ಮಡಿವಾಳ, ಕೆ.ಆರ್.ಪುರ ಠಾಣೆಗಳ ವ್ಯಾಪ್ತಿಯಲ್ಲೂ ದಂಪತಿ ಕೃತ್ಯ ಎಸಗಿದ್ದಾರೆ' ಎಂದೂ ಪೊಲೀಸರು ತಿಳಿಸಿದರು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	23.64 ಕೋಟಿ ▲	3.38 ಕೋಟಿ
ಸಕ್ರಿಯ ಪ್ರಕರಣ	1.80 ಕೋಟಿ ▼	2.40 ಲಕ್ಷ ▼
ಗುಣಮುಖ	21.34 ಕೋಟಿ ▲	3.31 ಕೋಟಿ
ಸಾವು	48.26 ಲಕ್ಷ ▲	4.49 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	3.47 ಲಕ್ಷ ▲	19,031 ▲
ಗುಣಮುಖ	3.53 ಲಕ್ಷ ▼	24,207 ▼
ಸಾವು	5,049 ▲	276 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): ಅಮೆರಿಕ 73,721 ▲; ಟರ್ಕಿ 28,810 ▲; ಬ್ರಿಟನ್ 34,803 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): ಅಮೆರಿಕ 98.05 ▼; ರಷ್ಯಾ 6.61; ಬ್ರಿಟನ್ 13.43 ▼

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು): ಮಹಾರಾಷ್ಟ್ರ 1.39 ಲಕ್ಷ; ತಮಿಳುನಾಡು 35,682 ▲; ಕೇರಳ 25,677 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): ಮಹಾರಾಷ್ಟ್ರ 65.64 ▼; ಕೇರಳ 47.38 ▲; ತಮಿಳುನಾಡು 26.71 ▲

ಪ್ರಜಾವಾಣಿ ಗ್ರಾಫಿಕ್ಸ್

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

12,47,459 ▲ ಒಟ್ಟು ಸೋಂಕಿತರು (12,47,258 ನಿನ್ನೆಯ ವಿವರ)

7,599 ▼	12,23,686 ▲	16,173 ▲
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	201 ▲
ಗುಣಮುಖ	238 ▲
ಸಾವು	04 ▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಪ್ರೀತಿ ನಿರಾಕರಣೆ, ತಂದೆ ಹತ್ಯೆಗೆ ಸಂಚು

ಬೆಂಗಳೂರು: ಯುವತಿಯೊಬ್ಬರು ತನ್ನನ್ನು ಪ್ರೀತಿಸಲು ಒಪ್ಪಲಿಲ್ಲವೆಂಬ ಕಾರಣಕ್ಕೆ, ಅವರ ತಂದೆಯನ್ನೇ ಕೊಲೆ ಮಾಡಲು ಸಂಚು ರೂಪಿಸಿದ್ದ ಆರೋಪದಡಿ ರೌಡಿ ನಾಗರಾಜ್ ಅಲಿಯಾಸ್ ವಿಲ್ಸನ್ ಗಾರ್ಡನ್ ನಾಗ್‌ನನ್ನು ಹಾಗೂ ಆತನ ಆರು ಸಹಚರರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ರೌಡಿ ನಾಗ್, ಸ್ಥಳೀಯ ಯುವತಿಯೊಬ್ಬರ ಬೆನ್ನು ಬಿದ್ದಿದ್ದ. ಪ್ರೀತಿಸುವಂತೆ ಪೀಡಿಸುತ್ತಿದ್ದ. ಈ ವಿಷಯ ತಿಳಿದು ಮಗಳ ತಂಟೆಗೆ ಬಾರದಂತೆ ತಂದೆ ಎಚ್ಚರಿಕೆ ನೀಡಿದ್ದರು. ಇದರಿಂದ ಕೋಪಗೊಂಡಿದ್ದ ನಾಗ್, ಯುವತಿಯ ತಂದೆಯನ್ನೇ ಹತ್ಯೆ ಮಾಡಲು ಸಹಚರರ ಜೊತೆ ಸೇರಿ ಸಂಚು ರೂಪಿಸಿದ್ದ. ಈ ಬಗ್ಗೆಯೂ ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ' ಎಂದರು.

ಕದ್ದ ವಾಹನ ಬಳಸಿ ಮೊಬೈಲ್‌ಗಳ ಸುಲಿಗೆ

ಬೆಂಗಳೂರು: ದ್ವಿಚಕ್ರ ವಾಹನ ಹಾಗೂ ಆಟೊ ಕದ್ದು, ಅದರಲ್ಲೇ ಸುತ್ತಾಡಿ ಮೊಬೈಲ್ ಸುಲಿಗೆ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಮಡಿವಾಳ ಪೊಲೀಸರು ಬಂಧಿಸಿದ್ದಾರೆ.

'ನ್ಯೂ ಗುರಪ್ಪನಪಾಳ್ಯದ ವಾಹಿದ್ ಪಾಷಾ (20), ಸಿಂಗಸಂದ್ರ ಸುಭಾಷ್ ನಗರದ ಅಫ್ರೋಜ್ (19) ಹಾಗೂ ಬಾಪೂಜಿನಗರದ ಅರ್ಬಾಜ್ (19) ಬಂಧಿತರು. ಅವರಿಂದ ₹ 10.80 ಲಕ್ಷ ಮೌಲ್ಯದ 10 ದ್ವಿಚಕ್ರ ವಾಹನ, ಆಟೊ, 10 ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರು–1 (ಕೆರೆಗಳು) ರವರ ಕಛೇರಿ, 3ನೇ ಮಹಡಿ, ಹೊಸ ಕಟ್ಟಡ, ಬಿಬಿಎಂಪಿ, ಎನ್.ಆರ್. ಚೌಕ, ಬೆಂಗಳೂರು–560002

ನಂ.: ಕಾಪಾಅ–1(ಕೆರೆಗಳು)/ಟೆಂಡರ್/19/2021–22 ದಿನಾಂಕ: 04.10.2021

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ಅಲ್ಪಾವಧಿ ಟೆಂಡರ್ ಪ್ರಕಟಣೆ)
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು–1 (ಕೆರೆಗಳು), ಬಿಬಿಎಂಪಿ, ಇವರು ಈ ಕೆಳಗಿನ ಕಾಮಗಾರಿಗಳಿಗೆ **ನಿರ್ಮಾಣ ಮೇಲ್ವಿಚಾರಣೆ ಮತ್ತು ಗುಣಮಟ್ಟ ನಿಯಂತ್ರಣದೊಂದಿಗೆ ಯೋಜನೆ ನಿರ್ವಹಣೆ ಸಲಹಾ ಸೇವೆಗಳನ್ನು** ಒದಗಿಸಲು ಪ್ರಸ್ತಾವನೆಗಳನ್ನು (ತಾಂತ್ರಿಕ ಮತ್ತು ಆರ್ಥಿಕ) ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಯೋಜನೆಯ ಅಂದಾಜು ವೆಚ್ಚ (ರೂ. ಲಕ್ಷಗಳಲ್ಲಿ)
1	"ವೆಂಗಯ್ಯನ ಕೆರೆಯ ಪುನರುಜ್ಜೀವನ ಮತ್ತು ಅಭಿವೃದ್ಧಿ ಕಾರ್ಯ"ದ ಕೆಲಸಕ್ಕಾಗಿ ನಿರ್ಮಾಣ ಮೇಲ್ವಿಚಾರಣೆ ಮತ್ತು ಗುಣಮಟ್ಟ ನಿಯಂತ್ರಣ ಸೇರಿದಂತೆ ಯೋಜನೆ ನಿರ್ವಹಣೆ ಸಲಹಾ ಸೇವೆಗಳನ್ನು ಒದಗಿಸುವುದು.	800.00

ಟೆಂಡರ್ ದಾಖಲೆಯಲ್ಲಿ ತಿಳಿಸಿರುವಂತೆ ಸರ್ಕಾರದ ಆದೇಶ ಸಂಖ್ಯೆ: ಆಇ 675 ವೆಚ್ಚ–12/2020, ದಿನಾಂಕ: 22.12.2020ರಂತೆ ಇಎಂಡಿ ಘೋಷಣೆ ನಮೂನೆ.

ವೇಳಾಪಟ್ಟಿ: (1) ಪ್ರಸ್ತಾವನೆಗಳಿಗೆ ಆಹ್ವಾನ (ಆರ್‌ಎಫ್‌ಪಿ) ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://eproc.karnataka.gov.in** ಮೂಲಕ **07.10.2021**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವಭಾವಿ ಸಭೆಯು ಕಾರ್ಯಪಾಲಕ ಅಭಿಯಂತರರು–1 ಕಛೇರಿ, ಕೆರೆಗಳು, ಬಿಬಿಎಂಪಿ ಇಲ್ಲಿ **27.10.2021ರ ಸಂಜೆ 4:00** ಗಂಟೆಗೆ ನಡೆಯಲಿದೆ. (3) ಬಿಡ್‌ಗಳನ್ನು ಆನ್‌ಲೈನ್ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **06.11.2021ರ ಸಂಜೆ 4:00 ಗಂಟೆಗೆ** ಮುಂಚಿತವಾಗಿ ಸಲ್ಲಿಸತಕ್ಕದ್ದು ಮತ್ತು ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗದರ್ಶನದಂತೆ ತೆರೆಯಲಾಗುವುದು. (4) ತಾಂತ್ರಿಕ ಬಿಡ್‌ಗಳನ್ನು ವೆಬ್‌ಸೈಟ್ **https://eproc.karnataka.gov.in** ನಲ್ಲಿ ಕಾರ್ಯಪಾಲಕ ಅಭಿಯಂತರರು (ಕೆರೆಗಳು)ರವರ ಕಛೇರಿಯಲ್ಲಿ **08.11.2021ರ ಸಂಜೆ 4:30** ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು–1, ಕೆರೆಗಳು, ಬಿಬಿಎಂಪಿ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬಿಡಿಎ ಪ್ರಕಟಣೆ

ರೆವಿನ್ಯೂ ನಿವೇಶನದಾರರಿಗೆ 30'x40' ನಿವೇಶನದ ಹಂಚಿಕೆ

ಪ್ರಸ್ತಾವಿತ ಡಾ|| ಶಿವರಾಮ ಕಾರಂತ್ ಬಡಾವಣೆಯಲ್ಲಿ

(ಮಾನ್ಯ ಸರ್ವೋಚ್ಛ ನ್ಯಾಯಾಲಯವು ಎಂಐಎಸ್‌ಸಿ ಸಂಖ್ಯೆ : 1614–1616/2019 ಸಿವಿಲ್ ಅಪೀಲ್ ಕೇಸ್ ಸಂಖ್ಯೆ : 7661–7663/2018ರಲ್ಲಿ ಮಾಡಿರುವ ದಿನಾಂಕ: 05.05.2021ರ ಆದೇಶದ ಅನುಸಾರ)

ಇದೀಗ ರೂಪುಗೊಳ್ಳುತ್ತಿರುವ ಡಾ|| ಶಿವರಾಮ ಕಾರಂತ್ ಬಡಾವಣೆ ವ್ಯಾಪ್ತಿಯೊಳಗೆ ಇರುವ ರೆವಿನ್ಯೂ ನಿವೇಶನಗಳನ್ನು ಪ್ರಸ್ತಾವಿತ ಹೊಸ ಬಡಾವಣೆಗಾಗಿ ವಶಪಡಿಸಿಕೊಂಡಿರುವ ಹಿನ್ನೆಲೆಯಲ್ಲಿ, 03.08.2018 ಮುಂಚೆ ಖರೀದಿಸಿದಂತಹ ಅರ್ಹ ರೆವಿನ್ಯೂ ನಿವೇಶನದಾರರಿಗೆ 30'x40' ಅಳತೆಯ ನಿವೇಶನಗಳನ್ನು ಹಂಚಿಕೆ ಮಾಡಲು ಪರಿಗಣಿಸಲಾಗುವುದು.

ಹಂಚಿಕೆಯ ಪೂರ್ವಾರ್ಹತೆಗಳು

1 ಬಿಡಿಎ ಆವರಣದಲ್ಲಿರುವ ಕೆನರಾ ಬ್ಯಾಂಕ್, ಕೆ.ಪಿ. ವೆಸ್ಟ್, ಬೆಂಗಳೂರು – 560 020 ಇಲ್ಲಿ ಅರ್ಜಿಯನ್ನು ಪಡೆದು ಅದೇ ಬ್ಯಾಂಕಿನಲ್ಲಿ ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಬಹುದು ಹಾಗೂ ಪ್ರಾಧಿಕಾರದ ಆವರಣದಲ್ಲಿ ಸಹಾಯ ಕೇಂದ್ರವನ್ನು ನಿರ್ಮಿಸಲಾಗಿದೆ, ಅಲ್ಲಿಯೂ ಕೂಡ ಸಲ್ಲಿಸಬಹುದು.

2 ಅರ್ಜಿಯೊಂದಿಗೆ ರೆವಿನ್ಯೂ ನಿವೇಶನದ ಕ್ರಯ ಪತ್ರದ ಪ್ರತಿಯನ್ನು ಹಾಗೂ ಸಂಬಂಧಿಸಿದ ದಾಖಲಾತಿಗಳನ್ನು ಲಗತ್ತಿಸಿ.

3 ನಿವೇಶನ ಹಂಚಿಕೆ ಪಡೆಯಲು ಅರ್ಹರಾಗಲು ನೀವು ನೋಂದಣಿ ದಿನಾಂಕದ ಹಿಂದಿನ 15 ವರ್ಷಗಳಿಗೂ ಕಡಿಮೆಯಿಲ್ಲದ ಅವಧಿಯವರೆಗೆ ಕರ್ನಾಟಕದ ನಿವಾಸಿಯಾಗಿರಬೇಕು. 18 ವರ್ಷಗಳು ತುಂಬಿರುವ ವ್ಯಕ್ತಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹತೆಯನ್ನು ಪಡೆದಿರುತ್ತಾರೆ.

4 ರೆವಿನ್ಯೂ ನಿವೇಶನದಾರರು ಒಂದಕ್ಕಿಂತ ಹೆಚ್ಚು ರೆವಿನ್ಯೂ ನಿವೇಶನಗಳನ್ನು ಹೊಂದಿದ್ದರೂ ಸಹಾ ಅಂತಹ ರೆವಿನ್ಯೂ ನಿವೇಶನದಾರರಿಗೆ 30'x40' ಅಡಿ ಅಳತೆಯ ಒಂದು ನಿವೇಶನವನ್ನು ಮಾತ್ರ ಹಂಚಿಕೆ ಮಾಡಲಾಗುವುದು.

5 ನೀವು ಈ ಹಿಂದಿನ ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ/ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ಕರ್ನಾಟಕ ಗೃಹ ಮಂಡಳಿ/ಗೃಹ ನಿರ್ಮಾಣ ಸಹಕಾರಿ ಸಂಘಗಳು ಅಥವಾ ಇತರೆ ಏಜೆನ್ಸಿಗಳ ಮೂಲಕ ಈಗಾಗಲೇ ಮಾಲೀಕತ್ವದ ಆಧಾರದಲ್ಲಿ ನಿವೇಶನ/ಮನೆ/ಫ್ಲಾಟ್ಸ್/ಇತರೆ ರೂಪದ ಸ್ಥಳಾವಕಾಶದ ಹಂಚಿಕೆಯನ್ನು ಪಡೆದಿದ್ದಲ್ಲಿ ಈಗ ಮತ್ತೊಮ್ಮೆ ನಿವೇಶನದ ಹಂಚಿಕೆ ಪಡೆಯಲು ಅರ್ಹರಾಗಿರುವುದಿಲ್ಲ.

6 ನೀವು ಬೆಂಗಳೂರು ಮಹಾನಗರ ಪ್ರದೇಶದ ಒಳಗಡೆ ನಿವೇಶನ/ಮನೆ/ಫ್ಲಾಟ್ಸ್/ಇತರೆ ಯಾವುದೇ ರೂಪದ ಸ್ಥಳಾವಕಾಶವನ್ನು ನಿಮ್ಮ ಹೆಸರಿನಲ್ಲಾಗಲೀ ಅಥವಾ ನಿಮ್ಮ ಪತಿ/ಪತ್ನಿಯ ಅಥವಾ ನಿಮ್ಮ ಕುಟುಂಬದ ಇತರೆ ಯಾವುದೇ ಅವಲಂಬಿತರ ಹೆಸರಿನಲ್ಲಾಗಲಿ ಈಗಾಗಲೇ ಹೊಂದಿದ್ದಲ್ಲಿ ಪ್ರಸಕ್ತ ನಿವೇಶನದ ಹಂಚಿಕೆ ಪಡೆಯಲು ಅರ್ಹರಾಗಿರುವುದಿಲ್ಲ.

7 ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದನ್ವಯ ಪ್ರಾಧಿಕಾರಕ್ಕೆ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸುವ ಮುನ್ನ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಶ್ನಿಸಿ ವಿವಿಧ ನ್ಯಾಯಾಲಯಗಳ ಮುಂದೆ ಹೂಡಲಾಗಿರುವ ದಾವೆಗಳನ್ನು ಅರ್ಜಿದಾರರು ಹಿಂಪಡೆಯತಕ್ಕದ್ದು.

ಹಂಚಿಕೆದಾರರಿಗೆ ತಿಳುವಳಿಕೆ

1 ನಿವೇಶನದ ಅಳತೆ 30'x40'ಗೆ ಮಾತ್ರ ಸೀಮಿತವಾಗಿರುತ್ತದೆ.
2 ಹಂಚಿಕೆಯಾದ ಕೂಡಲೆ, ಹಂಚಿಕೆದಾರರು ನಿವೇಶನದ ಪೂರ್ಣ ಮೌಲ್ಯವನ್ನು ಪಾವತಿಮಾಡತಕ್ಕದ್ದು.
3 ಯಾವುದೇ ಮಧ್ಯವರ್ತಿಗಳ ನೆರವಿಲ್ಲದೆ ನೇರವಾಗಿ ಬಿಡಿಎ ಹಂಚಿಕೆ ವಿಭಾಗವನ್ನು ಸಂಪರ್ಕಿಸಿ.
4. ರೆವಿನ್ಯೂ ನಿವೇಶನದಾರರು ಅರ್ಜಿಗಳನ್ನು ಆನ್‌ಲೈನ್ ಮೂಲಕವೂ ಸಲ್ಲಿಸಬಹುದು. ಆನ್‌ಲೈನ್ ವಿಳಾಸ : **bda-skl.in**

ನಿವೇಶನ ಹಂಚಿಕೆಗಾಗಿ ಪ್ರಾರಂಭಿಕ ಠೇವಣಿ ಭರಿಸುವ ಅಗತ್ಯವಿಲ್ಲ.

*ಬಿಡಿಎ ನಿವೇಶನಗಳ ಹಂಚಿಕೆ ನಿಯಮ, 1984 ಅನ್ವಯಿಸುವುದು.

ರೆವಿನ್ಯೂ ನಿವೇಶನಗಳ ಜಿಪಿಎ ಅಥವಾ ಕರಾರು ಪತ್ರವನ್ನು ಹೊಂದಿರುವವರು ಈ ಹಂಚಿಕೆಗೆ ಅರ್ಹರಾಗಿರುವುದಿಲ್ಲ.

ಭರ್ತಿ ಮಾಡಿದ ಅರ್ಜಿಗಳನ್ನು 31.10.2021 ರಂದು ಅಥವಾ ಅದಕ್ಕೂ ಮುಂಚೆ ಸಲ್ಲಿಸಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ.ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560 020.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು
ಕೆಆರ್‌ಎಸ್*	124.80	114.20	12,238	6,304
ಹಾರಂಗಿ	2,859	2,857.82	852	1,250
ಕಬಿನಿ	2,284	2,280.24	5,300	3,500
ಹೇಮಾವತಿ	2,922	2,913.12	2,478	4,862
ಲಿಂಗನಮಕ್ಕಿ	1,819	1,816	7786	-
ಸೂಪಾ (ಮೀ)	564	556.65	2,285	4,500
ಮಾಣಿ	594.36	587.60	1,235	-
ತುಂಗಭದ್ರ	1,633	1,632.99	34,014	33,414
ಮಲಪ್ರಭಾ	2,079.50	2,078.80	1,444	1,444
ಘಟಪ್ರಭಾ	2,175	2,175.00	2,206	2,206
ಭದ್ರಾ	186	184.8	2714	2,113
ಆಲಮಟ್ಟಿ (ಮೀ)	519.60	519.60	14,300	14,300
ನಾರಾಯಣಪುರ (ಮೀ)	492.25	492.20	13,000	18,000

* ನೆಲಮಟ್ಟದಿಂದ

ಮೋದಿಗೆ ಕ್ಲೀನ್ ಚಿಟ್: ಜಾಫ್ರಿ ಅರ್ಜಿ ಅ.26ಕ್ಕೆ ವಿಚಾರಣೆ

ನವದೆಹಲಿ: 2002ರಲ್ಲಿ ಗುಜರಾತ್‌ನ ಗೋದ್ರಾ ಗಲಭೆ ವೇಳೆ ಅಂದಿನ ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿ ಅವರಿಗೆ ಕ್ಲೀನ್ ಚಿಟ್ ನೀಡಿದ್ದ ಎಸ್‌ಐಟಿ ಕ್ರಮವನ್ನು ಪ್ರಶ್ನಿಸಿ ಕಾಂಗ್ರೆಸ್ ನಾಯಕ ದಿವಂಗತ ಎಹಸಾನ್ ಜಾಫ್ರಿ ಅವರ ಪತ್ನಿ ಜಾಕಿಯಾ ಜಾಫ್ರಿ ಅವರು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಅ. 26ರಂದು ಕೈಗೆತ್ತಿಕೊಳ್ಳುವುದಾಗಿ ಸುಪ್ರೀಂ ಕೋರ್ಟ್ ಮಂಗಳವಾರ ತಿಳಿಸಿದೆ.

ನ್ಯಾಯಮೂರ್ತಿಗಳಾದ ಎ.ಎಂ. ಖಾನ್‌ವಿಲ್ಕರ್, ದಿನೇಶ್ ಮಾಹೇಶ್ವರಿ ಹಾಗೂ ಸಿ.ಟಿ. ರವಿಕುಮಾರ್ ಅವರನ್ನೊಳಗೊಂಡ ನ್ಯಾಯಪೀಠವು, 'ಅರ್ಜಿದಾರರ ವಿನಂತಿಯ ಮೇರೆಗೆ ವಿಚಾರಣೆಯನ್ನು ಅ. 26ಕ್ಕೆ ಮುಂದೂಡಲಾಗಿದೆ. ಆದರೆ, ಮುಂದಿನ ದಿನಗಳಲ್ಲಿ ಅರ್ಜಿಯ ವಿಚಾರಣೆಯ ದಿನಾಂಕವನ್ನು ಮುಂದೂಡುವ ಮನವಿಯನ್ನು ಪರಿಗಣಿಸಲಾಗದು' ಎಂದು ತಿಳಿಸಿತು.

ಅರ್ಜಿದಾರರ ಪರ ವಾದಿಸಿದ ಹಿರಿಯ ವಕೀಲ ಕಪಿಲ್ ಸಿಬಲ್, 'ಅರ್ಜಿಗೆ ಸಂಬಂಧಿಸಿದಂತೆ ಸುಮಾರು 23 ಸಾವಿರ ಪುಟಗಳಷ್ಟು ದಾಖಲೆ ಲಭ್ಯವಾಗಿದ್ದು, ಈ ಮಾಹಿತಿಯನ್ನು ಸೇರಿಸುವ ಸಲುವಾಗಿ ಅರ್ಜಿಯ ವಿಚಾರಣೆ ಮುಂದೂಡಲು ಮನವಿ ಸಲ್ಲಿಸಲಾಗಿತ್ತು' ಎಂದು ನ್ಯಾಯಾಲಯದ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠವು, 'ಇದನ್ನು ಗಮನದಲ್ಲಿಟ್ಟುಕೊಂಡು ಅರ್ಜಿದಾರರಿಗೆ ಹೆಚ್ಚಿನ ಮಾಹಿತಿಯನ್ನು ಸೇರಿಸಲು ಮುಂದಿನ ವಿಚಾರಣೆಯ ವೇಳೆ ಅವಕಾಶ ಕಲ್ಪಿಸಲಾಗುವುದು' ಎಂದು ಸ್ಪಷ್ಟಪಡಿಸಿತು.

2002ರ ಫೆ. 27ರಂದು ಗುಜರಾತ್‌ನ ಗೋದ್ರಾ ರೈಲ್ವೆ ನಿಲ್ದಾಣದ ಬಳಿ ಸಬರಮತಿ ಎಕ್ಸ್‌ಪ್ರೆಸ್ ರೈಲಿನ ಎಸ್–6 ಕೋಚ್‌ಗೆ ಬೆಂಕಿ ಹಚ್ಚಿದ್ದರಿಂದ 59 ಜನರು ಸಾವಿಗೀಡಾಗಿದ್ದರು. ಮರುದಿನ (ಫೆ. 28) ಅಹಮದಾಬಾದ್‌ನ ಗುಲ್ಬರ್ಗ್ ಸೊಸೈಟಿಯಲ್ಲಿ ನಡೆದ ಹತ್ಯಾಕಾಂಡದಲ್ಲಿ ಸಾವಿಗೀಡಾದ 68 ಜನರಲ್ಲಿ ಕಾಂಗ್ರೆಸ್ ಮಾಜಿ ಸಂಸದ ಎಹಸಾನ್ ಜಾಫ್ರಿ ಕೂಡಾ ಒಬ್ಬರಾಗಿದ್ದರು.

2012ರ ಫೆ. 28ರಂದು ಎಸ್‌ಐಟಿ ಮುಚ್ಚಿದ ವರದಿ ಸಲ್ಲಿಸಿತ್ತು. 'ಗಲಭೆಯಲ್ಲಿ ಆಗಿನ ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿ ಹಾಗೂ ಇತರ 63 ಹಿರಿಯ ಅಧಿಕಾರಿಗಳ ವಿರುದ್ಧ ಯಾವುದೇ ಪುರಾವೆಗಳಿಲ್ಲ' ಎಂದು ಎಸ್‌ಐಟಿ ವರದಿಯಲ್ಲಿ ಕ್ಲೀನ್ ಚಿಟ್ ನೀಡಿತ್ತು.

ಕಲುಷಿತ ನೀರು ಸೇವಿಸಿ ಸಾವು: ತಲಾ ₹3 ಲಕ್ಷ ಪರಿಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜಯನಗರ ಜಿಲ್ಲೆ ಹೂವಿನ ಹಡಗಲಿ ಸಮೀಪದ ಮಕರಬ್ಬಿ ಗ್ರಾಮದಲ್ಲಿ ಕಲುಷಿತ ನೀರು ಕುಡಿದು ಸಾವನ್ನಪ್ಪಿದ ವ್ಯಕ್ತಿಗಳ ಕುಟುಂಬಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಲಾ ₹3 ಲಕ್ಷ ಪರಿಹಾರ ಪ್ರಕಟಿಸಿದ್ದಾರೆ.

ವಿಧಾನಸೌಧದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಇದೊಂದು ದುಃಖದ ವಿಚಾರವಾಗಿದೆ. ಈ ಪ್ರಕರಣವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ಹಿರಿಯ ಅಧಿಕಾರಿ ಮನೀಷ್ ಮೌದ್ಗಿಲ್ ಅವರ ನೇತೃತ್ವದಲ್ಲಿ ತನಿಖೆ ನಡೆಸಿ ವರದಿ ಪಡೆಯಲಾಗುವುದು' ಎಂದು ಅವರು ತಿಳಿಸಿದರು.

ಈ ಗ್ರಾಮದಲ್ಲಿ 10 ದಿನಗಳ ಹಿಂದೆ ಜಲ ಜೀವನ್ ಮಿಷನ್ ಯೋಜನೆಯಡಿ ಪೈಪ್‌ಲೈನ್ ಅಳವಡಿಕೆ ಕಾಮಗಾರಿ ಸಂದರ್ಭದಲ್ಲಿ ಕಲುಷಿತ ನೀರು ಕುಡಿದು ಗ್ರಾಮಸ್ಥರು ಅಸ್ವಸ್ಥರಾದರು. ಈವರೆಗೆ ಆರು ಮಂದಿ ಮೃತಪಟ್ಟಿದ್ದಾರೆ ಎಂದು ಮೂಲಗಳು ಹೇಳಿವೆ.

ಕೇರಳ: ಪಕ್ಷ ತೊರೆದ ಮತ್ತೊಬ್ಬ ಕಾಂಗ್ರೆಸ್ ನಾಯಕ

ಕಲ್ಪೆಟ್ಟ (ಕೇರಳ) (ಪಿಟಿಐ): ಈ ವರ್ಷದ ಏಪ್ರಿಲ್‌ನಿಂದ ಕೇರಳದ ಕಾಂಗ್ರೆಸ್ ಪಕ್ಷದಲ್ಲಿ ಆರಂಭವಾಗಿರುವ ರಾಜೀನಾಮೆ ಪರ್ವ ಮುಂದುವರಿದಿದ್ದು, ಈಗ ವಯನಾಡು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಪಿ.ವಿ. ಬಾಲಚಂದ್ರನ್ ಅವರು ಪಕ್ಷ ತೊರೆಯುವುದಾಗಿ ತಿಳಿಸಿದ್ದಾರೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪ್ರತಿನಿಧಿಸುತ್ತಿರುವ ವಯನಾಡ್ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವುದರಿಂದ ಈ ರಾಜೀನಾಮೆ ಮಹತ್ವ ಪಡೆದಿದೆ.

'ಅತ್ಯಂತ ಹಳೆಯ ರಾಜಕೀಯ ಪಕ್ಷವಾಗಿರುವ ಕಾಂಗ್ರೆಸ್, ದೇಶದಲ್ಲಿ ಬಿಜೆಪಿಯ ಬೆಳವಣಿಗೆಯನ್ನು ತಡೆಯುವಲ್ಲಿ ವಿಫಲವಾಗಿದೆ' ಎಂದು ಅವರು ಆರೋಪಿಸಿದ್ದಾರೆ.

'ಈಗಾಗಲೇ ಬಹುಸಂಖ್ಯಾತ ಸಮುದಾಯದ ಮತ್ತು ಅಲ್ಪಸಂಖ್ಯಾತ ಸಮುದಾಯದ ಕಾರ್ಯಕರ್ತರು ಪಕ್ಷದಿಂದ ದೂರವಾಗುತ್ತಿದ್ದಾರೆ. ದಿಕ್ಕು–ದೆಸೆಯಿಲ್ಲದೇ ಸಾಗುತ್ತಿರುವ ಪಕ್ಷದ ಜೊತೆ ಜನರು ನಿಲ್ಲುತ್ತಿಲ್ಲ' ಎಂದು ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯಕಾರಿ ಮಂಡಳಿ ಸದಸ್ಯರೂ ಆಗಿದ್ದ ಬಾಲಚಂದ್ರನ್ ಹೇಳಿದ್ದಾರೆ.

ರಾಜ್ಯ ಕಾಂಗ್ರೆಸ್ ನಾಯಕತ್ವದ ಕಾರ್ಯವೈಖರಿಯನ್ನು ಟೀಕಿಸಿದ ಅವರು, 'ಜನರ ಸಮಸ್ಯೆಗಳ ಬಗ್ಗೆ ಸ್ಪಷ್ಟವಾದ ರಾಜಕೀಯ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿಲ್ಲ. ಇಂಥ ಸನ್ನಿವೇಶದಲ್ಲಿ ಮುಂದೆ ಕಾರ್ಯಕರ್ತರ ಭಾವನೆಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುವುದಿಲ್ಲ ಎಂಬ ಅರಿವಿನಿಂದ ನಾನು ಪಕ್ಷ ತೊರೆಯುವ ನಿರ್ಧಾರ ಕೈಗೊಂಡಿದ್ದೇನೆ' ಎಂದು ಅವರು ಹೇಳಿದರು.

ಕೇರಳದಲ್ಲಿ ಇದೇ ಏಪ್ರಿಲ್‌ನಲ್ಲಿ ನಡೆದ ವಿಧಾನಸಭಾ ಚುನಾವಣೆಗೆ ಮುನ್ನ ಮಾಜಿ ಶಾಸಕ ಕೆ.ಸಿ.ರೋಸಕುಟ್ಟಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ.ಎಸ್. ವಿಶ್ವನಾಥನ್ ಮತ್ತು ಡಿಸಿಸಿ ಪ್ರಧಾನ ಕಾರ್ಯದರ್ಶಿ ಅನಿಲ್ ಕುಮಾರ್ ಅವರು ಕಾಂಗ್ರೆಸ್ ಪಕ್ಷ ತೊರೆದಿದ್ದರು.

'ನಾಡಗೀತೆ: ತರಾತುರಿ ನಿರ್ಧಾರ ಬೇಡ'

ಬೆಂಗಳೂರು: 'ನಾಡಗೀತೆಯ ಧಾಟಿ ನಿಗದಿಗೆ ಸಂಬಂಧಿಸಿದಂತೆ ಆತುರದಲ್ಲಿ ನಿರ್ಧಾರ ಕೈಗೊಳ್ಳಬಾರದು. ಇನ್ನೂ ಎರಡು ಮೂರು ಸಭೆಗಳನ್ನು ನಡೆಸಿ, ರಾಜ್ಯದ ಕವಿಗಳು, ಸಲಹೆಗಳನ್ನು ಕ್ರೋಡೀಕರಿಸಿ ನಿರ್ಣಯ ಕೈಗೊಳ್ಳಬೇಕು' ಎಂದು ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ ಆಗ್ರಹಿಸಿದ್ದಾರೆ.

ಈ ಬಗ್ಗೆ ಅವರು ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ.

ಪರಸ್ಪರ ಅಂತರ ಕಾಯ್ದುಕೊಳ್ಳಿ

ಕರ್ನಾಟಕ ಸರಕಾರ
ತೋಟಗಾರಿಕೆ ಉಪನಿರ್ದೇಶಕರ ಕಾರ್ಯಾಲಯ
(ಜಿಲ್ಲಾ ಪಂಚಾಯತ್) ಕೊಪ್ಪಳ. ತಾಲೂಕು ಮತ್ತು ಜಿಲ್ಲೆ: ಕೊಪ್ಪಳ.
ದೂ.ಸಂ: 08539-230531. E - Mail : ddhkoppal@yahoo.com
ಕ್ರ.ಸಂ:ತೋಉನಿ:ಜಿಪಂ:ಅಧೀ:ಇ-ಟೆಂಡರ್-22:2021-22 ದಿ: 30.09.2021
ಇ-ಟೆಂಡರ್ ಪ್ರಕಟಣೆ
2021-22 ನೇ ಸಾಲಿನ ವಿವಿಧ ಯೋಜನೆಗಳಡಿಯಲ್ಲಿ ತಾಲ್ಲೂಕುಗಳಿಗೆ ಅವಶ್ಯವಿರುವ ಮಾನವ ಸಂಪನ್ಮೂಲ ಸೇವೆಯನ್ನು ಪೂರೈಸಲು ನೊಂದಾಯಿತ ಸಂಸ್ಥೆಗಳಿಂದ ಇ-ಟೆಂಡರ್ ಆಹ್ವಾನಿಸಲಾಗಿದೆ. ಇ-ಪ್ರೋಕ್ಯೂರಮೆಂಟ್ ವೆಬ್ ಸೈಟ್ (https://eproc.karnataka.gov.in) ನಲ್ಲಿ ದಿನಾಂಕ:01.10.2021 ರಿಂದ ಟೆಂಡರ್ ಸಲ್ಲಿಸಬಹುದು.
ಕಾಮಗಾರಿ: ಕೊಪ್ಪಳ ಜಿಲ್ಲೆಯ ತೋಟಗಾರಿಕೆ ಇಲಾಖೆಯ ವಿವಿಧ ತಾಲ್ಲೂಕುಗಳಿಗೆ ಅವಶ್ಯವಿರುವ ಮಾನವ ಸಂಪನ್ಮೂಲ (ಬೆರಳಚ್ಚುಗಾರರು ಮತ್ತು ಕಛೇರಿ ಸಹಾಯಕರ) ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪೂರೈಸಲು. (NO:DDH:ZP:KPL:SUP-e-Tender-22:2021-22 Date: 30.09.2021). ಅಂದಾಜು ಮೊತ್ತ: 25.00. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 27.10.2021
ಹೆಚ್ಚಿನ ಮಾಹಿತಿಗಳನ್ನು ಇ-ಪ್ರೋಕ್ಯೂರಮೆಂಟ್ ವೆಬ್ ಸೈಟ್ (https://eproc.karnataka.gov.in) ನಲ್ಲಿ ಪಡೆಯಬಹುದು ಅಥವಾ ತೋಟಗಾರಿಕೆ ಉಪನಿರ್ದೇಶಕರು (ಜಿಪಂ) ಕೊಪ್ಪಳ ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ದೂ: 08539-231530-231531 / 9986484602
ಸಹಿ/-ತೋಟಗಾರಿಕೆ ಉಪನಿರ್ದೇಶಕರು (ಜಿಪಂ) ಕೊಪ್ಪಳ.
ಡಿಐಪಿಆರ್/ಕೊಪ್ಪಳ/306/ಎಂಸಿಎ/2021-22

ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಲೋ.ಇ, ವಿಶೇಷ ವಿಭಾಗ, ಶಿವಮೊಗ್ಗ.
ಫೋನ್‌ನಂ.:08182-222942 ಇ-ಮೇಲ್: spdivision@gmail.com
ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ-ಲಕೋಟೆ ಪದ್ಧತಿ) (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)-2ನೇ ಕರೆ
ಐ.ಎಫ್.ಟಿ. ಸಂಖ್ಯೆ: 36/2021-22 ದಿ: 05.10.2021
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ/ಡಬ್ಲ್ಯೂ-4 ನಿಯಮದನ್ವಯ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ 2ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಗೆ 5054-03-337-0-17-154-ರಾ.ಹೆ ರಸ್ತೆ ಕಾಮಗಾರಿಗಳು ಸುಧಾರಣೆ ಲೆಕ್ಕಶೀರ್ಷಿಕೆಯಡಿಯಲ್ಲಿ ಅನುಮೋದನೆಗೊಂಡಿರುವ ಶಿವಮೊಗ್ಗ ತಾಲ್ಲೂಕಿನಲ್ಲಿ ಅನುಮೋದನೆಯಾದ 01 ಕಾಮಗಾರಿಗೆ ಟೆಂಡರ್‌ನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಈ ಕೆಳಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಗೆ ಟೆಂಡರ್‌ಗಿಟ್ಟ ಮೊತ್ತ ರೂ. 267.78 ಲಕ್ಷ ಮತ್ತು ಇ.ಎಂ.ಡಿ, ಮೊತ್ತ ರೂ. 4.02 ಲಕ್ಷ ಸದರಿ ಕಾಮಗಾರಿಯ ಟೆಂಡರ್ ಅವಧಿ 09 ತಿಂಗಳು ಮಳೆಗಾಲ ಸೇರಿ, ಸದರಿ ಕಾಮಗಾರಿಗೆ ಈ ಕೆಳಸಹಿ ಮಾಡಿರುವವರು ಟೆಂಡರ್ ಆಹ್ವಾನಿಸಿರುತ್ತಾರೆ. ಅರ್ಹ ಗುತ್ತಿಗೆದಾರರು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್-2 ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್- 3 ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು, ವಿದ್ಯುನ್ಮಾನ ಜಾಲದಲ್ಲಿ ದಿನಾಂಕ: 05-10-2021 ರಿಂದ 08-11-2021 ರ 17.00 ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು ದಿನಾಂಕ: 08-11-2021 ರ ಸಂಜೆ 5:00 ಗಂಟೆಯೊಳಗೆ ಇ-ಪ್ರೊಕ್ಯೂರ್‌ಮೆಂಟ್ ನಲ್ಲಿ ಭರಿಸತಕ್ಕದ್ದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ನಲ್ಲಿ ದಿನಾಂಕ: 09-11-2021 ರಂದು ಸಂಜೆ 17.30ಕ್ಕೆ ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: 10-11-2021 ರಂದು ಬೆಳಿಗ್ಗೆ 11.00ರ ನಂತರ ತೆರೆಯಲಾಗುವುದು.
ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ಯಾವುದೇ ತಿದ್ದುಪಡಿ ಇದ್ದಲ್ಲಿ ಇಪ್ರೊಕ್ಯೂರ್‌ಮೆಂಟ್‌ನಲಲಿಯೇ ಪ್ರಕಟಿಸಲಾಗುವುದು. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.
ಸಹಿ/- ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ವಿಶೇಷ ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಶಿ/ನಂ-21/10/ಎಂಸಿಎ/21-22/662

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಗದಗ ವಿಭಾಗ, ಗದಗ
ಸಂಖ್ಯೆ/ವಾಕರಸಾ/ಗವಿ/ಸಂಚಾರ/ವಾಣಿಜ್ಯ:1135/2021 ದಿ: 04-10-2021
ಇ-ಟೆಂಡರ್ ಪ್ರಕಟಣೆ ಸಂಖ್ಯೆ : 06/2021
(ಇ-ಪ್ರಕ್ಯೂರಮೆಂಟ್ ಮೂಲಕ)
ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಗದಗ ವಿಭಾಗದ ವ್ಯಾಪ್ತಿಗೆ ಬರುವ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ, ಖಾಲಿಯಾಗಲಿರುವ ವಾಣಿಜ್ಯ ಮಳಿಗೆಗಳಿಗೆ ಪರವಾನಿಗೆದಾರರನ್ನು ಹಾಗೂ ಬಸ್ ನಿಲ್ದಾಣದ ಆವರಣ, ಶೌಚಾಲಯ, ಮೂತ್ರಾಲಯಗಳಿಗೆ ಸ್ವಚ್ಛತಾ ಗುತ್ತಿಗೆದಾರರನ್ನು ಆಯ್ಕೆ ಮಾಡಲು (ಕೊಟೇಷನ್) ಇ-ಪ್ರಕ್ಯೂರಮೆಂಟ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಟೆಂಡರ ದಸ್ತಾವೇಜಗಳನ್ನು ಇ-ಪ್ರಕ್ಯೂರಮೆಂಟ್ ವೆಬ್‌ಸೈಟ್ ವಿಳಾಸ: http/www.eproc.karnataka.gov.in ಮೂಲಕ ಡೌನಲೋಡ್ ಮಾಡಿಕೊಳ್ಳಬಹುದು. ನಿಗದಿತ ದಾಖಲಾತಿಗಳೊಂದಿಗೆ ದಿನಾಂಕ : 27-10-2021 ರಂದು 17:00 ಗಂಟೆಯವರೆಗೆ ಆನ್‌ಲೈನ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿದ್ದು, ಇ-ಪ್ರಕ್ಯೂರಮೆಂಟ್ ಸೆಲ್‌ನಿಂದ DSC(Digital Signature Certificate) ಪಡೆದಿರುವ ಅಧೀಕೃತ ಅಭ್ಯರ್ಥಿಗಳು ಮಾತ್ರ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ. ದಿನಾಂಕ : 29-10-2021 ರಂದು ಬೆಳಿಗ್ಗೆ 11.00 AM ಗಂಟೆಗೆ ಟೆಂಡರ ತೆರೆಯಲಾಗುವದು. (ಯಾವುದೇ ತಾಂತ್ರಿಕ ದೋಷವಿಲ್ಲದಿದ್ದಲ್ಲಿ). ಹೆಚ್ಚಿನ ವಿವರಗಳಿಗಾಗಿ ಹೆಲ್ಪಡೆಸ್ಕ್ ಸಂಖ್ಯೆ : 080-22371090, 080-22340060 ನ್ನು ಸಂಪರ್ಕಿಸಿ ಅಥವಾ ವಿಭಾಗೀಯ ಕಛೇರಿ, ವಾ.ಕ.ರ.ಸಾ.ಸಂಸ್ಥೆ ಗದಗ ವಿಭಾಗ ಗದಗ ಇವರಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ : 7760991802 (ವಿಭಾಗೀಯ ಸಂಚಲನಾಧಿಕಾರಿಗಳು), 7026047644 (ವಿಷಯ ನಿರ್ವಾಹಕ) ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
ಇ-ಟೆಂಡರ್‌ನಲ್ಲಿ ಭಾಗವಹಿಸುವವರು ಇ-ಟೆಂಡರ್ ಪ್ರಕಟಣೆ ಸಂಖ್ಯೆ : 06/2021ರ ಮತ್ತು ಇ-ಟೆಂಡರ್ Document ನಲ್ಲಿ ನಮೂದಿಸಿದ ಷರತ್ತು ಮತ್ತು ನಿಭಂದನೆಗಳಿಗೆ ಭದ್ದರಾಗಿರತಕ್ಕದ್ದು. ಕಾರಣ ನೀಡದೇ ಇ-ಟೆಂಡರ್‌ನಲ್ಲಿ ಸಲ್ಲಿಸಿರುವ ಅರ್ಜಿಗಳನ್ನು ಆಯ್ಕೆ ಮಾಡುವ ಅಥವಾ ಇ-ಟೆಂಡರ್ ಪ್ರಕಟಣೆಯನ್ನು ಮುಂದೂಡುವ, ಮಾರ್ಪಾಡು ಮಾಡುವ ಅಥವಾ ಪ್ರಕಟಣೆಯನ್ನು ರದ್ದುಪಡಿಸುವ ಅಧಿಕಾರವನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ.
ಸಹಿ/- ವಿಭಾಗೀಯ ನಿಯಂತ್ರಣಾಧಿಕಾರಿ, ವಾ.ಕ.ರ.ಸಾ. ಸಂಸ್ಥೆ ಗದಗ ವಿಭಾಗ ಗದಗ.
ವಾಸಾಸಂಇ/ಗದಗ/ಎಂ.ಸಿ.ಎ/309/21-22

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ-1, (ಕೆರೆಗಳು), 3ನೇ ಮಹಡಿ, ಅನೆಕ್ಸ್-3 ಕಟ್ಟಡ, ಬಿಬಿಎಂಪಿ ಕೇಂದ್ರ ಕಛೇರಿ, ಎನ್.ಆರ್. ಚೌಕ, ಬೆಂಗಳೂರು-02.
ಸಂಖ್ಯೆ:ಕಾಪಾಅ-1(ಕೆರೆಗಳು)/ಟೆಂಡರ್-20/2021-22 ದಿನಾಂಕ: 05-10-2021
ಅಲ್ಪಾವಧಿ ಟೆಂಡರ್ ಪ್ರಕಟಣೆ (ಐಎಫ್‌ಟಿ)
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು-1, (ಕೆರೆಗಳು), ಬೃಬೆಂಮಪಾ, ಬೆಂಗಳೂರು ಇವರು ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಯನ್ನು ನಿರ್ವಹಿಸಲು ಪ್ರಸ್ತಾವನೆಗಳನ್ನು (ತಾಂತ್ರಿಕ ಮತ್ತು ಆರ್ಥಿಕ) ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು	ಯೋಜನೆಯ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)
01	ಕಾಚರಕನಹಳ್ಳಿ ಕೆರೆಗೆ ತಂತಿಬೇಲಿ ಒದಗಿಸುವುದು. ಕರೆ-2	250.00

ಟೆಂಡರ್ ದಾಖಲಾತಿಯಲ್ಲಿ ನಮೂದಿಸಿರುವ ಪ್ರಕಾರ ಟೆಂಡರ್‌ಗಳು ಇಎಂಡಿ ಘೋಷಣಾ ಪತ್ರ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 675 ವೆಚ್ಚ-12/2020 ದಿನಾಂಕ: 22-12-2020ರ ಪ್ರಕಾರ ಜೊತೆಗೂಡಿರಬೇಕು.
ಟೆಂಡರ್‌ನ ಕಾರ್ಯಸೂಚಿ: 1) ಆರ್‌ಎಫ್‌ಪಿ ಡಾಕ್ಯೂಮೆಂಟ್‌ಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ದಿನಾಂಕ: 06-10-2021 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ: 18-10-2021ರ ಸಂಜೆ 4:00 ಗಂಟೆಯೊಳಗೆ. 3) ಪೂರ್ವ ಬಿಡ್ ಸಭೆಯನ್ನು ಮುಖ್ಯ ಅಭಿಯಂತರರು (ಕೆರೆಗಳು) ರವರ ಕಚೇರಿಯಲ್ಲಿ ದಿನಾಂಕ: 13-10-2021 ರಂದು ಮಧ್ಯಾಹ್ನ 12:00 ಗಂಟೆಗೆ ನಡೆಸಲಾಗುವುದು. 4) ತಾಂತ್ರಿಕ ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರವರ ಕಛೇರಿ-1, (ಕೆರೆಗಳು)ಯಲ್ಲಿ ತೆರೆಯುವ ದಿನಾಂಕ: 19-10-2021ರ ಸಂಜೆ 4:30 ಗಂಟೆಗೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ https://eproc. karnataka.gov.in ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.
ಸಹಿ/- ಕಾರ್ಯಪಾಲಕ ಅಭಿಯಂತರರು-1 (ಕೆರೆಗಳು), ಬೃಬೆಂಮಪಾ.
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕ.ನೀ.ನಿ.ನಿ., ವಾರಾಹಿ ಯೋಜನಾ ವಿಭಾಗ ಸಿದ್ದಾಪುರ, ಉಡುಪಿ ಜಿಲ್ಲೆ -576229
ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ:ಕಾಇಂ/ಕನೀನಿನಿ/ವಾಯೋವಿ/ಪಿಬಿ/ಟೆಂಡರ್/08/2021-22/669 ದಿನಾಂಕ: 27-09-2021
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ವೇದಿಕೆ) (Two tender document system)
ವಾರಾಹಿ ನೀರಾವರಿ ಯೋಜನೆಯಡಿ ವಾರಾಹಿ ಯೋಜನಾ ವಿಭಾಗದ ವ್ಯಾಪ್ತಿಯಡಿ ಕಾರ್ಯ ನಿರ್ವಹಿಸುತ್ತಿರುವ ನಂ.1 ವಾರಾಹಿ ಯೋಜನಾ ಉಪವಿಭಾಗ ಕಛೇರಿಗೆ ಸಂಬಂಧಿಸಿದ ಕಾಮಗಾರಿಯನ್ನು ಇ-ಪ್ರಕ್ಯೂರ್‌ಮೆಂಟ್ ವೇದಿಕೆಯಲ್ಲಿ ಸಂಬಂಧಪಟ್ಟ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು ವಿವರಗಳು ಕೆಳಕಂಡಂತಿರುತ್ತದೆ.
(1) ಗುತ್ತಿಗೆದಾರರು www.eproc.karnataka.gov.in ಅಂತರ್ಜಾಲದ ಮೂಲಕ ಟೆಂಡರಿನಲ್ಲಿ ಭಾಗವಹಿಸಬಹುದು. (2) ಟೆಂಡರಿಗಿಟ್ಟ ಮೊತ್ತ ರೂ. 199.68 ಲಕ್ಷ (3) ಗುತ್ತಿಗೆದಾರರು ಅಂತರ್ಜಾಲದ ಮೂಲಕ ಇ-ಪ್ರಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರಿನಲ್ಲಿ ಭಾಗವಹಿಸಬಹುದಾದ ದಿನಾಂಕ: 01.10.2021 (4) ಗುತ್ತಿಗೆದಾರರು ಟೆಂಡರ್ ಬಗ್ಗೆ ಸ್ಪಷ್ಟೀಕರಣ ಕೇಳಲು ದಿನಾಂಕ: 07.10.2021 (5) ಗುತ್ತಿಗೆದಾರರು ಅಂತರ್ಜಾಲದ ಮೂಲಕ ಇ-ಪ್ರಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರಿನಲ್ಲಿ ಭಾಗವಹಿಸಲು ಕೊನೆಯ ದಿನಾಂಕ: 12.10.2021 (6) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 16.10.2021 ಹೆಚ್ಚಿನ ವಿವರಗಳಿಗಾಗಿ http://eproc.karnataka.gov.in, www.knnlindia.com ಅಂತರ್ಜಾಲ ಅಥವಾ ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ವಾರಾಹಿ ಯೋಜನಾ ವಿಭಾಗ, ಇವರನ್ನು ಸಂಪರ್ಕಿಸುವುದು. (7) ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ, ಮಾರ್ಪಾಡು ಅಥವಾ ಇತರ ಬದಲಾವಣೆಗಳಿದ್ದಲ್ಲಿ, www.eproc.karnataka.gov.in ವೆಬ್‌ಸೈಟ್ ನಲ್ಲಿ ಪ್ರಚುರಪಡಿಸಲಾಗುವುದು.
ಸಹಿ/- ಕಾರ್ಯಪಾಲಕ ಇಂಜಿನಿಯರ್, ಕನೀನಿನಿ., ವಾರಾಹಿ ಯೋಜನಾ ವಿಭಾಗ, ಸಿದ್ದಾಪುರ ಉಡುಪಿ ಜಿಲ್ಲೆ
ವಾಸಾಇ/ಸನಿಉ/ಎಂಸಿಎ/408/21-22 ದಿ:05.10.2021

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕ.ನೀ.ನಿ.ನಿ., ವಾರಾಹಿ ಯೋಜನಾ ವಿಭಾಗ ಸಿದ್ದಾಪುರ, ಉಡುಪಿ ಜಿಲ್ಲೆ -576229
ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ:ಕಾಇಂ/ಕನೀನಿನಿ/ವಾಯೋವಿ/ಪಿಬಿ/ಟೆಂಡರ್/05/2021-22/663 ದಿನಾಂಕ: 27.09.2021
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ವೇದಿಕೆ) (Two tender document system)
ವಾರಾಹಿ ನೀರಾವರಿ ಯೋಜನೆಯಡಿ ವಾರಾಹಿ ಯೋಜನಾ ವಿಭಾಗದ ವ್ಯಾಪ್ತಿಯಡಿ ಕಾರ್ಯ ನಿರ್ವಹಿಸುತ್ತಿರುವ ನಂ.1 ವಾರಾಹಿ ಯೋಜನಾ ಉಪವಿಭಾಗ ಕಛೇರಿಗೆ ಸಂಬಂಧಿಸಿದ ಕಾಮಗಾರಿಯನ್ನು ಇ-ಪ್ರಕ್ಯೂರ್‌ಮೆಂಟ್ ವೇದಿಕೆಯಲ್ಲಿ ಸಂಬಂಧಪಟ್ಟ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು ವಿವರಗಳು ಕೆಳಕಂಡಂತಿರುತ್ತದೆ.
(1) ಗುತ್ತಿಗೆದಾರರು www.eproc.karnataka.gov.in ಅಂತರ್ಜಾಲದ ಮೂಲಕ ಟೆಂಡರಿನಲ್ಲಿ ಭಾಗವಹಿಸಬಹುದು. (2) ಟೆಂಡರಿಗಿಟ್ಟ ಮೊತ್ತ: ರೂ. 99.88 ಲಕ್ಷ (3) ಗುತ್ತಿಗೆದಾರರು ಅಂತರ್ಜಾಲದ ಮೂಲಕ ಇ-ಪ್ರಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರಿನಲ್ಲಿ ಭಾಗವಹಿಸಬಹುದಾದ ದಿನಾಂಕ: 01.10.2021 (4) ಗುತ್ತಿಗೆದಾರರು ಟೆಂಡರ್ ಬಗ್ಗೆ ಸ್ಪಷ್ಟೀಕರಣ ಕೇಳಲು ದಿನಾಂಕ: 07.10.2021 (5) ಗುತ್ತಿಗೆದಾರರು ಅಂತರ್ಜಾಲದ ಮೂಲಕ ಇ-ಪ್ರಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರಿನಲ್ಲಿ ಭಾಗವಹಿಸಲು ಕೊನೆಯ ದಿನಾಂಕ: 12.10.2021 (6) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 16.10.2021 ಹೆಚ್ಚಿನ ವಿವರಗಳಿಗಾಗಿ http://eproc.karnataka.gov.in, www.knnlindia.com ಅಂತರ್ಜಾಲ ಅಥವಾ ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ವಾರಾಹಿ ಯೋಜನಾ ವಿಭಾಗ, ಸಿದ್ಧಾಪುರ, ಉಡುಪಿ ಜಿಲ್ಲೆ ಇವರನ್ನು ಸಂಪರ್ಕಿಸುವುದು. (7) ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ, ಮಾರ್ಪಾಡು ಅಥವಾ ಇತರ ಬದಲಾವಣೆಗಳಿದ್ದಲ್ಲಿ, www.eproc.karnataka.gov.in ವೆಬ್‌ಸೈಟ್ ನಲ್ಲಿ ಪ್ರಚುರಪಡಿಸಲಾಗುವುದು.
ಸಹಿ/- ಕಾರ್ಯಪಾಲಕ ಇಂಜಿನಿಯರ್, ಕನೀನಿನಿ., ವಾರಾಹಿ ಯೋಜನಾ ವಿಭಾಗ, ಸಿದ್ದಾಪುರ ಉಡುಪಿ ಜಿಲ್ಲೆ
ವಾಸಾಇ/ಸನಿಉ/ಎಂಸಿಎ/404/21-22 ದಿ:05.10.2021

ಲೋಕೋಪಯೋಗಿ ಇಲಾಖೆ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ.
ಕ್ರಸಂ.: .ಲೋ.ಇ./ಚಿ.ವಿ./ಸ.ಇಂ.-1/ಟೆಂಡರ/2021-22/3265 ದಿನಾಂಕ: 04.10.2021
ಅಲ್ಪಾವಧಿ ಇ-ಟೆಂಡರ ಪ್ರಕಟಣೆ
ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2021-22ನೇ ಸಾಲಿನ ಲೆಕ್ಕ ಶಿರ್ಷಿಕೆ 4059-ನ್ಯಾಯಾಲಯ ಕಟ್ಟಡ ಕಾಮಗಾರಿಗಳ ಅಡಿ 1 ಕಾಮಗಾರಿ ಹಾಗೂ ಲೆಕ್ಕ ಶಿರ್ಷಿಕೆ 8443-ಠೇವಣಿ ವಂತಿಕೆ ಅಡಿ 2 ಕಾಮಗಾರಿಗಳು, ಹೀಗೆ ಒಟ್ಟು 3 ಕಾಮಗಾರಿಗಳ ಗುತ್ತಿಗೆ ಇಟ್ಟ ಕನಿಷ್ಠ ಮೊತ್ತ ರೂ. 15.79 ಲಕ್ಷ ಹಾಗೂ ಗರಿಷ್ಠ ಮೊತ್ತ ರೂ. 68.42 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.
ಕ್ರಸಂ. 2 & 3ರಲ್ಲಿನ ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು.
(1) ಆಕ್ಷೇಪಣೆ-ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ: 13.10.2021 (ಸಾಯಂಕಾಲ 5:30 ಗಂಟೆಯವರೆಗೆ). (2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 16.10.2021 (ಸಾಯಂಕಾಲ 5:00 ಗಂಟೆಯವರೆಗೆ). (3) ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Single Cover System): 18.10.2021 (ಸಾಯಂಕಾಲ 4:30 ಗಂಟೆಗೆ).
ಕ್ರಸಂ. 1 ರಲ್ಲಿನ ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು.
(1) ಆಕ್ಷೇಪಣೆ-ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ: 19.10.2021 (ಸಾಯಂಕಾಲ 5:30 ಗಂಟೆಯವರೆಗೆ). (2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 22.10.2021 (ಸಾಯಂಕಾಲ 5:00 ಗಂಟೆಯವರೆಗೆ). (3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 25.10.2021 (ಸಾಯಂಕಾಲ 4:30 ಗಂಟೆಗೆ) (4) ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ".
ಕಾಮಗಾರಿಯ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ www.eproc.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.inನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.
ಸಹಿ/- ಕಾರ್ಯನಿರ್ವಾಹಕ ಇಂಜನೀಯರರು ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ
DIPR/BGM/856/Manipal/2021-22

ಕರ್ನಾಟಕ ಸರ್ಕಾರ
ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ
ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಸುಧಾರಣಾ ಸಂಸ್ಥೆಗಳ ಸಂಕೀರ್ಣ ಹೊಸೂರು ರಸ್ತೆ, ಬೆಂಗಳೂರು ನಗರ ಜಿಲ್ಲೆ
ದೂರವಾಣಿ ಸಂ: 080-29752324 | e-mail: dwd.ddwo@gmail.com
ಸಂ. ಜಿವಿಹಿನಾಸಇ/ಬೆಂ(ನ)/ಯ.ದ್ವಿ.ವಾ/2021-22 ದಿನಾಂಕ:04.10.2021
ಅಲ್ಪಾವಧಿ ಟೆಂಡರ್ ಪ್ರಕಟಣೆ
2021-22ನೇ ಸಾಲಿನಲ್ಲಿ ಬೆಂಗಳೂರು ನಗರಜಿಲ್ಲೆಯ ವಿಕಲಚೇತನರಿಗೆ ಅವಶ್ಯಕವಿರುವ ಯಂತ್ರಚಾಲಿತ ದ್ವಿಚಕ್ರವಾಹನಗಳನ್ನು(Details of Motorised Two Wheeler-124CC and above (Gear less) and (BS-6) with Retro Fitment of additional two wheels attachment) ಖರೀದಿಸಿ, ವಿತರಿಸಲು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಬೆಂಗಳೂರು ನಗರ ಜಿಲ್ಲೆ ಇವರು ಉದ್ದೇಶಿಸಿದ್ದು, ಈ ಸಂಬಂಧ ಟೆಂಡರ್ ಬುಲೆಟಿನ್‌ನನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಪ್ರಕರಣ 5ರ ಮೇರೆಗೆ ಹೊರಡಿಸಲಾಗಿದೆ. ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಆಹ್ವಾನಿಸಿದ್ದು ಯಂತ್ರಚಾಲಿತ ದ್ವಿ-ಚಕ್ರವಾಹನಗಳನ್ನು ಪೂರೈಸಲು ನೋಂದಾಯಿಸಿಕೊಂಡ ಆಸಕ್ತ ಸಂಸ್ಥೆಯವರು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ.
1) ಟೆಂಡರ್ ದಾಖಲಾತಿಯೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 21.10.2021 ಸಂಜೆ 5:00 ಗಂಟೆ. 2) ಟೆಂಡರನ್ನು ತೆರೆಯುವ ದಿನಾಂಕ: 22.10.2021 ಸಂಜೆ 3:00 ಗಂಟೆಗೆ.
ಟೆಂಡರ್ ಫಾರಂ, ದಸ್ತಾವೇಜನ್ನು (Tender Document) ಟೆಂಡರ್ ದಾಖಲೆ ಇ.ಎಂ.ಡಿ ಇತ್ಯಾದಿ ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.
ಸಹಿ/- ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು,
ವಾಸಾಸಂಇ/ಬೆಂನ/ಜಿಎ/1778/2021-22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೆಂಗಳೂರು ನಗರ ವಿಶ್ವವಿದ್ಯಾನಿಲಯ BENGALURU CITY UNIVERSITY
ಆಗು ನೀ ಅನಿಕೇತನ BE BOUNDLESS
ಸೆಂಟ್ರಲ್ ಕಾಲೇಜು ಆವರಣ, ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು- 560 001.
Ph. No. 080-22961016 / 22131385 E-Mail ID: registrarbcu@gmail.com
ಸಂಖ್ಯೆ: ಬೆಂ.ನ.ವಿ/ ಶೈಕ್ಷಣಿಕ/ಸ್ನಾ.ಕೋ.ಪ್ರವೇಶ2/4012/2021-22 ದಿನಾಂಕ: 05.10.2021
ಸ್ನಾತಕೋತ್ತರ ಪದವಿಯ ಪ್ರವೇಶಾತಿಯ ಮುಂದೂಡಿರುವ ಅಧಿಸೂಚನೆ
ಉಲ್ಲೇಖ: 1. ಸಂಖ್ಯೆ: ಬೆಂ.ನ.ವಿ/ ಶೈಕ್ಷಣಿಕ/ಸ್ನಾ.ಕೋ.ಪ್ರವೇಶ/2021-22, ದಿನಾಂಕ: 20.09.2021
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 05.10.2021
ಮೇಲ್ಕಂಡ ಉಲ್ಲೇಖಕ್ಕೆ ಸಂಬಂಧಿಸಿದಂತೆ 2021-22ನೇ ಶೈಕ್ಷಣಿಕ ಸಾಲಿನ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸೆಂಟ್ರಲ್ ಕಾಲೇಜು ಆವರಣದ ಸ್ನಾತಕೋತ್ತರ ವಿಭಾಗಗಳು ಮತ್ತು ಸಂಯೋಜಿತ ಕಾಲೇಜುಗಳ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಾತಿಗೆ ಸಂಬಂಧಿಸಿದಂತೆ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿರುವ ದಿನಾಂಕಗಳನ್ನು ಈ ಕೆಳಕಂಡಂತೆ ಮುಂದೂಡಲಾಗಿದೆ:-

ಪ್ರವೇಶ ವೇಳಾ ಪಟ್ಟಿ		
1.	ದಂಡ ಶುಲ್ಕವಿಲ್ಲದೆ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ	16.10.2021
2.	ರೂ.100/- ದಂಡ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	23.10.2021

DIPR/DDU/RO1795/2021-22 ಸಹಿ/- ಕುಲಸಚಿವರು

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಯತ್ತತಾ ಸಂಸ್ಥೆ)
ಡಾ. ಎಂ.ಹೆಚ್. ಮರಿಗೌಡ ರಸ್ತೆ, ಬೆಂಗಳೂರು-560 029.
ದೂರವಾಣಿ: 91-80-26560722 (Dir), 26094000 ಫ್ಯಾಕ್ಸ್: 080-26560723
No.: KMIO/SME(1)/Tender/SS Fur CSSD/272/2021-22 Date: 05.10.2021
ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ಈ ಕೆಳಗಿನ ಸಾಮಾಗ್ರಿಗಳ ಪೂರೈಕೆಗಾಗಿ ದ್ವಿ-ಲಕೋಟಿ ಪದ್ಧತಿಯಲ್ಲಿ ಜಿಒಕೆ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರುಗಳನ್ನು ಆಹ್ವಾನಿಸಲಾಗಿದೆ.

Sl. No.	Tender No. & Date	Name of the Item
1	No. KMIO/SME(1)/Tender/SS Fur CSSD/ 272/2021-22 , dated: 09.09.2021 (Call-2)	Procurement of SS Furniture to CSSD Room at KMIO., Bangalore.

ಆನ್‌ಲೈನ್‌ನಲ್ಲಿ ಬಿಡ್ ದಾಖಲೆಗಳ ಲಭ್ಯತೆ ದಿನಾಂಕ: 07.10.2021 ರಿಂದ 16.10.2021. ಬಿಡ್ ದಾಖಲೆಗಳನ್ನು ವೆಬ್‌ಸೈಟ್ https://eproc.karnataka.gov.in ನಿಂದ ನೋಡಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ-ಪೋರ್ಟಲ್ ಶುಲ್ಕ ರೂ. 500/-ನ್ನು ಪಾವತಿಸಿ ಬಿಡ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಸಲ್ಲಿಸಬಹುದಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ ಮತ್ತು ಸಮಯ: 16.10.2021 ರಂದು ಮಧ್ಯಾಹ್ನ 3:00 ಗಂಟೆಯವರೆಗೆ. ಟೆಂಡರ್ ಸ್ವೀಕರಿಸುವ ಪ್ರಾಧಿಕಾರವು ಯಾವುದೇ ಕಾರಣ ನೀಡದೆ ಟೆಂಡರನ್ನು ಸ್ವೀಕರಿಸುವ / ತಿರಸ್ಕರಿಸುವ / ರದ್ದುಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.
ಸಹಿ/- ನಿರ್ದೇಶಕರು
DIPR/DDU/1783/2021-22
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

(ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರರವರ ಕಾರ್ಯಾಲಯ
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ವಿಜಯಪುರ
ಫೋನ್: 08352-277816, ಫ್ಯಾಕ್ಸ್: 08352-277817
ಇ-ಮೇಲ್: zpebjp9@yahoo.co.in
ಸಂ:ಕಾಇಂ/ಪಂ.ರಾ.ಇ.ವಿ/ವಿಜ/ಇಪ್ರಾ/ಟೆಂಡರ್/2021-22/1373 ದಿನಾಂಕ: 04.10.2021
ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿ-ಲಕೋಟೆ ಪದ್ಧತಿ)
ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ ಇವರು 2515 ಜಿ.ಪಂ. ಕಚೇರಿ ಕಟ್ಟಡಗಳ ನಿರ್ಮಾಣ ಹಾಗೂ ನಿರ್ವಹಣೆ ಲೆಕ್ಕ ಶೀರ್ಷಿಕೆ ಯೋಜನೆಯಡಿಯಲ್ಲಿ (1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ವಿಜಯಪುರ ಇವರ ಕಚೇರಿ ಪಕ್ಕದಲ್ಲಿ ಮಿನಿ ಸಭಾಭವನ ನಿರ್ಮಾಣ ರೂ. 60.00 ಲಕ್ಷಗಳು (KW-3) ಕಾಮಗಾರಿಯನ್ನು ಇ-ಟೆಂಡರ್‌ನ್ನು ದ್ವಿ-ಲಕೋಟಿ ಪದ್ಧತಿಯಲ್ಲಿ ಆಹ್ವಾನಿಸಿದ್ದು, ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ www.eproc.karnataka.gov.in ನಲ್ಲಿ ಅಥವಾ ಕಛೇರಿ ಸಮಯದಲ್ಲಿ ಸದರಿ ವಿಭಾಗ ಕಾರ್ಯಾಲಯಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಬಹುದು.
ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ
ವಾಸಾಸಂಇ/ವಿಜಯಪುರ/317/ಜಿಎ/2021-22

ಕಾರ್ಯಪಾಲಕ ಇಂಜಿನೀಯರ್ ರವರ ಕಛೇರಿ,
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಛೇರಿ,
ರಾ.ಹೆ-75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ-563 133 ಕೋಲಾರ ತಾಲ್ಲೂಕು ಮತ್ತು ಜಿಲ್ಲೆ
ಇ-ಮೇಲ್: eemidklr@rediffmail.com | eemigwddkolar@gmail.com ದೂರವಾಣಿ ಸಂಖ್ಯೆ: 08152-200049,
ಸಂಖ್ಯೆ:ಕಾ.ಪಾ.ಇಂ/ಸ.ನೀ.ವಿ/ಕೋ/ತಾಂ.ಶಾ/ಸ.ಇಂ-2/ಟೆಂಡರ್ ಪ್ರಕಟಣೆ/1480/2021-22 ದಿನಾಂಕ: 04.10.2021
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 05/2021-22/ದಿನಾಂಕ: 04.10.2021
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನೀಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ ರವರಿಂದ ಒಟ್ಟು 04 ಕಾಮಗಾರಿಗಳಿಗೆ ಕೆ.ಡಬ್ಲ್ಯೂ-2 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮಾವಳಿ 28ರ ಅನ್ವಯ 03 ದರ್ಜೆ ಮತ್ತು ಮೇಲ್ಪಟ್ಟ ನೋಂದಾಯಿತ ಗುತ್ತಿಗೆದಾರರಿಂದ ಏಕಲಕೋಟಿ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದೆ. ಗರಿಷ್ಠ ಟೆಂಡರ್ ಮೊತ್ತ ರೂ. 50.00 ಲಕ್ಷ ಹಾಗೂ ಕನಿಷ್ಠ ಟೆಂಡರ್ ಮೊತ್ತ ರೂ. 25.00 ಲಕ್ಷ, ನಿಗಧಿತ ಇ.ಎಂ.ಡಿ ಮೊತ್ತವನ್ನು ಇ-ಪೋರ್ಟಲ್‌ನಲ್ಲಿ ಸಲ್ಲಿಸುವುದು. ಹಾಗೂ ಕೆ.ಡಬ್ಲ್ಯೂ-1 & 2 ಟೆಂಡರ್‌ಗಳಲ್ಲಿ ಗುತ್ತಿಗೆದಾರರು ನಮೂದಿಸುವ ಅಸಮಂಜಸ ಮೊತ್ತಕ್ಕೆ ಎಫ್.ಡಿ.ಆರ್‌ಗಳ ಪ್ರತಿಯನ್ನು ಟೆಂಡರ್‌ನೊಂದಿಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಟೆಂಡರ್ ಪ್ರೊಸೆಸ್ಸಿಂಗ್ ಫೀ ಇ-ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ, ಟೆಂಡರ್ ಡಾಕ್ಯೂಮೆಂಟ್‌ಗಳನ್ನು ವೆಬ್‌ಸೈಟ್ www.eproc.karnataka.gov.in ಮೂಲಕ ದಿನಾಂಕ: 07.10.2021 ರಿಂದ 30.10.2021ರ ವರೆಗೆ ಪಡೆಯಬಹುದು. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 02.11.2021ರ ಸಂಜೆ 4:30 ಗಂಟೆಯ ನಂತರ. ಮೇಲಿನ ವಿವರಗಳನ್ನು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ www.eproc.karnataka.gov.in ಅಂತರ್ಜಾಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.
ಸಹಿ/- ಕಾರ್ಯಪಾಲಕ ಇಂಜಿನೀಯರ್,
ವಾಸಾಸಂಇ/ಕೋಲಾರ/226/ಜಿಎ/2021-22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು.
ಸಂಖ್ಯೆ : ಕರಾಸಾ/ಕೆಂಬನಿ/ವಾ/695/2021-22 ದಿನಾಂಕ: 04.10.2021
ವಾಣಿಜ್ಯ ಮಳಿಗೆ ಇ-ಟೆಂಡರು/ಸಂಧಾನ ಪ್ರಕಟಣೆ ಸಂಖ್ಯೆ-02/2021-22
ಕೆಂಪೇಗೌಡ ಬಸ್ ನಿಲ್ದಾಣದ ಟರ್ಮಿನಲ್ 1, 2, 2ಎ ಮತ್ತು 3 ರಲ್ಲಿ ಖಾಲಿ ಇರುವ / ಖಾಲಿಯಾಗಲಿರುವ ಸಾಮಾನ್ಯ ಮಳಿಗೆಗಳು, ಟರ್ಮಿನಲ್-1 ರಲ್ಲಿನ ಮಳಿಗೆ ಸಂಖ್ಯೆ-48, 122, ಟರ್ಮಿನಲ್-2 ರಲ್ಲಿನ 10, ಹಣ್ಣಿನ ಮಳಿಗೆ, ಕಾರು ಮತ್ತು ದ್ವಿಚಕ್ರ ನಿಲುಗಡೆ (ಟರ್ಮಿನಲ್-1 & 2 ಎ ಮಧ್ಯಭಾಗದಲ್ಲಿರುವ ಖಾಲಿ ಜಾಗ) ಟರ್ಮಿನಲ್ -3ರಲ್ಲಿನ 01, 02, 04 ಮತ್ತು ಮೈಸೂರು ರಸ್ತೆ ಬಸ್ ನಿಲ್ದಾಣದ ಸಾಮಾನ್ಯ ಮಳಿಗೆ 10 ಕ್ಕೆ ಪರವಾನಿಗೆದಾರರನ್ನು ಆಯ್ಕೆ ಮಾಡಲು ಇ-ಪ್ರೊಕ್ಯೂರ್‌ಮೆಂಟ್ ಅಂತರ್ಜಾಲದ ಮೂಲಕ ಹಾಗೂ ಕೆಂಪೇಗೌಡ ಬಸ್ ನಿಲ್ದಾಣ ಟರ್ಮಿನಲ್-01 ರಲ್ಲಿರುವ ಸಾಮಾನ್ಯ ಮಳಿಗೆ ಸಂಖ್ಯೆ 24, 57, ಎಟಿಎಂ ಕೌಂಟರ್ ಮತ್ತು ಟರ್ಮಿನಲ್ -2ಎ ರಲ್ಲಿನ ಮಳಿಗೆ ಸಂಖ್ಯೆ -08, ಟರ್ಮಿನಲ್-3 ರಲ್ಲಿನ ದ್ವಿಚಕ್ರ ವಾಹನ ನಿಲುಗಡೆ ಹಾಗೂ ಮೈಸೂರು ರಸ್ತೆ ಬಸ್ ನಿಲ್ದಾಣದಲ್ಲಿರುವ ಸಾಮಾನ್ಯ ಮಳಿಗೆ ಸಂಖ್ಯೆ 03, 33 ಮತ್ತು ಎಟಿಎಂ ಕೌಂಟರ್‌ಗೆ ಸಂಧಾನದ (ಮಾತುಕತೆ) ಮೂಲಕ ಮತ್ತು ಕನಿಷ್ಠ ಮಾಸಿಕ ಪರವಾನಗಿ ಶುಲ್ಕ ನಿಗದಿಪಡಿಸದೇ ಟರ್ಮಿನಲ್-1ರಲ್ಲಿನ ಮಳಿಗೆ ಸಂಖ್ಯೆ-44, 46, ಟರ್ಮಿನಲ್-2ರಲ್ಲಿನ 115,116, ಟರ್ಮಿನಲ್-2ಎ ರಲ್ಲಿನ 01, 03 ಮತ್ತು ಮೈಸೂರು ರಸ್ತೆ ಬಸ್ ನಿಲ್ದಾಣದಲ್ಲಿನ 04, 05, 06, 11, 12, 15, 30, 31, ಮತ್ತು ತೆರೆದ ಸ್ಥಳ-02ಕ್ಕೆ ಸಂಧಾನದ ಮೂಲಕ ಆಸಕ್ತದಾರರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿ/ವಿವರಗಳಿಗಾಗಿ https://eproc.karnataka.gov.in ನಿಂದ ಹಾಗೂ ನಿಗಮದ ವೆಬ್‌ಸೈಟ್ https://ksrtc.karnataka.gov.in ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು - 560 009 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 7760990557, 7760990554, 7760960049 ಮತ್ತು ಹೆಚ್.ಪಿ. ಸಹಾಯವಾಣಿ ಸಂಖ್ಯೆ : 080-23010900 / 23010901.
ಸಹಿ/- ವಿಭಾಗೀಯ ನಿಯಂತ್ರಣಾಧಿಕಾರಿ ಕೆಂಬನಿ ವಿಭಾಗ, ಬೆಂಗಳೂರು.
ವಾಸಾಸಂಇ/ಬೆಂ.ನ./ಜಿಎ/1796/2021-22
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮೈಸೂರು ಮಹಾನಗರಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಒಳಚರಂಡಿ ವಿಭಾಗ, ವಾಣಿವಿಲಾಸ ಆವರಣ, ಯಾದವಗಿರಿ, ಮೈಸೂರು
ಸಂಖ್ಯೆ: ಮೈನಪಾ/ಕಾಇಂ/ಒಚವಿ/ಟಿಎನ್-10/756/2021-22 ದಿನಾಂಕ : 05-10-2021
ಟೆಂಡರ್ ಅಧಿಸೂಚನೆ
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ 14ನೇ ಹಣಕಾಸು ಅನುದಾನ, ಸ್ವಚ್ಛ ಸರ್ವೇಕ್ಷಣ್ ಅನುದಾನ ಹಾಗೂ ಮೈಸೂರು ಮಹಾನಗರಪಾಲಿಕೆ ಅನುದಾನದಡಿ 7 (ಏಳು) ಸಂಖ್ಯೆ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ KW-1ರ ನಿಯಮಗಳಿಗೆ ಒಳಪಟ್ಟಂತೆ ಟೆಂಡರನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ ಹಾಗೂ ದೂರವಾಣಿ ಸಂಖ್ಯೆ: 0821-2414105 ರಿಂದ ಮಾಹಿತಿ ಪಡೆಯಬಹುದು. ನಿಗಧಿಪಡಿಸಿರುವ ಇ.ಎಂ.ಡಿ.ಯನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಯಾವುದಾದರೂ ಒಂದು ರೀತಿಯಲ್ಲಿ ಸಲ್ಲಿಸತಕ್ಕದ್ದು.
ಇ-ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಕೆಳಕಂಡಂತಿವೆ.
(1) ಇ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ: 07-10-2021, ಬೆಳಿಗ್ಗೆ 11.00 ಗಂಟೆ ನಂತರ. (2) ಟೆಂಡರ್ ಬಗ್ಗೆ ವಿಚಾರಣೆ/ಸ್ಪಷ್ಟೀಕರಣ ಕೋರುವ ದಿನಾಂಕ ಮತ್ತು ಸಮಯ : 21-10-2021, ಸಂಜೆ 4.00 ಗಂಟೆ. (3) ಟೆಂಡರ್ ಸಲ್ಲಿಸುವ ಕೊನೆ ದಿನಾಂಕ ಮತ್ತು ಸಮಯ : 21-10-2021, ಸಂಜೆ 4.00 ಗಂಟೆ. (4) ಆರ್ಥಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ಸಮಯ : 22-10-2021, ಸಂಜೆ 4.15 ಗಂಟೆ ನಂತರ.
ಸಹಿ/- ಕಾರ್ಯಪಾಲಕ ಅಭಿಯಂತರರು, ಒಳಚರಂಡಿ ವಿಭಾಗ, ಮೈಸೂರು ಮಹಾನಗರಪಾಲಿಕೆ, ಮೈಸೂರು



ಕಲೆಗೂ ಬಂದಿದೆ ಕ್ರಿಪ್ಟೋ ಕಲರ್!

ಕೃಷ್ಣ ಭಟ್

ಆತ ಯುವಕಲಾವಿದ. ವಿವಿಧ ಕಂಪನಿಗಳಿಗೆ ಲೋಗೊ ಡಿಸೈನ್ ಮಾಡಿ ಮಾರಾಟ ಮಾಡುತ್ತಿದ್ದ. ಕಲೆಯಲ್ಲೇ ಜೀವನ ಕಟ್ಟಿಕೊಂಡಿದ್ದ. ಒಂದು ದಿನ ಒಂದು ಚಿತ್ರ ರಚಿಸಿ ಅದನ್ನು ಎನ್‌ಎಫ್‌ಟಿ ಮಾಡಿ ಹರಾಜಿಗೆ ಇಟ್ಟ. ರಾತ್ರಿ ಬೆಳಗಾಗುವುದರೊಳಗೆ ಆತನ ಆರ್ಟ್‌ನಿಂದ ಕೋಟ್ಯಧೀಶನಾದ!

ಇಂಥ ಕಥೆಗಳು ಕಲಾವಲಯದಲ್ಲಿ ಇತ್ತೀಚೆಗೆ ಅತ್ಯಂತ ಸಾಮಾನ್ಯವಾಗಿದೆ. ಇಂಥ ಬಹುತೇಕ ಎಲ್ಲ ಸನ್ನಿವೇಶಗಳಲ್ಲೂ ಯುವಕಲಾವಿದರೇ ಎನ್‌ಎಫ್‌ಟಿ ಹರಾಜಿನಲ್ಲಿ ಮಿಂಚುತ್ತಿದ್ದಾರೆ. ಈ ಕಥೆಗಳಿಗೆಲ್ಲ ಆರಂಭದಲ್ಲಿ ಸುದ್ದಿಯಾಗಿದ್ದು, ಬೀಪಲ್ ಎಂಬ ಕಲಾವಿದ. ಈತ ತನ್ನ ಒಂದು ಕಲಾಕೃತಿಯನ್ನು ಎನ್‌ಎಫ್‌ಟಿ ಮೂಲಕ ಸುಮಾರು ಏಳು ಕೋಟಿ ಡಾಲರ್‌ಗೆ ಮಾರಾಟ ಮಾಡಿ ಹೆಸರು ಮಾಡಿದ. ಈಗ ಅಮೆರಿಕದ ಒಂದು ದೊಡ್ಡ ಹರಾಜು ಸಂಸ್ಥೆ ಓಪನ್‌ಸೀ ಒಂದರಲ್ಲೇ ಮುನ್ನೂರು ಕೋಟಿ ಡಾಲರ್ ಎನ್‌ಎಫ್‌ಟಿ ಮಾರಾಟವಾಗುತ್ತದೆ!

ಏನಿದು ಎನ್‌ಎಫ್‌ಟಿ?

ಎನ್‌ಎಫ್‌ಟಿ ಎಂದರೆ ನಾನ್ ಫಂಜಿಬಲ್ ಟೋಕನ್. ಅಂದರೆ, ಒಂದರಂತೆ ಇನ್ನೊಂದಿಲ್ಲ. ಇದು ಬ್ಲಾಕ್‌ಚೈನ್ ಟೆಕ್ನಾಲಜಿಯನ್ನು ಬಳಸುತ್ತದೆ. ಬಿಟ್‌ಕಾಯ್ನ್ ವಿಚಾರದಲ್ಲಿ ಹೇಳುವುದಾದರೆ, ಒಂದು ಬಿಟ್‌ಕಾಯ್ನ್ ಬದಲಿಗೆ ನಿಮಗೆ ಅಂಥದ್ದೇ ಇನ್ನೊಂದು ಬಿಟ್‌ಕಾಯ್ನ್ ಸಿಗುತ್ತದೆ. ಆದರೆ, ಇಲ್ಲಿ ಹಾಗಲ್ಲ. ಈ ಎನ್‌ಎಫ್‌ಟಿಯ ಹಾಗೆ ಇನ್ನೊಂದು ಆರ್ಟ್ ಇರುವುದಿಲ್ಲ. ಹಾಗಾಗಿ ಇದು ನಾನ್ ಫಂಜಿಬಲ್. ಬಹುತೇಕ ಎಲ್ಲ ಎನ್‌ಎಫ್‌ಟಿಯೂ ಸದ್ಯಕ್ಕೆ ಎಥೆರಿಯಮ್ ಬ್ಲಾಕ್‌ಚೈನ್ ಅನ್ನೇ ಬಳಸುತ್ತಿವೆ. ಇದು ಬ್ಲಾಕ್‌ಚೈನ್‌ನ ಟೆಕ್ನಾಲಜಿಯ ಅತ್ಯಂತ ಉತ್ತಮ ಉಪಯೋಗಗಳಲ್ಲೊಂದು.

ಎನ್‌ಎಫ್‌ಟಿಯಲ್ಲಿ ಯಾವುದನ್ನು ಬೇಕಾದರೂ ಇಡಬಹುದು. ಆರ್ಟ್, ಸಂಗೀತ, ಡ್ರಾಯಿಂಗ್... ಹೀಗೆ ಯಾವುದಾದರೂ ಸರಿ. ಇದು ವಿಶಿಷ್ಟವಾದದ್ದಾದರೆ ಆಯಿತು. ಸ್ವಂತದ್ದಾದರೆ ಸರಿ. ಆದರೆ, ಸದ್ಯಕ್ಕೆ ಕಲೆಗೆ ಹೆಚ್ಚು ಬೇಡಿಕೆ ಹುಟ್ಟಿದೆ. ಅದರ ಬಗ್ಗೆ ಮಾರುಕಟ್ಟೆಯಲ್ಲಿ ಕುತೂಹಲವು ಹೆಚ್ಚಿದೆ. ಕೆಲವು ದಿನಗಳ ಹಿಂದೆ ಟ್ವಿಟರ್ ಸಂಸ್ಥಾಪಕ ಜಾಕ್ ಡೋರ್ಸಿ ತನ್ನ ಮೊದಲ ಟ್ವೀಟ್ ಅನ್ನು ಎನ್‌ಎಫ್‌ಟಿಯಲ್ಲಿ ಹರಾಜಿಗೆ ಹಾಕಿ, ಸುಮಾರು ಮೂವತ್ತು ಲಕ್ಷ ಡಾಲರ್‌ಗೆ ಮಾರಿದ್ದರು. ಇದರಿಂದ ಎನ್‌ಎಫ್‌ಟಿಗೆ ಭಾರಿ ಬೇಡಿಕೆ ಸೃಷ್ಟಿಯಾಯಿತು.

ಈ ಎನ್‌ಎಫ್‌ಟಿಯಿಂದ ಮೂಲ ಕಲಾಕಾರರಿಗೆ ಇರುವ ಅನುಕೂಲವೆಂದರೆ, ಇದನ್ನು ಯಾರು ಬೇಕಾದರೂ ಖರೀದಿ ಮಾಡಬಹುದು ಮತ್ತು ಮಾರಬಹುದು. ಹಾಗೆ, ಪ್ರತಿ ಬಾರಿ ಕೈ ಬದಲಾದಾಗಲೂ ಕಲಾಕಾರರಿಗೆ ಒಂದು ಭಾಗ ಹಣ ಪಾವತಿಯಾಗುತ್ತದೆ.

ಎನ್‌ಎಫ್‌ಟಿ ಅನ್ನು ಎಷ್ಟು ಬೇಕಾದರೂ ನಕಲಿಸಬಹುದು ಎಂಬುದರಲ್ಲಿಯೇ ಅಲ್ಲಿರುವ ಸಂಭಾವ್ಯ ಮೋಸದ ವಾಸನೆಯೂ ಶುರುವಾಗುತ್ತದೆ. ಕಲಾಕಾರರಿಂದ ಒಂದು ಕಲಾಕೃತಿ ಖರೀದಿ ಮಾಡಿಕೊಂಡು, ಅದನ್ನು ನಕಲು ಮಾಡಿಯೂ ಮಾರಬಹುದು. ಏಕೆಂದರೆ, ಎನ್‌ಎಫ್‌ಟಿಯನ್ನು ಎಷ್ಟು ಬೇಕಾದರೂ ಪ್ರತಿ ಮಾಡಬಹುದು. ಹೀಗಾಗಿ, ಇದರಲ್ಲಿ ಭಾರಿ ಅವ್ಯವಹಾರಗಳೂ ಶುರುವಾಗಿವೆ.

ವಿಶ್ವದ ದೊಡ್ಡ ದೊಡ್ಡ ಹರಾಜು ಸಂಸ್ಥೆಗಳು ಈಗಾಗಲೇ ಎನ್‌ಎಫ್‌ಟಿ ಹರಾಜು ಕೂಡ ಶುರು ಮಾಡಿವೆ. ಜನಪ್ರಿಯ ಆರ್ಟಿಸ್ಟ್‌ಗಳೇ ತಮ್ಮದೇ ಎನ್‌ಎಫ್‌ಟಿ ಆರಂಭಿಸಿದ್ದಾರೆ.

ಇದೊಂದು ಆರ್ಟ್‌ಫಾರ್ಮೋ ಅಥವಾ ಪ್ಲಾಟ್‌ಫಾರ್ಮೋ ಎಂಬ ಗೊಂದಲ ಎಲ್ಲರಲ್ಲೂ ಇದೆ. ಇದು ಎರಡೂ ಹೌದು. ಒಬ್ಬ ಕಲಾಕಾರ ತನ್ನ ಒಂದು ಕಲೆಯನ್ನು ಡಿಜಿಟಲ್ ಆರ್ಟ್ ಮಾಡಬೇಕು ಎಂದಾದರೆ, ಅದಕ್ಕೂ ಈಗ ಹಲವು ಸಂಸ್ಥೆಗಳು ಸಿದ್ಧವಿವೆ. ಅವು ಕಲಾಕೃತಿಯನ್ನು ಎನ್‌ಎಫ್‌ಟಿ ಆಗಿ ಪರಿವರ್ತಿಸಿಕೊಡುತ್ತವೆ. ಅದನ್ನು ನೀವು ಹರಾಜಿಗೆ ಹಾಕಿದರೆ ಆಯಿತು. ಅಲ್ಲಿಗೆ, ಇದೊಂದು ಕಲಾಕೃತಿಯೂ, ಪ್ಲಾಟ್‌ಫಾರಂ ಕೂಡ ಆದ ಹಾಗಾಗುತ್ತದೆ.

ಡಿಜಿಟಲ್ ಆರ್ಟ್ ಏನೂ ಹೊಸತಲ್ಲ. ಕಂಪ್ಯೂಟರ್‌ಗಳು ಬಂದಾಗಲೇ ಡಿಜಿಟಲ್ ಆರ್ಟ್ ಕೂಡ ಹುಟ್ಟಿಕೊಂಡಿದ್ದವು. ಆದರೆ, ಒಂದು ಕಲಾಕೃತಿಗೆ ಡಿಜಿಟಲ್ ರೂಪದಲ್ಲಿ ವಿಶಿಷ್ಟತೆ ಇರಲಿಲ್ಲ. ಅಂದರೆ, ಡಿಜಿಟಲ್ ರೂಪದಲ್ಲಿರುವ ಒಂದು ವಸ್ತುವನ್ನು ನಾವು ನಮ್ಮ ಸ್ವಂತದ್ದು ಎಂದು ಅಧಿಕಾರಯುತವಾಗಿ ಹೇಳಲು ಸಾಧ್ಯವಾಗುತ್ತಿರಲಿಲ್ಲ. ಕಲಾಕೃತಿಗೆ ಕಲಾಕಾರ ತನ್ನ ಹೆಸರನ್ನು ಹಾಕಿದ್ದರೆ, ಅದನ್ನು ಅಳಿಸಿ, ಯಾರು ಬೇಕಾದರೂ ಬಳಸಿಕೊಳ್ಳಬಹುದಾಗಿತ್ತು. ಆದರೆ, ಎನ್‌ಎಫ್‌ಟಿ ಇಂದ ಒಂದು ಡಿಜಿಟಲ್ ಸಾಮಗ್ರಿಯ ಮಾಲೀಕತ್ವವನ್ನು ವ್ಯಕ್ತಿಯೊಬ್ಬ ಹೊಂದಬಹುದು.

ಸದ್ಯ, ಈ ವಿಧದ ಕಲಾಕೃತಿಗಳಿಗೆ ಈಗ ಭಾರಿ ಬೇಡಿಕೆ ಇದೆ. ಯುವ ಕಲಾವಿದರು ಕೋಟ್ಯಂತರ ಹಣ ಗಳಿಸುತ್ತಿದ್ದಾರೆ. ವಿಶ್ವದ ಹಲವು ಜನಪ್ರಿಯ ಹರಾಜು ಸಂಸ್ಥೆಗಳು ತಮ್ಮದೇ ಪ್ಲಾಟ್‌ಫಾರಂ ರಚಿಸಿಕೊಂಡು ಅವುಗಳಲ್ಲಿ ಎನ್‌ಎಫ್‌ಟಿ ಕಲಾಕೃತಿಗಳ ಹರಾಜು ಹಾಕುತ್ತಿವೆ. ಭಾರತದಲ್ಲೂ ವಾಜಿರ್‌ಎಕ್ಸ್ ಎಂಬ ಸಂಸ್ಥೆ ಎನ್‌ಎಫ್‌ಟಿ ಹರಾಜು ನಡೆಸುತ್ತದೆ. ❖

> ಎನ್‌ಎಫ್‌ಟಿಯಿಂದ ಮೂಲ ಕಲಾಕಾರರಿಗೆ ಇರುವ ಅನುಕೂಲವೆಂದರೆ, ಇದನ್ನು ಯಾರು ಬೇಕಾದರೂ ಖರೀದಿ ಮಾಡಬಹುದು ಮತ್ತು ಮಾರಬಹುದು. ಹಾಗೆ, ಪ್ರತಿ ಬಾರಿ ಕೈ ಬದಲಾದಾಗಲೂ ಕಲಾಕಾರರಿಗೆ ಒಂದು ಭಾಗ ಹಣ ಪಾವತಿಯಾಗುತ್ತದೆ.



ಕನ್ನಡಕಗಳು ಕಾಣಿಸುವ ಹೊಸ ಜಗತ್ತು

ಪೃಥ್ವಿರಾಜ್

ಮೊಬೈಲ್‌ಫೋನ್, ಕೈಗಡಿಯಾರ ಸೇರಿದಂತೆ ಹಲವು ವಸ್ತು, ಉಪಕರಣಗಳು ಸ್ಮಾರ್ಟ್ ತಂತ್ರಜ್ಞಾನವನ್ನು ಮೈಗೂಡಿಸಿಕೊಂಡು ಉಪಯೋಗವಾಗುತ್ತಿವೆ. ಕೇವಲ ದೃಷ್ಟಿಸಮಸ್ಯೆಗಳ ಪರಿಹಾರಕ್ಕೆ ಹಾಗೂ ಕಣ್ಣಿಗೆ ಹಾನಿಯಾಗದಂತೆ ರಕ್ಷಣೆ ಒದಗಿಸುತ್ತಿದ್ದ ಕನ್ನಡಕಗಳೂ ಈಗ ಸ್ಮಾರ್ಟ್ ತಂತ್ರಜ್ಞಾನ, ಎಆರ್ ತಂತ್ರಜ್ಞಾನ ಮೈಗೂಡಿಸಿಕೊಂಡು ವಿವಿಧ ರೀತಿಯಲ್ಲಿ ನೆರವಾಗುತ್ತಿವೆ. ಅಂತಹ ಕೆಲವು ವಿಶಿಷ್ಟ ಕನ್ನಡಕಗಳ ಮಾಹಿತಿ ಇಲ್ಲಿದೆ.

ನಾರ್ತ್ ಫೋಕಲ್ಸ್

ಕೆನಡಾದ ನಾರ್ತ್ ಸಂಸ್ಥೆ ಎಆರ್ ತಂತ್ರಜ್ಞಾನ ಆಧಾರಿತ ಕನ್ನಡಕಗಳನ್ನು ತಯಾರಿಸುವಲ್ಲಿ ಜನಪ್ರಿಯವಾಗಿದೆ. ಈವರೆಗೆ 230 ಪೇಟೆಂಟ್ಸ್‌ಗಳನ್ನೂ ಪಡೆದಿರುವ ಈ ಸಂಸ್ಥೆ ತಯಾರಿಸಿರುವ 'ಫೋಕಲ್ಸ್' ಹೆಸರಿನ ವಿಶೇಷ ಕನ್ನಡವನ್ನು ಸ್ಮಾರ್ಟ್‌ಫೋನ್‌ಗೆ ಜೋಡಿಸಿ ಬಳಸಿಕೊಳ್ಳಬಹುದು. ಇದನ್ನು ಧರಿಸಿದರೆ ಸಾಕು, ನಮ್ಮ ಮೊಬೈಲ್‌ಫೋನ್‌ಗೆ ಬರುವ ನೋಟಿಫಿಕೇಶನ್ಸ್‌ಗಳೆಲ್ಲಾ ಕನ್ನಡಕದ ಗಾಜಿನ ಪರದೆ ಮೇಲೆ ಮೂಡುತ್ತವೆ. ಇ-ಮೇಲ್ ಸಂದೇಶ, ಟ್ವೀಟ್‌ಗಳು, ಫೇಸ್‌ಬುಕ್ ಪೋಸ್ಟ್‌ಗಳು... ಹೀಗೆ ಎಲ್ಲವನ್ನೂ ಸ್ಮಾರ್ಟ್‌ಫೋನ್ ಧರಿಸದೆಯೇ ಕನ್ನಡಕದಲ್ಲಿ ನೋಡಬಹುದು. ಇವಲ್ಲದೆ ವಾತಾವರಣದ ಮಾಹಿತಿ, ದಿನಾಂಕ, ವಾರ, ಸನಿಹದಲ್ಲಿರುವ ಮುಖ್ಯ ಕಚೇರಿಗಳು, ಊಬರ್ ಟ್ಯಾಕ್ಸಿಗಳ ವಿವರ... ಹೀಗೆ ಎಲ್ಲವೂ ಕಣ್ಣ ಮುಂದೆಯೇ ಕಾಣಿಸಿಕೊಳ್ಳುತ್ತವೆ. ಈ ಎಲ್ಲ ಮಾಹಿತಿ ಗಾಜಿನ ಪರದೆ ಮೇಲೆ ಪದೇ ಪದೇ ಬದಲಾಯಿಸಿಕೊಂಡು ನೋಡಲು ನೆರವಾಗುವಂತೆ ಸಂಸ್ಥೆ ವಿಶೇಷ ಸ್ಮಾರ್ಟ್ ಉಂಗುರವನ್ನೂ ತಯಾರಿಸಿದೆ. ಜಾಯ್‌ಸ್ಟಿಕ್ ಮಾದರಿಯ ಈ ಉಂಗುರದ ನೆರವನಿಂದ ಕನ್ನಡಕದ ಗಾಜಿನ ಪರದೆ ಮೇಲೆ ನಮಗೆ ಬೇಕಾಗಿರುವ ಮಾಹಿತಿಗಳನ್ನು ನೋಡಿಕೊಳ್ಳಬಹುದು.

ಮೈಕ್ರೊಸಾಫ್ಟ್- ಹೋಲೊಲೆನ್ಸ್-2

ಮೈಕ್ರೊಸಾಫ್ಟ್ ಸಂಸ್ಥೆ 2015ರಲ್ಲಿ ಪರಿಚಯಿಸಿದ್ದ ಸ್ಮಾರ್ಟ್ ಕನ್ನಡಕಕ್ಕೆ ಹೋಲಿಸಿದರೆ ಹೋಲೊಲೆನ್ಸ್-2 ಕನ್ನಡಕ ವಿಶೇಷವಾದುದು. ಕೆಲವು ನಿರ್ದಿಷ್ಟ ಬಳಕೆದಾರರಿಗೆ ಮಾತ್ರ ನೆರವಾಗುವಂತೆ ಇದನ್ನು ತಯಾರಿಸಲಾಗಿದೆ. ಪ್ರಸ್ತುತ ಮಾರುಕಟ್ಟೆಯಲ್ಲಿರುವ ಎಆರ್ ತಂತ್ರಜ್ಞಾನ ಆಧಾರಿತ ಕನ್ನಡಕಗಳಿಗಿಂತ ವಿಶೇಷವಾಗಿ ಇದರಲ್ಲಿ ಡೈನಮಿಕ್ 365 ರಿಮೋಟ್ ಅಸೆಸ್ ಟೆಕ್ನಾಲಜಿ ಅಳವಡಿಸಲಾಗಿದ್ದು ಬೇರೆ ಪ್ರದೇಶಗಳಲ್ಲಿ ಇರುವವರೊಂದಿಗೆ ಸುಲಭವಾಗಿ ಸಂಪರ್ಕ ಸಾಧಿಸಲು ನೆರವಾಗುತ್ತದೆ. ವಸ್ತು, ಉಪಕರಣ ತಯಾರಿಕಾ ಕ್ಷೇತ್ರ, ಔಷಧ ತಯಾರಿಕಾ ಕ್ಷೇತ್ರ, ಶಿಕ್ಷಣ ಕ್ಷೇತ್ರಕ್ಕೆ ಈ ಕನ್ನಡಕ ಉಪಯೋಗವಾಗುತ್ತದೆ. ಸ್ಮಾರ್ಟ್‌ಫೋನ್ ಅಥವಾ ಕಂಪ್ಯೂಟರ್ ಬಳಸಿ ಮಾಡಬಹುದಾದ ಕೆಲವು ಕೆಲಸಗಳನ್ನು ಈ ಕನ್ನಡಕದ ಮೂಲಕವೇ ಮಾಡಿಕೊಳ್ಳಬಹುದು.

ವುಜಿಕ್ಸ್ ಸ್ಮಾರ್ಟ್ ಗ್ಲಾಸ್

ನಿತ್ಯಕೆಲಸಗಳಿಗೆ ನೆರವಾಗುವಂತೆ ವುಜಿಕ್ಸ್ ಸಂಸ್ಥೆ ವಿಶೇಷ ಕನ್ನಡಕವೊಂದನ್ನು ತಯಾರಿಸಿದೆ. ಈ ವರ್ಷ ನಡೆದ ಸಿಇಎಸ್‌ನಲ್ಲಿ ಈ ಕನ್ನಡಕವನ್ನು ಪರಿಚಯಿಸಿ ಪ್ರಶಸ್ತಿಯನ್ನೂ ಬಾಚಿಕೊಂಡಿದೆ. ಇದಕ್ಕೆ ನಿರ್ದಿಷ್ಟ ಹೆಸರು ಇಡದಿದ್ದರೂ 'ವುಜಿಕ್ಸ್ ನೆಕ್ಸ್ಟ್ ಜನರೇಷನ್ ಸ್ಮಾರ್ಟ್ ಗ್ಲಾಸ್' ಎಂದು ಪರಿಚಯಿಸಿದೆ. ಇದು ಎಆರ್ ತಂತ್ರಜ್ಞಾನ ಆಧಾರಿತ ಕನ್ನಡಕವಾಗಿದ್ದು, ಐ-ಫೋನ್ ಹಾಗೂ ಅಂಡ್ರಾಯ್ಡ್ ಸ್ಮಾರ್ಟ್‌ಫೋನ್‌ಗಳಿಗೆ ಜೋಡಿಸಿ ಬಳಸಿಕೊಳ್ಳಬಹುದು. ವೈ-ಫೈ ತಂತ್ರಜ್ಞಾನ ನೆರವಿನಿಂದಲೂ ಕಾರ್ಯನಿರ್ವಹಿಸುವಂತೆ ಇದನ್ನು ತಯಾರಿಸಲಾಗಿದೆ. ಇದರಲ್ಲಿ ವಿಶೇಷ ಕ್ಯಾಮೆರಾ, ಹೊರಗಿನ ಗದ್ದಲ ಗ್ರಹಿಸದೆ ನಮ್ಮ ಮಾತುಗಳನ್ನು ಮಾತ್ರ ಕೇಳಿಸಿಕೊಳ್ಳುವಂತಹ ವಿಶೇಷ ಮೈಕ್ರೊಫೋನನ್ನು ಅಳವಡಿಸಲಾಗಿದೆ; ಇದು ಸ್ಟಿರಿಯೊ ಸ್ಪೀಕರ್ಸ್‌ಗಳನ್ನೂ ಹೊಂದಿದೆ. ಕನ್ನಡಕದ ಗಾಜುಗಳನ್ನೂ ವಿಶೇಷವಾಗಿ ತಯಾರಿಸಲಾಗಿದ್ದು ಎಲ್ಲ ಬಗೆಯ ಪಿಕ್ಸೆಲ್ ಡೆನ್ಸಿಟಿ ಹಾಗೂ ರೆಸಲ್ಯೂಷನ್‌ಗೆ ಹೊಂದಿಕೊಳ್ಳುತ್ತದೆ. ಇದರಿಂದ ಗುಣಮಟ್ಟದ ವರ್ಣಮಯ ಚಿತ್ರಗಳು ಗಾಜಿನ ಪರದೆ ಮೇಲೆ ಮೂಡುತ್ತವೆ.

ಸ್ನ್ಯಾಪ್- ಸ್ಪೆಕ್ಟಿಕಲ್ಸ್ ಎಆರ್

ಎಆರ್ ತಂತ್ರಜ್ಞಾನ ಆಧಾರಿತ ನಾಲ್ಕನೇ ತಲೆಮಾರಿನ ಮೊದಲ ಸ್ಮಾರ್ಟ್ ಕನ್ನಡಕವನ್ನು ಸ್ನ್ಯಾಪ್ ಸಂಸ್ಥೆ ಪರಿಚಯಿಸಿದೆ. ಈ ಹಿಂದೆ ಪರಿಚಯಿಸಿರುವ ಕನ್ನಡಕಗಳಿಗಿಂತ ಈ ಕನ್ನಡಕ ವಿಶೇಷವಾದುದು ಎಂದು ಸಂಸ್ಥೆ ಹೇಳಿಕೊಂಡಿದೆ. ಇದನ್ನು ಸ್ನ್ಯಾಪ್‌ಚಾಟ್ ಸಾಫ್ಟ್‌ವೇರ್ ಟೂಲ್ಸ್‌ಗಳನ್ನು ಬಳಸಿ ವಿಭಿನ್ನವಾಗಿ ಆಕರ್ಷಕ ವಿನ್ಯಾಸದಲ್ಲಿ ತಯಾರಿಸಲಾಗಿದ್ದು, ಡ್ಯೂಯಲ್ ವೇವ್‌ಗೈಡ್ ಡಿಸ್‌ಪ್ಲೇ ಹೊಂದಿದೆ. ಕನ್ನಡಕದ ಫ್ರೇಮ್‌ನಲ್ಲಿ ಮೈಕ್ರೊಫೋನ್, ಎರಡು ಸ್ಟಿರಿಯೊ ಸ್ಪೀಕರ್ಸ್, ಟಚ್‌ಪ್ಯಾಡ್ ಅಳವಡಿಸಲಾಗಿದೆ. ಇನ್ನು ಇದರಲ್ಲಿನ ಫ್ರಂಟ್ ಫೇಸಿಂಗ್ ಕ್ಯಾಮೆರಾ ಎದುರಿನ ವಸ್ತು, ಉಪಕರಣಗಳ ಪರಿಶೀಲನೆಗೆ ನೆರವಾಗುತ್ತದೆ. ಇದಕ್ಕಾಗಿಯೇ ವಿಶೇಷ ಕಿರು ತಂತ್ರಾಂಶಗಳನ್ನೂ ಸಂಸ್ಥೆ ತಯಾರಿಸಿದ್ದು ಕನ್ನಡಕ ಧರಿಸಿಕೊಂಡು ಎದುರಿನ ಪರಿಸರವನ್ನು ನಿಮ್ಮಿಷ್ಟದ ಪ್ರಪಂಚದಂತೆ ಬದಲಾಯಿಸಿಕೊಂಡು ನೋಡಲು ನೆರವಾಗುತ್ತದೆ. ಕಾಲಕ್ಷೇಪಕ್ಕೆ ಕೆಲವು ಬಗೆಯ ಆಟಗಳನ್ನೂ ಆಡುವುದಕ್ಕೆ ಈ ಕನ್ನಡಕವನ್ನು ಉಪಯೋಗಿಸಿಕೊಳ್ಳಬಹುದು.

'ಐಫೋನ್ 13 ಪ್ರೊ': ಛಾಯಾಗ್ರಾಹಕರ ಕನಸು

ಅವಿನಾಶ್ ಬಿ.

ಐಫೋನ್ 13 ಸರಣಿಯ ಫೋನ್‌ಗಳನ್ನು ಆ್ಯಪಲ್ ಸೆಪ್ಟೆಂಬರ್ ತಿಂಗಳಾಂತ್ಯದಲ್ಲಿ ಮಾರುಕಟ್ಟೆಗೆ ಇಳಿಸಿದೆ. ಐಒಎಸ್ 15 ಹೊಸ ಕಾರ್ಯಾಚರಣಾ ವ್ಯವಸ್ಥೆಯೊಂದಿಗೆ ಬಂದಿರುವ ಐಫೋನ್ 13 'ಪ್ರೊ' ಸಾಧನ ಹೇಗಿದೆ? ಹತ್ತು ದಿನ ಬಳಸಿ ನೋಡಿದಾಗಿನ ಅನುಭವ ಇಲ್ಲಿದೆ.

ಐಫೋನ್ 13 ಪ್ರೊ ಹಾಗೂ ಅದರ ಶಕ್ತಿಶಾಲಿ ಕ್ಯಾಮೆರಾಗಳು

ಮೊದಲ ನೋಟ, ವಿನ್ಯಾಸ

ಆಂತರಿಕವಾಗಿ ಮತ್ತು ಬಾಹ್ಯವಾಗಿಯೂ ಗಟ್ಟಿಮುಟ್ಟಾಗಿ ಇರುವ ಸಾಧನವಿದು. 6.1 ಇಂಚಿನ ಡಿಸ್‌ಪ್ಲೇ (ಸ್ಕ್ರೀನ್), ಸುತ್ತಲೂ ಸ್ಟೇನ್‌ಲೆಸ್ ಸ್ಟೀಲ್ ಚೌಕಟ್ಟು, ಹಿಂಭಾಗದಲ್ಲಿ ಉಬ್ಬಿದ 3 ಸೆನ್ಸರ್‌ಗಳ ಕ್ಯಾಮೆರಾ ಸೆಟಪ್ ಮತ್ತು ಸ್ವಲ್ಪ ತೂಕ (203 ಗ್ರಾಂ) ಜಾಸ್ತಿ. ಸೂಪರ್ ರೆಟಿನಾ XDR OLED (2352x1170 ಪಿಕ್ಸೆಲ್) ಸ್ಕ್ರೀನ್, ಎ15 ಬಯೋನಿಕ್ ಚಿಪ್‌ಸೆಟ್, 6ಜಿಬಿ RAM, ತಲಾ 12 ಮೆಗಾಪಿಕ್ಸೆಲ್‌ನ ವೈಡ್, ಅಲ್ಟ್ರಾ ವೈಡ್ ಹಾಗೂ ಟೆಲಿಫೋಟೊ ಲೆನ್ಸ್‌ಗಳಿರುವ ಹಿಂಭಾಗದ ಕ್ಯಾಮೆರಾ ಹಾಗೂ 12MP ಸೆಲ್ಫೀ ಕ್ಯಾಮೆರಾ, 20W ವೇಗದ ಚಾರ್ಜಿಂಗ್ ವ್ಯವಸ್ಥೆ, ಲೈಟ್ನಿಂಗ್ ಚಾರ್ಜಿಂಗ್ ಪೋರ್ಟ್ - ಇವು ಈ ಶಕ್ತಿಶಾಲಿ ಸ್ಮಾರ್ಟ್‌ಫೋನ್‌ನ ಹೆಗ್ಗಳಿಕೆಗಳು.

ಮುಂಭಾಗದ ಕ್ಯಾಮೆರಾದ ನಾಚ್ (ಕ್ಯಾಮೆರಾ ಲೆನ್ಸ್ ಕಾಣಿಸುವ, ಖಾಲಿ ಜಾಗ) ಹಳೆಯ ಈ ಹಿಂದಿನ ಐಫೋನ್ 12ಕ್ಕೆ ಹೋಲಿಸಿದರೆ ಚಿಕ್ಕದಾಗಿರುವುದು ಪ್ಲಸ್ ಪಾಯಿಂಟ್. ಬೆಝೆಲ್ ಕೂಡ (ಸ್ಕ್ರೀನ್ ಸುತ್ತ ಖಾಲಿ ಅಂಚು) ಕಡಿಮೆಯೇ ಇರುವುದರಿಂದ ಹೆಚ್ಚು ವಿಸ್ತಾರವಾಗಿ ಚಿತ್ರಗಳ ವೀಕ್ಷಣೆ ಸಾಧ್ಯ. ಸೂಪರ್ ರೆಟಿನಾ ಡಿಸ್‌ಪ್ಲೇ ಇರುವುದರಿಂದ ಹಿಂದಿನ ಆವೃತ್ತಿಯ ಫೋನ್‌ಗಿಂತ ಐಫೋನ್ 13 ಪ್ರೊದಲ್ಲಿ ವರ್ಣಮಯ ಚಿತ್ರಗಳು, ಗ್ರಾಫಿಕ್ಸ್, ಅನಿಮೇಟೆಡ್ ದೃಶ್ಯಗಳು ಅತ್ಯುತ್ತಮವಾಗಿ ಕಾಣಿಸುತ್ತವೆ.

ಟಚ್ ಐಡಿ (ಫಿಂಗರ್‌ಪ್ರಿಂಟ್ ಸ್ಕ್ಯಾನರ್) ಇಲ್ಲ, ಚಾರ್ಜಿಂಗ್ ವೇಗವನ್ನು 20W ಗೆ ಸೀಮಿತಗೊಳಿಸಿರುವುದಷ್ಟೇ ಕೊರತೆ. ಫೇಸ್ ಅನ್‌ಲಾಕ್ ವ್ಯವಸ್ಥೆಗೆ, ಮೊದಲೇ ದಾಖಲಿಸಿದ್ದರೂ ಮಾಸ್ಕ್ ಧರಿಸಿ ಪ್ರಯತ್ನಿಸಿದಾಗ ಫೋನ್ ಅದನ್ನು ಸ್ವೀಕರಿಸುವುದಿಲ್ಲ. ಪ್ರೊ-ಮೋಷನ್ ವೈಶಿಷ್ಟ್ಯವಿರುವುದರಿಂದ, ವೇಗದ ಮತ್ತು ಹೆಚ್ಚು ಗ್ರಾಫಿಕ್ಸ್ ಇರುವ ಗೇಮ್ ಆಡುವಾಗ ಯಾವುದೇ ರೀತಿಯಲ್ಲಿಯೂ ಸಮಸ್ಯೆಯಾಗಲಿಲ್ಲ.

ಕ್ಯಾಮೆರಾ, ಸಿನೆಮ್ಯಾಟಿಕ್ ಮೋಡ್

ಅತ್ಯಾಧುನಿಕ ಕ್ಯಾಮೆರಾ ತಂತ್ರಾಂಶ ಐಫೋನ್ 13 ಪ್ರೊ ಸಾಧನದ ಹೆಗ್ಗುರುತು. ಸೆನ್ಸರ್ ಆಧಾರಿತ ಒಐಎಸ್ (ಆಪ್ಟಿಕಲ್ ಇಮೇಜ್ ಸ್ಟೆಬಿಲೈಸೇಶನ್) ಇದೆ. ವಿಡಿಯೊ ತೆಗೆಯಲು ಇರುವ ಸಿನೆಮ್ಯಾಟಿಕ್ ಮೋಡ್ ಬಗ್ಗೆ ಎಷ್ಟು ಹೇಳಿದರೂ ಸಾಲದು. ನಿರ್ದಿಷ್ಟ ವಸ್ತುವನ್ನೇ ಫೋಕಸ್ ಮಾಡಿ, ಅದರ ಹಿನ್ನೆಲೆಯೆಲ್ಲವೂ ಮಸುಕಾಗಿಸುವ ಪೋರ್ಟ್ರೇಟ್ ಮೋಡ್ ಇದಾಗಿದ್ದರೂ, ಬೇರೆ ಬೇರೆ ವಸ್ತುಗಳನ್ನು ಅಥವಾ ಚಲಿಸುವವಸ್ತುವಿನಮೇಲೆಫೋಕಸ್‌ಬದಲಾಯಿಸಿಕೊಳ್ಳಬಹುದಾದ ವೈಶಿಷ್ಟ್ಯ ಇಲ್ಲಿದೆ. ವಿಡಿಯೊ ಶೂಟ್ ಮಾಡಿದ ಬಳಿಕವೂ, ವಸ್ತುವಿನ ಫೋಕಸ್ ಬದಲಾಯಿಸಬಹುದು. ಜೊತೆಗೆ, HDR ವಿಡಿಯೊ ರೆಕಾರ್ಡಿಂಗ್ ಸಾಮರ್ಥ್ಯವೂ ಇದರಲ್ಲಿದೆ.

3x ಆಪ್ಟಿಕಲ್ ಝೂಮ್ ಹಾಗೂ 15x ಡಿಜಿಟಲ್ ಝೂಮ್ ವೈಶಿಷ್ಟ್ಯವಿದ್ದು, ದೂರದ ವಸ್ತುಗಳ ಫೋಟೊಗಳು ಸ್ಪಷ್ಟವಾಗಿ ಮೂಡಲು ನೆರವಾದರೆ, ಮ್ಯಾಕ್ರೋ ಲೆನ್ಸ್ ಇಲ್ಲದಿದ್ದರೂ, ಸಮೀಪದ (ಹೂವಿನ ಶಲಾಕಾಗ್ರದಂತಹ) ಚಿತ್ರಕ್ಕೂ ಸ್ವಯಂಚಾಲಿತ ಫೋಕಸ್ ವ್ಯವಸ್ಥೆಯಿಂದಾಗಿ ಅತ್ಯಂತ ಸ್ಪಷ್ಟ ಚಿತ್ರಗಳು ದೊರೆಯುತ್ತವೆ. ಹೊರಾಂಗಣದಲ್ಲಂತೂ ಅದ್ಭುತ ಚಿತ್ರಗಳ ಜೊತೆಗೆ, ಮಂದ ಬೆಳಕು ಅಥವಾ ಒಳಾಂಗಣದಲ್ಲಿಯೂ ಸಹಜ ಬಣ್ಣದ ಅತ್ಯುತ್ತಮ ಚಿತ್ರಗಳು ಸೆರೆಯಾಗುತ್ತವೆ. ಫೋಟೋಗ್ರಫಿ ಇಷ್ಟಪಡುವವರಿಗೆ ಇದೊಂದು ಅತ್ಯುಪಯುಕ್ತ ಮತ್ತು ಸೂಕ್ತ ಸಾಧನ.

ಬ್ಯಾಟರಿ ಚಾರ್ಜ್ ಸಾಮರ್ಥ್ಯ ಎಷ್ಟೆಂಬುದನ್ನು ಆ್ಯಪಲ್ ಹೇಳಿಕೊಂಡಿಲ್ಲವಾದರೂ, ಸಾಮಾನ್ಯ ಬಳಕೆ ಸಂದರ್ಭ ಎರಡು ದಿನಗಳಿಗೆ ಯಾವುದೇ ಸಮಸ್ಯೆಯಾಗಿಲ್ಲ. ಕಾರ್ಯವ್ಯಸ್ತತೆಯ ವೇಳೆ ಕರೆ, ಸಂದೇಶಗಳಿಂದ ತೊಂದರೆಯಾಗದಂತಿರಲು ಫೋಕಸ್ ಮೋಡ್ ಇದೆ; ಫೇಸ್‌ಟೈಮ್ ಕರೆಯಲ್ಲಿ ಪೋರ್ಟ್ರೇಟ್ ಚಿತ್ರದ ವ್ಯವಸ್ಥೆ, ಆಂಡ್ರಾಯ್ಡ್‌ನ ಗೂಗಲ್ ಲೆನ್ಸ್ ಮಾದರಿಯ ಲೈವ್ ಟೆಕ್ಸ್ಟ್ ವೈಶಿಷ್ಟ್ಯ ಪರಿಚಯಿಸಲಾಗಿದೆ. ಪಠ್ಯದ ಗಾತ್ರವನ್ನು ನಿರ್ದಿಷ್ಟ ಆ್ಯಪ್‌ಗಳಿಗೆ ಅನುಗುಣವಾಗಿ ಬದಲಾಯಿಸಿಕೊಳ್ಳಬಹುದಾಗಿದೆ.

ಬೆಲೆ: ನಾಲ್ಕು ಸ್ಟೋರೇಜ್ ಮಾದರಿಗಳಲ್ಲಿ ಐಫೋನ್ 13 'ಪ್ರೊ' ಮಾರುಕಟ್ಟೆಗೆ ಬಂದಿದೆ. 128GB, 256GB, 512GB ಹಾಗೂ ಇದೇ ಮೊದಲ ಬಾರಿಗೆ 1TB (ಟೆರಾಬೈಟ್) ಸಂಗ್ರಹ ಸಾಮರ್ಥ್ಯದ ಐಫೋನ್ 13 ಪ್ರೊ ಬೆಲೆ ಅನುಕ್ರಮವಾಗಿ ₹1,19,900, ₹1,29,900, ₹1,49,900 ಹಾಗೂ ₹1,69,900. ಗ್ರಾಫೈಟ್, ಸಿಲ್ವರ್, ಗೋಲ್ಡ್, ಸಿಯೆರಾ ಬ್ಲೂ ಹೀಗೆ 4 ಬಣ್ಣಗಳಲ್ಲಿ ಇದು ಮಾರುಕಟ್ಟೆಯಲ್ಲಿ ದೊರೆಯುತ್ತಿದೆ.

ಒಟ್ಟಾರೆಯಾಗಿ, ಹಿಂದಿನ ಆವೃತ್ತಿಗಳಿಗೆ ಹೋಲಿಸಿದರೆ, ಕ್ಯಾಮೆರಾ ಗುಣಮಟ್ಟ, ಅದ್ಭುತವಾದ ಡಿಸ್‌ಪ್ಲೇ, ಬ್ಯಾಟರಿ ಚಾರ್ಜಿಂಗ್, ಕಾರ್ಯಾಚರಣೆ ವೇಗ, 120Hz ರೀಫ್ರೆಶ್ ರೇಟ್ - ಇವುಗಳೆಲ್ಲವೂ ಹೆಚ್ಚು ಸುಧಾರಣೆ ಕಂಡಿರುವ ಅತ್ಯುತ್ತಮ ಐಷಾರಾಮಿ ಫೋನ್ ಇದು. ❖

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 71

971. 'ಕ್ಸೈಲಂ' ಜೀವಕೋಶವು ಎಲ್ಲಿದೆ?
ಎ) ಪ್ರಾಣಿಗಳು ಬಿ) ಸಸ್ಯಗಳು
ಸಿ) ಕೀಟಗಳು ಡಿ) ಬ್ಯಾಕ್ಟೀರಿಯಾ

972. 'ಇರುಳುಗುರುಡು' ಯಾವ ವಿಟಮಿನ್ ಕೊರತೆಯಿಂದ ಉಂಟಾಗುತ್ತದೆ?
ಎ) ವಿಟಮಿನ್ ಎ ಬಿ) ವಿಟಮಿನ್ ಸಿ
ಸಿ) ವಿಟಮಿನ್ ಡಿ ಡಿ) ವಿಟಮಿನ್ ಕೆ

973. ಹಾಲಿನಲ್ಲಿರುವ ಸಕ್ಕರೆ ಯಾವುದು?
ಎ) ಫ್ರುಕ್ಟೋಸ್ ಬಿ) ಸುಕ್ರೋಸ್
ಸಿ) ಸೆಲ್ಯುಲೋಸ್ ಡಿ) ಲ್ಯಾಕ್ಟೋಸ್

974. 36:50::64:?
ಎ) 82 ಬಿ) 72
ಸಿ) 78 ಡಿ) 70

975. 'ನ್ಯಾಷನಲ್ ಹೆರಾಲ್ಡ್' ಪತ್ರಿಕೆಯ ಸಂಸ್ಥಾಪಕರು ಯಾರು?
ಎ) ಬಾಲಗಂಗಾಧರ ತಿಲಕ್ ಬಿ) ಮಹಾತ್ಮಾ ಗಾಂಧಿ
ಸಿ) ಜವಾಹರಲಾಲ್ ನೆಹರು ಡಿ) ಗೋಪಾಲಕೃಷ್ಣ ಗೋಖಲೆ

976. ಕೆಳಗಿನವರಲ್ಲಿ ಯಾರು 'ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ' ಸ್ಥಾಪಿಸಿದರು?
ಎ) ಗೋಪಾಲಕೃಷ್ಣ ಗೋಖಲೆ
ಬಿ) ದಾದಾಭಾಯಿ ನವರೋಜಿ
ಸಿ) ರಾಜಾರಾಮ್ ಮೋಹನ ರಾಯ್
ಡಿ) ನಾರಾಯಣಗುರು

977. ಕೆಳಗಿನವುಗಳಲ್ಲಿ ಯಾವುದು ಅವಿಭಾಜ್ಯ ಸಂಖ್ಯೆ ಅಲ್ಲ?
ಎ) 31 ಬಿ) 61
ಸಿ) 71 ಡಿ) 91

978. ಭಾರತದ ಯಾವ ನಗರವು 'ಸಿಟಿ ಆಫ್ ಜಾಯ್' ಎಂದು ಖ್ಯಾತವಾಗಿದೆ?
ಎ) ಕೋಲ್ಕತ್ತಾ ಬಿ) ಶಿಮ್ಲಾ
ಸಿ) ಜೈಪುರ ಡಿ) ಬೆಂಗಳೂರು

979. 'ಆಪರೇಷನ್ ಫ್ಲಡ್' ಯಾವುದಕ್ಕೆ ಸಂಬಂಧಿಸಿದೆ?
ಎ) ಹಳದಿ ಕ್ರಾಂತಿ ಬಿ) ಹಸಿರು ಕ್ರಾಂತಿ
ಸಿ) ನೀಲಿ ಕ್ರಾಂತಿ ಡಿ) ಶ್ವೇತ ಕ್ರಾಂತಿ

980. ಯಾವ ಕಾನೂನುಬದ್ಧ ಅಧಿಕಾರಿಯು ಸಂಸತ್ತಿನ ಕಲಾಪಗಳಲ್ಲಿ ಭಾಗವಹಿಸುವ ಹಕ್ಕನ್ನು ಹೊಂದಿರುತ್ತಾರೆ?
ಎ) ಅಡ್ವೊಕೇಟ್ ಜನರಲ್
ಬಿ) ಅಟಾರ್ನಿ ಜನರಲ್
ಸಿ) ಸಾಲಿಸಿಟರ್ ಜನರಲ್
ಡಿ) ಕಂಟ್ರೋಲರ್ ಮತ್ತು ಆಡಿಟರ್ ಜನರಲ್

981. 'ದ್ರವ ಬಂಗಾರ' ಯಾವುದು?
ಎ) ಬ್ರೋಮಿನ್ ಬಿ) ಪಾದರಸ
ಸಿ) ಪೆಟ್ರೋಲಿಯಂ ಡಿ) ಮ್ಯಾಗ್ನೀಶಿಯಂ

982. ಯಾವ ನಗರವು 'ದಕ್ಷಿಣ ಭಾರತದ ಮ್ಯಾಂಚೆಸ್ಟರ್' ಎಂದು ಪ್ರಸಿದ್ಧವಾಗಿದೆ?
ಎ) ಹೈದರಾಬಾದ್ ಬಿ) ವಿಶಾಖಪಟ್ಟಣ
ಸಿ) ಕೊಯಮತ್ತೂರು ಡಿ) ಚೆನ್ನೈ

983. ಕೆಳಗಿನವುಗಳಲ್ಲಿ ಯಾವ ವನ್ಯಜೀವಿಧಾಮಗಳು ಕರ್ನಾಟಕದಲ್ಲಿವೆ?
ಎ) ಭದ್ರಾ, ದಾಂಡೇಲಿ, ಪುಷ್ಪಗಿರಿ, ಶೆಟ್ಟಿಹಳ್ಳಿ
ಬಿ) ಭದ್ರಾ, ಕಾವೇರಿ, ಕೃಷ್ಣಾ, ದಾಂಡೇಲಿ
ಸಿ) ಕಾವೇರಿ, ಗುಡವಿ, ಕೃಷ್ಣಾ, ಪುಷ್ಪಗಿರಿ
ಡಿ) ಭದ್ರಾ, ಚಂದೋಲಿ, ಗುಡವಿ, ಪುಷ್ಪಗಿರಿ

984. ಕೆಳಗಿನವುಗಳಲ್ಲಿ ಯಾವ ದೇಶವು 'ಕ್ವಾಡ್' ಭಾಗವಾಗಿಲ್ಲ?
ಎ) ಜಪಾನ್ ಬಿ) ಚೀನಾ
ಸಿ) ಭಾರತ ಡಿ) ಆಸ್ಟ್ರೇಲಿಯಾ

985. ವಿಶ್ವಸಂಸ್ಥೆಯ ದಿನ ಯಾವುದು?
ಎ) 21 ಸೆಪ್ಟೆಂಬರ್ ಬಿ) 24 ಸೆಪ್ಟೆಂಬರ್
ಸಿ) 21 ಅಕ್ಟೋಬರ್ ಡಿ) 24 ಅಕ್ಟೋಬರ್

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 70ರ ಉತ್ತರಗಳು: 956. ಬಿ, 957. ಎ, 958. ಎ, 959. ಬಿ, 960. ಎ, 961. ಡಿ, 962. ಬಿ, 963. ಸಿ, 964. ಡಿ, 965. ಬಿ, 966. ಬಿ, 967. ಬಿ, 968. ಬಿ, 969. ಎ, 970. ಸಿ

ಸುಭಾಷಿತ

ಕೆಲವರು ಚೆನ್ನಾಗಿ ಗಳಿಸುವುದನ್ನು ಕಲಿತಿರುತ್ತಾರೆ. ಆದರೆ, ಅವರು ಚೆನ್ನಾಗಿ ಬದುಕುವುದನ್ನು ಕಲಿತಿರುವುದಿಲ್ಲ.

–ಜಿಮ್ ರೌನ್

‘ಪಿಎಂ ಕೇರ್ಸ್’ ನಿಧಿಯ ಮಾಹಿತಿ ಮುಚ್ಚಿಡುವುದು ಸರಿಯಾದ ನಿಲುವು ಅಲ್ಲ

ಕೋವಿಡ್–19 ಸಾಂಕ್ರಾಮಿಕದ ಪರಿಹಾರ ಕಾರ್ಯಾಚರಣೆಗೆ ಹಣ ಒದಗಿಸುವ ಉದ್ದೇಶದಿಂದ ಕಳೆದ ವರ್ಷ ಸ್ಥಾಪಿಸಲಾದ ‘ಪಿಎಂ ಕೇರ್ಸ್’ ನಿಧಿಗೆ ಸಂಬಂಧಿಸಿ ಯಾವುದೇ ಪ್ರಶ್ನೆ ಕೇಳಿದರೂ ಸರ್ಕಾರವು ಆ ಬಗೆಗಿನ ಮಾಹಿತಿಯನ್ನು ನಿರಂತರವಾಗಿ ಮುಚ್ಚಿಡುತ್ತಲೇ ಬಂದಿದೆ. ಪಿಎಂ ಕೇರ್ಸ್ ನಿಧಿಯ ಕುರಿತು ಕೇಳಲಾಗುವ ಯಾವುದೇ ಪ್ರಶ್ನೆಗೆ ಉತ್ತರಿಸುವ ಬಾಧ್ಯತೆ ತನಗೆ ಇಲ್ಲ ಎಂದು ದೆಹಲಿ ಹೈಕೋರ್ಟ್‌ಗೆ ಕೇಂದ್ರ ಸರ್ಕಾರ ಕಳೆದ ವಾರ ಹೇಳಿದೆ. ಯಾವುದೇ ಪ್ರಶ್ನೆಗೆ ಉತ್ತರ ಕೊಡುವ ಅಗತ್ಯ ಇಲ್ಲ ಎಂಬುದಕ್ಕೆ ಸರ್ಕಾರ ಕಾರಣಗಳನ್ನೂ ಕೊಟ್ಟಿದೆ. ಈ ನಿಧಿಯು ಭಾರತ ಸರ್ಕಾರದ ನಿಯಂತ್ರಣದಲ್ಲಿ ಇಲ್ಲ; ಈ ನಿಧಿಯು ಒಂದು ಸಾರ್ವಜನಿಕ ನಿಧಿ ಅಲ್ಲ ಮತ್ತು ಅದೊಂದು ಸಾಮಾಜಿಕ ಸೇವಾ ಟ್ರಸ್ಟ್ ಎಂಬುದು ಸರ್ಕಾರ ಕೊಟ್ಟಿರುವ ಕಾರಣಗಳು. ಪಿಎಂ ಕೇರ್ಸ್ ನಿಧಿಯನ್ನು ಸಂವಿಧಾನದ ಅಡಿಯಲ್ಲಿರುವ ಅವಕಾಶಗಳಿಗೆ ಅನುಗುಣವಾಗಿ ‘ಸರ್ಕಾರಿ ನಿಧಿ’ ಎಂದು ಘೋಷಿಸಬೇಕು ಮತ್ತು ಅದನ್ನು ಒಂದು ಸಾರ್ವಜನಿಕ ಪ್ರಾಧಿಕಾರವಾಗಿಸಬೇಕು. ಇದರಿಂದಾಗಿ ನಿಧಿಯು ಮಾಹಿತಿ ಹಕ್ಕು ಕಾಯ್ದೆಯ (ಆರ್‌ಟಿಐ) ವ್ಯಾಪ್ತಿಗೆ ಬರುವಂತೆ ಆಗಬೇಕು ಎಂದು ಕೋರಿ ಸಲ್ಲಿಕೆಯಾಗಿದ್ದ ಅರ್ಜಿಗೆ ಸರ್ಕಾರ ಈ ಪ್ರತಿಕ್ರಿಯೆ ನೀಡಿದೆ. ಪ್ರಧಾನ ಮಂತ್ರಿಯವರ ಕಾರ್ಯಾಲಯದ ಅಧಿಕಾರಿ ಪಿ.ಕೆ. ಶ್ರೀವಾಸ್ತವ ಅವರು ಸರ್ಕಾರದ ಪರವಾದ ಸಮಜಾಯಿಷಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ. ಈ ನಿಧಿಯು ಸರ್ಕಾರದ ನಿಧಿಯೇ ಆಗಿರಲಿ, ಸಂವಿಧಾನದ ಅವಕಾಶ ಅನುಸಾರ ಸ್ಥಾಪಿತವಾದ ಪ್ರಾಧಿಕಾರ ಆಗಿರಲಿ ಅಥವಾ ಸಾರ್ವಜನಿಕ ಪ್ರಾಧಿಕಾರ ಆಗಿರಲಿ– ಏನೇ ಆಗಿದ್ದರೂ ನಿಧಿಯ ಬಗೆಗಿನ ಮಾಹಿತಿಯನ್ನು ಆರ್‌ಟಿಐ ಅಡಿಯಲ್ಲಿ ಬಹಿರಂಗಪಡಿಸುವ ಬಾಧ್ಯತೆಯು ತನಗೆ ಇಲ್ಲ ಎಂದು ಸರ್ಕಾರವು ಹೇಳಿದೆ.



ಈ ನಿಧಿಯ ಬಗ್ಗೆ ಯಾವ ಪ್ರಶ್ನೆಗೂ ಉತ್ತರಿಸುವ ಹೊಣೆಗಾರಿಕೆ ಇಲ್ಲ ಎಂಬ ಸರ್ಕಾರದ ನಿಲುವು ಸಮರ್ಥನೀಯ ಅಲ್ಲ

ಸರ್ಕಾರವು ತಳೆದಿರುವ ನಿಲುವು ಹಲವು ರೀತಿಯಲ್ಲಿ ತಪ್ಪು. ಇದು ಸರ್ಕಾರದ ಕಾರ್ಯ ನಿರ್ವಹಣೆಗೆ ಮಾರ್ಗದರ್ಶಿಯಾಗಿ ಇರಬೇಕಾದ ಪಾರದರ್ಶಕತೆಯ ನಿಯಮಗಳು ಮತ್ತು ವಿಶ್ವಾಸಾರ್ಹತೆಗೆ ವಿರುದ್ಧವಾದುದಾಗಿದೆ. ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ (ಎನ್‌ಡಿಆರ್‌ಎಫ್) ಮತ್ತು ಪ್ರಧಾನಿಯವರ ರಾಷ್ಟ್ರೀಯ ಪರಿಹಾರ ನಿಧಿ ಈಗಾಗಲೇ ಅಸ್ತಿತ್ವದಲ್ಲಿ ಇವೆ. ಪಿಎಂ ಕೇರ್ಸ್ ನಿಧಿಯನ್ನು ಸ್ಥಾಪಿಸಲು ಸರ್ಕಾರ ಯಾವ ಕಾರಣವನ್ನು ನೀಡಿತ್ತೋ, ಈ ನಿಧಿಗಳು ನಿರ್ದಿಷ್ಟವಾಗಿ ಅದೇ ಉದ್ದೇಶವನ್ನು ಹೊಂದಿವೆ. ಹಾಗಿರುವಾಗ, ಪಿಎಂ ಕೇರ್ಸ್ ನಿಧಿಯನ್ನು ಸ್ಥಾಪಿಸುವ ಅಗತ್ಯ ಏನಿತ್ತು ಎಂಬುದೇ ಅರ್ಥ ಆಗುವುದಿಲ್ಲ. ಈ ನಿಧಿಯನ್ನು ಸ್ಥಾಪಿಸಿದ ವಿಚಾರವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಘೋಷಿಸಿದ್ದರು. ಸಾರ್ವಜನಿಕರು ಈ ನಿಧಿಗೆ ದೇಣಿಗೆ ನೀಡುವಂತೆ ಅವರು ಕೋರಿದ್ದರು. ಪ್ರಧಾನಿಯವರು ಈ ನಿಧಿಗೆ ಪದನಿಮಿತ್ತ ಅಧ್ಯಕ್ಷ ಮತ್ತು ಮೂವರು ಹಿರಿಯ ಸಚಿವರು ಪದನಿಮಿತ್ತ ಸದಸ್ಯರಾಗಿದ್ದಾರೆ. ಪ್ರಧಾನಿ ಕಾರ್ಯಾಲಯವು ನಿಧಿಯ ನಿರ್ವಹಣೆಯನ್ನು ನೋಡಿಕೊಳ್ಳುತ್ತದೆ. ದೇಶದ ಅಧಿಕೃತ ಲಾಂಛನಗಳು ಮತ್ತು ಭಾರತ ಸರ್ಕಾರದ ವೆಬ್‌ಸೈಟ್ ಅನ್ನು ನಿಧಿಯು ಬಳಸುತ್ತಿದೆ. ಸರ್ಕಾರ ಮತ್ತು ಖಾಸಗಿ ಕ್ಷೇತ್ರದ ಉದ್ಯೋಗಿಗಳು ತಮ್ಮ ಒಂದು ದಿನದ ಸಂಬಳವನ್ನು ಈ ನಿಧಿಗೆ ದೇಣಿಗೆಯಾಗಿ ನೀಡಿದ್ದಾರೆ. ಈ ನಿಧಿಗೆ ನೀಡಿದ ದೇಣಿಗೆಗೆ ಆದಾಯ ತೆರಿಗೆ ಕಾಯ್ದೆ ಅಡಿಯಲ್ಲಿನ ವಿನಾಯಿತಿ ದೊರೆಯುತ್ತದೆ. ಈ ನಿಧಿಗೆ ನೀಡುವ ಮೊತ್ತವನ್ನು ಉದ್ಯಮ ಸಾಮಾಜಿಕ ಹೊಣೆಗಾರಿಕೆ ವೆಚ್ಚವಾಗಿ ಪರಿಗಣಿಸಲು ಅವಕಾಶ ಮಾಡಿಕೊಡಲಾಗಿದೆ.

ಪಿಎಂ ಕೇರ್ಸ್ ನಿಧಿಯು ಸರ್ಕಾರದ ಪ್ರಾಧಿಕಾರ ಅಲ್ಲ ಎಂದು ಭಾವಿಸಲು ಸಾಧ್ಯವೇ ಇಲ್ಲದಷ್ಟು ಪ್ರಮಾಣದಲ್ಲಿ ನಿಧಿಯ ಸ್ಥಾಪನೆ ಮತ್ತು ಕಾರ್ಯನಿರ್ವಹಣೆಯಲ್ಲಿ ಸರ್ಕಾರದ ಪಾಲ್ಗೊಳ್ಳುವಿಕೆ ಇದೆ. ಸಾವಿರಾರು ಕೋಟಿ ರೂಪಾಯಿ ಸಾರ್ವಜನಿಕ ಹಣವು ಈ ನಿಧಿಗೆ ಸಂದಾಯವಾಗಿದೆ. ಹಾಗಾಗಿಯೇ, ಇದರ ಆದಾಯ ಮತ್ತು ವೆಚ್ಚವು ಸಾರ್ವಜನಿಕ ಪರಿಶೀಲನೆಗೆ ಒಳಪಡಲೇಬೇಕು. ಮಹಾಲೇಖಪಾಲರಿಂದ ಲೆಕ್ಕ ಪರಿಶೋಧನೆ ಅಥವಾ ಆರ್‌ಟಿಐ ಅಡಿಯಲ್ಲಿ ಸಾರ್ವಜನಿಕರು ಮಾಹಿತಿ ಪಡೆದು ಈ ನಿಧಿಯನ್ನು ಪರಿಶೀಲನೆಗೆ ಒಳಪಡಿಸುವ ಅಗತ್ಯ ಇಲ್ಲ ಎಂಬ ವಾದವೇ ಸರಿಯಲ್ಲ. ನಿಧಿಯು ಸರ್ಕಾರದ ಭಾಗ ಎಂಬಂತೆಯೇ ಕಾರ್ಯನಿರ್ವಹಿಸುತ್ತಿದೆ. ಪ್ರಧಾನಿ ಮತ್ತು ಸಚಿವರು ಈ ನಿಧಿಯ ಕೆಲಸಗಳಲ್ಲಿ ಭಾಗಿಯಾಗಿರುವುದು ವೈಯಕ್ತಿಕ ನೆಲೆಯಿಂದ ಅಲ್ಲ. ಹಾಗಾಗಿಯೇ, ಈ ನಿಧಿಯ ಬಗ್ಗೆ ಯಾವ ಪ್ರಶ್ನೆಗೂ ಉತ್ತರಿಸುವ ಹೊಣೆಗಾರಿಕೆ ಇಲ್ಲ ಎಂಬ ಸರ್ಕಾರದ ನಿಲುವು ಸಮರ್ಥನೀಯ ಅಲ್ಲ. ನಿಧಿಯ ವಹಿವಾಟನ್ನು ಆರ್‌ಟಿಐ ಅಡಿಯಲ್ಲಿ ಸಾರ್ವಜನಿಕ ಪರಿಶೀಲನೆಗೆ ಒಳಪಡಿಸುವುದಿಲ್ಲ ಎಂಬುದೂ ಸರಿಯಲ್ಲ.

ದಿನದ ಟ್ವೀಟ್

ಜನಸಾಮಾನ್ಯರು ಲೆಕ್ಕಕ್ಕಿಲ್ಲವೇ?

ಚಾಮರಾಜನಗರಕ್ಕೆ ರಾಷ್ಟ್ರಪತಿ ಬರುತ್ತಾ ಇದ್ದಾರೆ ಅಂತೇಳಿ ರಸ್ತೆಗಳ ದುರಸ್ತಿ ಕಾರ್ಯ ತುರ್ತಾಗಿ ನಡೆಯುತ್ತಿದೆ. ಆದ್ರೆ, ಪ್ರಮುಖ ಹೆದ್ದಾರಿಗಳಲ್ಲಿ ದಿನನಿತ್ಯ ನಡೆಯುವ ಎಷ್ಟೋ ಅಪಘಾತ ಪ್ರಕರಣಗಳನ್ನು ಕಂಡರೂ ಕುರುಡರಂತೆ ಇರುತ್ತಾರೆ, ಅದು ಯಾಕೆ? ಯಾರು ಹೊಣೆ? ಸರ್ಕಾರದ ಪ್ರಾಮುಖ್ಯವು ಗಣ್ಯ ವ್ಯಕ್ತಿಗಳಿಗೆ ಮಾತ್ರಾನಾ? ಇದು ಜನಪರ ಸರ್ಕಾರ ಹೇಗೆ?

ಅನಿಲ್ ಕುಮಾರ್, ನಂಜನಗೂಡು

ಕಿಡಿನುಡಿ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ‘ಧವಳಗಿರಿ’, ‘ಕೇಶವಕೃಪ’ ಹಾಗೂ ಹೈಕಮಾಂಡ್ ಎಂಬ ಚಕ್ರವ್ಯೂಹದಲ್ಲಿ ಸಿಲುಕಿದ್ದು, ಯಾವುದೇ ಸ್ವಂತ ನಿರ್ಣಯ ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ.

ಸಲೀಂ ಅಹಮದ್, ಕೆಪಿಸಿಸಿ ಕಾರ್ಯಾಧ್ಯಕ್ಷ

25 ವರ್ಷಗಳ ಹಿಂದೆ

ಭಾನುವಾರ, 6-10-1996

- **ಪರೇಸಂದ್ರ ದುರಂತ: ಆರೋಪಿಗಳ ಸೆರೆಗೆ ಪೊಲೀಸ್ ವಾರಂಟ್**

ಮುಂಬೈ, ಅ. 5 (ಪಿಟಿಐ)– ಕೋಲಾರ ಜಿಲ್ಲೆಯ ಪರೇಸಂದ್ರದಲ್ಲಿ ನಡೆದ ಉಚಿತ ನೇತ್ರ ಚಿಕಿತ್ಸಾ ಶಿಬಿರದಲ್ಲಿ ನೀಡಲಾದ ಕಲಬೆರಕೆ ಮಾತ್ರೆ ತಯಾರಿಕಾ ಸಂಸ್ಥೆಯಾದ ಜರ್ಮನ್ ಬಹುರಾಷ್ಟ್ರೀಯ ಕಂಪನಿ ಬೋಹ್ರಿಂಗರ್ ಮ್ಯಾನ್‌ಹೆಮ್ ವ್ಯವಸ್ಥಾಪಕ ನಿರ್ದೇಶಕ ಸೇರಿದಂತೆ 12 ಅಧಿಕಾರಿಗಳ ಬಂಧನಕ್ಕೆ ಥಾಣೆ ಪೊಲೀಸರು ಆದೇಶ ಹೊರಡಿಸಿದ್ದಾರೆ.

ಕಲಬೆರಕೆ ಮಾತ್ರೆಯಾದ ಕಾಸ್ಮಾಟ್ ಫೋರ್ಟೆಯನ್ನು ಸೇವಿಸಿ ಹಲವಾರು ಮಂದಿ ಅಸ್ವಸ್ಥರಾಗಿ ಇಬ್ಬರು ಮೃತರಾಗಿದ್ದರು. ಕಳಪೆ ಗುಣಮಟ್ಟ ಮತ್ತು ನಿರ್ಲಕ್ಷ್ಯದ ಆರೋಪದ ಹಿನ್ನೆಲೆಯಲ್ಲಿ ಆಹಾರ ಮತ್ತು ಔಷಧ ನಿರ್ವಹಣಾ ಮಂಡಳಿಯು ಅ. 3ರಂದು ಪ್ರಥಮ ಮಾಹಿತಿ ವರದಿ ಸಲ್ಲಿಸಿದ್ದರಿಂದ ಪೊಲೀಸರು ಈ ಆದೇಶ ಜಾರಿಗೊಳಿಸಿದ್ದಾರೆ.

- **ಈರುಳ್ಳಿ, ಆಲೂಗಡ್ಡೆ ಸರ್ಕಾರದಿಂದ ಖರೀದಿ**

ಬೆಂಗಳೂರು, ಅ. 5– ರಾಜ್ಯದಲ್ಲಿ ಭರಪೂರ ಬೆಳೆ ಬಂದಿರುವ ಆಲೂಗಡ್ಡೆ ಮತ್ತು ಈರುಳ್ಳಿ ಬೆಳೆದ ರೈತರ ‘ಕಣ್ಣಲ್ಲಿ ನೀರುಕ್ಕುವುದನ್ನು’ ತಡೆಯಲು ತೀರ್ಮಾನಿಸಿರುವ ಸರ್ಕಾರ, ಈ ಬೆಳೆಯನ್ನು ಒರಿಸ್ಸಾ, ಆಂಧ್ರ ಪ್ರದೇಶ, ಪಶ್ಚಿಮ ಬಂಗಾಳವೇ ಅಲ್ಲದೆ ಮಲೇಷ್ಯಾ ಹಾಗೂ ಶ್ರೀಲಂಕಾಗಳಿಗೆ ರಫ್ತು ಮಾಡಲು ನಿರ್ಧರಿಸಿದೆ ಎಂದು ತಿಳಿದುಬಂದಿದೆ.

50 ವರ್ಷಗಳ ಹಿಂದೆ

ಬುಧವಾರ, 6-10-1971

- **ಬಳಸದ ಮತಚೀಟಿಗಳನ್ನು ಇಂದು ಹಾಜರುಪಡಿಸಲು ರಾಜ್ಯ ಹೈಕೋರ್ಟ್ ಸೂಚನೆ**

ಬೆಂಗಳೂರು, ಅ. 5– ಮೈಸೂರು ನಗರ ಕ್ಷೇತ್ರದಿಂದ ಲೋಕಸಭೆಗೆ ಜರುಗಿದ ಚುನಾವಣೆಯಲ್ಲಿ ಉಪಯೋಗಿಸದಿದ್ದ ಮತಚೀಟಿಗಳನ್ನು ಬುಧವಾರ ಬೆಳಿಗ್ಗೆ 11 ಗಂಟೆಯೊಳಗೆ ನ್ಯಾಯಾಲಯದಲ್ಲಿ ಹಾಜರುಪಡಿಸಬೇಕೆಂದು ಮೈಸೂರು ಹೈಕೋರ್ಟಿನ ನ್ಯಾಯಮೂರ್ತಿ ಇ.ಎಸ್. ವೆಂಕಟರಾಮಯ್ಯ ಅವರು ಇಂದು ಆದೇಶ ನೀಡಿದರು.

ಧಾರವಾಡ ಉತ್ತರ, ಮೈಸೂರು ನಗರ, ಚಾಮರಾಜನಗರ, ಕೊಪ್ಪಳ ಮತ್ತು ಬಾಗಲಕೋಟೆ ಕ್ಷೇತ್ರಗಳಿಂದ ಈಚೆಗೆ ಲೋಕಸಭೆಗೆ ಜರುಗಿದ ಚುನಾವಣೆಗಳನ್ನು ಪ್ರಶ್ನಿಸಿ ಸಲ್ಲಿಸಿದ ರಿಟ್ ಅರ್ಜಿಗಳ ವಿಚಾರಣೆ ಹೈಕೋರ್ಟಿನಲ್ಲಿ ನಡೆಯಿತು.

- **ಪಂಜಾಬ್ ಕಾಂಗ್ರೆಸ್ ಬಿಕ್ಕಟ್ಟು ಅಂತ್ಯ**

ನವದೆಹಲಿ, ಅ. 5– ಪಂಜಾಬ್ ಆಡಳಿತ ಕಾಂಗ್ರೆಸ್ಸಿನ ಎರಡು ಗುಂಪುಗಳು ಭಿನ್ನಾಭಿಪ್ರಾಯ ಮರೆತು, ಬರುವ ವಿಧಾನಸಭೆ ಚುನಾವಣೆಯಲ್ಲಿ ಪಕ್ಷದ ಯಶಸ್ಸಿಗಾಗಿ ಶ್ರಮಿಸಲು ಇಂದು ಸಮ್ಮತಿಸಿದವು.

ಪಂಜಾಬ್ ಆಡಳಿತ ಕಾಂಗ್ರೆಸ್ಸಿನ ಹಿರಿಯ ನಾಯಕರು ಪ್ರಧಾನಮಂತ್ರಿ ಇಂದಿರಾ ಗಾಂಧಿಯವರ ಜೊತೆ ದೀರ್ಘ ಮಾತುಕತೆ ನಡೆಸಿದ ಬಳಿಕ ಈ ಒಮ್ಮತಕ್ಕೆ ಬರಲಾಯಿತು. ಪಂಜಾಬಿನ ನಾಯಕರು ಉಮಾಶಂಕರ ದೀಕ್ಷಿತ್, ಡಾ. ಶಂಕರದಯಾಳ್ ಶರ್ಮಾ ಮತ್ತು ಚಂದ್ರಜಿತ್‌ಯಾದವ್ ಅವರೊಡನೆಯೂ ಮಾತುಕತೆ ನಡೆಸಿದರು.

ಎರಡು ಗುಂಪಿನ ಕಾಂಗ್ರೆಸ್ಸಿಗರೂ ತಮ್ಮ ಭಿನ್ನಾಭಿಪ್ರಾಯದ ಕಾರಣಗಳನ್ನು ಮಾತುಕತೆ ಕಾಲದಲ್ಲಿ ದೆಹಲಿ ವರಿಷ್ಠರಿಗೆ ವಿವರಿಸಿದರು.

ಅಂತರಿಕ್ಷ ಕಸದಿಂದ ಉಂಟಾಗಿರುವ ತೀವ್ರ ಸಮಸ್ಯೆಗೆ ಪರಿಹಾರ ಸುಲಭವಲ್ಲ

ಕಕ್ಷೆಯಲ್ಲಿ ಉಪಗ್ರಹಗಳ ಟ್ರಾಫಿಕ್ ಜಾಮ್!

ವಿಶ್ಲೇಷಣೆ

ಟಿ.ಆರ್.ಅನಂತರಾಮು

ಸದ್ಯ ಅಂತರಿಕ್ಷದಲ್ಲಿ ಎಷ್ಟು ಉಪಗ್ರಹಗಳು ಪರಿಭ್ರಮಿಸುತ್ತಿವೆ ಎಂದು ಕೇಳಿದರೆ, ಆಯಾ ದೇಶ ಅದರ ಲೆಕ್ಕ ಕೊಡಬಹುದು ಅಷ್ಟೇ. 1975ರಲ್ಲಿ ಆರ್ಯಭಟ ಉಪಗ್ರಹ ಉಡಾವಣೆಯ ನಂತರ ಭಾರತವೊಂದೇ ಇತ್ತೀಚಿನ ಸಂಪರ್ಕ ಉಪಗ್ರಹ ಸಿ.ಎಂ.ಎಸ್. ಸೇರಿದಂತೆ ನೂರಕ್ಕೂ ಹೆಚ್ಚು ಉಪಗ್ರಹಗಳನ್ನು ಹಾರಿಸಿದೆ. ಶಿಕ್ಷಣ, ಸಂಪರ್ಕ, ಕೃಷಿ, ಸಂಪನ್ಮೂಲ ಸಮೀಕ್ಷೆ, ಸ್ಥಾನ ನಿರ್ದೇಶನ, ಅರಣ್ಯ ವಿಸ್ತೀರ್ಣ ಎಲ್ಲದಕ್ಕೂ ನಾವು ಉಪಗ್ರಹಗಳು ನೀಡುವ ಚಿತ್ರ, ಮಾಹಿತಿಗಳನ್ನೇ ಅವಲಂಬಿಸಿದ್ದೇವೆ.

ಅಂತರಿಕ್ಷ ಯೋಜನೆಯಲ್ಲಿ ಯಶಸ್ಸು ಕಂಡ ದೇಶಗಳೆಲ್ಲವೂ ‘ಸ್ಪೇಸ್ ಫೇರಿಂಗ್ ನೇಷನ್ಸ್’ ಎಂಬ ಕೂಟ ಸ್ಥಾಪಿಸಿಕೊಂಡಿವೆ. ಅಂತರಿಕ್ಷವನ್ನು ಅವಷ್ಟೇ ಆಳುತ್ತಿವೆ. ರಷ್ಯಾದ ಯೂರಿ ಗಗಾರಿನ್ 1957ರಲ್ಲಿ ಸ್ಪುಟ್ನಿಕ್‌ನಲ್ಲಿ ಭೂಮಿಯನ್ನು ಸುತ್ತಿದಾಗ ಪ್ರಾರಂಭವಾಯಿತು ಆಕಾಶಯುಗ. ಈಗ ಬರೋಬ್ಬರಿ 8,055 ಉಪಗ್ರಹಗಳು ಅಂತರಿಕ್ಷ ಸೇರಿವೆ. ಈ ಪೈಕಿ ಶೇ 42ರಷ್ಟು ನಿಷ್ಕ್ರಿಯ ಉಪಗ್ರಹಗಳು. ಇವು ಎಲ್ಲ ಕಳಚಿಕೊಂಡು ನಗ್ನವಾಗಿ ಚಿರಕಾಲ ತ್ರಿಶಂಕು ವ್ಯವಸ್ಥೆಯಲ್ಲೇ ಇರುವಂತಹವು. ಉಡಾವಣೆಗಳು ಯಶಸ್ವಿಯಾಗಿರಬಹುದು, ಆದರೆ ಕಕ್ಷೆಯಲ್ಲಿ ಸುತ್ತುವಾಗ ಯಾವುದೋ ಒಂದು ಭಾಗ ಕೈಕೊಟ್ಟರೆ ಇಡೀ ಯೋಜನೆಯೇ ವಿಫಲವಾಗುವುದುಂಟು. ಆಕಾಶದಲ್ಲೇನೂ ಪಾರ್ಕಿಂಗ್ ಮಾಡಲಾಗುವುದಿಲ್ಲ, ಅದೇನಿದ್ದರೂ ನಿಲ್ಲದ ಓಟ.

ಇಂಥ ರಿಸ್ಕ್ ಇರುವುದರಿಂದಲೇ ಉಪಗ್ರಹಗಳಿಗೆ ವಿಮಾ ಯೋಜನೆ ಜಾರಿಯಲ್ಲಿದೆ. 1982ರಲ್ಲಿ ಅಮೆರಿಕದ ಡೆಲ್ಟಾ ರಾಕೆಟ್ ಮೂಲಕ ಭಾರತದ ಇನ್‌ಸ್ಯಾಟ್-1ಎ ಉಪಗ್ರಹ ನಿರೀಕ್ಷಿಸಿದಂತೆ ಕಕ್ಷೆಗೆ ಸೇರಿದರೂ ನಿಯಂತ್ರಣ ಘಟಕದ ಒಂದು ಭಾಗ ಕೆಲಸ ಮಾಡದೆ ಉಪಗ್ರಹದ ಆಯುಷ್ಯ ಕೊನೆಗೊಂಡಿತು. ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪನಿ ತಡಮಾಡದೆ ಇಸ್ರೊ ಅಧ್ಯಕ್ಷ ಸತೀಶ್ ಧವನ್ ಅವರಿಗೆ ₹ 9.6 ಕೋಟಿಯ ಚೆಕ್ ಕೊಟ್ಟು ಮುಂದಿನ ಯೋಜನೆಗೆ ಶುಭ ಕೋರಿತು. ವಿಮೆ ಮಾಡಿಸಿದ್ದರಿಂದ ಭಾಗಶಃ ನಷ್ಟ ಭರ್ತಿಯಾಯಿತು. ವಿದೇಶಿ ಅಂತರಿಕ್ಷ ಕೇಂದ್ರದಿಂದ ಉಪಗ್ರಹಗಳನ್ನು ಉಡಾವಣೆ ಮಾಡುವಾಗ, ಕಡ್ಡಾಯವಾಗಿ ವಿಮೆ ಮಾಡಿಸಿರಲೇಬೇಕು. ಆದರೆ ಸ್ವದೇಶಿ ಉಪಗ್ರಹಗಳ ಉಡಾವಣೆಗೆ ಇಂಥ ನಿರ್ಬಂಧವಿಲ್ಲ. ಜಿಸ್ಯಾಟ್-10, ಇನ್‌ಸ್ಯಾಟ್-3ಡಿ, ಜಿಸ್ಯಾಟ್-7 ಮತ್ತು ಜಿಸ್ಯಾಟ್-17 ಉಪಗ್ರಹಗಳಿಗೆ ಇಸ್ರೊ ವಿಮೆ ಮಾಡಿಸಿತ್ತು. ಈಗ ಪರಿಸ್ಥಿತಿ ಬಿಗಡಾಯಿಸುತ್ತಿದೆ. ಭೂಸಮೀಪ ಕಕ್ಷೆಯಲ್ಲಿ ಉಪಗ್ರಹಗಳ ಟ್ರಾಫಿಕ್ ಜಾಮ್ ಆಗುತ್ತಿದೆ. ವರ್ಷದ ಹಿಂದೆ ಶೇ 68ರಷ್ಟು ಇದ್ದ ಟ್ರಾಫಿಕ್ ಜಾಮ್ ಪ್ರಮಾಣ ಈಗ ಶೇ 200ಕ್ಕೆ ಏರಿದೆ. ಬಹುಶಃ ವಿಮಾ ಕಂಪನಿಗಳು ಜಾಗೃತವಾಗದಿದ್ದರೆ ದಿವಾಳಿ ಏಳುವ ಸಂಭವ ಉಂಟು.

ಸದ್ಯ ಜಗತ್ತಿನಾದ್ಯಂತ ಇಪ್ಪತ್ತು ದೊಡ್ಡ ವಿಮಾ ಕಂಪನಿಗಳು ಉಪಗ್ರಹಗಳಿಗೆ ವಿಮೆ ಸೌಲಭ್ಯ ಕೊಡುತ್ತಿವೆ. ಟ್ರಾಫಿಕ್ ಜಾಮ್ ಹೆಚ್ಚಾದಂತೆ ಕಕ್ಷೆಯಲ್ಲಿ ಒಂದು ಮತ್ತೊಂದಕ್ಕೆ ಡಿಕ್ಕಿ ಹೊಡೆಯುವ ಸಾಧ್ಯತೆ ಹೆಚ್ಚು. ಇದನ್ನು ಮನಗಂಡ ವಿಮಾ ಕಂಪನಿಗಳು ಈ ಬಾಬತ್ತಿಗೆ ವಿಮೆಯ ಸೌಲಭ್ಯವನ್ನು ಕೊಡುವುದಿಲ್ಲ ಎನ್ನುವ ಪರಿಸ್ಥಿತಿ ಉಂಟಾಗುತ್ತಿದೆ.

ಉಪಗ್ರಹಗಳ ಸಹಜ ಆಯುಷ್ಯ ಮುಗಿದು, ಮುದಿಯಾಗಿ ಅಲ್ಲೇ ಉಳಿದರೆ ವಿಮಾ ಕಂಪನಿಗಳಿಗೆ ಲಾಭ. ಉಡಾವಣೆಯಾಗುವಾಗ ಅಥವಾ ಕಕ್ಷೆಯಲ್ಲಿ ಸುತ್ತುವಾಗ ಉಪಗ್ರಹದ ಯಾವುದಾದರೂ ಭಾಗ ಜಖಂ ಆದರೆ ಅಥವಾ ನಿರುಪಯುಕ್ತವಾದರೆ ಅಂಥ ಉಪಗ್ರಹಗಳು ವಿಮಾ ಕಂಪನಿಗೆ ದೊಡ್ಡ ಮೊತ್ತವನ್ನು ಕಕ್ಕುವಂತೆ ಮಾಡುತ್ತವೆ. ಅದಕ್ಕಾಗಿಯೇ ಪ್ರೀಮಿಯಂ ಭಾರಿ ದುಬಾರಿಯಾಗುತ್ತಿದೆ. ಭೂಸಮೀಪ ಕಕ್ಷೆ ಎಂದರೆ 100 ಕಿಲೊ ಮೀಟರ್ ಎತ್ತರದಿಂದ 2,000 ಕಿಲೊ ಮೀಟರ್ ಎತ್ತರದವರೆಗಿನ ಸಾಮ್ರಾಜ್ಯ. ಇಲ್ಲೇ ಟ್ರಾಫಿಕ್ ಜಾಮ್ ಆಗುತ್ತಿರುವುದು. ಭೂಮಿಯಿಂದ ಸುಮಾರು 36,000 ಕಿಲೊ ಮೀಟರ್ ಎತ್ತರದಲ್ಲಿರುವ ಭೂಸ್ಥಿರ ಕಕ್ಷೆಯಲ್ಲೂ ಉಪಗ್ರಹಗಳು ಪರಿಭ್ರಮಿಸುತ್ತಿವೆ. ಆದರೆ ಅಲ್ಲಿ ಟ್ರಾಫಿಕ್ ಜಾಮ್ ಕಡಿಮೆ. ಈ ತಂತ್ರಜ್ಞಾನವನ್ನೆಲ್ಲ ವಿಮಾ ಕಂಪನಿಗಳು ಕರಗತ ಮಾಡಿಕೊಂಡಿವೆ.

ಭೂಸಮೀಪ ಕಕ್ಷೆಗೆ ಉಡಾಯಿಸುವ ಉಪಗ್ರಹಗಳು ಹೆಚ್ಚು ಕಡಿಮೆ ನಮ್ಮ ಮನೆಯ ರೆಫ್ರಿಜಿರೇಟರ್ ಗಾತ್ರದವು. ವಿಮಾ ಕಂಪನಿಗಳು ಒಂದೊಂದಕ್ಕೂ ಐದು ಲಕ್ಷ ಡಾಲರ್‌ನಿಂದ ಹತ್ತು ಲಕ್ಷ ಡಾಲರ್‌ವರೆಗೆ ವಿಮೆ ಮಾಡಿಸುವಂತೆ ಕೇಳುತ್ತವೆ. ಭೂಸ್ಥಿರ ಕಕ್ಷೆಯಲ್ಲಿ ಸುತ್ತುವ ಉಪಗ್ರಹಗಳಿಗೆ 20 ಕೋಟಿಯಿಂದ 30 ಕೋಟಿ ಡಾಲರ್ ವಿಮೆ ಇಳಿಸಬೇಕು. ಇತ್ತೀಚೆಗೆ, ವಿಮೆ ಮಾಡಿಸದಿದ್ದರೆ ಉಪಗ್ರಹ ಉಡಾವಣೆಯೇ ಇಲ್ಲ ಎನ್ನುವ ಹಂತಕ್ಕೆ ಸ್ಥಿತಿ ತಲುಪಿದೆ.

‘ಗ್ಲೋಬಲ್ ಏರೊಸ್ಪೇಸ್’ ಎನ್ನುವುದು ಜಾಗತಿಕ ಮಟ್ಟದ ಉಪಗ್ರಹ ವಿಮಾ ಕಂಪನಿ. ‘ಉಪಗ್ರಹಗಳು ಪರಸ್ಪರ ಡಿಕ್ಕಿ ಹೊಡೆಯುತ್ತವೆ ಎನ್ನುವ ಭಯಕ್ಕಿಂತ ಹೆಚ್ಚು ನಮ್ಮನ್ನು ಕಾಡುವುದು ಅಂತರಿಕ್ಷದ ಕಸ. ಅದಕ್ಕೆ ಸಾವಿಲ್ಲ. ಸದ್ಯದ ಅಂದಾಜಿನಂತೆ, ಕಳೆದ 64 ವರ್ಷಗಳಿಂದ ಕಕ್ಷೆಗೆ ಕಳಿಸಿರುವ ಉಪಗ್ರಹಗಳಿಂದ ಸೃಷ್ಟಿಯಾಗಿರುವ ಕಸದ ಪ್ರಮಾಣ 5,500 ಟನ್ನು’ ಎನ್ನುತ್ತದೆ ಈ ಕಂಪನಿ. ರಾಡಾರ್, ಲಿಡಾರ್‌ನಂಥ ಉಪಕರಣಗಳನ್ನು ಬಳಸಿ, ಈ ಮಾಹಿತಿಯನ್ನು ಪಡೆದಿದೆ. ಈ ಪೈಕಿ ಒಂದು ಸೆಂಟಿಮೀಟರ್ ಗಾತ್ರದ 1,280 ಲಕ್ಷ ಚೂರುಗಳು ಕಕ್ಷೆಯಲ್ಲಿ ಸುತ್ತುತ್ತಿವೆಯಂತೆ. ಉಪಗ್ರಹದ ಬಿಡಿ ಭಾಗಗಳು, ಕ್ಯಾಮೆರಾ, ರಾಕೆಟ್‌ನ ಮೇಲ್ಕವಚ, ಪೇಂಟ್ ಚೂರು-ಒಟ್ಟಾರೆ ಕಸದ ತೊಟ್ಟಿ ಸುತ್ತುತ್ತಿದೆ, ಸೆಕೆಂಡಿಗೆ 11 ಕಿ.ಮೀ. ಗಿಂತಲೂ ಹೆಚ್ಚು ವೇಗದಲ್ಲಿ.

ಹೆಲ್ಮೆಟ್ ಇಲ್ಲದೆ ನೀವು ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದರೆ, ನೊಣ ಅಡ್ಡಬಂದರೂ ಸಾಕು, ಹಣೆಗೆ ಪೆಟ್ಟಾಗುತ್ತದೆ. ಅಂತರಿಕ್ಷದಲ್ಲೂ ಅದೇ ಸ್ಥಿತಿ. 1978ರಲ್ಲಿ ಅಮೆರಿಕದ ನಾಸಾ ಸಂಸ್ಥೆಯ ವಿಜ್ಞಾನಿ ಡೊನಾಲ್ಡ್ ಕೆಸ್ಲರ್ ಒಂದು ಸಿದ್ಧಾಂತವನ್ನು ಮಂಡಿಸಿದ್ದ. ಇನ್ನು ಮುಂದೆ ಭೂಸಮೀಪ ಕಕ್ಷೆಯಲ್ಲಿ ಉಪಗ್ರಹಗಳ ದಟ್ಟಣೆ ಹೆಚ್ಚಿ, ಚೂರುಪಾರುಗಳು ಹೆಚ್ಚಾಗಿ ಪರಸ್ಪರ ಡಿಕ್ಕಿ ಹೊಡೆಯುತ್ತಲೇ ಇನ್ನಷ್ಟು ಕಸ ಹೆಚ್ಚಿಸುತ್ತವೆ. ಒಂದು ಹಂತದಲ್ಲಿ ಉಪಗ್ರಹಗಳಿಗೇ ಜಾಗವಿಲ್ಲದ ಕಕ್ಷೆಯಾಗಿ ಅದು ಪರಿವರ್ತನೆಯಾಗುತ್ತದೆ ಎಂದಿದ್ದ. ಉಪಗ್ರಹ ಉಡಾವಣೆ ಮಾಡುವ ಸಂಸ್ಥೆಗಳಿಗಿಂತ ಈ ಮಾತು ಹೆಚ್ಚು ನೆನಪಿನಲ್ಲಿರುವುದು ವಿಮಾ ಕಂಪನಿಗಳಿಗೆ.

ದಿನಕ್ಕೆ ಹದಿನಾರು ಬಾರಿ ಸೂರ್ಯೋದಯ-ಸೂರ್ಯಾಸ್ತ ನೋಡುವ ಭಾಗ್ಯವಿರುವುದು ಭೂಮಿಯಿಂದ ಸುಮಾರು 400 ಕಿಲೊ ಮೀಟರ್ ಎತ್ತರದ ಕಕ್ಷೆಯಲ್ಲಿ ಪರಿಭ್ರಮಿಸುತ್ತಿರುವ ಅಂತರರಾಷ್ಟ್ರೀಯ ಅಂತರಿಕ್ಷ ನಿಲ್ದಾಣದ ಯಾನಿಗಳಿಗೆ. ಕಕ್ಷೆಯಲ್ಲಿ ಸುತ್ತಾಡುವ ಯಾವ ಚೂರೂ ಬಡಿಯಬಾರದೆಂಬ ದೃಷ್ಟಿಯಿಂದ ವಿಶೇಷ ರಕ್ಷಣಾ ಕವಚವೊಂದನ್ನು ಇದಕ್ಕೆ ಹೊದಿಸಲಾಗಿದೆ. ಇದೇ ವರ್ಷದ ಜೂನ್ ತಿಂಗಳು ಕಸದ ಒಂದು ತುಣುಕು ಬಡಿದು ಈ ನಿಲ್ದಾಣದ ರೊಬಾಟ್‌ನ ಒಂದು ಕೈಯನ್ನೇ ಜಖಂಗೊಳಿಸಿತ್ತು. 2003ರಲ್ಲಿ ಕೊಲಂಬಿಯಾ ಅಂತರಿಕ್ಷ ನೌಕೆ ಭೂಮಿಯ ವಾತಾವರಣಕ್ಕೆ ಮರುಪ್ರವೇಶ ಮಾಡುವಾಗ ಕಲ್ಪನಾ ಚಾವ್ಲಾ ಸೇರಿದಂತೆ ಏಳು ಮಂದಿ ಭಸ್ಮವಾಗಿ ಹೋದರು. ಕೊಲಂಬಿಯಾದ 83,000 ಚೂರುಗಳು ಟೆಕ್ಸಾಸ್‌ನಿಂದ ಲೂಸಿಯಾನದವರೆಗೆ ಚೆಲ್ಲಾಪಿಲ್ಲಿಯಾಗಿ ಬಿದ್ದದ್ದನ್ನು ಯಾರೂ ಮರೆತಿಲ್ಲ. ವಿಮಾ ಕಂಪನಿಗಳಂತೂ ಮರೆಯುವಂತೆಯೇ ಇಲ್ಲ.

ಅಂತರಿಕ್ಷ ಕಸವು ಉಪಗ್ರಹಗಳ ಭವಿಷ್ಯವನ್ನೇ ಭಗ್ನಗೊಳಿಸುವ ಪರಿಸ್ಥಿತಿ ಎದುರಾಗಿದ್ದರೂ ಇದಕ್ಕೆ ಪರಿಹಾರ ಸುಲಭವಲ್ಲ. ಇದು ಅಂತರಿಕ್ಷವನ್ನು ಆಳುತ್ತಿರುವ ಎಲ್ಲ ದೇಶಗಳಿಗೂ ಗೊತ್ತು. ಸಂಪರ್ಕ ಉಪಗ್ರಹಗಳಿಗೆ ಇಂಧನದ ಉಸ್ತುವಾರಿ ನೋಡಿಕೊಳ್ಳುವ ‘ಸ್ಪೇಸ್ ಸರ್ವೀಸಸ್’ ಎಂಬ ಕಂಪನಿ ಒಂದು ಯೋಜನೆಯನ್ನು ರೂಪಿಸಿತ್ತು. ಕಕ್ಷೆಗೆ ಅಡ್ಡಬರುವ ಕಸವನ್ನೆಲ್ಲ ಗುಡ್ಡೆ ಮಾಡಿ ಬೇರೆ ಕಕ್ಷೆಗೆ ಅದನ್ನು ತಳ್ಳುವುದು. ಇದು ಶಾಶ್ವತ ಪರಿಹಾರ ವೇನಲ್ಲ. ವಿಷಾದವೆಂದರೆ, ಅಂತರಿಕ್ಷದ ಶಾಂತಿಯುತ ಬಳಕೆಗೆ ವಿಶ್ವಸಂಸ್ಥೆ ಒಂದು ಮಾರ್ಗಸೂಚಿ ಬಿಡುಗಡೆ ಮಾಡಿದ್ದರೂ ಅದನ್ನು ಯಾವ ದೇಶವೂ ಪಾಲಿಸುತ್ತಿಲ್ಲ. ಏಕೆಂದರೆ ಅದನ್ನು ಕಡ್ಡಾಯಗೊಳಿಸಿಲ್ಲ. ‘ನಿಮ್ಮ ಉಪಗ್ರಹ ಕಸವನ್ನು ನೀವೇ ತೆರವುಗೊಳಿಸಬೇಕು’ ಎಂದು ಕಡ್ಡಾಯಗೊಳಿಸಿದರೆ ಕಕ್ಷೆ ಸ್ವಚ್ಛವಾದೀತು.

ಚುರುಮುರಿ

ಅಕ್ಕಿ ಋಣ

• ಮಣ್ಣೆ ರಾಜು

‘**ನಮಗಿಂತ** ಪ್ರಾಣಿಪಕ್ಷಿಗಳೇ ನೆಮ್ಮದಿಯಾಗಿವೆ ಕಣ್ರೀ...’ ಸುಮಿ ನಿಟ್ಟುಸಿರುಬಿಟ್ಟಳು.

‘ಹೌದು, ಅವು ಹಾಲು, ತರಕಾರಿ, ರೇಷನ್‌ಗೆ ಬ್ಯಾಗ್ ಹಿಡಿದು ಅಂಗಡಿಗೆ ಅಲೆಯುವುದಿಲ್ಲ. ದಿನಬಳಕೆ ಪದಾರ್ಥಗಳು, ಗ್ಯಾಸ್, ಪೆಟ್ರೋಲ್ ಬೆಲೆ ಹೆಚ್ಚಳದ ಬಿಸಿ ತಟ್ಟಿಲ್ಲ. ಅದಕ್ಕೇ ಅವು ನಮಗಿಂತ ಸುಖವಾಗಿವೆ’ ಅಂದ ಶಂಕ್ರಿ.

‘ಹಬ್ಬಹರಿದಿನದ ಖರ್ಚಿಲ್ಲ, ಒಡವೆ-ವಸ್ತ್ರ ಕೊಳ್ಳುವಂತಿಲ್ಲ, ಮಕ್ಕಳನ್ನು ಸ್ಕೂಲು– ಕಾಲೇಜಿಗೆ ಸೇರಿಸಲು ದುಡ್ಡು ಹೊಂಚುವಂತಿಲ್ಲ, ಮಕ್ಕಳಿಗೆ ಮದುವೆ ಮಾಡಬೇಕು ಅನ್ನುವ ಚಿಂತೆ ಇಲ್ಲ. ಪ್ರಾಣಿಪಕ್ಷಿಗಳು ಪುಣ್ಯ ಮಾಡಿವೆ’.

‘ಆದ್ರೂ ನಮಗಿರುವಂತೆ ಪ್ರಾಣಿಪಕ್ಷಿಗಳಿಗೆ ರೇಷನ್ ಕಾರ್ಡು, ಆಧಾರ್ ಕಾರ್ಡು, ಎಲೆಕ್ಷನ್ ಐಡಿ ಕಾರ್ಡು ಇಲ್ಲ. ಮನೆ ಕಟ್ಟಲು ಲೋನ್ ಕೊಡೋರಿಲ್ಲ, ಮರಿ ಮಾಡಲು ಹೆರಿಗೆ ಆಸ್ಪತ್ರೆಗಳಿಲ್ಲ, ಪಾಪ!’ ಶಂಕ್ರಿ ನೊಂದುಕೊಂಡ.

‘ಸೌಕರ್ಯಕ್ಕೆ ಕಾರ್ಡು, ಆರೋಗ್ಯಕ್ಕೆ ವಾರ್ಡು ಇದ್ದರೂ ನಮ್ಮ ಜೀವನ ನಿರ್ವಹಣೆ ದುಬಾರಿ. ಎಲ್ಲದರ ಬೆಲೆ ಏರುತ್ತಲೇ ಇದೆ’.

‘ಬೆಲೆ ಇಳಿಸಿ ಅಂತ ಬೀದಿಗಿಳಿದು ಹೋರಾಟ, ಅಸೆಂಬ್ಲಿಯೊಳಗೆ ಕೂಗಾಟ ನಡೆದರೂ ಯಾವುದೂ ಇಳಿಯಲಿಲ್ಲ. ಇಂಥಾ ಪರಿಸ್ಥಿತಿಯಲ್ಲೂ ಸರ್ಕಾರ ಅಕ್ಕಿಮುಕ್ತ ರಾಜ್ಯ ಮಾಡದೆ ಉಚಿತವಾಗಿ ಅಕ್ಕಿ ಕೊಟ್ಟು ಅನ್ನದ ವ್ಯವಸ್ಥೆ ಮಾಡಿದೆಯಲ್ಲ’.

‘ತಿನ್ನೋ ಅನ್ನಕ್ಕಾಗಿ ಸರ್ಕಾರದ ಅಕ್ಕಿಗೆ ಕೈ ಚಾಚಬೇಕಾಯ್ತಲ್ಲ, ತಮ್ಮ ಆಹಾರವನ್ನು ತಾವೇ ಹೊಂಚಿಕೊಳ್ಳುವ ಪ್ರಾಣಿಪಕ್ಷಿಗಳಿಗಿಂಥ ನಾವು ಕಡೆಯಾಗಿದ್ದೀವಿ ಅನ್ನಿಸ್ತಿದೇರೀ...’

‘ಸರ್ಕಾರದ ಅಕ್ಕಿ ನಮ್ಮ ಹಕ್ಕು’.

‘ನಾವು ಅಷ್ಟು ಅಕ್ಕಿ ಕೊಟ್ವಿ, ಇವರು ಇಷ್ಟು ಕೊಟ್ರು ಅಂತ ನಮ್ಮ ನಾಯಕರು ವೇದಿಕೆ ಸಿಕ್ಕ ಕಡೆಯೆಲ್ಲಾ ನಮ್ಮ ಮಾನವನ್ನು ಅಕ್ಕಿಯಲ್ಲಿ ಅಳೆಯುತ್ತಿದ್ದಾರೆ. ಅಕ್ಕಿ ಒಂದರಿಂದಲೇ ಸಂಸಾರ ನಡೆಯುತ್ತೇನ್ರೀ? ಕೊಡೋದಾದ್ರೆ ಗ್ಯಾಸ್, ಪೆಟ್ರೋಲನ್ನೂ ಫ್ರೀಯಾಗಿ ಕೊಟ್ಟು ಎಷ್ಟು ಬೇಕಾದ್ರೂ ಮಾತನಾಡಲಿ. ಅಕ್ಕಿಯಲ್ಲಿ ಹೋದ ಮಾನ ಆನೆ ಕೊಟ್ರೂ ಬರೋಲ್ಲ ಕಣ್ರೀ...’ ಸುಮಿ ಸಿಡುಕಿದಳು.

ಸಂಗತ

ಮಾನಸಿಕ ಆರೋಗ್ಯ: ಈ ಹೊತ್ತಿನ ಸವಾಲು

ಕೋವಿಡ್ ನಂತರದ ಪರಿಸ್ಥಿತಿಯನ್ನು ನಾವು ಸಮರ್ಥವಾಗಿ ಎದುರಿಸಿ ಆರೋಗ್ಯ ಕಾಯ್ದುಕೊಳ್ಳಬೇಕೆಂದರೆ, ಮಾನಸಿಕ ಸ್ಥಿರತೆ ಬಹುಮುಖ್ಯ

• ಡಾ. ಕೆ.ಎಸ್.ಪವಿತ್ರ

ವಿಶ್ವ ಮಾನಸಿಕ ಆರೋಗ್ಯ ಸಪ್ತಾಹ (ಅ. 4– 10) ನಡೆಯುತ್ತಿದೆ. ಮೆಂಟಲ್ ಹೆಲ್ತ್ ಇನ್ ಆ್ಯನ್ ಅನ್‌ಈಕ್ವಲ್ ವರ್ಲ್ಡ್- ಹಲವು ವಿಧದ ಅಸಮಾನತೆಗಳಿರುವ ಜಗತ್ತಿನಲ್ಲಿ ಮಾನಸಿಕ ಆರೋಗ್ಯ ಎಲ್ಲರ ಹಕ್ಕಾಗಿರುವ ಬಗೆಗೆ ಈ ಬಾರಿಯ ಧ್ಯೇಯವಾಕ್ಯ ನಮ್ಮ ಗಮನ ಸೆಳೆಯುತ್ತದೆ. ‘ಕೋವಿಡ್ ಪ್ಯಾಂಡೆಮಿಕ್’ ಮುಗಿಯಿತೇನೋ ಎಂದು ನಿಟ್ಟುಸಿರುಬಿಡುವ ಹೊತ್ತಿಗಾಗಲೇ ಮಾನಸಿಕ ಅನಾರೋಗ್ಯದ ‘ಪ್ಯಾಂಡೆಮಿಕ್’ ಆರಂಭವಾಗುತ್ತಿದೆ ಎಂಬುದನ್ನು ಬಹುಜನ ಗಮನಿಸಿದಂತಿಲ್ಲ.

ಕೊರೊನಾ ಸೋಂಕಿನ ಪರಿಸ್ಥಿತಿ ಆರೋಗ್ಯ ಕ್ಷೇತ್ರದಲ್ಲಿನ ಹಲವು ರೀತಿಯ ಅಸಮಾನತೆಗಳನ್ನು ನಮ್ಮೆದುರು ತೆರೆದಿಟ್ಟಿದೆ. ಯಾವ ದೇಶವೂ ಎಷ್ಟೇ ಶ್ರೀಮಂತವಾದರೂ ಸೋಂಕಿನ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ಸಾಧ್ಯವಾಗಲಿಲ್ಲ. ನಂತರದ ಪರಿಣಾಮಗಳನ್ನಾದರೂ ನಾವು ಸರಿಯಾಗಿ ಎದುರಿಸಿ ಆರೋಗ್ಯವನ್ನು ಉಳಿಸಿಕೊಳ್ಳಬೇಕೆಂದರೆ, ಮಾನಸಿಕ ಸ್ಥಿರತೆ ಬಹುಮುಖ್ಯ ಎನ್ನುವ ಸತ್ಯವನ್ನು ನಾವು ಗಮನಿಸಲೇಬೇಕು.

ಜಾಗತಿಕ ಮಾನಸಿಕ ಆರೋಗ್ಯಕ್ಕಾಗಿ ದುಡಿಯುವ ಸಂಸ್ಥೆ ‘ವರ್ಲ್ಡ್ ಮೆಂಟಲ್ ಹೆಲ್ತ್ ಫೆಡರೇಷನ್’ (ಡಬ್ಲ್ಯುಎಫ್‌ಎಂಎಚ್) ಅಸ್ತಿತ್ವಕ್ಕೆ ಬಂದದ್ದು 1948ರಲ್ಲಿ. ಜಗತ್ತು ಮಹಾಯುದ್ಧದಿಂದ ಚೇತರಿಸಿಕೊಳ್ಳುತ್ತಿದ್ದ ಕಾಲ. ವಿಶ್ವ ಆರೋಗ್ಯ ಸಂಸ್ಥೆ, ಡಬ್ಲ್ಯುಎಫ್‌ಎಂಎಚ್, ವಿಶ್ವಸಂಸ್ಥೆ, ಯುನೆಸ್ಕೊ ಸೇರಿ ಮಾನಸಿಕ ಆರೋಗ್ಯದ ಬಗೆಗಿನ ವಿಶೇಷ ಕಾಳಜಿಯಿಂದ ರೂಪಿಸಿದ ಯೋಜನೆಗಳು, ಯುದ್ಧಾನಂತರದ ಪರಿಣಾಮಗಳಿಂದ ಜಗತ್ತು ಚೇತರಿಸಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದವು. ಈಗ ಮತ್ತೆ ಅಂಥದ್ದೇ ಸಂದರ್ಭ. ಈಗಿರುವ ಕೋವಿಡ್ ನಂತರದ ಜಾಗತಿಕ ಬಿಕ್ಕಟ್ಟು ಇಲ್ಲಿಯವರೆಗೆ ಇದ್ದ ಆರ್ಥಿಕ- ಸಾಮಾಜಿಕ ಅಂತರಗಳನ್ನು ಮತ್ತಷ್ಟು ಹೆಚ್ಚಿಸಿದೆ. ಇದು, ಮನಸ್ಸಿನ ಆರೋಗ್ಯದ ಮೇಲೆ ಪರಿಣಾಮ ಬೀರದಿರದು.

ಕೋವಿಡ್‌ನಿಂದಾಗಿ, ಕೋವಿಡ್ ಸಂದರ್ಭದಲ್ಲಿ ಇತರ ಕಾರಣಗಳಿಂದಾಗಿ ಆತ್ಮೀಯರನ್ನು ಕಳೆದುಕೊಂಡವರಿಗೆ ಆ ದುಃಖ ನಿಭಾಯಿಸುವುದೂ ಒಂದು ಮುಖ್ಯ ಸವಾಲೇ. ಆರ್ಥಿಕವಾಗಿ ಉದ್ಯೋಗದ ನಷ್ಟ, ಬದಲಾದ ಸಾಂಸ್ಕೃತಿಕ ಜಗತ್ತಿನ ರೀತಿ-ನೀತಿಗಳು, ಮಕ್ಕಳ ಶಿಕ್ಷಣದ ಗೊಂದಲಗಳು ಇವೆಲ್ಲ ಒತ್ತಡ ತರುವುದು ನಿಶ್ಚಿತ. ಒತ್ತಡ ನಿಭಾಯಿಸುವ ಮೊದಲ ಹಂತವೇ ಒತ್ತಡವನ್ನು ಗುರುತಿಸಿಕೊಳ್ಳುವುದು!

‘ಸಂತೋಷ’ದ ಹೊಸ ವಿಜ್ಞಾನದತ್ತ ಗಮನಹರಿಸೋಣ. ಮನಸ್ಸು ಸಂತಸವಾಗಿರುವುದು ಕೇವಲ ಮಾನಸಿಕ ಆರೋಗ್ಯಕ್ಕಷ್ಟೇ ಅಲ್ಲ, ದೇಹದಲ್ಲಿ ಬರಬಹುದಾದ ಇತರ ಕಾಯಿಲೆಗಳನ್ನು ತಡೆಗಟ್ಟಲೂ ಅಗತ್ಯ ಎನ್ನುವುದನ್ನು ನಿರೂಪಿಸಿದೆ. ಆದರೆ ಬರೀ ಸಂತೋಷದ ಪರಿಸ್ಥಿತಿಗಳಲ್ಲೇ ನಾವು ಬದುಕಲು ಸಾಧ್ಯವಿಲ್ಲ. ‘ಸಂತೋಷ’ದ ಅಧ್ಯಯನಕ್ಕೆಂದೇ ಮೀಸಲಾದ ವಿಜ್ಞಾನದ ಶಾಖೆಯ ಪ್ರಕಾರ, ಸಂತೋಷ ಮತ್ತು ಅಸಂತೋಷಗಳೆರಡೂ ಒಂದು ರೇಖೆಯ ಎರಡು ತುದಿಗಳಲ್ಲ. ಅವು ವ್ಯಕ್ತಿಯಲ್ಲಿ ಏಕಕಾಲಕ್ಕೆ ವಿವಿಧ ಪ್ರಮಾಣಗಳಲ್ಲಿ ಇರಬಹುದಾದ ಅಂಶಗಳು. ಹೇಗೆ ಕಾಯಿಲೆ ಇಲ್ಲದಿರುವುದಷ್ಟೇ ಆರೋಗ್ಯ ಎನಿಸುವುದಿಲ್ಲವೋ ಅದೇ ರೀತಿ, ದುಃಖವಿಲ್ಲ ಎಂದಾಕ್ಷಣ ಅಲ್ಲಿ ಸಕಾರಾತ್ಮಕ ಭಾವನೆಗಳುಳ್ಳ ಸಂತೋಷವಿದೆ ಎಂದರ್ಥವಲ್ಲ.

ಬೇರೆಯವರ ಕಷ್ಟವನ್ನು ನೋಡಿ ಮನಸ್ಸು ಪಡುವ ಕೆಟ್ಟ ಸಂತಸಕ್ಕೂ ಮತ್ತೊಬ್ಬರ ಸಂತಸವನ್ನು ನೋಡಿದಾಗ ಮನಸ್ಸು ಪಡಬಹುದಾದ ಆನಂದಕ್ಕೂ ಬೇರೆ ಬೇರೆ ಪದಗಳಿಲ್ಲವಷ್ಟೆ. ಹಾಗಾಗಿ, ಗ್ರಹಿಸುವಾಗ-ವ್ಯಕ್ತಪಡಿಸುವಾಗ ಭಾಷೆಯನ್ನು ಮೀರಿದ ಸಂವೇದನಾ ಜಗತ್ತನ್ನು ಮನಸ್ಸು ತೆರೆದು ನೋಡುವ, ಸ್ಪಂದಿಸುವ ಸಾಮರ್ಥ್ಯವನ್ನು ನಾವಿಂದು ಕಲಿಯಬೇಕಿದೆ.



ಮಿದುಳು- ಮನಸ್ಸುಗಳು ಸಂತಸವನ್ನೇ ಹುಡುಕುವುದಕ್ಕೆ ಪ್ರಕೃತಿಸಹಜವಾಗಿ ತೊಡಗುತ್ತವೆ. ಶಿಶುಗಳು ಸಿಹಿಯನ್ನೇ ಇಷ್ಟಪಡುತ್ತವೆ. ಕಹಿಯನ್ನು ನಾಲಿಗೆಗಿಟ್ಟರೆ ಮುಖ ಸಿಂಡರಿಸುತ್ತವೆ. ಜೋಗುಳದ ಸಂಗೀತಕ್ಕೆ ತಲೆದೂಗುತ್ತವೆ, ಅದೇ ಕರ್ಕಶ ಧ್ವನಿಗೆ ಕಿಟಾರೆಂದು ಕಿರುಚುತ್ತವೆ. ಹಾಗೆಯೇ ಮಾನವ ಮಿದುಳು- ಮನಸ್ಸು ‘ಸಂಘ ಜೀವನ’ಕ್ಕೆ ಹೊಂದಿಕೊಂಡವು. ಬೇರೆಯವರೊಂದಿಗೆ ಇರುವಾಗ, ಚಟುವಟಿಕೆಯಿಂದಿದ್ದಾಗ, ಆಟವಾಡುವಾಗ ‘ಸಂತೋಷ’ದ ಪ್ರಮಾಣ ಏರುತ್ತದೆ. ಇಲ್ಲಿ ಮುಖ್ಯವಾಗುವುದು ‘ನಾವು’, ‘ನಾನು ಎಲ್ಲರೊಂದಿಗೆ ಸೇರಿಕೊಂಡಿದ್ದೇನೆ’ ಎಂಬ ಭಾವ.

ಆತ್ಮಹತ್ಯೆ ಮಾಡಿಕೊಂಡವರ ಬಗ್ಗೆ ನಡೆದ ಅಧ್ಯಯನವೊಂದು, ಮರಣಪತ್ರಗಳು ಯಾವಾಗಲೂ ವ್ಯಕ್ತಿ ‘ಏಕಾಕಿ’ಯಾಗಿದ್ದುದನ್ನೇ ಒತ್ತಿ ಹೇಳುತ್ತವೆ ಎಂಬುದನ್ನು ಗುರುತಿಸಿದೆ. ದುಡ್ಡು ‘ಸಂತೋಷ’ವನ್ನು ನೀಡುತ್ತದೆಯೇ ಎಂಬ ಪ್ರಶ್ನೆಯೂ ಆರ್ಥಿಕ ಹಿನ್ನಡೆಯ ಈ ಸಂದರ್ಭದಲ್ಲಿ ಮುಖ್ಯವೇ. ನಮ್ಮ ಜೈವಿಕ-ಸಾಮಾಜಿಕ ಅಗತ್ಯಗಳನ್ನು ಮೀರಿ ಸುರಕ್ಷತೆ- ಸಂಘ ಜೀವನ- ಒಟ್ಟಾಗಿ ಬಾಳುವುದು- ಇರುವುದರಲ್ಲಿ ಸಂತಸ ಪಡುವುದು– ಇವು ಭವಿಷ್ಯಕ್ಕಾಗಿ ನಾವು ಕೂಡಿಡುವುದಕ್ಕಿಂತ ಮುಖ್ಯವಾಗುತ್ತವೆ.

ಮಾನಸಿಕ ಆರೋಗ್ಯ ಕಾಯ್ದುಕೊಳ್ಳುವುದು ಒಂದೆಡೆಯಾದರೆ, 2020ರ ಹೊತ್ತಿಗಾಗಲೇ ಜಗತ್ತಿನ ಎರಡನೇ ಅತಿ ದೊಡ್ಡ ಅಸಮರ್ಥತೆಯಾಗಿ ನಮಗೆ ಎದುರಾಗುತ್ತಿರುವ ಖಿನ್ನತೆಯನ್ನು ಎದುರಿಸುವುದು, ಅದರಿಂದ ತಪ್ಪಿಸಿಕೊಳ್ಳುವುದು ಇನ್ನೊಂದೆಡೆ, ಸಮಾಜದ ಈ ಹೊತ್ತಿನ ಸವಾಲುಗಳು. ಇವೆರಡನ್ನೂ ಯಶಸ್ವಿಯಾಗಿ ನಿಭಾಯಿಸುವುದು ಕೋವಿಡ್‌ನಂತಹ ಪ್ಯಾಂಡೆಮಿಕ್‌ಗಳ ನಡುವೆಯೂ ಸಮಾಜದ ಆರೋಗ್ಯವನ್ನು ಕಾಪಾಡಬಲ್ಲವು.

ಲೇಖಕಿ: ಮನೋವೈದ್ಯೆ

ವಾಚಕರ ವಾಣಿ

ಡ್ರಗ್ಸ್ ಪ್ರಕರಣ: ಭದ್ರತೆಗೆ ಮಾರಕ

ಡ್ರಗ್ಸ್ ಪ್ರಕರಣದಲ್ಲಿ ಬಾಲಿವುಡ್ ನಟ ಶಾರುಕ್ ಖಾನ್ ಅವರ ಪುತ್ರ ಆರ್ಯನ್ ಖಾನ್ ಬಂಧನಕ್ಕೊಳಗಾಗಿರುವ ಹಿನ್ನೆಲೆಯಲ್ಲಿ, ಬಾಲಿವುಡ್‌ನ ಕೆಲವು ನಟ-ನಟಿಯರು ಶಾರುಕ್ ಅವರಿಗೆ ಬೆಂಬಲ ಸೂಚಿಸಿರುವುದು ವರದಿಯಾಗಿದೆ. ಡ್ರಗ್ಸ್‌ನಂತಹ ಗಂಭೀರ ಮತ್ತು ಸಮಾಜಘಾತುಕ ಪ್ರಕರಣವನ್ನು ಬಾಲಿವುಡ್ ಅತ್ಯಂತ ಸಹಜವೆಂಬಂತೆ ಪರಿಗಣಿಸಿರುವುದು ಅವರ ಈ ನಡೆಯಿಂದ ತಿಳಿಯುತ್ತದೆ. ಒಂದು ವರ್ಷದಿಂದ ಕರ್ನಾಟಕವೂ ಸೇರಿದಂತೆ ದೇಶದ ಹಲವು ರಾಜ್ಯಗಳಲ್ಲಿ ಈ ರೀತಿಯ ಪ್ರಕರಣಗಳು ಹೆಚ್ಚು ಬೆಳಕಿಗೆ ಬರುತ್ತಿವೆ.

ದೇಶದ ಯುವಜನರು ಸಿನಿಮಾ ನಟ-ನಟಿಯರನ್ನೇ ಆದರ್ಶವಾಗಿ ಪರಿಗಣಿಸುತ್ತಿರುವ ಸಂದರ್ಭದಲ್ಲಿ ಇದು ಇಡೀ ದೇಶದ ಸಾಮಾಜಿಕ- ಆರ್ಥಿಕ ಪರಿಸ್ಥಿತಿಯ ಮೇಲೆ ಯಾವ ರೀತಿಯ ಪರಿಣಾಮ ಬೀರಬಹುದೆಂಬುದನ್ನು ಊಹಿಸುವುದು ಕಷ್ಟವೇನಲ್ಲ. ಹಾಗಾಗಿ ಇಂತಹ ಪ್ರಕರಣಗಳನ್ನು ರಾಷ್ಟ್ರೀಯ ಭದ್ರತೆಗೆ ಮಾರಕವೆಂದು ಪರಿಗಣಿಸಿ, ಯಾವುದೇ ಒತ್ತಡಗಳಿಗೆ ಮಣಿಹಾಕದೆ ಸೂಕ್ತ ಸುಧಾರಣಾ ಕ್ರಮಗಳಿಗೆ ಮುಂದಾಗಬೇಕಿರುವುದು ಈಗಿನ ತುರ್ತು ಅಗತ್ಯವಾಗಿದೆ.

ರೇಣುಕಾ ಗೊಡಚಿ, ಧಾರವಾಡ

ಅಮಾನವೀಯ, ಖಂಡನಾರ್ಹ

ಲಖಿಂಪುರ- ಖೇರಿ ಹಿಂಸಾ ಪ್ರಕರಣದ ಬಗ್ಗೆ ಸಮಗ್ರ ತನಿಖೆಯಾಗಲಿ ಎಂದು ಅಭಿಪ್ರಾಯಪಟ್ಟಿರುವ ಸಂಪಾದಕೀಯ (ಪ್ರ.ವಾ., ಸೆ. 5) ಸಕಾಲಿಕವಾಗಿದೆ. ಅನ್ನ ಕೊಡುವ ರೈತರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿ ಅಧಿಕಾರದ ಗದ್ದುಗೆ ಹಿಡಿಯುವ ರಾಜಕಾರಣಿಗಳು ನಂತರ ವರ್ತಿಸುವ ರೀತಿಯೇ ಭಿನ್ನವಾಗಿರುತ್ತದೆ. ಪ್ರತಿಭಟನಾಕಾರರ ಮೇಲೆ ಕಾರು ಹತ್ತಿಸುವ ಮನಃಸ್ಥಿತಿ ಅತ್ಯಂತ ಹೇಯ ಮತ್ತು ಅಮಾನವೀಯ. ವಿಶ್ವದ ಯಾವ ಪ್ರಜ್ಞಾವಂತನೂ ಒಪ್ಪದ ಇಂತಹ ಪ್ರಕರಣಗಳನ್ನು ಉಗ್ರವಾಗಿ ಖಂಡಿಸಬೇಕಿದೆ.

ಹತ್ತು ತಿಂಗಳಿನಿಂದ ರೈತರು ನಡೆಸುತ್ತಿರುವ ಪ್ರತಿಭಟನೆಗೆ ಕೇಂದ್ರ ಸರ್ಕಾರದಿಂದ ಕವಡೆ ಕಾಸಿನಷ್ಟೂ ಕಿಮ್ಮತ್ತಿಲ್ಲದಂತೆ ಆಗಿದೆ. ಸರ್ಕಾರಕ್ಕೆ ಸಂವೇದನೆಯೇ ಇಲ್ಲವೆನಿಸುತ್ತಿದೆ. ಈ ದೇಶ ಹಳ್ಳಿಗಳಿಂದ ಕೂಡಿದ್ದು, ಬಹುಜನರ ಬದುಕು ಕೃಷಿಯನ್ನು ಅವಲಂಬಿಸಿದೆ. ರೈತ ಪರವಾದ ಹಲವು ಪೂರಕ ಸುಧಾರಣೆಗಳನ್ನು ರೈತ ಮುಖಂಡರು, ತಜ್ಞರ ಸಲಹೆ ಪಡೆದು ಜಾರಿ ಮಾಡಬೇಕಿತ್ತು. ಏಕಾಏಕಿ ಕಾನೂನು ಜಾರಿ ಮಾಡಿ, ಅದು ಸರಿ ಇಲ್ಲ ಎಂದು ಹೇಳಿದರೆ, ತಾವು ಮಾಡಿದ್ದೇ ಸರಿ ಎನ್ನುವುದಾದರೆ ಅದು ಎಷ್ಟರಮಟ್ಟಿಗೆ ಜನಪರ, ರೈತಪರ ಆಗುತ್ತದೆ?

ಎಚ್.ಎನ್.ಕಿರಣ್ ಕುಮಾರ್, ಹಳೇಹಳ್ಳಿ, ಗೌರಿಬಿದನೂರು

ಕೆಮ್ಮು ಎಂದರೆ...

ಕೆಮ್ಮಿಗೆ ಸಾವಿರ ಕಾರಣ
(ಪ್ರ.ವಾ., ಸೆ. 28).
ಕೆಮ್ಮು ಎಂದರೆ
ಸುಮ್ಮನೆ ಆಯಿತೇನು?
ಬ್ರಹ್ಮ ಬರೆದಿರಬಹುದು,
ಕೆಮ್ಮಿನಲ್ಲೆ ಒಮ್ಮೊಮ್ಮೆ ಸಾವು!
(ಅಸಹಾಯರು ನಾವು).

ಸಿ.ಪಿ.ಕೆ., ಮೈಸೂರು

ವಿಧಾನಸೌಧ ಇರುವುದು ಚರ್ಚೆ ನಡೆಸಲು ಅಲ್ಲವೇ?

ದೆಹಲಿಯಲ್ಲಿರುವ ಮಾದರಿಯಲ್ಲಿ ಕಾನ್‌ಸ್ಟಿಟ್ಯೂಷನ್ ಕ್ಲಬ್ (ಶಾಸಕರು ಮತ್ತು ಮಾಜಿ ಶಾಸಕರ ಮನರಂಜನಾ ಕ್ಲಬ್) ಆರಂಭಿಸಲು ತೀರ್ಮಾನಿಸಿರುವುದಾಗಿ ವಿಧಾನಸಭಾ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದ್ದಾರೆ. ಬಾಲಬ್ರೂಯಿ ಕಟ್ಟಡದ ಪಾರಂಪರಿಕ, ಐತಿಹಾಸಿಕ ವೈಶಿಷ್ಟ್ಯಕ್ಕೆ ಧಕ್ಕೆ ಬರದಂತೆ ಅಲ್ಲಿ ಅಗತ್ಯ ಸೌಲಭ್ಯ ಕಲ್ಪಿಸಿ ಕ್ಲಬ್ ಆರಂಭಿಸಲು ನಿರ್ಧರಿಸಲಾಗಿದೆ. ಶಾಸಕರು ಒಂದೆಡೆ ಸೇರಿ ಚರ್ಚಿಸಲು ಒಂದು ಜಾಗ ಬೇಕು ಎಂಬ ಸಮರ್ಥನೆಯನ್ನು ನೀಡಿದ್ದಾರೆ.

ಹಾಗಾದರೆ, ನಮ್ಮ ಹೆಮ್ಮೆಯ ವಿಧಾನಸೌಧ ಇರುವುದು ಚರ್ಚೆ ನಡೆಸಲು ಅಲ್ಲವೇ? ಈ ಮಾತು ವಿಧಾನಸೌಧಕ್ಕೆ ಅಪಮಾನ ಮಾಡುವಂತಿದೆ. ಅಷ್ಟಕ್ಕೂ ಪಾರಂಪರಿಕ ಕಟ್ಟಡದಲ್ಲಿ ಹಾಗೂ ನಮ್ಮ ತೆರಿಗೆ ಹಣದಲ್ಲಿ ಕ್ಲಬ್ ಏಕೆ? ಹಾಗೆ ಅವರಿಗೆ ಅವಶ್ಯಕತೆ ಇದ್ದಲ್ಲಿ ನಗರದಾದ್ಯಂತ ರೆಸಾರ್ಟುಗಳಿಗೆ ಬರವಿಲ್ಲ. ಅಲ್ಲಿ ಚರ್ಚಿಸಿಕೊಳ್ಳಲಿ. ಇನ್ನು ಕ್ಲಬ್ ಎಂದರೆ ಗುಂಡು, ತುಂಡು, ಇಸ್ಪೀಟು ಮುಂತಾದವುಗಳಿಗೆ ಆದ್ಯತೆಯೇ ಹೊರತು ಜನಪರ ಕಾಳಜಿ ಮತ್ತು ಕರ್ನಾಟಕದ ಅಭಿವೃದ್ಧಿಗಾಗಿ ಚರ್ಚೆ ಮಾಡುತ್ತಾರೆ ಎಂದರೆ ನಂಬಲು ಸಾಧ್ಯವೇ?

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ವಯೋಸಹಜ ವರ್ತನೆ ಸಹಿಸೋಣ

ವೃದ್ಧರ ಆರೈಕೆ ಬಗ್ಗೆ ಡಾ. ವಿನಯ ಶ್ರೀನಿವಾಸ್ ಚೆನ್ನಾಗಿ ವಿವರಿಸಿದ್ದಾರೆ (ಸಂಗತ, ಅ. 4). ಯುವಕರು ಹೊರಗಿನ ವೃದ್ಧರ ಬಗ್ಗೆ ಹೇಗೆ ಕಾಳಜಿ ವಹಿಸಬೇಕು ಎಂಬುದನ್ನು ವಿವರಿಸಿದ್ದಾರೆ. ಆದರೆ ನಿಜವಾದ ಸಮಸ್ಯೆ ಇರುವುದು ಯುವಕರು ಮನೆಯೊಳಗಿನ ಹಿರಿಯರನ್ನು ನೋಡಿಕೊಳ್ಳುವ ರೀತಿಯಲ್ಲಿ!

ಇಂದು ಮದುವೆಯಾಗಬೇಕಾದ ಕನ್ಯೆಯರು ಮೊದಲು ಕೇಳುವುದು, ತಾವು ಮದುವೆಯಾಗಿ ಹೋಗುವ ಮನೆಯಲ್ಲಿ ‘ರಾಹು, ಕೇತುಗಳು (ಅತ್ತೆ, ಮಾವ) ಇದ್ದಾರಾ?’ ಅಂತ. ಹಾಗಾದರೆ ಅತ್ತೆ ಮಾವ ಇಲ್ಲದೇ ಮಗ ಬರುವುದು ಎಲ್ಲಿಂದ?! ಮಕ್ಕಳನ್ನು ತಂದೆ ತಾಯಿ ಚಿಕ್ಕ ವಯಸ್ಸಿನಿಂದಲೂ ಕಷ್ಟಪಟ್ಟು ಬೆಳೆಸಿರುತ್ತಾರೆ. ಆದರೆ ಮಕ್ಕಳು ದೊಡ್ಡವರಾದ ಮೇಲೆ ಅವರ ಆಶಯಕ್ಕೆ ಎಳ್ಳುನೀರು ಬಿಟ್ಟು ಅವರನ್ನು ಎಷ್ಟು ಸಾಧ್ಯವೋ ಅಷ್ಟು ಹಿಂಸಿಸಲು ಶುರು ಮಾಡುತ್ತಾರೆ. ಗಂಡು ಮಕ್ಕಳು ಮದುವೆಯಾದ ಮೇಲಂತೂ ಈ ಹಿಂಸೆ ತಾರಕಾವಸ್ಥೆಗೆ ಏರಿಬಿಡುತ್ತದೆ. ಅವರಿಗೆ ಹೊಡೆತ ಬಡಿತ ಎಲ್ಲಾ ಶುರುವಾಗಿ ಬಿಡುತ್ತದೆ. ಆಗ ಎಷ್ಟೋ ವೃದ್ಧರು ‘ಮಕ್ಕಳಿಲ್ಲದಿರುವವರೇ ಪುಣ್ಯಾತ್ಮರಪ್ಪಾ’ ಅಂತ ಹೇಳುತ್ತಾ ಒದ್ದಾಡುವುದನ್ನು ನಮ್ಮ ಹಳ್ಳಿಗಳಲ್ಲಿ ಹೆಚ್ಚಾಗಿ ಕಾಣುತ್ತೇವೆ. ವಯಸ್ಸಾದಂತೆ ಮನುಷ್ಯ ಮಗುವಿನಂತಾಗುತ್ತಾನೆ ಎಂದು ತಿಳಿದವರು ಹೇಳುತ್ತಾರೆ. ನಾವು ಚಿಕ್ಕವರಿದ್ದಾಗ ನಮ್ಮ ಎಲ್ಲ ಕುಚೇಷ್ಟೆಗಳನ್ನೂ ಸಹಿಸಿಕೊಂಡು ನಮ್ಮನ್ನು ಪಾಲನೆ ಪೋಷಣೆ ಮಾಡಿರುವ ನಮ್ಮ ತಂದೆ ತಾಯಿ ವಯಸ್ಸಾಗಿ ಮಕ್ಕಳಂತಾಗಿರುವಾಗ ಅವರ ವಯೋಸಹಜವಾದ ವರ್ತನೆಗಳನ್ನು ಸಹಿಸಿಕೊಳ್ಳಲು ನಾವು ಸಿದ್ಧರಿಲ್ಲ. ಹಾಗಿದ್ದಮೇಲೆ ನಮ್ಮದೆಂಥ ಮಾನವೀಯತೆ? ಅವರನ್ನು ಇಳಿವಯಸ್ಸಿನಲ್ಲಿ ಹೊರೆ ಎಂದು ಭಾವಿಸಿ ವೃದ್ಧಾಶ್ರಮಗಳಿಗೆ ಅಟ್ಟುತ್ತಿರುವ ನಾವು ನಿಜವಾಗಿಯೂ ಮಾನವರೇ ಎಂದು ನಮ್ಮನ್ನು ನಾವು ಪ್ರಶ್ನಿಸಿಕೊಳ್ಳಬೇಕಾಗಿದೆ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಐ ಟಿ ಪೋರ್ಟಲ್ ಬಗೆಹರಿಯದ ಬವಣೆ



ಆದಾಯ ತೆರಿಗೆ ಪಾವತಿಗೆ ಬಳಸುವ 'ಹೊಸ ಐಟಿ ಪೋರ್ಟಲ್' ಕೇಂದ್ರ ಸರ್ಕಾರ ಮತ್ತು ಇನ್ಫೊಸಿಸ್ ನಡುವೆ ಜಟಾಪಟಿಗೆ ಕಾರಣವಾಗಿದೆ. ತೆರಿಗೆ ಪಾವತಿಸುವ ಹಳೆಯ ವ್ಯವಸ್ಥೆಯ ಬದಲಾಗಿ ಹೊಸ ವ್ಯವಸ್ಥೆ ಸಿದ್ಧಪಡಿಸುವ ಹೊಣೆಯನ್ನು ಇನ್ಫೊಸಿಸ್ ಹೊತ್ತುಕೊಂಡಿತ್ತು. ಆದರೆ ಹೊಸ ಐಟಿ ಪೋರ್ಟಲ್ ಕಾರ್ಯಾರಂಭ ಮಾಡಿದ ಬಳಿಕ ಪ್ರಕ್ರಿಯೆ ಸರಳವಾಗುವ ಬದಲು ಇನ್ನಷ್ಟು ಜಟಿಲವಾಗಿದೆ. ಹಳೆಯ ವ್ಯವಸ್ಥೆಯಲ್ಲಿದ್ದ ಸಮಸ್ಯೆಗಳು ಪರಿಹಾರವಾಗುವ ಬದಲು ಹೊಸ ಸಮಸ್ಯೆಗಳು ತಲೆದೋರಿವೆ. ಹೀಗಾಗಿ ಐಟಿ ರಿಟರ್ನ್ ಫೈಲ್ ಮಾಡುವ ಗಡುವನ್ನು ಸರ್ಕಾರವು ಡಿಸೆಂಬರ್ 31ರವರೆಗೆ ವಿಸ್ತರಿಸಿದೆ.

ನಿರೀಕ್ಷೆ ಹುಸಿ: ಐಟಿ ಪೋರ್ಟಲ್ ಸಿದ್ಧಪಡಿಸುವ ಗುತ್ತಿಗೆಯನ್ನು ದೇಶದ ಪ್ರಸಿದ್ಧ ಮಾಹಿತಿ ತಂತ್ರಜ್ಞಾನ ಸಂಸ್ಥೆ ಇನ್ಫೊಸಿಸ್‌ಗೆ 2019ರಲ್ಲಿ ನೀಡಲಾಗಿತ್ತು. ಈ ಗುತ್ತಿಗೆಯ ಒಟ್ಟು ಮೊತ್ತ ₹4,200 ಕೋಟಿ ಪೈಕಿ ಕೇಂದ್ರ ಸರ್ಕಾರ ಸುಮಾರು ₹160 ಕೋಟಿಯನ್ನು ಇನ್ಫೊಸಿಸ್‌ಗೆ ಪಾವತಿಸಿದೆ. ಹಳೆಯ ಪೋರ್ಟಲ್‌ನಲ್ಲಿರುವ ಎಲ್ಲ ಸಮಸ್ಯೆಗಳು ನಿವಾರಣೆಯಾಗಿ, ಅತ್ಯಂತ ಸುಲಭ ಹಾಗೂ ಸರಳೀಕೃತ ವಿಧಾನದಲ್ಲಿ ಆದಾಯ ತೆರಿಗೆ ಪಾವತಿಸುವ ಪೋರ್ಟಲ್ ಸಿದ್ಧವಾಗಲಿದೆ ಎಂದು ಕೇಂದ್ರ ಸರ್ಕಾರ ಹೇಳಿಕೊಂಡಿತ್ತು.

2021ರ ಜೂನ್ 7ರಂದು ಹೊಸ ವ್ಯವಸ್ಥೆಗೆ ಚಾಲನೆ ನೀಡಲಾಯಿತು. ಇ-ಫೈಲಿಂಗ್ ಮಾಡುವ ಸರಳ ಪ್ರಕ್ರಿಯೆ, ಪೋರ್ಟಲ್‌ನ ವಿಭಿನ್ನ ವಿನ್ಯಾಸ, ತಕ್ಷಣದ ಮರುಪಾವತಿ, ಬಳಕೆದಾರ ಸ್ನೇಹಿಯಾಗಿದೆ ಎಂಬ ನಿರೀಕ್ಷೆಗಳು ಹುಸಿಯಾದವು. ತೆರಿಗೆ ವೃತ್ತಿಪರರು ಹೊಸ ಪೋರ್ಟಲ್‌ನ ಲೋಪದೋಷಗಳನ್ನು ಪತ್ತೆಮಾಡಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಟ್ವೀಟ್ ಮಾಡಿ, ಸಮಸ್ಯೆ ದೊಡ್ಡದಿದೆ ಎಂದು ತಿಳಿಸಿದರು.

ನಿರ್ಮಲಾ ಅವರು ಜೂನ್ 8ರಂದು ಇನ್ಫೊಸಿಸ್ ಸಹಸ್ಥಾಪಕ ಹಾಗೂ ಅಧ್ಯಕ್ಷ ನಂದನ್ ನಿಲೇಕಣಿ ಅವರನ್ನು ಸಂಪರ್ಕಿಸಿ, ಸಮಸ್ಯೆ ಬಗ್ಗೆ ಗಮನ ಹರಿಸುವಂತೆ ಸೂಚಿಸಿದ್ದರು. ಸಮಸ್ಯೆ ಬಗೆಹರಿಯುವ ಲಕ್ಷಣ ಕಾಣದಿದ್ದಾಗ, ಜೂನ್ 22ರಂದು ಇನ್ಫೊಸಿಸ್‌ಗೆ ಕೇಂದ್ರ ಸಮನ್ಸ್ ಜಾರಿಗೊಳಿಸಿತು. ತೊಂದರೆ ಪರಿಹರಿಸಲು ತಂಡವೊಂದು ಕೆಲಸ ಮಾಡುತ್ತಿದೆ ಎಂದು ಸಂಸ್ಥೆಯ ಸಿಇಒ ಸಲೀಲ್ ಪಾರೇಖ್, ಸಿಒಒ ಪ್ರವೀಣ್ ರಾವ್ ಅವರು ಭರವಸೆ ನೀಡಿದ್ದರು. ಎರಡು ತಿಂಗಳ ಬಳಿಕ ಅಂದರೆ, ಆಗಸ್ಟ್ 23ರಂದು ಹಣಕಾಸು ಸಚಿವರನ್ನು ಭೇಟಿಯಾದ ಇನ್ಫೊಸಿಸ್‌ನ ನಿಯೋಗವು, ಸೆಪ್ಟೆಂಬರ್ 15ರವರೆಗೆ ಕಾಲಾವಕಾಶ ನೀಡುವಂತೆ ಮನವಿ ಮಾಡಿತ್ತು.

'ಕಂಪನಿಯು ಈ ಕುರಿತು ತ್ವರಿತಗತಿಯಲ್ಲಿ ಕೆಲಸ ಮಾಡುತ್ತಿದೆ. ಸಿಒಒ ರಾವ್ ಅವರ ಮೇಲ್ವಿಚಾರಣೆಯಲ್ಲಿ 750 ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ. ಪೋರ್ಟಲ್‌ನಲ್ಲಿ ಏನು ತಪ್ಪಾಗಿದೆ ಎಂಬುದರ ಕುರಿತು ಹೆಚ್ಚಿನ ಸ್ಪಷ್ಟತೆ ಇಲ್ಲ' ಎಂದು ಸಂಸ್ಥೆ ತಿಳಿಸಿತ್ತು.

ಮೂಲದಲ್ಲೇ ಸಮಸ್ಯೆ: ಆದರೆ ತಜ್ಞರು ಹೇಳುವ ಪ್ರಕಾರ ಸಮಸ್ಯೆ ಆಳವಾಗಿದೆ. ಇಷ್ಟು ಬೃಹತ್ ಪ್ರಮಾಣದ ಯೋಜನೆಯ ವ್ಯಾಪ್ತಿಯನ್ನು ಸರ್ಕಾರ ಸರಿಯಾಗಿ ವ್ಯಾಖ್ಯಾನಿಸಿಲ್ಲ. ತರಾತುರಿಯಲ್ಲಿ ಪೋರ್ಟಲ್ ಆರಂಭಿಸಿದ್ದು ಸಮಸ್ಯೆಗೆ ಕಾರಣ ಎನ್ನುತ್ತಾರೆ ಅವರು. ಪೋರ್ಟಲ್ ಆರಂಭಿಸಲು ಇನ್ನಷ್ಟು ಸಮಯ ಕೇಳಿದ್ದರೂ ಅದನ್ನು ಪರಿಗಣನೆಗೆ ತೆಗೆದುಕೊಳ್ಳದ್ದರಿಂದ ಸಮಸ್ಯೆ ಉಂಟಾಗಿದೆ. ಇದರರ್ಥ ಪೋರ್ಟಲ್ ಕಾರ್ಯಾಚರಣೆಗೆ ಶೇಕಡ ನೂರರಷ್ಟು ಸಿದ್ಧವಾಗಿರಲಿಲ್ಲ. ಏಕಕಾಲಕ್ಕೆ ಹಾಗೂ ಒಗ್ಗೂಡಿ ಕೆಲಸ ಮಾಡಬೇಕಾದ ಅನೇಕ ವ್ಯವಸ್ಥೆಗಳು ಪೋರ್ಟಲ್‌ನಲ್ಲಿದ್ದು, ಅವುಗಳ ನಡುವೆ ಇನ್ನೂ ಸಂಪೂರ್ಣ ಸಂವಹನ ಸಾಧ್ಯವಾಗಿರಲಿಲ್ಲ ಎನ್ನುತ್ತಾರೆ ತಾಂತ್ರಿಕ ಪರಿಣತರು.

ಸಮಸ್ಯೆಗಳನ್ನು ಪ್ರಸ್ತಾಪಿಸಿ ಬಂದಿರುವ ಸುಮಾರು 75 ಸಾವಿರ ಮನವಿಗಳಲ್ಲಿ 70 ಸಾವಿರದಷ್ಟು ಮನವಿಗಳಿಗೆ ಸ್ಪಂದಿಸಲಾಗಿದೆ ಎಂದು ಇನ್ಫೊಸಿಸ್ ಹೇಳಿದ್ದು, ಸಮಸ್ಯೆ ಬಗೆಹರಿಸುವ ದಿಸೆಯಲ್ಲಿ ನಿರಂತರವಾಗಿ ಕೆಲಸ ಮಾಡುತ್ತಿರುವುದಾಗಿ ತಿಳಿಸಿದೆ. ಹೊಸ ವ್ಯವಸ್ಥೆಯನ್ನು ಆದಾಯ ತೆರಿಗೆ ಇಲಾಖೆಯು ಪರೀಕ್ಷೆಗೆ ಒಳಪಡಿಸಬೇಕಿತ್ತು. ಪೋರ್ಟಲ್ ಅನ್ನು ಜನರ ಬಳಕೆಗೆ ಬಿಡುಗಡೆ ಮಾಡುವುದಕ್ಕಿಂತ ಮುಂಚೆ ಸೂಕ್ತ ಪರಿಶೀಲನೆ ಆಗಿಲ್ಲ ಎನ್ನುತ್ತಾರೆ ತಜ್ಞರು.

ಸಮಸ್ಯೆಗಳೇನು: ಒನ್ ಟೈಮ್ ಪಾಸ್‌ವರ್ಡ್ ಸಂದೇಶಗಳು ಸರಿಯಾಗಿ ಬರುತ್ತಿಲ್ಲ. ಪಾಸ್‌ವರ್ಡ್ ನಮೂದಿಸದಿದ್ದರೆ ಪೋರ್ಟಲ್‌ಗೆ ಪ್ರವೇಶ ಪಡೆಯಲು ಸಾಧ್ಯವಾಗುವುದಿಲ್ಲ. ಎಲ್ಲ ಪ್ರಕ್ರಿಯೆ ನಡೆಯುತ್ತಿದೆ ಎಂದು ಅಂದುಕೊಂಡರೂ, ಇ-ವೆರಿಫಿಕೇಶನ್ ಪೂರ್ಣಗೊಳಿಸಲು ಸಾಧ್ಯವಾಗುತ್ತಿಲ್ಲ. ಹಳೆಯ ಪೋರ್ಟಲ್‌ನಲ್ಲಿ ಫೈಲಿಂಗ್ ವೇಳೆ 7 ರೀತಿಯ ಅರ್ಜಿಗಳಿದ್ದವು. ಆದರೆ ಹೊಸ ಪೋರ್ಟಲ್‌ನಲ್ಲಿ ಐದು ಅರ್ಜಿಗಳು ಲಭ್ಯವಿಲ್ಲ. ಹಳೆಯ ಪೋರ್ಟಲ್‌ಗೂ, ಹೊಸದಕ್ಕೂ ಇರುವ ನೂರಾರು ಸಮಸ್ಯೆಗಳನ್ನು ವೃತ್ತಿಪರರು ಪಟ್ಟಿ ಮಾಡಿದ್ದಾರೆ. ಹಳೆಯ ಪೋರ್ಟಲ್ ಅನ್ನೇ ಸಕ್ರಿಯಗೊಳಿಸಬೇಕು ಎಂಬ ಅಭಿಪ್ರಾಯವೂ ವ್ಯಕ್ತವಾಗಿದೆ. ಆದಾಯ ತೆರಿಗೆ ರಿಟರ್ನ್ ಫೈಲ್ ಮಾಡಲು ತಡವಾದರೆ ಸರ್ಕಾರ ದಂಡ ವಿಧಿಸುತ್ತದೆ. ಆದರೆ ವ್ಯವಸ್ಥೆಯಲ್ಲೇ ಸಮಸ್ಯೆ ಇರುವಾಗ ದಂಡ ವಿಧಿಸುವುದು ಎಷ್ಟು ಸರಿ ಎಂದು ಸಾಮಾಜಿಕ ಜಾಲತಾಣ ಬಳಕೆದಾರರು ಸರ್ಕಾರವನ್ನು ಪ್ರಶ್ನಿಸಿದ್ದಾರೆ.

ಇನ್ಫೊಸಿಸ್ ವಿರುದ್ಧ ವಾಗ್ದಾಳಿ

ನೂತನ ಐಟಿ ಪೋರ್ಟಲ್ ಅನ್ನು ಅಭಿವೃದ್ಧಿಪಡಿಸಿರುವ ಇನ್ಫೊಸಿಸ್ ವಿರುದ್ಧ ಹಲವು ರೀತಿಯ ವಾಗ್ದಾಳಿ ನಡೆದಿದೆ. ಸರ್ಕಾರವೇ ಇನ್ಫೊಸಿಸ್‌ಗೆ ಎಚ್ಚರಿಕೆ ನೀಡಿದೆ. ಇನ್ಫೊಸಿಸ್‌ನಿಂದ ಇಂತಹ ಕಾರ್ಯ ನಿರೀಕ್ಷಿಸಿರಲಿಲ್ಲ ಎಂದು ಕೇಂದ್ರ ಸರ್ಕಾರದ ವಕ್ತಾರರು ಬಹಿರಂಗವಾಗಿಯೇ ಹೇಳಿದ್ದಾರೆ. ಆದರೆ ಕೆಲವು ಸಂಘಟನೆಗಳೂ ಇನ್ಫೊಸಿಸ್ ವಿರುದ್ಧ ವಾಗ್ದಾಳಿ ನಡೆಸಿವೆ.

ಆರ್‌ಎಸ್‌ಎಸ್‌ನ ಮುಖವಾಣಿಗಳಲ್ಲಿ ಒಂದಾದ 'ಪಾಂಚಜನ್ಯ' ನಿಯತಕಾಲಿಕದಲ್ಲಿ ಈಚೆಗೆ, ಇನ್ಫೊಸಿಸ್ ವಿರುದ್ಧ ಮುಖಪುಟ ಲೇಖನ ಪ್ರಕಟಿಸಲಾಗಿತ್ತು. 'ಅತ್ಯಂತ ಕಡಿಮೆ ಮೊತ್ತ ನಮೂದಿಸಿದ ಕಾರಣಕ್ಕೆ ಇನ್ಫೊಸಿಸ್‌ಗೆ ಈ ಗುತ್ತಿಗೆ ನೀಡಲಾಗಿತ್ತು. ಪ್ರಖ್ಯಾತ ಕಂಪನಿಯಾಗಿರುವ ಕಾರಣಕ್ಕೆ, ಏನನ್ನೂ ಪರಿಶೀಲಿಸದೆ ಗುತ್ತಿಗೆ ನೀಡಲಾಗಿತ್ತು. ಆದರೆ ಇನ್ಫೊಸಿಸ್‌ನ ಈ ಅರೆಬರೆ ಕಾರ್ಯದಿಂದಾಗಿ ಸರ್ಕಾರದ ಘನತೆಗೆ ಧಕ್ಕೆಯಾಗಿದೆ' ಎಂದು ಪಾಂಚಜನ್ಯದ ಲೇಖನದಲ್ಲಿ ಟೀಕಿಸಲಾಗಿತ್ತು.

'ಇನ್ಫೊಸಿಸ್ ಭಾರತ ಮತ್ತು ಬಿಜೆಪಿ ಸರ್ಕಾರದ ಹೆಸರಿಗೆ ಮಸಿ ಬಳಿಯಲೆಂದು, ಬೇಕಂತಲೇ ಐಟಿ ಪೋರ್ಟಲ್ ಅನ್ನು ಸರಿಯಾಗಿ ಅಭಿವೃದ್ಧಿಪಡಿಸಿಲ್ಲ. ಈ ಕಂಪನಿಯು ದೇಶವಿರೋಧಿಗಳಿಗೆ, ದೇಶದ್ರೋಹಿಗಳಿಗೆ ದೇಣಿಗೆ ನೀಡುತ್ತದೆ. ಭಾರತದ ವಿರುದ್ಧ ಕೆಲಸ ಮಾಡುತ್ತಿರುವವರಿಗೆ ಇನ್ಫೊಸಿಸ್ ನೆರವಾಗುತ್ತಿದೆ' ಎಂದು ಲೇಖನದಲ್ಲಿ ಆರೋಪಿಸಲಾಗಿತ್ತು.

ಐಟಿಆರ್ ಸಲ್ಲಿಕೆಗೆ ತೊಡಕು

ನೂತನ ಐಟಿ ಪೋರ್ಟಲ್‌ನಲ್ಲಿ ಹಿಂದಿನ ಸಾಲಿನ ತೆರಿಗೆಯನ್ನು ಪೂರ್ಣ ಪ್ರಮಾಣದಲ್ಲಿ ಪಾವತಿ ಮಾಡಬಹುದು. ಆದರೆ ತೆರಿಗೆ ಪಾವತಿ ಮಾಡಿದ್ದಕ್ಕೆ ತೆರಿಗೆ ಪಾವತಿ ಪ್ರಮಾಣ ಪತ್ರ ದೊರೆಯುತ್ತಿಲ್ಲ. ಜತೆಗೆ ಆದಾಯ ತೆರಿಗೆ ರಿಟರ್ನ್ಸ್ (ಐಟಿಆರ್) ಸಲ್ಲಿಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಆದಾಯ ತೆರಿಗೆ ಪಾವತಿಸಿದ್ದರೂ, ಐಟಿಆರ್ ಸಲ್ಲಿಸದೇ ಇರುವ ಕಾರಣಕ್ಕೆ ತೆರಿಗೆದಾರರು ದಂಡ ತೆರಬೇಕಾಗುತ್ತದೆ. ಈಗಾಗಲೇ ಕೋಟ್ಯಂತರ ಮಂದಿ ಆದಾಯ ತೆರಿಗೆ ಪಾವತಿಸಿದ್ದಾರೆ. ಆದರೆ ಐಟಿಆರ್ ಸಲ್ಲಿಸದೇ ಇರುವ ಕಾರಣಕ್ಕೆ ಅವರು, ಈಗಾಗಲೇ ಪಾವತಿ ಮಾಡಿರುವ ಆದಾಯ ತೆರಿಗೆಯ ಮೇಲೆ ಅನವಶ್ಯಕವಾಗಿ ದಂಡ ಪಾವತಿ ಮಾಡಬೇಕಿದೆ.

ಐಟಿಆರ್ ಸಲ್ಲಿಸದೇ ಇರುವ ಕಾರಣಕ್ಕೆ ಬ್ಯಾಂಕ್‌ಗಳಿಂದ ಸಾಲ ಪಡೆಯುವಲ್ಲಿ ತೊಡಕಾಗಿದೆ. ಐಟಿಆರ್ ಇಲ್ಲದೇ ಇರುವ ಕಾರಣ ಹಲವು ಬ್ಯಾಂಕ್‌ಗಳು ಸಾಲವನ್ನು ನೀಡುತ್ತಿಲ್ಲ. 'ಐಟಿಆರ್ ಇಲ್ಲದೇ ಇರುವ ಕಾರಣಕ್ಕೇ ಮೂರು ಬ್ಯಾಂಕ್‌ಗಳು ನನ್ನ ಸಾಲದ ಅರ್ಜಿಯನ್ನು ತಿರಸ್ಕರಿಸಿವೆ. ಆದಾಯ ತೆರಿಗೆ ಪಾವತಿ ಮಾಡಿಯೂ ಈ ಸಮಸ್ಯೆ ಎದುರಿಸಬೇಕಾಗಿದೆ. ಐಟಿಆರ್ ಸಲ್ಲಿಕೆ ಸರಿಯಾಗಿ, ಸಾಮಾನ್ಯ ಸ್ಥಿತಿ ಬರುವವರೆಗೂ ಸಾಲದ ಅರ್ಜಿ ವಿಲೇವಾರಿಯಲ್ಲಿ ಐಟಿಆರ್ ಕೈಬಿಡಲು ಸರ್ಕಾರವು ಬ್ಯಾಂಕ್‌ಗಳಿಗೆ ನಿರ್ದೇಶನ ನೀಡಬೇಕು' ಎಂದು ಬೆಂಗಳೂರಿನ ಉದ್ಯಮಿ ಎಂ.ಬಾಲಕೃಷ್ಣ ಅವರು ವಿವರಿಸಿದ್ದಾರೆ.

ದೊರೆಯದ ಐಟಿಆರ್ ವಿವರ

ನೂತನ ಐಟಿ ಪೋರ್ಟಲ್‌ನಲ್ಲಿ ಈ ಹಿಂದಿನ ಹಲವು ದತ್ತಾಂಶಗಳು ದೊರೆಯುತ್ತಿಲ್ಲ. ಇದರಿಂದ ತೆರಿಗೆದಾರರಿಗೆ ಅವರ ತೆರಿಗೆ ಪಾವತಿ ಮತ್ತು ಐಟಿಆರ್ ಮಾಹಿತಿ ಲಭ್ಯವಾಗುತ್ತಿಲ್ಲ. ನೂತನ ಐಟಿ ಪೋರ್ಟಲ್‌ನಲ್ಲಿ 2013-14ಕ್ಕಿಂತ ಹಿಂದಿನ ಸಾಲಿನ ಐಟಿಆರ್ ದಾಖಲೆಗಳು ಲಭ್ಯವಾಗುತ್ತಿಲ್ಲ. ಈ ದಾಖಲೆಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳದೇ ಇರುವವರಿಗೆ ಇದರಿಂದ ತೊಂದರೆಯಾಗಿದೆ.

ಲೆಕ್ಕಪರಿಶೋಧನೆ, ಸಾಲ ನೀಡಿಕೆಗೆ ಐಟಿಆರ್ ಪರಿಶೀಲನೆ ನಡೆಸಲು ಇದರಿಂದ ಭಾರಿ ತೊಡಕಾಗಿದೆ. ಅರ್ಜಿಗಳಲ್ಲಿ ಕಾಗದದ ರೂಪದಲ್ಲಿ ಈ ದಾಖಲೆಗಳನ್ನು ಸಲ್ಲಿಸಿದ್ದರೂ, ಆನ್‌ಲೈನ್‌ನಲ್ಲಿ ಈ ದಾಖಲೆಗಳ ಪರಿಶೀಲನೆ ಸಾಧ್ಯವಾಗುತ್ತಿಲ್ಲ. ಇದರಿಂದ ಲೆಕ್ಕಪರಿಶೋಧನೆ ಪೂರ್ಣವಾಗುತ್ತಿಲ್ಲ. ಸಾಲದ ಅರ್ಜಿಗಳ ವಿಲೇವಾರಿಗೂ ತೊಂದರೆಯಾಗುತ್ತಿದೆ ಎಂದು ತಜ್ಞರು ವಿವರಿಸಿದ್ದಾರೆ.

ಮರುಪಾವತಿ ತೋರಿಸುತ್ತಿಲ್ಲ

ನೂತನ ಐಟಿ ಪೋರ್ಟಲ್‌ನಲ್ಲಿ ತೆರಿಗೆದಾರರ ತೆರಿಗೆ ವಿವರಗಳು ಗೋಚರಿಸುತ್ತಿಲ್ಲ. ತೆರಿಗೆದಾರರು ಎಷ್ಟು ತೆರಿಗೆ ಪಾವತಿ ಮಾಡಬೇಕು ಎಂಬ ವಿವರವೂ ಹಲವು ಬಾರಿ ತೋರಿಸುತ್ತಿಲ್ಲ. ಇದರಿಂದಾಗಿ ತೆರಿಗೆ ಪಾವತಿ ಮಾಡಲು ಸಾಧ್ಯವಾಗುತ್ತಿಲ್ಲ. ಇದು ವಿಳಂಬವಾಗುತ್ತಿರುವ ಕಾರಣ ತೆರಿಗೆ ಪಾವತಿಯಲ್ಲಿನ ವಿಳಂಬದ ಮೇಲೆ ತೆರಿಗೆದಾರರು ಅನವಶ್ಯಕವಾಗಿ ದಂಡ ಪಾವತಿ ಮಾಡಬೇಕಿದೆ.

ಈ ಹಿಂದಿನ ಆರ್ಥಿಕ ವರ್ಷಗಳಲ್ಲಿ ಹೆಚ್ಚುವರಿ ತೆರಿಗೆ ಪಾವತಿ ಮಾಡಿರುವ ತೆರಿಗೆದಾರರಿಗೆ ಎಷ್ಟು ಹಣ ಮರುಪಾವತಿಯಾಗಬೇಕು ಎಂಬುದರ ವಿವರವನ್ನು ನೂತನ ಐಟಿ ಪೋರ್ಟಲ್ ತೋರಿಸುತ್ತಿಲ್ಲ. ಆದಾಯ ತೆರಿಗೆ ಇಲಾಖೆಯ ಮರುಪಾವತಿಗೆ ಯಾವುದೇ ಗಡುವು ಅಥವಾ ಕಾಲಮಿತಿ ಇಲ್ಲದೇ ಇರುವ ಕಾರಣಕ್ಕೆ ಇದು ಈಗ ದೊಡ್ಡ ಸಮಸ್ಯೆಯಂತೆ ಕಾಣುತ್ತಿಲ್ಲ. ಆದರೆ ಹೆಚ್ಚುವರಿ ತೆರಿಗೆ ಪಾವತಿ ಮಾಡಿರುವವರ ಹಣವು, ಬಡ್ಡಿ ಇಲ್ಲದೇ ಅನವಶ್ಯಕವಾಗಿ ಒಂದೆಡೆ ಕೊಳೆಯುತ್ತದೆ ಎಂದು ತಜ್ಞರು ಹೇಳಿದ್ದಾರೆ.

ಈ ಹಿಂದಿನ ಪೋರ್ಟಲ್‌ನಲ್ಲಿ ಒಂದು ವರ್ಷದ ಟಿಡಿಎಸ್ ಅನ್ನು ಮರುವರ್ಷವೂ ಕ್ಲೇಮಿಗೆ ಹಾಕಬಹುದಿತ್ತು. ನೂತನ ಐಟಿ ಪೋರ್ಟಲ್‌ನಲ್ಲಿ ಇದಕ್ಕೆ ಅವಕಾಶವಿಲ್ಲ. ಹೀಗಾಗಿ ಹಿಂದಿನ ವರ್ಷದ ಟಿಡಿಎಸ್ ಅನ್ನು ಕ್ಲೇಮಿಗೆ ಹಾಕಲು ಸಾಧ್ಯವಾಗುತ್ತಿಲ್ಲ. ಜತೆಗೆ ತೆರಿಗೆ ಪಾವತಿಯಲ್ಲಿ ಆದ ತಪ್ಪುಗಳನ್ನು ಸರಿಪಡಿಸಲು ನೂತನ ಐಟಿ ಪೋರ್ಟಲ್‌ನಲ್ಲಿ ಅವಕಾಶವಿಲ್ಲ.

ತೆರಿಗೆ ಪಾವತಿ ನಿಯಮಗಳಿಗೆ ಸಂಬಂಧಿಸಿದಂತೆ ಆದಾಯ ತೆರಿಗೆ ಇಲಾಖೆಯು ಹೊರಡಿಸಿರುವ ಆದೇಶಗಳು, ಅಧಿಸೂಚನೆಗಳು ಮತ್ತು ಸುತ್ತೋಲೆಗಳು ನೂತನ ಐಟಿ ಪೋರ್ಟಲ್‌ನಲ್ಲಿ ಇವೆ. ಆದರೆ ಡೌನ್‌ಲೋಡ್ ಆಯ್ಕೆ ಮಾಡಿದ ತಕ್ಷಣ ಸರ್ವರ್ ಡೌನ್ ಆಗುತ್ತದೆ.

ಅಡಚಣೆಗಾಗಿ ಕ್ಷಮೆ ಕೋರಿದ ಸಂಸ್ಥೆ
ಆನ್‌ಲೈನ್‌ಗೆ ಮರಳಿದ ಫೇಸ್‌ಬುಕ್, ವಾಟ್ಸ್‌ಆ್ಯಪ್

ವಾಷಿಂಗ್ಟನ್ (ಪಿಟಿಐ/ಎಎಫ್‌ಪಿ): ಜನಪ್ರಿಯ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ಇನ್‌ಸ್ಟಾಗ್ರಾಮ್, ವಾಟ್ಸ್‌ಆ್ಯಪ್ ಮತ್ತು ಮೆಸೆಂಜರ್ ಅಪ್ಲಿಕೇಶನ್‌ಗಳು ಆರು ಗಂಟೆಗಳ ಸ್ಥಗಿತದ ಬಳಿಕ ಸಕ್ರಿಯಗೊಂಡಿವೆ.

ಫೇಸ್‌ಬುಕ್ ಒಡೆತನದ ಜಾಲತಾಣಗಳು ಸೋಮವಾರ ಸಂಜೆಯಿಂದ ಸ್ಥಗಿತಗೊಂಡಿದ್ದವು. ಜಾಲತಾಣಗಳನ್ನು ಬಳಕೆ ಮಾಡಲು ಬಳಕೆದಾರರಿಗೆ ಸಾಧ್ಯವಾಗಲಿಲ್ಲ. ಕಾರ್ಯಾಚರಣೆ ಸ್ಥಗಿತಗೊಂಡಿದ್ದರಿಂದ ವಿಶ್ವದಾದ್ಯಂತ ಲಕ್ಷಾಂತರ ಜನರು ಸಮಸ್ಯೆ ಎದುರಿಸಿದರು. ಕಾರ್ಯಾಚರಣೆ ಸ್ಥಗಿತಗೊಂಡಿದ್ದರೂ, ಬಳಕೆದಾರರ ದತ್ತಾಂಶಕ್ಕೆ ಯಾವುದೇ ಹಾನಿಯಾಗಿಲ್ಲ ಎಂದು ಸಂಸ್ಥೆ ತಿಳಿಸಿದೆ.

'ನಮ್ಮ ಸೇವೆಗಳು ಈಗ ಆನ್‌ಲೈನ್‌ಗೆ ಬಂದಿದ್ದು, ಅವುಗಳನ್ನು ಸಾಮಾನ್ಯ ಕಾರ್ಯಾಚರಣೆಗಳಿಗೆ ಸಂಪೂರ್ಣವಾಗಿ ಹಿಂದಿರುಗಿಸಲು ನಾವು ಸಕ್ರಿಯವಾಗಿ ಕೆಲಸ ಮಾಡಿದ್ದೇವೆ' ಎಂದು ಫೇಸ್‌ಬುಕ್ ಉಪಾಧ್ಯಕ್ಷ ಸಂತೋಷ್ ಜನಾರ್ದನ್ ಅವರು ಸೋಮವಾರ ಹೇಳಿದ್ದಾರೆ.

'ನಮ್ಮ ವೇದಿಕೆಗಳ ಮೇಲೆ ಅವಲಂಬಿತವಾಗಿರುವ ಪ್ರಪಂಚದಾದ್ಯಂತ ಇರುವ ಎಲ್ಲ ಬಳಕೆದಾರರಿಗೆ ಉಂಟಾದ ಅನನುಕೂಲಕ್ಕಾಗಿ ವಿಷಾದಿಸುತ್ತೇವೆ. ಕನಿಷ್ಠ ಸಮಯದಲ್ಲಿ ವ್ಯವಸ್ಥೆಯನ್ನು ಸರಿದಾರಿಗೆ ತಂದಿದ್ದೇವೆ' ಎಂದು ಅವರು ತಿಳಿಸಿದ್ದಾರೆ.

ಐಫೋನ್ ಮತ್ತು ಆಂಡ್ರಾಯ್ಡ್ ಕಾರ್ಯಾಚರಣೆಗಳ ವೆಬ್ ಮತ್ತು ಮೊಬೈಲ್ ಆ್ಯಪ್ ಅವತರಣಿಕೆಗಳೆರಡರಲ್ಲೂ ಈ ಸಮಸ್ಯೆ ತಲೆದೋರಿತ್ತು. ಬಳಕೆದಾರರು ಧ್ವನಿ ಕರೆ ಅಥವಾ ವಿಡಿಯೊ ಕರೆಗಳನ್ನು ಮಾಡಲು ಅಥವಾ ಸ್ವೀಕರಿಸಲು ಅಥವಾ ಸಂದೇಶಗಳನ್ನು ಕಳುಹಿಸಲು ಸಾಧ್ಯವಾಗಲಿಲ್ಲ.

'ಪ್ರಾಮಾಣಿಕವಾಗಿ ಕ್ಷಮೆಯಾಚಿಸುತ್ತೇವೆ. ನಾವು ನೆಟ್‌ವರ್ಕಿಂಗ್ ಸಮಸ್ಯೆಗಳನ್ನು ಅನುಭವಿಸುತ್ತಿದ್ದೇವೆ. ಸಾಧ್ಯವಾದಷ್ಟು ಬೇಗ ಕಾರ್ಯಾಚರಣೆ ಮರುಸ್ಥಾಪಿಸಲು ತಂಡಗಳು ವೇಗವಾಗಿ ಕೆಲಸ ಮಾಡುತ್ತಿವೆ' ಎಂದು ಫೇಸ್‌ಬುಕ್‌ನ ಮುಖ್ಯ ತಂತ್ರಜ್ಞಾನ ಅಧಿಕಾರಿ ಮೈಕ್ ಶ್ರೋಪರ್ ಟ್ವೀಟ್ ಮಾಡಿದ್ದರು.

ಆಗಿರುವ ಸಮಸ್ಯೆ ಬಗ್ಗೆ ಜನರಿಗೆ ಮಾಹಿತಿ ನೀಡಲು ಟ್ವಿಟರ್ ಜಾಲತಾಣವನ್ನು ಫೇಸ್‌ಬುಕ್ ಸಿಬ್ಬಂದಿ ಉಪಯೋಗಿಸಿದರು.

ಕ್ಷಮೆಯಾಚನೆ

ಸಮಸ್ಯೆ ಉಂಟಾಗಿದ್ದರಿಂದ ಫೇಸ್‌ಬುಕ್ ಸಂಸ್ಥಾಪಕ ಮಾರ್ಕ್ ಜುಕರ್‌ಬರ್ಗ್ ಬಳಕೆದಾರರ ಕ್ಷಮೆ ಕೋರಿದ್ದಾರೆ. 'ಅಡಚಣೆಗಾಗಿ ಕ್ಷಮಿಸಿ. ನಿಮ್ಮ ಆಪ್ತರೊಂದಿಗೆ ಸಂಪರ್ಕದಲ್ಲಿರಲು ನಮ್ಮ ಸೇವೆಗಳ ಮೇಲೆ ನೀವು ಎಷ್ಟು ಅವಲಂಬಿತರಾಗಿದ್ದೀರಿ ಎಂಬುದು ನನಗೆ ತಿಳಿದಿದೆ' ಎಂದು ಜುಕರ್‌ಬರ್ಗ್ ಹೇಳಿದ್ದಾರೆ.

ವಿಶ್ವದಾದ್ಯಂತ ಸುಮಾರು 300 ಕೋಟಿ ಬಳಕೆದಾರರನ್ನು ಹೊಂದಿರುವ ಫೇಸ್‌ಬುಕ್, ಭ್ರಷ್ಟಾಚಾರ ವಿರೋಧಿ ಹೋರಾಟಗಾರರ ಕಾರಣದಿಂದ ಕಳೆದ ಹದಿನೈದು ದಿನಗಳಿಂದ ಬಿಕ್ಕಟ್ಟನ್ನು ಎದುರಿಸುತ್ತಿದೆ. ಫೇಸ್‌ಬುಕ್‌ನ ಮಾಜಿ ಎಂಜಿನಿಯರ್ ಫ್ರಾನ್ಸಿಸ್ ಹೌಗೆನ್ ಅವರು ಕಳೆದ ವಾರ ಹಲವಾರು ಆಂತರಿಕ ದಾಖಲೆಗಳನ್ನು ಸೋರಿಕೆ ಮಾಡಿದ್ದರು. 'ಸಂಸ್ಥೆಯು ತನ್ನ ಬಳಕೆದಾರರ ಸುರಕ್ಷತೆಗಿಂತ ಹೆಚ್ಚಾಗಿ ಲಾಭವನ್ನು ಆಯ್ಕೆ ಮಾಡಿಕೊಳ್ಳುತ್ತಿದೆ' ಎಂದು ಅವರು ಆರೋಪಿಸಿದ್ದರು.

ಜುಕರ್‌ಬರ್ಗ್‌ಗೆ ಭಾರಿ ನಷ್ಟ

ಮಾರ್ಕ್ ಜುಕರ್‌ಬರ್ಗ್ ಅವರ ವೈಯಕ್ತಿಕ ಸಂಪತ್ತು ಕೆಲವೇ ಗಂಟೆಗಳಲ್ಲಿ ₹45 ಸಾವಿರ ಕೋಟಿಯಷ್ಟು (6 ಬಿಲಿಯನ್ ಡಾಲರ್) ಕುಸಿದಿದೆ ಎಂದು ಬ್ಲೂಮ್‌ಬರ್ಗ್ ವರದಿ ಮಾಡಿದೆ. ಸಂಸ್ಥೆಯ ಷೇರುಗಳು ಸೋಮವಾರ ಶೇ 4.9ರಷ್ಟು ಕುಸಿತ ಕಂಡವು. ಸೆಪ್ಟೆಂಬರ್ ಮಧ್ಯಭಾಗದಿಂದ ಒಟ್ಟು ಶೇ 15ರಷ್ಟು ಇಳಿಕೆ ದಾಖಲಾಗಿದೆ.

ವಿಶ್ವದ ಶ್ರೀಮಂತ ವ್ಯಕ್ತಿಗಳ ಪಟ್ಟಿಯಿಂದ ಜುಕರ್‌ಬರ್ಗ್ ಕೆಳಗಿಳಿದಿದ್ದಾರೆ. ಕೆಲವೇ ವಾರಗಳಲ್ಲಿ ಅವರ ಸಂಪತ್ತಿನ ಮೌಲ್ಯ ₹9 ಲಕ್ಷ ಕೋಟಿಗೆ ಇಳಿಕೆಯಾಗಿದೆ. ಅವರು ₹10.50 ಲಕ್ಷ ಕೋಟಿ ಸಂಪತ್ತು ಹೊಂದಿದ್ದರು.

ಮಾರ್ಕ್ ಜುಕರ್‌ಬರ್ಗ್

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಬಾಲಿವುಡ್ ನಟ ಶಾರುಕ್ ಖಾನ್ ಅವರ ಪುತ್ರ ಆರ್ಯನ್ ಖಾನ್ ಅವರನ್ನು ಮಾದಕವಸ್ತು ಬಳಸಿದ ಆರೋಪದ ಮೇಲೆ ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ. ಈ ನಡುವೆ ಶಾರುಕ್ ಖಾನ್ ಅವರು ಮಾಡಿದ್ದಾರೆ ಎನ್ನಲಾದ ಟ್ವೀಟ್ ಚರ್ಚೆಯಾಗುತ್ತಿದೆ. 'ನರೇಂದ್ರ ಮೋದಿ ಅವರು ಪ್ರಧಾನಿಯಾದರೆ, ನಾನು ಟ್ವಿಟರ್ ಅಷ್ಟೇ ಅಲ್ಲ, ದೇಶವನ್ನೇ ಬಿಡುತ್ತೇನೆ' ಎಂದು ಟ್ವೀಟ್‌ನಲ್ಲಿ ಉಲ್ಲೇಖವಾಗಿದೆ. ಈ ಟ್ವೀಟ್‌ನ ಸ್ಕ್ರೀನ್‌ಶಾಟ್ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ಟ್ವಿಟರ್‌ನಲ್ಲಿ ಹಂಚಿಕೆಯಾಗುತ್ತಿದೆ.

ವೈರಲ್ ಆಗಿರುವ ಟ್ವೀಟ್ ಶಾರುಕ್ ಖಾನ್ ಅವರು ಮಾಡಿದ್ದಲ್ಲ ಎಂದು ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ವೇದಿಕೆ ತಿಳಿಸಿದೆ. ಕಮಲ್ ಆರ್ ಖಾನ್ ಎಂಬುವರು 2014ರಲ್ಲಿ ಮಾಡಿದ್ದ ಟ್ವೀಟ್, ಶಾರುಕ್ ಖಾನ್ ಅವರದ್ದು ಎಂದು ಸುದ್ದಿಯಾಗಿತ್ತು. ಸ್ವತಃ ಶಾರುಕ್ ಅವರು ಟ್ವೀಟ್ ಮಾಡಿ, ತಮಗೂ ಇದಕ್ಕೂ ಸಂಬಂಧವಿಲ್ಲ ಎಂದು ಸ್ಪಷ್ಟಪಡಿಸಿದ್ದರು. ವೈರಲ್ ಆಗಿರುವ ಟ್ವೀಟ್ ಅನ್ನು ಶಾರುಕ್ ಅವರದ್ದು ಎಂಬಂತೆ ತಿರುಚಲಾಗಿದೆ ಎಂದು ವೆಬ್‌ಸೈಟ್ ತಿಳಿಸಿದೆ.

ಗುಂಡಣ್ಣ



ಬೆರಗಿನ ಬೆಳಕು
ಗುರುರಾಜ ಕರಜಗಿ

ಸೌಂದರ್ಯದಪೇಕ್ಷೆಗೆ ತಪಸ್ಸು

ವಿವಿಧ ರಸಗಳ ಭಟ್ಟಿ, ಸೌಂದರ್ಯಕಾಮೇಷ್ಟಿ|
ಕವಿಜಗತ್ಸಂಷ್ಟಿಯದು, ಕಲೆಗನಾಕೃಷ್ಟಿ||
ಗವಿಯೊಳಗಣ ಪ್ರಕೃತಿಯಂತ್ರ ವೈಚಿತ್ರ್ಯವದು|
ತಪಸೊಂದೆ ಪಥವದಕೆ – ಮಂಕುತಿಮ್ಮ ||470||

ಪದ-ಅರ್ಥ: ಭಟ್ಟಿ = ತಿರುಳು, ಸಾರ, ಸೌಂದರ್ಯಕಾಮೇಷ್ಟಿ = ಸೌಂದರ್ಯ + ಕಾಮೇಷ್ಟಿ (ಅಪೇಕ್ಷಿಸಿದನ್ನು ಪಡೆಯುವ ಯಜ್ಞ), ಕಲೆಗನಾಕೃಷ್ಟಿ = ಕಲೆಗನ (ಕಲಾವಿದನ) + ಆಕೃಷ್ಟಿ = (ವಿಶೇಷ ಸೃಷ್ಟಿ), ಗವಿಯೊಳಗಣ = ಗವಿಯೊಳಗಿನ, ಪಥ = ದಾರಿ

ವಾಚ್ಯಾರ್ಥ: ಸೌಂದರ್ಯವನ್ನು ಬಯಸಿದ ಮನುಷ್ಯ ಪ್ರಯತ್ನವೇ ಒಂದು ಯಜ್ಞವಿದ್ದಂತೆ. ಅದರ ಫಲವೇ ರಸಗಳ ಸಾರ. ಈ ಯಜ್ಞಕ್ಕೆ ಸಾಧನಗಳೇ ಕವಿಗಳು ಸೃಷ್ಟಿಸಿದ, ಕಲೆಗಾರರು ವಿಶೇಷವಾಗಿ ನಿರ್ಮಿಸಿದ ಪ್ರಪಂಚ. ಅವು ಹೃದಯದ ಗವಿಯೊಳಗೆ ಹೋಗಿ ಮಾಡುವ ಕ್ರಿಯೆಯೇ ವಿಚಿತ್ರ. ಅದನ್ನು ಅರಿಯುವುದಕ್ಕೆ ತಪಸ್ಸೊಂದೇ ದಾರಿ.

ವಿವರಣೆ: ನಮಗೆ ಬೇಕೋ ಬೇಡವೋ, ಬಾಳುವುದು ನಮಗೆ ಅನಿವಾರ್ಯವಾದದ್ದು. ಹೀಗೆ ಬಾಳುವಾಗ ಸುಂದರವಾದದ್ದನ್ನು, ಸುಭಗವಾದದ್ದನ್ನು, ಸುಲಭವಾದದ್ದನ್ನು ಪಡೆಯಬೇಕೆಂದು ಜೀವ ಸದಾ ಶ್ರಮಿಸುತ್ತದೆ. ಅದನ್ನೇ ಕಗ್ಗ 'ಸೌಂದರ್ಯಕಾಮೇಷ್ಟಿ' ಎಂದು ಕರೆಯುತ್ತದೆ. ಅದು ಸೌಂದರ್ಯವನ್ನು ಅಪೇಕ್ಷಿಸಿ ಮಾಡುವ ಯಜ್ಞ, ಯಜ್ಞವೆಂದರೆ ಹೋಮ, ಯಾಗಗಳಲ್ಲ, ಅದು ನಾವು ದಿನನಿತ್ಯವೂ ಮಾಡುವ ಪ್ರಯತ್ನ, ತೈತ್ತರೀಯ ಮಹಾನಾರಾಯಣದ ಅನುವಾಕು 'ಕಾಮೋಕಾರ್ಷೀತ್ | ಮನ್ಯುರಾಕಾರ್ಷೀತ್' ಎನ್ನುತ್ತದೆ. ಹಾಗೆಂದರೆ ಕಾಮವೂ, ಮನ್ಯುವೂ ಪ್ರಕೃತಿಯ ಶಕ್ತಿಗಳು. ಕಾಮವೆಂದರೆ ಅಪೇಕ್ಷೆ. ಅದು ಪುರುಷಾರ್ಥಗಳಲ್ಲಿ ಒಂದು. ಮನ್ಯು ಎಂದರೆ ಕೋಪ. ಅದೇ ಕ್ರೋಧ. ನಮ್ಮ ಅಪೇಕ್ಷೆಯನ್ನು ನೆರವೇರಿಸಿಕೊಳ್ಳುವಾಗ ಯಾರಾದರೂ ಅಡ್ಡಿಯಾದರೆ ಕೋಪ ತಲೆ ಎತ್ತುತ್ತದೆ. ಅಪೇಕ್ಷೆ, ಕ್ರೋಧಗಳೆರಡೂ ನಮ್ಮೊಳಗೇ ಇವೆ, ಅವು ಜಗದ್‌ಯಂತ್ರದ ಮೂಲ ಚಾಲಕಗಳು. ಅವು ದೇವತಾ ಪ್ರಭಾವಗಳು ಎಂದು ವೇದ ಕರೆದಿದೆ. ಅವು ಇಷ್ಟು ಪ್ರಮುಖ ಶಕ್ತಿಗಳಾಗಿದ್ದರೂ ಅವುಗಳ ಸ್ಥಾನ ಜಗತ್ತಿನಲ್ಲಿ ಮಾತ್ರ, ಆತ್ಮದಲ್ಲಲ್ಲ. ಅವುಗಳನ್ನು ಸತತ ಪ್ರಯತ್ನದಿಂದ ನಿಗ್ರಹಿಸುವುದು ಯಜ್ಞ. ಹೀಗೆ ನಾವು ಮಾಡುವ ಪ್ರಯತ್ನಗಳೆಂಬ ಯಜ್ಞಕ್ಕೆ ಪರಿಕರಗಳು ಯಾವವು? ದಿನದಿನವೂ ಬಾಳಿಗೊಂದು ಹೊಸ ಚೆಂದ ಬರಬೇಕು, ಅದು ಸದಾ ಹೊಸದೆನ್ನಿಸಬೇಕು ಎನ್ನುವುದಕ್ಕೆ ಅನುವಾಗುವುದು ಕಲೆ.

ಜೀವನ ಹಳಸದಂತೆ ಅದನ್ನು ಕಾಪಾಡುತ್ತ ಅದಕ್ಕೊಂದು ಕಾಂತಿಯನ್ನು ಕೊಡುವುದು ಕಲೆ. ನಮ್ಮ ಸುತ್ತಮುತ್ತಲೂ ಇರುವ ಸೌಂದರ್ಯವನ್ನು ನಮ್ಮ ಅನುಭವಕ್ಕೆ ತಂದು ತೋರಿಸಿ, ಇನ್ನೂ ಇರಬಹುದಾದ ಸೌಂದರ್ಯದ ನೆಲೆಗಳಿಗೆ ನಮ್ಮನ್ನು ಉಜ್ಜುಗಗೊಳಿಸುವುದು ಕಲೆ. ಕಲೆಗೆ ಅನೇಕ ಶಿಖರಗಳು. ಚಿತ್ರ, ಶಿಲ್ಪ, ನಾಟಕ, ಚಲನಚಿತ್ರ, ಹಾಡು, ನೃತ್ಯ ಇವುಗಳೆಲ್ಲ ಅದರ ಅನೇಕ ಮುಖಗಳು. ಇವು ಕಲಾವಿದನೊಬ್ಬ ತನ್ನಲ್ಲಿ ವಿಶೇಷವಾಗಿರುವ ರಸಪ್ರಜ್ಞೆಯಿಂದ, ತಾನು ಪ್ರಪಂಚದಲ್ಲಿ ಕಂಡದ್ದಕ್ಕೆ ಮತ್ತಷ್ಟು ತನ್ನ ವಿಸ್ತಾರವಾದ ಕಲ್ಪನೆಯನ್ನು ಬೆರೆಸಿ ಎಳೆತಂದು ನಮ್ಮ ಮುಂದೆ ಇಡುತ್ತಾನೆ. ಇದು ಕಲೆಗನ ಆಕೃಷ್ಟಿ. ಈ ಕಲಾವಿದನ ಸೃಷ್ಟಿಯ ಹಿಂದೆ, ಅದಕ್ಕೆ ಪೋಷಕವಾಗಿ ಸಾಹಿತ್ಯವಿದೆ. ಜೀವನ ಸೌಂದರ್ಯ ಪರಿಪೋಷಣೆಗೆ ಒದಗುವ ವಾಗ್‌ಮೃತಧಾರೆ ಸಾಹಿತ್ಯ. ಹೀಗೆ ಸಾಹಿತ್ಯ, ಕಲೆಗಳು ರಸಗಳ ಭಟ್ಟಿಯನ್ನಿಳಿಸಿ, ನಮ್ಮ ಹೃದಯದ ಗುಹೆಯನ್ನು ಪ್ರವೇಶಿಸಿ, ಅದನ್ನು ಸಂಸ್ಕಾರಗೊಳಿಸುವ ಕ್ರಿಯೆ ವಿಚಿತ್ರವಾದದ್ದು, ಅಪೂರ್ವವಾದದ್ದು. ಅದು ನಮ್ಮ ನಮ್ಮ ಪರಿಸರಕ್ಕೆ, ಅನುಭವಗಳಿಗೆ, ಸಂಸ್ಕೃತಿಗೆ ತಕ್ಕಂತೆ ಪರಿಷ್ಕಾರವನ್ನು ಮಾಡೀತು. ಆಗ ಸೌಂದರ್ಯದ ಅರಿವು ಆದೀತು. ಹಾಗೆ ಅರಿವನ್ನು ಪಡೆಯುವುದಕ್ಕೆ ತಪಸ್ಸು, ಏಕಾಗ್ರದ ಚಿಂತನೆಯೇ ದಾರಿ. ❖

ದಿನ ಭವಿಷ್ಯ

ಬುಧವಾರ ಅಕ್ಟೋಬರ್ 6, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಭಾದ್ರಪದ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಹಸ್ತೆ ಅಮಾವಾಸೆ ಗಂ. 26-36 (ಹ. 4-53) ಬುಧವಾರ ನಿತ್ಯ ನಕ್ಷತ್ರ ಹಸ್ತ ಗಂ. 46-46 (ರಾ. 12-57) ಬ್ರಹ್ಮ ನಾಮ ಯೋಗ ಗಂ. 10-22 ನಾಗ ಕರಣ ಗಂ. 26-36 ವಿಷ ಗಂ. 8-49 ಅಮೃತ ಗಂ 31-55 : ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 : ಸೂರ್ಯೋದಯ: 6-12 ಸೂರ್ಯಾಸ್ತ: 6-04 ಅದೃಷ್ಟ ಸಂಖ್ಯೆ 3 8

ಮೇಷ: ಪ್ರತಿಭಾ ಪ್ರದರ್ಶನದ ಅವಕಾಶದೊಂದಿಗೆ ಉತ್ತಮ ಆದಾಯ ಮತ್ತು ಗೌರವ ಪ್ರಾಪ್ತವಾಗುವ ಅವಕಾಶ. ಮುಂದಿನ ದಿನಗಳಲ್ಲಿ ಉತ್ತಮ ಅವಕಾಶ. ಪ್ರಯಾಣದಲ್ಲಿ ಸುಖಾನುಭವ ಉಂಟಾಗುವುದು.

ವೃಷಭ: ವ್ಯವಹಾರದಲ್ಲಿ ಕೌಶಲದಿಂದಾಗಿ ಹೆಚ್ಚಿನ ಲಾಭ. ಹೊಸ ಉದ್ಯಮದ ಆರಂಭದ ಬಗ್ಗೆ ಚಿಂತನೆಗಳು ಸಾಕಾರಗೊಳ್ಳುವವು. ಇಚ್ಛೆಯಂತೆ ಭೂಮಿ ಅಥವಾ ಮನೆ ಖರೀದಿ ಭಾಗ್ಯ.

ಮಿಥುನ: ಮನೆಗೆ ಸೋದರ ಸಂಬಂಧಿಗಳ ಆಗಮನದಿಂದ ಹಬ್ಬದ ವಾತಾವರಣ. ಮಕ್ಕಳ ಮದುವೆ ಕಾರ್ಯಕ್ಕೆ ಹೊಸ ತಿರುವು ಉಂಟಾಗಲಿದೆ. ಅಚ್ಚರಿಯಿಂದ ಕೂಡಿದ ದಿನವಾಗಿ ಪರಿಣಮಿಸುವುದು.

ಕರ್ಕಾಟಕ: ಬೃಹತ್ ಯೋಜನೆಗಳಿಗೆ ಎಲ್ಲ ಸನ್ನಿವೇಶಗಳು ಅನುಕೂಲಕರವಾಗಿ ಪರಿಣಮಿಸಲಿವೆ. ಹೊಸ ಹೊಸ ಅವಕಾಶಗಳು ನಿಮ್ಮನ್ನು ಅರಸಿ ಬರಲಿವೆ. ವೈವಾಹಿಕ ಮಾತುಕತೆಯಿಂದ ತೃಪ್ತಿಕರ ಸಮಾಚಾರ ಕೇಳಿಬರಲಿದೆ.

ಸಿಂಹ: ಸ್ವತ್ತು ವಿವಾದಗಳಲ್ಲಿ ಬಂಧುಗಳೊಡನೆ ಸೌಹಾರ್ದ ಮಾತುಕತೆಯಿಂದ ಲಾಭಕರವಾದ ನಿರ್ಧಾರಗಳು ಹೊರಬರಲಿವೆ. ಪಿತ್ರಾರ್ಜಿತವಾದ ಆಸ್ತಿ ನಿಮ್ಮ ಪಾಲಿಗೆ ದೊರಕುವುದು. ಬಂಧುಗಳೊಂದಿಗಿನ ವಿರಸ ಶಮನ.

ಕನ್ಯಾ: ಪ್ರಯೋಗಶೀಲರಿಗೆ ಅನಿರೀಕ್ಷಿತ ರೀತಿಯಲ್ಲಿ ಫಲಿತಾಂಶ ದೊರೆಯಲಿದೆ. ಉನ್ನತ ಅಧಿಕಾರಿಗಳಿಗೆ ಅಚ್ಚರಿ ಮೂಡಿಸುವ ಕಾರ್ಯ ಮಾಡಲಿದ್ದೀರಿ. ಉದ್ಯಮಿಗಳಿಗೆ ಶ್ರಮಕ್ಕೆ ತಕ್ಕ ಪ್ರತಿಫಲ ದೊರಕುವುದು.

ತುಲಾ: ನಿಮ್ಮ ಸನ್ನಡತೆಯಿಂದಾಗಿ ಜನಪ್ರಿಯತೆಯನ್ನು ಹೆಚ್ಚಿಸಿಕೊಳ್ಳುವಿರಿ. ಸಮಾಜ ಸೇವೆಯು ಹೆಚ್ಚಿನ ಕೆಲಸ ಕಾರ್ಯಗಳೊಂದಿಗೆ ಗೌರವವನ್ನು ತಂದುಕೊಡಲಿದೆ. ಆರೋಗ್ಯದ ಬಗ್ಗೆ ಗಮನವಿರಲಿ.

ವೃಶ್ಚಿಕ: ಹೊಸ ಉದ್ಯಮಕ್ಕೆ ಕಾಲಿಡುವ ಧಾವಂತದಿಂದ ಕೆಲಸ ಕಾರ್ಯಗಳನ್ನು ಮಾಡಲಿದ್ದೀರಿ. ಗುರಿ ತಲುಪುವ ಹಾದಿಯಲ್ಲಿ ಸ್ನೇಹಿತರ ಸಹಾಯ ಸಹಕಾರ ದೊರಕಲಿದೆ. ಸಂಗಾತಿಯಿಂದ ಸಂತಸದ ವಿಚಾರ ಕೇಳಲಿದ್ದೀರಿ.

ಧನು: ಸತ್ಕಾರ್ಯಗಳಿಗೆ ಸಹಾಯ ಕೋರಿ ಬರುವವರಿಗೆ ಸಾಧ್ಯವಾದ ಸಹಾಯ ಹಸ್ತ ಚಾಚುವಿರಿ. ಹೋಟೆಲ್, ದರ್ಶಿನಿ, ಮುಂತಾದವುಗಳ ವ್ಯವಹಾರದಲ್ಲಿ ಸ್ವಲ್ಪ ಹಿನ್ನಡೆ ಕಂಡುಬರುವುದು.

ಮಕರ: ವೈಯಕ್ತಿಕ ಜೀವನದಲ್ಲಿನ ವಿಚಾರಗಳನ್ನು ಸ್ಪಷ್ಟಪಡಿಸಿಕೊಳ್ಳುವ ದಿಕ್ಕಿನಲ್ಲಿ ಗಣ್ಯರೊಂದಿಗೆ ಮುಖಾಮುಖಿ ಸಂಭಾಷಣೆ ಮಾಡಬೇಕಾದೀತು. ದುಡುಕು ಸ್ವಭಾವದಿಂದಾಗಿ ತೊಂದರೆ ಎದುರಿಸ ಬೇಕಾದೀತು.

ಕುಂಭ: ಹೊಸ ಉದ್ಯಮವನ್ನು ನಡೆಸುವ ಯೋಜನೆ ಕೈಗೂಡುವ ಸಾಧ್ಯತೆ. ಆರೋಗ್ಯದಲ್ಲಿ ಹಿನ್ನಡೆ ಅನುಭವಿಸುವ ಸಾಧ್ಯತೆ. ನಡೆಸಲಿಚ್ಛಿಸುವ ವ್ಯವಹಾರಗಳ ವಿಚಾರದಲ್ಲಿ ಸ್ಪಷ್ಟ ಚಿತ್ರಣ ಮೂಡಿಬರಲಿದೆ.

ಮೀನ: ನಿಮ್ಮ ವ್ಯಾಪಾರದಲ್ಲಿ ಈ ದಿನದಿಂದ ಹಣದ ಹರಿವು ಸುಗಮವಾಗಿ ವ್ಯವಹಾರದಲ್ಲಿ ಉನ್ನತಿಯತ್ತ ಸಾಗಲಿದ್ದೀರಿ. ವಾಹನ, ಯಂತ್ರೋಪಕರಣಗಳ ವ್ಯಾಪಾರಿಗಳಿಗೆ ಉತ್ತಮ ವ್ಯವಹಾರದಿಂದಾಗಿ ಉತ್ತಮ ಲಾಭ.

ನಿಮ್ಮ ಜನ್ಮದಿನ 6-ಅಕ್ಟೋಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಕೃಷಿ ಕ್ಷೇತ್ರದಲ್ಲಿ ಆಸಕ್ತಿಯನ್ನು ಕಳೆದುಕೊಳ್ಳುವ ಸಾಧ್ಯತೆ. ಗಟ್ಟಿ ಮನಸ್ಸಿನ ನೀವು ಶೀಘ್ರ ನಿರ್ಧಾರ ಕೈಗೊಳ್ಳುವ ಸ್ವಭಾವ ಹೊಂದಿರುವಿರಿ. ಕಲಾ ಲೋಕದಲ್ಲಿ ವಿಹರಿಸುವುದು ನಿಮ್ಮ ಜಾಯಮಾನ. ನಿಸರ್ಗದ ಸೌಂದರ್ಯವನ್ನು ಸದಾ ಆಸ್ವಾಧಿಸುವ ಮನೋಭಾವ ಹೊಂದಿರುವಿರಿ.

ಪದಬಂಧ 4740
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹಾಡಿನ ಆರಂಭದ ಸಾಲು (3)
3.ವನದಲ್ಲಿರುವ ಉಡುಗೆ! (3)
5.ಕಾಡಿನಲ್ಲಿ ಸಂಚರಿಸುವಿಕೆ (5)
6.ಶರಧಿಯಲ್ಲಿರುವ ಬಾಣ (2)
8.ನಾವಿಕನಿಗೆ ಪ್ರಾಪ್ತಿಯಾಗಿರುವ ಸ್ವರ್ಗ (2)
9.ಹತೋಟಿಗೊಂದು ಪರ್ಯಾಯ ಪದ (2)
10.ಕಲಾವಿದನ ಮನೆ ಬಾಗಿಲು (2)
14.ಕೈಗೂಡದ ಆಸೆಯಿದು (5)
15.ಕರಿಯ ಮರಿ ಬಿದ್ದಿರುವ ಆಳವಾದ ಗುಂಡಿ (3)
16.ಬತ್ತ ಕುಟ್ಟುವ ಸಾಧನ (3)

ಮೇಲಿಂದ ಕೆಳಕ್ಕೆ
1.ಬೇರೆಯವರ ಅಧೀನದಲ್ಲಿರುವಿಕೆ (4)
2.ಅನಿರ್ಬಂಧಿತವಾದುದು (3)
3.ವರ ಹಿಡಿದಿರುವ ಚಿನ್ನದ ನಾಣ್ಯ (3)
4.ಬೆಂಬಿಡದೆ ಕಾಡುವವನೀತ (4)
7.ರಸಿಕನಿಂದ ಒಸರುತ್ತಿರುವ ಕೀವು (3)
8.ನಾಕದಲ್ಲಿ ತೂರಿಸಿದ ಮೂಗು! (3)
9.ಮಂಗಳ ಗ್ರಹವನ್ನು ಹೀಗೂ ಕರೆವರು (4)
11.ಬಲಾತ್ಕಾರದ ಆಡಳಿತ (4)
12.ನಗರದ ಹತ್ತಿರ ಕೇಳಿದ ಚರ್ಮವಾದ್ಯ (3)
13.ನೀರು ಜಿನುಗುವ ತಗ್ಗು ಉಲ್ಟಾ ಕಾಣುತ್ತಿದೆ (3)



4739ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪ್ರಾಣದಾನ 3.ಅಪರೂಪ 5.ನಡುಕ 8.ಮಿಥುನ 9.ಯೋಗ್ಯತಾಪತ್ರ 10.ತಪ್ಪಲೆ 11.ಹಡಪ 15.ರಿಯಾಯಿತಿ 16.ಅಭಿಲಾಷೆ

ಮೇಲಿಂದ ಕೆಳಕ್ಕೆ: 1.ಪ್ರಾಚೀನ 2.ನಡು 3.ಅತ್ತೆ 4.ಪರಧನ 6.ಕರೆಯೋಲೆ 7.ಸಂತಾಪ 8.ಮಿತ್ರದ್ರೋಹ 10.ತರಕಾರಿ 12.ಪರಿಷೆ 13.ಜ್ಞಾತಿ 14.ಕ್ಕಳ

ಸುಡೊಕು 5126

						8	2	
8		9						5
	6	5				3		7
	8			1			5	
9		3	5		8	4		6
	5			3			8	
		4		8			7	
2	9		1		7	5		4
		6		4			9	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5125 ಸುಡೊಕು

9	2	5	1	8	3	4	7	6
6	8	4	7	2	5	3	1	9
7	3	1	4	6	9	2	5	8
4	7	9	8	1	6	5	3	2
3	6	2	5	4	7	8	9	1
1	5	8	3	9	2	6	4	7
8	9	7	2	5	4	1	6	3
5	1	6	9	3	8	7	2	4
2	4	3	6	7	1	9	8	5

ಕಾಂಗ್ರೆಸ್ ಕಾರ್ಯಕರ್ತರು ಲಖಿಂಪುರ–ಖೇರಿ ಹಿಂಸಾಚಾರವನ್ನು ಖಂಡಿಸಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಪ್ರತಿಕೃತಿಗಳನ್ನು ಪಟ್ನಾದಲ್ಲಿ ಮಂಗಳವಾರ ದಹಿಸಿದರು ಪಿಟಿಐ ಚಿತ್ರ

ಪ್ರಧಾನಿ ನರೇಂದ್ರ ಮೋದಿ ಮತ್ತು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ವಿರುದ್ಧ ಎಎಪಿ ಕಾರ್ಯಕರ್ತರು ಅಮೃತಸರದಲ್ಲಿ ಘೋಷಣೆ ಕೂಗಿ ಪ್ರತಿಭಟನೆ ನಡೆಸಿದರು ಎಎಫ್‌ಪಿ ಚಿತ್ರ

ಒಗ್ಗಟ್ಟಾಗಿ ಕಾರ್ಯತಂತ್ರ ರೂಪಿಸಲು ಹಲವು ಮುಖಂಡರ ಕರೆ: ಉತ್ತರ ಪ್ರದೇಶದಲ್ಲಿ ರಾಷ್ಟ್ರಪತಿ ಆಳ್ವಿಕೆಗೆ ಒತ್ತಡ

ಲಖಿಂಪುರ: ಜಂಟಿ ಹೋರಾಟಕ್ಕೆ ವಿಪಕ್ಷ ಸಜ್ಜು

ನವದೆಹಲಿ (ಪಿಟಿಐ): ಉತ್ತರ ಪ್ರದೇಶದ ಲಖಿಂಪುರ–ಖೇರಿಯಲ್ಲಿ ರೈತರ ಮೇಲೆ ಎಸ್‌ಯುವಿ ಹರಿಸಿ ನಾಲ್ವರ ಹತ್ಯೆಯ ಪ್ರಕರಣಕ್ಕೆ ಸಂಬಂಧಿಸಿ ಕೇಂದ್ರ, ಉತ್ತರ ಪ್ರದೇಶ ಸರ್ಕಾರ ಹಾಗೂ ಬಿಜೆಪಿಯ ಮೇಲೆ ವಿರೋಧ ಪಕ್ಷಗಳ ಒಗ್ಗಟ್ಟಿನ ದಾಳಿಯು ಮಂಗಳವಾರವೂ ಮುಂದುವರಿದಿದೆ.

ಎಲ್ಲ ವಿರೋಧ ಪಕ್ಷಗಳು ರೈತರ ಜತೆಗೆ ಇವೆ. ಎಲ್ಲ ಪಕ್ಷಗಳು ಜತೆ ಸೇರಿ ಮುಂದಿನ ಕಾರ್ಯಯೋಜನೆ ರೂಪಿಸಲಿವೆ ಎಂದು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಹೇಳಿದ್ದಾರೆ. ಸುಪ್ರೀಂ ಕೋರ್ಟ್‌ನ ಹಾಲಿ ನ್ಯಾಯಮೂರ್ತಿಯಿಂದಲೇ ಪ್ರಕರಣದ ತನಿಖೆ ನಡೆಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಉತ್ತರ ಪ್ರದೇಶದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಬೇಕು ಎಂದು ಆರ್‌ಎಲ್‌ಡಿ ನಾಯಕ ಜಯಂತ್ ಚೌಧರಿ ಒತ್ತಾಯಿಸಿದ್ದಾರೆ. ಯೋಗಿ ಆದಿತ್ಯನಾಥ ನೇತೃತ್ವದ ಸರ್ಕಾರವು ಲಖಿಂಪುರ–ಖೇರಿಯಲ್ಲಿ ಏನು ನಡೆಯಿತು ಎಂಬುದನ್ನು ಮುಚ್ಚಿಹಾಕಲು ಯತ್ನಿಸುತ್ತಿದೆ. ವಿರೋಧ ಪಕ್ಷಗಳನ್ನು ದಮನಿಸುತ್ತಿದೆ ಎಂದು ಅವರು ಆರೋಪಿಸಿದ್ದಾರೆ. ಘಟನಾ ಸ್ಥಳಕ್ಕೆ ಭೇಟಿ ನೀಡಿದ ವಿರೋಧ ಪಕ್ಷದ ಕೆಲವೇ ನಾಯಕರಲ್ಲಿ ಜಯಂತ್ ಅವರೂ ಒಬ್ಬರು. ಅಲ್ಲಿಗೆ ತಲುಪಬೇಕಿದ್ದರೆ ಗೆರಿಲ್ಲಾ ತಂತ್ರ ಉಪಯೋಗಿಸಬೇಕಾಯಿತು ಎಂದು ಅವರು ಹೇಳಿದ್ದಾರೆ.

ಲಖಿಂಪುರ–ಖೇರಿಗೆ ಹೋಗಲು ವಿರೋಧ ಪಕ್ಷದ ನಾಯಕರಿಗೆ ಅವಕಾಶ ನಿರಾಕರಿಸಿರುವುದು ಶಿವಸೇನಾವನ್ನು ಕೆರಳಿಸಿದೆ. ಈ ದಮನ ನೀತಿಯ ವಿರುದ್ಧ ವಿರೋಧ ಪಕ್ಷಗಳೆಲ್ಲ ಜಂಟಿ ಹೋರಾಟ ನಡೆಸಬೇಕು ಎಂದು ಶಿವಸೇನಾ ಮುಖಂಡ ಸಂಜಯ ರಾವುತ್ ಹೇಳಿದ್ದಾರೆ. ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರನ್ನು ಭೇಟಿಯಾಗಿ ಈ ಬಗ್ಗೆ ಚರ್ಚೆ ನಡೆಸುವುದಾಗಿ ಅವರು ಹೇಳಿದ್ದಾರೆ.

'ಲಖಿಂಪುರ–ಖೇರಿ ಹಿಂಸಾಚಾರವು ದೇಶವನ್ನು ನಡುಗಿಸಿದೆ. ಪ್ರಿಯಾಂಕಾ ಗಾಂಧಿ ಅವರನ್ನು ಉತ್ತರ ಪ್ರದೇಶ ಸರ್ಕಾರ ಬಂಧಿಸಿದೆ. ವಿರೋಧ ಪಕ್ಷದ ನಾಯಕರು ರೈತರನ್ನು ಭೇಟಿ ಆಗುವುದನ್ನು ತಡೆಯಲಾಗಿದೆ. ಉತ್ತರ ಪ್ರದೇಶ ಸರ್ಕಾದ ದಮನ ನೀತಿಯ ವಿರುದ್ಧ ವಿರೋಧ ಪಕ್ಷಗಳು ಒಂದಾಗಬೇಕಿದೆ' ಎಂದು ರಾವುತ್ ಟ್ವೀಟ್ ಮಾಡಿದ್ದಾರೆ.

ರಾಮ ಮತ್ತು ರಹೀಮನ ಅನುಯಾಯಿಗಳನ್ನು ಪರಸ್ಪರ ಸಂಘರ್ಷಕ್ಕಿಳಿಸಿ ಅಧಿಕಾರಕ್ಕೆ ಬಂದ ಬಿಜೆಪಿ ಈಗ ರಕ್ತದ ರುಚಿ ನೋಡಿದೆ. ದೇಶದಲ್ಲಿ ನಿರುದ್ಯೋಗ ಮತ್ತು ಬೆಲೆ ಏರಿಕೆಯ ಸಮಸ್ಯೆ ತೀವ್ರವಾಗಿದೆ. ಆದರೆ ಅವುಗಳನ್ನು ಪರಿಹರಿಸುವ ಆಸಕ್ತಿಯೇ ಸರ್ಕಾರಕ್ಕೆ ಇಲ್ಲ ಎಂದು ಆರ್‌ಜೆಡಿ ನಾಯಕ ಲಾಲು ಪ್ರಸಾದ್ ಹೇಳಿದ್ದಾರೆ. ಲಖಿಂಪುರ–ಖೇರಿ ಹಿಂಸಾಚಾರವನ್ನು ಖಂಡಿಸಿದ್ದಾರೆ.

ಜಲಿಯನ್‌ವಾಲಾ ಬಾಗ್ ನೆನಪು

ಲಖಿಂಪುರ–ಖೇರಿ ಹಿಂಸಾಕಾಂಡವನ್ನು ಜಲಿಯನ್‌ವಾಲಾ ಬಾಗ್ ಹಿಂಸಾಕಾಂಡಕ್ಕೆ ಹಲವು ಮಂದಿ ನಾಯಕರು ಹೋಲಿಸಿದ್ದಾರೆ. ಜಲಿಯನ್‌ವಾಲಾ ಬಾಗ್‌ನಲ್ಲಿ ಬ್ರಿಟಿಷರು ಸೃಷ್ಟಿಸಿದ್ದ ಅದೇ ಪರಿಸ್ಥಿತಿ ಈಗ ಉತ್ತರ ಪ್ರದೇಶದಲ್ಲಿ ಕಾಣಿಸುತ್ತಿದೆ ಎಂದು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಹೇಳಿದ್ದಾರೆ.

ಲಖಿಂಪುರ–ಖೇರಿ ಪ್ರಕರಣವು ಜಲಿಯನ್‌ವಾಲಾ ಬಾಗ್ ಘಟನೆಯನ್ನು ನೆನಪಿಸಿತು. ಈ ಹಿಂಸಾಚಾರಕ್ಕಾಗಿ ಪ್ರಧಾನಿಯವರು ಕ್ಷಮೆ ಯಾಚಿಸಬೇಕು ಎಂದು ಕರ್ನಾಟಕ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ. ಲಖಿಂಪುರದ ಘಟನೆಯು 1919ರಲ್ಲಿ ಜಲಿಯನ್‌ವಾಲಾ ಬಾಗ್‌ನ ದುರಂತವನ್ನು ನೆನಪಿಗೆ ತಂದಿತು ಎಂದು ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಹೇಳಿದ್ದಾರೆ.

ಇನ್ನೂ ಏಕೆ ಬಂಧಿಸಿಲ್ಲ: ಕಾಂಗ್ರೆಸ್ ಪ್ರಶ್ನೆ

ಹಿಂಸಾಚಾರ ಪ್ರಕರಣದ ತನಿಖೆಯು 'ಕಡತದ ಕೆಲಸ' ಮಾತ್ರ ಎಂದು ಕಾಂಗ್ರೆಸ್ ಆರೋಪಿಸಿದೆ. ಕೇಂದ್ರ ಸಚಿವ ಅಜಯ್ ಮಿಶ್ರಾ ಮಗ ಆಶಿಶ್ ಮಿಶ್ರಾ ಅವರನ್ನು ಇನ್ನೂ ಏಕೆ ಬಂಧಿಸಿಲ್ಲ, ಅಜಯ್ ಮಿಶ್ರಾ ಅವರನ್ನು ಸಚಿವ ಸ್ಥಾನದಿಂದ ಏಕೆ ವಜಾ ಮಾಡಿಲ್ಲ ಎಂದು ಪ್ರಶ್ನಿಸಿದೆ.

ಲಖಿಂಪುರದಲ್ಲಿ ಮೃತಪಟ್ಟ ಎಂಟು ಮಂದಿಯ ಕುಟುಂಬವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಏಕೆ ಭೇಟಿ ಮಾಡಿಲ್ಲ ಎಂದು ಕಾಂಗ್ರೆಸ್ ಮುಖಂಡ ಅಶ್ವನಿ ಕುಮಾರ್ ಅವರು ಪ್ರಶ್ನಿಸಿದ್ದಾರೆ. ಮೋದಿ ಅವರು ಮಂಗಳವಾರ ಲಖನೌದಲ್ಲಿಯೇ ಇದ್ದರು.

ಜನರ ಆಕ್ರೋಶವನ್ನು ತಣಿಸುವುದಕ್ಕಾಗಿ ತನಿಖೆಯ ಹೆಸರಿನಲ್ಲಿ ಕಡತ ಕಟ್ಟುವ ಕೆಲಸ ಮಾಡಲಾಗುತ್ತಿದೆ. ಆದರೆ, ಈಗಿನ ಆಕ್ರೋಶವನ್ನು ಆ ರೀತಿಯಲ್ಲಿ ತಣಿಸಲು ಆಗದು ಎಂಬುದಕ್ಕೆ ಇತಿಹಾಸವು ಸಾಕ್ಷಿಯಾಗಲಿದೆ ಎಂದು ಅವರು ಹೇಳಿದ್ದಾರೆ.

ಅತಿಥಿ ಗೃಹದ ಮೇಲೆ ಡ್ರೋನ್ ಕಣ್ಗಾವಲು: ಆರೋಪ

'ಮುನ್ನೆಚ್ಚರಿಕೆ ಕ್ರಮವಾಗಿ ಬಂಧನ'

ಸೀತಾಪುರ (ಉತ್ತರ ಪ್ರದೇಶ) (ಪಿಟಿಐ): ಶಾಂತಿ ಭಂಗವಾಗುವ ಸಾಧ್ಯತೆ ಇದ್ದುದರಿಂದ, ಮುನ್ನೆಚ್ಚರಿಕೆ ಕ್ರಮವಾಗಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಹಾಗೂ ಇತರ ಹತ್ತು ಮಂದಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಉತ್ತರ ಪ್ರದೇಶ ಕಾಂಗ್ರೆಸ್ ಮುಖ್ಯಸ್ಥ ಅಜಯ್ ಕುಮಾರ್ ಲಲ್ಲು ಮತ್ತು ಪಕ್ಷದ ಮುಖಂಡ ದೀಪೇಂದರ್ ಹೂಡಾ ವಿರುದ್ಧವೂ ಪ್ರಕರಣ ದಾಖಲಾಗಿದೆ. ಅಪರಾಧ ಪ್ರಕ್ರಿಯೆ ಸಂಹಿತೆಯ ಸೆಕ್ಷನ್ 144, 151, 107, 116 (ಶಾಂತಿ ಭಂಗ ಸಾಧ್ಯತೆ ಇದ್ದಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಬಂಧನಕ್ಕೆ ಸಂಬಂಧಿಸಿದವು) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇವರಿಂದ ಶಾಂತಿಗೆ ಭಂಗವಾಗುವುದಿಲ್ಲ ಎಂಬುದು ಖಚಿತವಾದ ನಂತರ ಈ ಸೆಕ್ಷನ್‌ಗಳನ್ನು ರದ್ದು ಮಾಡಲಾಗುತ್ತದೆ ಎಂದು ಉಪ ವಿಭಾಗಾಧಿಕಾರಿ ಪ್ಯಾರೇಲಾಲ್ ಮೌರ್ಯ ತಿಳಿಸಿದ್ದಾರೆ.

ಎಫ್‌ಐಆರ್ ಇಲ್ಲದೇ ಅಕ್ರಮ ಬಂಧನ: ಪ್ರಿಯಾಂಕಾ

ಎಫ್‌ಐಆರ್ ದಾಖಲಿಸದೇ ತಮ್ಮನ್ನು 24 ಗಂಟೆಗಳ ನಂತರವೂ ಬಂಧನದಲ್ಲಿ ಇರಿಸಿದ್ದಕ್ಕೆ ಪ್ರಿಯಾಂಕಾ ಗಾಂಧಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ನರೇಂದ್ರ ಮೋದಿಯವರೇ, ನಿಮ್ಮ ಸರ್ಕಾರವು ಯಾವುದೇ ಆದೇಶ ಇಲ್ಲದೇ, ಎಫ್‌ಐಆರ್ ಇಲ್ಲದೇ ಕಳೆದ 28 ಗಂಟೆಗಳಿಂದ ನನ್ನನ್ನು ಬಂಧನದಲ್ಲಿರಿಸಿದೆ. ರೈತರ ಮೇಲೆ ವಾಹನ ಹರಿಸಿದ ವ್ಯಕ್ತಿಯನ್ನೇಕೆ ಬಂಧಿಸಿಲ್ಲ' ಎಂದು ಪ್ರಶ್ನಿಸಿರುವ ವಿಡಿಯೊವನ್ನು ಅವರು ಮಂಗಳವಾರ ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ.

ಸೀತಾಪುರದ ಅತಿಥಿಗೃಹದ ಮೇಲೆ ಡ್ರೋನ್ ಕ್ಯಾಮೆರಾ ಕಣ್ಗಾವಲು ಇಡಲಾಗಿದೆ ಎಂದೂ ದೂರಿದ್ದಾರೆ.

ಕಾಂಗ್ರೆಸ್ ಮುಖಂಡರನ್ನು ಬಂಧಿಸಿಡಲಾದ ಅತಿಥಿಗೃಹದ ಮೇಲೆ ಡ್ರೋನ್ ಹಾರಾಟ ನಡೆಸುತ್ತಿದೆ ಎನ್ನಲಾದ ಮತ್ತೊಂದು ವಿಡಿಯೊವನ್ನು ಪಕ್ಷದ ಮುಖಂಡ ಗುಜ್ಜರ್ ಹಂಚಿಕೊಂಡಿದ್ದಾರೆ. ಬಂಧನದಲ್ಲಿಟ್ಟ ಮೇಲೂ ಪ್ರಿಯಾಂಕಾ ಬಗ್ಗೆ ಸರ್ಕಾರಕ್ಕೆ ಭಯವಿದೆ. ಹೀಗಾಗಿಯೇ ಅವರ ಮೇಲೆ ನಿಗಾ ಇಡಲು ಡ್ರೋನ್ ಬಳಸುತ್ತಿದೆ ಎಂದು ಅವರು ಟ್ವೀಟ್ ಮಾಡಿದ್ದಾರೆ.

ತಮ್ಮ ವಕೀಲರನ್ನು ಭೇಟಿ ಮಾಡಲೂ ಪ್ರಿಯಾಂಕಾಗೆ ಅವಕಾಶ ನೀಡುತ್ತಿಲ್ಲ ಎಂದು ಕಾಂಗ್ರೆಸ್‌ನ ಮಾಧ್ಯಮ ಹಾಗೂ ಸಂವಹನ ವಿಭಾಗದ ಮುಖ್ಯಸ್ಥ ಪಂಕಜ್ ಶ್ರೀವಾತ್ಸವ್ ಆರೋಪಿಸಿದ್ದಾರೆ.

ರೈತರ ಮೇಲೆ ನುಗ್ಗಿದ ಜೀಪ್: ವಿಡಿಯೊಗಳು ವೈರಲ್

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರತಿಭಟನೆ ನಡೆಸುತ್ತಿದ್ದ ರೈತರ ಮೇಲೆ ವಾಹನಗಳನ್ನು ನುಗ್ಗಿಸಿರುವ ವಿಡಿಯೊ ವೈರಲ್ ಆಗಿದೆ. ಬಿಜೆಪಿ ಸಂಸದ ವರುಣ್ ಗಾಂಧಿ ಅವರು ಮಂಗಳವಾರ ಬೆಳಿಗ್ಗೆ ವಿಡಿಯೊ ಒಂದನ್ನು ಟ್ವೀಟ್ ಮಾಡಿದ್ದಾರೆ. ಪ್ರತಿಭಟನೆಯ ನಂತರ ವಾಪಸಾಗುತ್ತಿದ್ದ ರೈತರ ಮೇಲೆ, ಹಿಂಬದಿಯಿಂದ ಬಂದು ವಾಹನ ನುಗ್ಗಿಸಿರುವ ದೃಶ್ಯಗಳು ಅದರಲ್ಲಿವೆ.

ಈ ವಿಡಿಯೊವನ್ನು ಹಲವರು ಹಂಚಿಕೊಂಡಿದ್ದರಾದರೂ, ವರುಣ್ ಗಾಂಧಿ ಅವರು ಟ್ವೀಟ್ ಮಾಡಿರುವ ವಿಡಿಯೊ 44 ಸೆಕೆಂಡ್‌ಗಳಷ್ಟು ದೀರ್ಘವಾದುದು ಮತ್ತು ದೃಶ್ಯಗಳು ಸ್ಪಷ್ಟವಾಗಿವೆ.

ಪ್ರತಿಭಟನೆಯಿಂದ ರೈತರು ವಾಪಸಾಗುತ್ತಿದ್ದಾರೆ. ಸಚಿವ ಮಿಶ್ರಾ ಅವರಿಗೆ ತೋರಿಸಿದ್ದ ಕಪ್ಪು ಬಾವುಟಗಳನ್ನು ಮಡಿಚಿಟ್ಟುಕೊಂಡು ರೈತರು, ಪರಸ್ಪರ ಮಾತನಾಡುತ್ತಾ ಹೋಗುತ್ತಿದ್ದಾರೆ. ಆಗ ಅವರ ಹಿಂಬದಿಯಿಂದ ವೇಗವಾಗಿ ಬಂದ ಬೂದು ಬಣ್ಣದ ಮಹೀಂದ್ರಾ ಥಾರ್ ಜೀಪ್, ರೈತರನ್ನು ಗುದ್ದಿಕೊಂಡು ವೇಗವಾಗಿಯೇ ಮುಂದೆ ಹೋಗುತ್ತದೆ. ನಡೆದುಹೋಗುತ್ತಿದ್ದ ರೈತರು ಚೆಲ್ಲಾಪಿಲ್ಲಿಯಾಗಿ ಬೀಳುತ್ತಾರೆ. ಇಬ್ಬರು ರೈತರು ಅದೇ ಥಾರ್ ಜೀಪ್‌ನ ಬಾನೆಟ್ ಮೇಲೆ ಬೀಳುತ್ತಾರೆ. ಒಬ್ಬರ ತಲೆ ಜೀಪಿನ ಮುಂದಿನ ಗಾಜಿಗೆ ಅಪ್ಪಳಿಸುತ್ತದೆ.

ಆ ಎಲ್ಲರೂ ರಸ್ತೆಗೆ ಚೆಲ್ಲಾಪಿಲ್ಲಿಯಾಗಿ ಬೀಳುತ್ತಾರೆ. ಥಾರ್ ಜೀಪ್ ಅನ್ನು ಹಿಂಬಾಲಿಸಿ, ಕಪ್ಪು ಬಣ್ಣದ ಟೊಯೋಟಾ ಫಾರ್ಚೂನರ್ ಬರುತ್ತದೆ. ಕೆಳಕ್ಕೆ ಬಿದ್ದಿದ್ದ ಒಬ್ಬ ರೈತನ ಮೇಲೆ ಅದು ಹಾದುಹೋಗುತ್ತದೆ. ಅದನ್ನು ಹಿಂಬಾಲಿಸಿ ಬಿಳಿ ಬಣ್ಣದ ಮಹೀಂದ್ರಾ ಸ್ಕಾರ್ಪಿಯೊ ಹೋಗುತ್ತದೆ. ಕೆಲವೇ ಕ್ಷಣಗಳಲ್ಲಿ ಜೀಪ್ ರಸ್ತೆ ಬದಿಗೆ ಸರಿದು ನಿಲ್ಲುತ್ತದೆ. ಗಾಯಗೊಂಡ ರೈತರ ಆಕ್ರಂದನವೂ ಈ ವಿಡಿಯೊದಲ್ಲಿ ದಾಖಲಾಗಿದೆ. ಈ ವಿಡಿಯೊವನ್ನು ಈಗ 3 ಲಕ್ಷಕ್ಕೂ ಹೆಚ್ಚು ಬಾರಿ ಹಂಚಿಕೊಳ್ಳಲಾಗಿದೆ.

ಈ ಘಟನೆಗೂ ಮುನ್ನ ನಡೆದ ಎರಡು ಘಟನೆಗಳ ವಿಡಿಯೊ ಸಹ ಬುಧವಾರ ಮಧ್ಯಾಹ್ನದ ನಂತರ ವೈರಲ್ ಆಗಿವೆ. ಲಖಿಂಪುರ ಗುರುದ್ವಾರದ ಬಳಿ ಕಪ್ಪು ಬಾವುಟ ಪ್ರದರ್ಶಿಸುತ್ತಾ ನಿಂತಿದ್ದ ರೈತರನ್ನು ಕೇಂದ್ರ ಸಚಿವ ಅಜಯ್ ಮಿಶ್ರಾ ಅವರು ಅಣಕಿಸುವ ದೃಶ್ಯ ಒಂದು ವಿಡಿಯೊದಲ್ಲಿ ಇದೆ. ಕಪ್ಪು ಬಾವುಟ ಪ್ರದರ್ಶಿಸುತ್ತಿದ್ದ ರೈತರ ಗುಂಪನ್ನು ಹಾದುಹೋಗುವಾಗ ಸಚಿವ ಅಜಯ್ ಮಿಶ್ರಾ ಅವರು ಪ್ರಯಾಣಿಸುತ್ತಿದ್ದ ಬಿಳಿ ಬಣ್ಣದ ಟೊಯೋಟಾ ಇನೋವಾ ಕ್ರಿಸ್ಟಾ ನಿಲ್ಲುತ್ತದೆ. ಅದರ ಗಾಜನ್ನು ಇಳಿಸುವ ಅಜಯ್ ಮಿಶ್ರಾ ಅವರು, ರೈತರತ್ತ ಸೋಲಿನ ಸಂಜ್ಞೆ ಮಾಡುತ್ತಾರೆ. ನಂತರ ಅಲ್ಲಿಂದ ನಿರ್ಗಮಿಸುತ್ತಾರೆ.

ಮತ್ತೊಂದು ವಿಡಿಯೊದಲ್ಲಿ ರೈತರ ಗುಂಪಿನ ಮಧ್ಯೆ ಥಾರ್, ಫಾರ್ಚೂನರ್ ಮತ್ತು ಸ್ಕಾರ್ಪಿಯೋ ಎಸ್‌ಯುವಿಗಳು ವೇಗವಾಗಿ ಹೋಗುವ ದೃಶ್ಯವಿದೆ. ಈ ಘಟನೆಯ ನಂತರವೇ ರೈತರ ಮೇಲೆ ವಾಹನ ನುಗ್ಗಿಸಲಾಗಿದೆ ಎಂದು ಹಲವರು ಟ್ವೀಟ್‌ನಲ್ಲಿ ಆರೋಪಿಸಿದ್ದಾರೆ.

ರೈತರ ಮೇಲೆ ನುಗ್ಗಿಸಲಾದ ಮಹೀಂದ್ರಾ ಥಾರ್‌ನಿಂದ ಇಬ್ಬರು ಇಳಿದು ಓಡುತ್ತಿರುವ 10 ಸೆಕೆಂಡ್‌ಗಳ ದೃಶ್ಯವಿರುವ ಮತ್ತೊಂದು ವಿಡಿಯೊ ವೈರಲ್ ಆಗಿದೆ. ಹೀಗೆ ನಿಂತಿರುವ ಥಾರ್‌ನ ಚಕ್ರದಡಿಯಲ್ಲಿ ರೈತನೊಬ್ಬ ಸಿಲುಕಿರುವ ದೃಶ್ಯ ಈ ವಿಡಿಯೊದಲ್ಲಿ ಇದೆ. ಮಹೀಂದ್ರಾ ಥಾರ್‌ನಲ್ಲಿ ಹಿಂಬದಿಯಲ್ಲಿ ಕುಳಿತಿದ್ದ ವ್ಯಕ್ತಿಯೊಬ್ಬನನ್ನು ರೈತರು ಹಿಡಿದು ಥಳಿಸುತ್ತಿರುವ ದೃಶ್ಯಗಳಿರುವ ಮತ್ತೊಂದು ವಿಡಿಯೊ ಸಹ ವೈರಲ್ ಆಗಿದೆ.

ಲಖನೌ ವಿಮಾನ ನಿಲ್ದಾಣದಲ್ಲಿ ಧರಣಿ ಕೂತಿರುವ ಚಿತ್ರವನ್ನು ಛತ್ತೀಸಗಡ ಮುಖ್ಯಮಂತ್ರಿ ಭೂಪೇಶ್ ಬಘೆಲ್ ಅವರು ಟ್ವೀಟ್ ಮಾಡಿದ್ದಾರೆ

ವರುಣ್ ಗಾಂಧಿ ಅವರು ಟ್ವೀಟ್ ಮಾಡಿರುವ ವಿಡಿಯೊದ ಸ್ಕ್ರೀನ್‌ಶಾಟ್. ಥಾರ್ ಜೀಪನ್ನು ರೈತರ ಮೇಲೆ ನುಗ್ಗಿಸುತ್ತಿರುವ ದೃಶ್ಯ

ಭೂಪೇಶ್ ಬಘೇಲ್ ಧರಣಿ

ಉತ್ತರ ಪ್ರದೇಶದ ರಾಜಧಾನಿ ಲಖನೌನ ವಿಮಾನ ನಿಲ್ದಾಣಕ್ಕೆ ಬಂದಿಳಿದ ಛತ್ತೀಸಗಡ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರನ್ನು ಉತ್ತರ ಪ್ರದೇಶ ಪೊಲೀಸರು ತಡೆಹಿಡಿದಿದ್ದಾರೆ. ಆಗ ಅದನ್ನು ವಿರೋಧಿಸಿ ಬಘೇಲ್ ಅವರು ವಿಮಾನ ನಿಲ್ದಾಣದಲ್ಲಿಯೇ ಧರಣಿ ಕೂತಿದ್ದಾರೆ.

ಸೋಮವಾರವೂ ಲಖನೌಗೆ ವಿಮಾನ ನಿಲ್ದಾಣಕ್ಕೆ ಬಂದಿಳಿದಿದ್ದ ಬಘೇಲ್ ಅವರನ್ನು ವಿಮಾನದಿಂದ ಇಳಿಯಲು ಉತ್ತರ ಪ್ರದೇಶ ಪೊಲೀಸರು ಅವಕಾಶ ನೀಡಿರಲಿಲ್ಲ. ಹೀಗಾಗಿ ಅವರು ವಾಪಸಾಗಿದ್ದರು. ಮಂಗಳವಾರ ಮತ್ತೆ ಬಂದ ಬಘೇಲ್ ಅವರು ವಿಮಾನ ನಿಲ್ದಾಣದ ನಿರ್ಗಮನ ಗೇಟ್‌ವರೆಗೂ ಬಂದರು. ಆದರೆ ಅಲ್ಲಿ ಪೊಲೀಸರು ಅವರನ್ನು ತಡೆದು ನಿಲ್ಲಿಸಿದರು. ಈ ಘಟನೆಯ ವಿಡಿಯೊವನ್ನು ಬಘೇಲ್ ಅವರೇ ಟ್ವೀಟ್ ಮಾಡಿದ್ದಾರೆ.

ಆಗ ಬಘೇಲ್ ಅವರು, 'ತಮ್ಮಾ, ನನ್ನನ್ನು ಏಕೆ ತಡೆಯುತ್ತಿದ್ದೀಯ' ಎಂದು ಪೊಲೀಸ್ ಅಧಿಕಾರಿಯನ್ನು ಪ್ರಶ್ನಿಸಿದರು. ಆಗ ಮತ್ತೊಬ್ಬ ಅಧಿಕಾರಿ ಹತ್ತಿರ ಬಂದು, 'ಲಖಿಂಪುರದಲ್ಲಿ ನಿಷೇಧಾಜ್ಞೆ ಹೇರಲಾಗಿದೆ. ಅಲ್ಲಿಗೆ ಹೊರಗಿನವರ ಪ್ರವೇಶ...' ಎಂದು ಓದಿದರು. ಹಿರಿಯ ಅಧಿಕಾರಿ, ಆ ಕಿರಿಯ ಅಧಿಕಾರಿಯನ್ನು ತಡೆದರು.

ಬಘೇಲ್ ಅವರು, 'ಏನಿದೆ ಓದಿ, ಓದಿ ಮುಂದಕ್ಕೆ' ಎಂದರು. ನಂತರ, 'ನನ್ನನ್ನು ಏಕೆ ತಡೆಯುತ್ತಿದ್ದೀರಿ ಎಂಬುದರ ಆದೇಶವೆಲ್ಲಿ? ನಿಷೇಧಾಜ್ಞೆ ಇರುವುದು ಲಖಿಂಪುರದಲ್ಲಿ. ನಾನು ಈಗ ಇರುವುದು ಲಖನೌನಲ್ಲಿ. ನಾನು ಹೋಗುತ್ತಿರುವುದು ಸೀತಾಪುರಕ್ಕೆ. ನೀವು ನನ್ನನ್ನು ಏಕೆ ತಡೆಯುತ್ತೀರಿ' ಎಂದು ಪ್ರಶ್ನಿಸಿದರು.

ನಿಮ್ಮನ್ನು ತಡೆಯುವಂತೆ ಆದೇಶವಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಆಗ ಬಘೇಲ್ ಅವರು 'ಹೌದಾ' ಎಂದು ಹೇಳಿ. ಅಲ್ಲೇ ನೆಲದಮೇಲೆ ಧರಣಿ ಕೂತರು. ಕುರ್ಚಿಯಲ್ಲಿ ಕೂರುವಂತೆ ಅಧಿಕಾರಿಗಳು ಕುರ್ಚಿ ನೀಡಿದರೂ ಅದನ್ನು ನಿರಾಕರಿಸಿದರು. ಹಲವು ಗಂಟೆಗಳ ಕಾಲ ಅವರು ಹಾಗೆಯೇ ಧರಣಿ ಕೂತರು. ಧರಣಿ ನಡೆಸುತ್ತಲೇ ಮಾಧ್ಯಮ ಮಿತ್ರರ ಜತೆ ಫೋನ್ ಮೂಲಕ ಮಾಧ್ಯಮಗೋಷ್ಠಿ ನಡೆಸಿದರು.

ಪ್ರಧಾನಿ ನರೇಂದ್ರ ಮೋದಿ ಲಖನೌನಲ್ಲಿ ಕಾರ್ಯಕ್ರಮ ನಡೆಸುತ್ತಿದ್ದಾರೆ. ಅವರಿಗೆ ನಿಷೇಧಾಜ್ಞೆ ಅನ್ವಯವಾಗುವುದಿಲ್ಲವೇ ಎಂದು ಬಘೇಲ್ ಪ್ರಶ್ನಿಸಿದ್ದಾರೆ.

ಘಟನೆಗೆ ಧರ್ಮದ ಬಣ್ಣ

ರೈತರ ಮೇಲೆ ಜೀಪ್ ನುಗ್ಗಿಸಿದ ಘಟನೆಗೆ ಈಗ ಧರ್ಮ ಮತ್ತು ಜಾತಿಯ ಬಣ್ಣ ನೀಡಲಾಗಿದೆ. ಲಖಿಂಪುರದಲ್ಲಿ ಘಟನೆ ನಡೆದಾಗ ಪ್ರತಿಭಟನೆ ನಡೆಸುತ್ತಿದ್ದವರಲ್ಲಿ ಬಹುತೇಕ ರೈತರು ಸಿಖ್ ಧರ್ಮದವರಾಗಿದ್ದಾರೆ. ಅವರು ಯಾರೂ ಬ್ರಾಹ್ಮಣರಾದ ಅಜಯ್ ಮಿಶ್ರಾ ಅವರಿಗೆ ಮತ ನೀಡುವುದಿಲ್ಲ. ಹೀಗಾಗಿ ಮಿಶ್ರಾ ಅವರು, ಸಿಖ್ ರೈತರ ಮೇಲೆ ಜೀಪ್ ನುಗ್ಗಿಸಿದ್ದಾರೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯಾಗುತ್ತಿದೆ.

ಬಿಜೆಪಿಯ ಹಲವು ಕಾರ್ಯಕರ್ತರು, ಪ್ರತಿಭಟನೆ ನಡೆಸಿದ ರೈತರು ಖಲಿಸ್ತಾನಿಗಳು. ಹೀಗಾಗಿಯೇ ಅವರು ಕೇಂದ್ರ ಸಚಿವರ ವಿರುದ್ಧ ಪ್ರತಿಭಟನೆ ನಡೆಸಿದ್ದಾರೆ. ಈ ಭಯೋತ್ಪಾದಕರ ಹುಟ್ಟಡಗಿಸಬೇಕು. ಅವರ ಮೇಲೆ ಜೀಪ್ ನುಗ್ಗಿಸಿದ್ದು ಸರಿಯಾಗಿಯೇ ಇದೆ ಎಂದು ಸಮರ್ಥಿಸಿಕೊಂಡಿದ್ದಾರೆ.

ರೈತರ ಮೇಲೆ ನುಗ್ಗಿದ ಜೀಪ್‌ನ ಮಾಲೀಕರಾದ ಕೇಂದ್ರ ಸಚಿವ ಅಜಯ್ ಮಿಶ್ರಾ ಸಹ ಇಂತಹದ್ದೇ ಮಾತನ್ನಾಡಿದ್ದಾರೆ. 'ಥಾರ್ ಜೀಪನ್ನು ಅವರು ಉರುಳಿಸಿ ಬೆಂಕಿ ಹಚ್ಚಿದ್ದು, ಫಾರ್ಚೂನರ್‌ಗೆ ಬೆಂಕಿ ಹಚ್ಚಿದ್ದನ್ನು ನೀವೆಲ್ಲಾ ನೋಡಿದ್ದೀರಿ. ಅವರೆಲ್ಲಾ ರೈತರಾಗಿರಲು ಸಾಧ್ಯವೇ ಇಲ್ಲ. ಅವರೆಲ್ಲಾ ಭಯೋತ್ಪಾದಕರು' ಎಂದು ಅವರು ಎನ್‌ಡಿಟಿವಿಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ಉದ್ದೇಶಪೂರ್ವಕವಾಗಿ ರೈತರ ಮೇಲೆ ವಾಹನ ನುಗ್ಗಿಸುವ ಈ ದೃಶ್ಯವು ಎಂತಹವರ ಎದೆಯನ್ನೂ ನಡುಗಿಸುತ್ತದೆ. ತಪ್ಪಿತಸ್ಥರನ್ನು ತಕ್ಷಣವೇ ಬಂಧಿಸಿ

ವರುಣ್ ಗಾಂಧಿ, ಬಿಜೆಪಿ ಸಂಸದ

ಲಖಿಂಪುರದಲ್ಲಿ ರೈತರ ಮೇಲೆ ನುಗ್ಗಿದ ಜೀಪ್ ನನ್ನದೇ. ಆದರೆ ಆಗ ನಾನಾಗಲೀ, ನನ್ನ ಮಗನಾಗಲೀ ಆ ಥಾರ್ ಜೀಪ್ ಅನ್ನು ಚಲಾಯಿಸುತ್ತಿರಲಿಲ್ಲ

ಅಜಯ್ ಮಿಶ್ರಾ, ಕೇಂದ್ರ ಸಚಿವ

ಸಚಿವ ಅಜಯ್ ಮಿಶ್ರಾ ಅವರ ಮಗ ಆಶಿಶ್ ಮಿಶ್ರಾ ಅವರೇ ಜೀಪ್ ಚಲಾಯಿಸುತ್ತಿದ್ದರು. ನಮ್ಮ ಮೇಲೆ ಜೀಪ್ ಹತ್ತಿಸಿದ ನಂತರ, ಗುಂಡು ಹಾರಿಸುತ್ತಾ ಅವರು ಓಡಿ ಹೋದರು

ತೇಜಿಂದರ್ ವಿರ್ಕ್, ಗಾಯಾಳು ರೈತ

'ವರುಣ್ ಕಾಂಗ್ರೆಸ್ ಸೇರಲಿ'

ವರುಣ್ ಗಾಂಧಿ ಅವರು ಈ ವಿಡಿಯೊವನ್ನು ಟ್ವೀಟ್ ಮಾಡಿರುವುದು ಬಿಜೆಪಿಯಲ್ಲಿ ಹಲವರನ್ನು ಕೆರಳಿಸಿದೆ. ಇದೇ ವಿಡಿಯೊವನ್ನು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಮತ್ತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸಹ ಟ್ವೀಟ್ ಮಾಡಿದ್ದಾರೆ. ಇದೂ ಸಹ ಬಿಜೆಪಿಯ ಹಲವರನ್ನು ಕೆರಳಿಸಿದೆ.

ನೆಹರೂ ಕುಟುಂಬದವರಾದ ವರುಣ್ ಗಾಂಧಿ ಅವರು ತಮ್ಮ ನಿಜಬಣ್ಣ ತೋರಿಸಿದ್ದಾರೆ. ಬಿಜೆಪಿ ವಿರುದ್ಧ ಟ್ವೀಟ್ ಮಾಡಿದ್ದಾರೆ. ಅವರು ಬಿಜೆಪಿ ತೊರೆದು ಕಾಂಗ್ರೆಸ್ ಸೇರಲಿ ಎಂದು ಬಿಜೆಪಿಯ ಹಲವು ಕಾರ್ಯಕರ್ತರು ಟ್ವೀಟ್ ಮಾಡಿದ್ದಾರೆ.

ತರಂಗಾಂತರ ಶುಲ್ಕ: ಮರುಪರಿಶೀಲನೆಗೆ ಕೇಂದ್ರ ಸಿದ್ಧ

ನವದೆಹಲಿ: ತರಂಗಾಂತರ ಬಳಕೆಯ ಶುಲ್ಕವಾಗಿ ₹ 40 ಸಾವಿರ ಕೋಟಿ ಮೊತ್ತವನ್ನು ದೂರಸಂಪರ್ಕ ಕಂಪನಿಗಳಿಂದ ವಸೂಲು ಮಾಡುವ ಬಗೆಗಿನ ತನ್ನ ನಿರ್ಧಾರವನ್ನು ಮರುಪರಿಶೀಲಿಸುವುದಾಗಿ ಕೇಂದ್ರ ಸರ್ಕಾರ ಮಂಗಳವಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಬಹುತೇಕ ದೂರಸಂಪರ್ಕ ಕಂಪನಿಗಳು ನಷ್ಟದಲ್ಲಿದ್ದು, ಈ ಶುಲ್ಕ ಪಾವತಿಸುವುದು ಅವುಗಳಿಗೆ ಹೊರೆಯಾಗಬಹುದು. ಇದು ದೂರಸಂಪರ್ಕ ವಲಯದಲ್ಲಿ ಏಕಸ್ವಾಮ್ಯತೆಯ ಸ್ಥಿತಿಯ ಜೊತೆಗೆ ಅರ್ಥವ್ಯವಸ್ಥೆಯ ಮೇಲೆ ಪ್ರತಿಕೂಲ ಪರಿಣಾಮಕ್ಕೂ ಕಾರಣವಾಗಬಹುದು. ಹೀಗಾಗಿ, ಶುಲ್ಕ ವಸೂಲಿಗಾಗಿ ಮಾಡಿದ ಮನವಿಯನ್ನು ಮರುಪರಿಶೀಲಿಸುವುದಾಗಿ ಹೇಳಿತು.

ಕೇಂದ್ರದ ಹೇಳಿಕೆಯಿಂದ ಸಮಾಧಾನವಾಗದ ನ್ಯಾಯಮೂರ್ತಿ ಎಂ.ಆರ್. ಶಾ ನೇತೃತ್ವದ ನ್ಯಾಯಪೀಠ, ಇದು ಸಾರ್ವಜನಿಕ ಹಿತಾಸಕ್ತಿ ಹಾಗೂ ಸಾರ್ವಜನಿಕರ ಹಣವನ್ನು ಒಳಗೊಂಡಿರುವ ವಿಷಯವಾಗಿರುವುದರಿಂದ ಈ ಬಗ್ಗೆ ಕೇಂದ್ರ ಸರ್ಕಾರವು ನ್ಯಾಯಾಲಯ ಒಪ್ಪುವಂಥ ಸಮರ್ಪಕ ಕಾರಣ ನೀಡಬೇಕು ಎಂದು ಸೂಚಿಸಿತು.

ಸರ್ಕಾರವು ನ್ಯಾಯಾಲಯಕ್ಕೆ ತೃಪ್ತಿಕರ ಮಾಹಿತಿ ನೀಡಲಿದೆ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ತಿಳಿಸಿದರು. ಅವರ ಮನವಿ ಮೇರೆಗೆ, ಈ ವಿಷಯದ ಬಗೆಗಿನ ವಿಚಾರಣೆಯನ್ನು ನ್ಯಾಯಾಲಯವು ನ.17ಕ್ಕೆ ನಿಗದಿಪಡಿಸಿತು.

12ರಿಂದ ಸಮಾಜವಾದಿ ವಿಜಯ್ ಯಾತ್ರಾ: ಅಖಿಲೇಶ್ ಘೋಷಣೆ

ಲಖನೌ: 2022ರ ಉತ್ತರಪ್ರದೇಶ ವಿಧಾನಸಭಾ ಚುನಾವಣೆಗೂ ಮುನ್ನ ಜನರೊಂದಿಗೆ ಸಂಪರ್ಕ ಸಾಧಿಸುವ ಗುರಿ ಹೊಂದಿರುವ ಸಮಾಜವಾದಿ ಪಕ್ಷವು (ಎಸ್‌ಪಿ) ಅ. 12ರಿಂದ 'ಸಮಾಜವಾದಿ ವಿಜಯ್ ಯಾತ್ರಾ' ಆರಂಭಿಸಲಿದೆ ಎಂದು ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಮಂಗಳವಾರ ಘೋಷಿಸಿದ್ದಾರೆ.

'ಬಿಜೆಪಿ ಸರ್ಕಾರದ ಭ್ರಷ್ಟ, ನಿರಂಕುಶ ಮತ್ತು ದಮನಕಾರಿ ನೀತಿಗಳ ಬಗ್ಗೆ ಜನರಿಗೆ ಅರಿವು ಮೂಡಿಸುವುದು ಮತ್ತು ನಿಜವಾದ ಪ್ರಜಾಪ್ರಭುತ್ವವನ್ನು ಸ್ಥಾಪಿಸುವುದು ಈ ಯಾತ್ರೆಯ ಉದ್ದೇಶವಾಗಿದೆ' ಎಂದು ಎಸ್‌ಪಿ ವಕ್ತಾರ ರಾಜೇಂದ್ರ ಚೌಧರಿ ತಿಳಿಸಿದ್ದಾರೆ.

ಪಕ್ಷವು ಯಾತ್ರೆಯ ಮಾರ್ಗದ ವಿವರಗಳನ್ನು ಇನ್ನೂ ಹಂಚಿಕೊಂಡಿಲ್ಲ.

ಸುದ್ದಿ 2 ನಿಮಿಷ

ಅರಣ್ಯ ಸಂರಕ್ಷಣಾ ಕಾಯ್ದೆಗೆ ತಿದ್ದುಪಡಿ ತರಲು ಮುಂದಾದ ಪರಿಸರ ಸಚಿವಾಲಯ

ನವದೆಹಲಿ (ಪಿಟಿಐ): ಅರಣ್ಯ ಭೂಮಿಯಲ್ಲಿನ ಗಡಿ ಮೂಲಸೌಕರ್ಯ ಅಭಿವೃದ್ಧಿಗೆ ಸರ್ಕಾರದ ಅನುಮೋದನೆಯ ಅಗತ್ಯ ಕೈಬಿಡಲು ಅರಣ್ಯ ಸಂರಕ್ಷಣಾ ಕಾಯ್ದೆಗೆ ತಿದ್ದುಪಡಿ ತರಲು ಪರಿಸರ ಸಚಿವಾಲಯ ಮುಂದಾಗಿದೆ.

ಇದು ನಿರ್ಣಾಯಕ ಯೋಜನೆಗಳ ಅನುಷ್ಠಾನದಲ್ಲಿ ವಿಳಂಬಕ್ಕೆ ಕಾರಣವಾಗುತ್ತಿತ್ತು ಎಂದು ಸಚಿವಾಲಯ ಸಮರ್ಥನೆ ನೀಡಿದೆ.

ಕಾಯ್ದೆಗೆ ಪ್ರಸ್ತಾವಿತ ತಿದ್ದುಪಡಿಗಳ ಕುರಿತು ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಮತ್ತು ಸಂಬಂಧಪಟ್ಟ ಎಲ್ಲ ಜನರಿಂದ ಸಚಿವಾಲಯವು ಸಲಹೆಗಳನ್ನು ಆಹ್ವಾನಿಸಿದೆ.

'ನಮ್ಮ ಗಡಿಗಳನ್ನು ಹಾಗೆಯೇ ಉಳಿಸಿಕೊಳ್ಳಲು ಮತ್ತು ದೇಶದ ಸಾರ್ವಭೌಮತೆ ಎತ್ತಿಹಿಡಿಯಲು ಅಂತರರಾಷ್ಟ್ರೀಯ ಗಡಿ ಪ್ರದೇಶಗಳಲ್ಲಿ ಮೂಲಸೌಕರ್ಯಗಳ ಅಭಿವೃದ್ಧಿಯು ನಿರ್ಣಾಯಕವಾಗಿದೆ. ಅರಣ್ಯ ಭೂಮಿಯನ್ನು ಅರಣ್ಯೇತರ ಬಳಕೆಗಾಗಿ ಅನುಮೋದನೆ ಪಡೆಯುವಾಗ ಅನೇಕ ಬಾರಿ, ರಾಷ್ಟ್ರೀಯ ಮಹತ್ವದ ಕಾರ್ಯತಂತ್ರದ ಮತ್ತು ಭದ್ರತಾ ಯೋಜನೆಗಳು ವಿಳಂಬವಾಗುತ್ತವೆ. ನಿರ್ಣಾಯಕ ಸ್ಥಳಗಳಲ್ಲಿ ಇಂತಹ ಮೂಲಸೌಕರ್ಯಗಳ ಅಭಿವೃದ್ಧಿಗೂ ಹಿನ್ನಡೆಯಾಗುತ್ತದೆ' ಎಂದಿರುವ ಸಚಿವಾಲಯವು, ಅಂತಹ ಯೋಜನೆಗಳಿಗೆ ಕಾಯ್ದೆಯ ಅಡಿಯಲ್ಲಿ ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆಯುವುದರಿಂದ ವಿನಾಯಿತಿ ನೀಡಬೇಕೆಂಬ ಪ್ರಸ್ತಾವ ಇಟ್ಟಿದೆ.

ಎಲ್‌ಜೆಪಿ ವಿವಾದ: ಚಿರಾಗ್, ಪರಾಸ್ ಬಣಗಳಿಗೆ ಪ್ರತ್ಯೇಕ ಚಿಹ್ನೆ

ನವದೆಹಲಿ (ಪಿಟಿಐ): ಚಿರಾಗ್ ಪಾಸ್ವಾನ್ ಮತ್ತು ಪಶುಪತಿ ಕುಮಾರ್ ಪರಾಸ್ ಅವರ ಬಣಗಳಿಗೆ ಪ್ರತ್ಯೇಕ ಹೆಸರು ಮತ್ತು ಚುನಾವಣಾ ಚಿಹ್ನೆಗಳನ್ನು ಚುನಾವಣಾ ಆಯೋಗ ಮಂಗಳವಾರ ನೀಡಿದೆ.

ಚಿರಾಗ್ ಪಾಸ್ವಾನ್ ಗುಂಪಿಗೆ 'ಲೋಕ ಜನಶಕ್ತಿ ಪಕ್ಷ (ರಾಮ್ ವಿಲಾಸ್)' ಮತ್ತು ಚುನಾವಣಾ ಚಿಹ್ನೆಯಾಗಿ 'ಹೆಲಿಕಾಪ್ಟರ್' ಅನ್ನು ನಿಗದಿಪಡಿಸಲಾಗಿದ್ದರೆ, ಪರಾಸ್ ಗುಂಪಿಗೆ 'ರಾಷ್ಟ್ರೀಯ ಲೋಕ ಜನಶಕ್ತಿ ಪಕ್ಷ' ಹಾಗೂ ಚಿಹ್ನೆಯಾಗಿ 'ಹೊಲಿಗೆ ಯಂತ್ರ'ವನ್ನು ನಿಗದಿಪಡಿಸಲಾಗಿದೆ.

ಎರಡೂ ಗುಂಪಿನ ನಡುವಿನ ವಿವಾದ ಬಗೆಹರಿಯುವ ತನಕ 'ಲೋಕ ಜನಶಕ್ತಿ ಪಕ್ಷ' ಮತ್ತು ಅದರ ಚಿಹ್ನೆಯಾದ 'ಬಂಗಲೆ'ಯನ್ನು ಬಳಸದಂತೆ ಚುನಾವಣಾ ಆಯೋಗ ಇತ್ತೀಚೆಗೆ ಮಧ್ಯಂತರ ಆದೇಶ ಹೊರಡಿಸಿತ್ತು.

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು
ಪಾಡ್‌ಕಾಸ್ಟ್: ಈದಿನದ ವಿಶೇಷ: ಸಂಜೆ 4 **ಝಣ ಝಣ ಕಾಂಚಾಣ,** ಪ್ರತೀ ದಿನ: ಬೆಳಿಗ್ಗೆ 7 **ವಚನವಾಣಿ,** ಬೆ. 7.30 **ದಿನದ ಸೂಕ್ತಿ,** ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 **ಪ್ರಜಾವಾಣಿ ವಾರ್ತೆ ಬುಲೆಟಿನ್,** ಬೆಳಿಗ್ಗೆ 9.30 **ಸಂಪಾದಕೀಯ,** ಬೆಳಿಗ್ಗೆ 9 **ಪ್ರಚಲಿತ**
ಪ್ರಜಾವಾಣಿ ಕನ್ನಡ ಧ್ವನಿ

ನಾಳೆ
ದೆಹಲಿಯ ರೈತ ಚಳವಳಿ ದಿಕ್ಕು ತಪ್ಪುತ್ತಿದೆಯೇ?
ಭಾಗವಹಿಸುವವರು:
ಪುರುಷೋತ್ತಮ ಬಿಳಿಮಲೆ, ನಿವೃತ್ತ ಪ್ರಾಧ್ಯಾಪಕ, ಜೆಎನ್‌ಯು ದೆಹಲಿ. **ಅಶ್ವತ್ಥನಾರಾಯಣ ಗೌಡ,** ರಾಜ್ಯ ಪ್ರಧಾನ ಕಾರ್ಯದರ್ಶಿ, ಬಿಜೆಪಿ. **ಬೃಜೇಶ್ ಕಾಳಪ್ಪ,** ಕೆಪಿಸಿಸಿ ವಕ್ತಾರ. **ಆಶಾ ಕೃಷ್ಣಸ್ವಾಮಿ,** ಹಿರಿಯ ಪತ್ರಕರ್ತೆ
ಸಂವಾದ ಮಧ್ಯಾಹ್ನ 12 ರಿಂದ 1

ಗಾಂಧಿನಗರ ಪುರಸಭೆ ಚುನಾವಣೆ: ಬಿಜೆಪಿಗೆ ಗೆಲುವು

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಗಾಂಧಿನಗರದ ಮುನ್ಸಿಪಲ್ ಕಾರ್ಪೊರೇಷನ್ (ಜಿಎಂಸಿ) ಚುನಾವಣೆಯಲ್ಲಿ ಬಿಜೆಪಿ ಮಂಗಳವಾರ ಒಟ್ಟು 44 ಸ್ಥಾನಗಳಲ್ಲಿ 41 ಸ್ಥಾನ ಪಡೆಯುವ ಮೂಲಕ ಭಾರಿ ಬಹುಮತದ ಗೆಲುವು ಸಾಧಿಸಿದೆ.

2010ರಲ್ಲಿ ಜಿಎಂಸಿ ಅಸ್ತಿತ್ವಕ್ಕೆ ಬಂದ ನಂತರ ಆಡಳಿತಾರೂಢ ಬಿಜೆಪಿಗೆ ದೊರೆತ ದೊಡ್ಡಮಟ್ಟದ ಸ್ಪಷ್ಟಬಹುಮತ ಇದಾಗಿದೆ. ಕಾಂಗ್ರೆಸ್ ಮತ್ತು ಆಮ್ ಆದ್ಮಿ ಪಕ್ಷ (ಎಎಪಿ) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿವೆ.

ಗಾಂಧಿನಗರವಲ್ಲದೆ ದೇವ್‌ಭೂಮಿ ದ್ವಾರಕಾದ ಓಖಾ ಪುರಸಭಾ ಚುನಾವಣೆಯಲ್ಲೂ ಬಿಜೆಪಿ ಭಾರಿ ಬಹುಮತ ಗಳಿಸಿ ಗೆಲುವು ಸಾಧಿಸಿದೆ. ಒಟ್ಟು 36 ಸ್ಥಾನಗಳ ಪೈಕಿ 34 ಸ್ಥಾನಗಳನ್ನು ಬಿಜೆಪಿ ಪಡೆದಿದೆ. ಅಂತೆಯೇ ಬನಸ್ಕಾಂತಾದ ಥಾರಾ ಪುರಸಭೆಯಲ್ಲಿ ಬಿಜೆಪಿಯು 24 ಸ್ಥಾನಗಳನ್ನು ಪಡೆದರೆ ಕಾಂಗ್ರೆಸ್ 4 ಸ್ಥಾನಗಳನ್ನು ಗಳಿಸಿದೆ. ದೇವ್‌ಭೂಮಿ ದ್ವಾರಕಾದ ಭನ್ವಾಡ್ ಪುರಸಭೆಯಲ್ಲಿ ಒಟ್ಟು 24 ಸ್ಥಾನಗಳ ಪೈಕಿ ಕಾಂಗ್ರೆಸ್ 16 ಸ್ಥಾನ ಗಳಿಸಿ ಗೆಲುವು ಸಾಧಿಸಿದ್ದು, ಬಿಜೆಪಿ 8 ಸ್ಥಾನಗಳನ್ನು ಪಡೆಯುವಲ್ಲಿ ಸಫಲವಾಗಿದೆ.

ರಾಜ್ಯ ಚುನಾವಣಾ ಆಯೋಗ ನೀಡಿದ ಅಂಕಿ– ಅಂಶಗಳ ಪ್ರಕಾರ, 84 ಪುರಸಭೆಗಳಿಗೆ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ, ಬಿಜೆಪಿ 62ರಲ್ಲಿ ಗೆದ್ದರೆ, ಕಾಂಗ್ರೆಸ್ 22 ಸ್ಥಾನಗಳಿಗೆ ಸೀಮಿತವಾಗಿದೆ. ಅದೇ ರೀತಿ, 44 ಪುರಸಭೆ ಸ್ಥಾನಗಳಿಗೆ ನಡೆದ ಉಪಚುನಾವಣೆಯಲ್ಲಿ, ಬಿಜೆಪಿ 37 ಮತ್ತು ಕಾಂಗ್ರೆಸ್ ಕೇವಲ 3ರಲ್ಲಿ ಗೆದ್ದಿದೆ. ಒಟ್ಟಾರೆಯಾಗಿ, ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿಜೆಪಿ 175 ಸ್ಥಾನಗಳನ್ನು ಗೆದ್ದರೆ, ಕಾಂಗ್ರೆಸ್ 45 ಹಾಗೂ ಇತರ ಪಕ್ಷಗಳು 9 ಸ್ಥಾನಗಳನ್ನು ಗಳಿಸಿವೆ.

2022ರ ವಿಧಾನಸಭಾ ಚುನಾವಣೆಯನ್ನು ಗುರಿಯಾಗಿಟ್ಟುಕೊಂಡು ಬಿಜೆಪಿಯು ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ತನ್ನ ಗೆಲುವಿನ ಹಾದಿಯನ್ನು ಮುನ್ನಡೆಸುತ್ತಿದೆ. ಕಾಂಗ್ರೆಸ್ ಮತ್ತಷ್ಟು ದುರ್ಬಲವಾಗಿದೆ. ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ನೇತೃತ್ವದ ಎಎಪಿಗೆ ಅತಿದೊಡ್ಡ ಹಿನ್ನಡೆಯಾಗಿದೆ. ಎಎಪಿಯು ಕೇವಲ ಒಂದು ಸ್ಥಾನ ಮಾತ್ರ ಗಳಿಸಿದೆ.

'ನಾವು ಚುನಾವಣೆಯಲ್ಲಿ ಸೋತಿದ್ದರೂ, ಭವಿಷ್ಯದಲ್ಲಿ ನಿಜವಾದ ಹೋರಾಟ ಬಿಜೆಪಿ ಮತ್ತು ಎಎಪಿ ನಡುವೆ ಇರುತ್ತದೆ ಎಂಬುದು ಮತ್ತೊಮ್ಮೆ ಸಾಬೀತಾಗಿದೆ. ನಮ್ಮ ಮತ ಹಂಚಿಕೆಯು ನಾವು ಕಾಂಗ್ರೆಸ್ ಅನ್ನು ಹೇಗೆ ಸೋಲಿಸಿದ್ದೇವೆ ಎನ್ನುವುದನ್ನು ಹೇಳುತ್ತದೆ' ಎಂದು ಗುಜರಾತ್‌ನ ಎಎಪಿಯ ಅಧ್ಯಕ್ಷ ಗೋಪಾಲ್ ಇಟಾಲಿಯಾ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

'ರಾಜ್ಯದಲ್ಲಿ ಮೂರನೇ ಪಕ್ಷಕ್ಕೆ ಸ್ಥಾನವಿಲ್ಲ ಎಂದು ಮತದಾರರು ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ' ಎಂದು ಎಎಪಿಯನ್ನು ಗುರಿಯಾಗಿಸಿಕೊಂಡು ಗುಜರಾತ್‌ನ ಬಿಜೆಪಿಯ ಅಧ್ಯಕ್ಷ ಸಿ.ಆರ್. ಪಾಟೀಲ್ ಪ್ರತಿಕ್ರಿಯೆ ನೀಡಿದ್ದಾರೆ.

ಬಿಜೆಪಿಗೆ ಬಹುಮತ: ಧನ್ಯವಾದ ಸಲ್ಲಿಸಿದ ಬಿಜೆಪಿ ರಾಷ್ಟ್ರ ಅಧ್ಯಕ್ಷ ನಡ್ಡಾ

ನವದೆಹಲಿ: 'ಗುಜರಾತ್ ಸ್ಥಳೀಯ ಸಂಸ್ಥೆಗಳ ಚುನಾವಣೆ ಮತ್ತು ಗಾಂಧಿನಗರ ಮುನ್ಸಿಪಲ್ ಕಾರ್ಪೊರೇಷನ್ ಚುನಾವಣೆಯಲ್ಲಿ ಬಿಜೆಪಿಯು ಭಾರೀ ಬಹುಮತವನ್ನು ಗಳಿಸಿದೆ. ಗುಜರಾತಿನ ಜನರ ನಿರಂತರ ಬೆಂಬಲ ಮತ್ತು ಆಶೀರ್ವಾದಕ್ಕಾಗಿ ನಾನು ಧನ್ಯವಾದ ಸಲ್ಲಿಸುತ್ತೇನೆ' ಎಂದು ಬಿಜೆಪಿ ರಾಷ್ಟ್ರ ಘಟಕದ ಅಧ್ಯಕ್ಷ ಜೆ.ಪಿ. ನಡ್ಡಾ ಮಂಗಳವಾರ ಟ್ವೀಟ್ ಮಾಡಿದ್ದಾರೆ.

'ಈ ಅಭೂತಪೂರ್ವ ಗೆಲುವಿಗಾಗಿ ಮುಖ್ಯಮಂತ್ರಿ ಭೂಪೇಂದ್ರ ಅವರಿಗೂ ಹಾಗೂ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸಿ.ಆರ್. ಪಾಟೀಲ್ ಅವರಿಗೂ ಹಾಗೂ ಪಕ್ಷದ ಕಾರ್ಯಕರ್ತರನ್ನು ಅಭಿನಂದಿಸುತ್ತೇನೆ' ಎಂದೂ ಅವರು ಟ್ವೀಟ್‌ನಲ್ಲಿ ತಿಳಿಸಿದ್ದಾರೆ.

'ಈ ಫಲಿತಾಂಶವು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನಾಯಕತ್ವ ಹಾಗೂ ಬಿಜೆಪಿ ಕಲ್ಯಾಣ ನೀತಿಗಳಲ್ಲಿ ಜನರಿಗೆ ಇರುವ ವಿಶ್ವಾಸವನ್ನು ತೋರಿಸುತ್ತದೆ. ರಾಜ್ಯದ ಸುಸ್ಥಿರ ಅಭಿವೃದ್ಧಿಗೆ ಮತ್ತು ಜನರಿಗೆ ನೀಡಿದ ಎಲ್ಲ ಭರವಸೆಗಳನ್ನು ಈಡೇರಿಸಲು ಬಿಜೆಪಿ ಸರ್ಕಾರವು ಬದ್ಧವಾಗಿದೆ ಎಂದು ನಾನು ಮತ್ತೊಮ್ಮೆ ಭರವಸೆ ನೀಡುತ್ತೇನೆ' ಎಂದೂ ನಡ್ಡಾ ಅವರು ಮತ್ತೊಂದು ಟ್ವೀಟ್‌ನಲ್ಲಿ ಹೇಳಿದ್ದಾರೆ.

ಮಹಾಲಯ ಅಮಾವಾಸ್ಯೆ: ಪಿತೃಗಳ ದಿನ

• ಹಿತ್ಲಳ್ಳಿ ಸೂರ್ಯನಾರಾಯಣ ಭಟ್ಟ

ಮಹಾಲಯ ತರ್ಪಣ

ಪ್ರತಿವರ್ಷವೂ ಭಾದ್ರಪದ ಮಾಸದ ಕೃಷ್ಣಪಕ್ಷದಲ್ಲಿ ಮಹಾಲಯವನ್ನು ಪಿತೃಗಳ ಪ್ರಸನ್ನತೆಗಾಗಿ ಆಚರಿಸಲಾಗುತ್ತದೆ. ಅದು ಮಹಾಲಯ ಅಮಾವಾಸ್ಯೆ ಯಂದು (ಈ ವರ್ಷ ಅಕ್ಟೋಬರ್ ಆರರಂದು) ಕೊನೆಗೊಳ್ಳಲಿದೆ. ಇದಕ್ಕೆ ಮಹಾಭಾರತದ ಒಂದು ಉದಾಹರಣೆಯಿದೆ.

ಕರ್ಣನು ನಿಜವಾಗಿ ಕ್ಷತ್ರಿಯ ಕುಲದವನಾದರೂ ಅವನು ರಾಧೇಯನಾಗಿ ಬೆಳೆದಿದ್ದಾನೆ. ತಂದೆ ತಾಯಿ ಯಾರು ಎಂಬುದೇ ಅವನಿಗೆ ತಿಳಿದಿರುವುದಿಲ್ಲ. ಇದರ ಪರಿಣಾಮವಾಗಿ, ರಾಜನೇ ಆದರೂ, ಪಿತೃಕರ್ಮಗಳನ್ನು ಮಾಡಲು ಸಾಧ್ಯವಾಗಲಿಲ್ಲ. ಜೀವನದ ಸಂಧ್ಯೆಯಲ್ಲಿ ನಿಜವಾದ ಹಿನ್ನೆಲೆಯ ಪರಿಚಯವಾದರೂ ಅದಕ್ಕೆ ರಾಜಕೀಯದ ಬಣ್ಣವಿತ್ತು. ಸ್ವತಃ ಶ್ರೀಕೃಷ್ಣನೇ ಹೇಳಲಿ, ಕುಂತಿಯು ಬಂದು ಮಗನೆಂದು ಗೋಳಾಡಲಿ, ಅದೆಲ್ಲಾ ಯುದ್ಧತಂತ್ರವೆಂದೇ ಊಹಿಸಬೇಕಾದ ಅನಿವಾರ್ಯತೆ ಕರ್ಣನಿಗಿತ್ತು. ಯುದ್ಧದಲ್ಲಿ ವೀರೋಚಿತವಾದ ಮರಣವನ್ನಪ್ಪಿದ ಕರ್ಣನು ಸಹಯೋಧರೊಂದಿಗೆ ಸ್ವರ್ಗಲೋಕಕ್ಕೆ ಹೋದರೆ ಅವನಿಗೆ ಅಚ್ಚರಿ ಕಾದಿತ್ತು. ಎಲ್ಲರಿಗೂ ಷಡ್ರಸೋಪೇತವಾದ ಆಹಾರವನ್ನು ನೀಡಿದರೆ, ಕರ್ಣನಿಗೆ ಕೇವಲ ಚಿನ್ನದ ಆಭರಣಗಳನ್ನು ನೀಡಲಾಗುತ್ತಿತ್ತು. ಉಳಿದವರೆಲ್ಲರೂ ಅನ್ನದಾನ ಮಾಡಿ ಪಿತೃಗಳನ್ನು ಪ್ರಸನ್ನಗೊಳಿಸಿದ್ದರು. ಆದರೆ ಕರ್ಣನಿಗೆ ಆ ಭಾಗ್ಯವಿರಲಿಲ್ಲ. ಅವನಿಗೆ ತನ್ನ ಪಿತೃಪಿತಾಮಹಾದಿಗಳ ಹೆಸರೇ ಬಹಳ ವರ್ಷಗಳ ವರೆಗೆ ಗೊತ್ತಿರಲಿಲ್ಲ. ಅವನು ದಾನಶೂರನೇ ಆಗಿದ್ದರೂ, ಧಾರಾಳವಾಗಿ ಬೆಳ್ಳಿ – ಬಂಗಾರ ದಾನ ಮಾಡಿದ್ದರೂ, ಅನ್ನದಾನ ಮಾಡಿರಲಿಲ್ಲ. ಅದನ್ನು ಅವನು ಸ್ವರ್ಗಲೋಕದ ಅಧಿಪತಿಯಾದ ಇಂದ್ರನಲ್ಲಿ ವಿಜ್ಞಾಪಿಸಿದ ಮೇಲೆ ಇಂದ್ರನು ಕರ್ಣನಿಗೆ ಹದಿನೈದು ದಿನಗಳ ಅವಕಾಶ ನೀಡಿ, ಪಿತೃಶ್ರಾದ್ಧಾದಿಗಳನ್ನು ಪೂರೈಸಿ ಬರುವಂತೆ ಆದೇಶಿಸಿದ. ಕರ್ಣನಿಗೆ ದೊರೆತ ಹದಿನೈದು ದಿನಗಳೇ ಮಹಾಲಯ ಎಂದು ಪ್ರಸಿದ್ಧವಾಗಿವೆ.

ಈ ದಂತಕತೆಯನ್ನು ಅರ್ಥೈಸಿದರೆ, ಗಮನಾರ್ಹವಾದ ಕೆಲವು ಅಂಶಗಳು ಹೊಳೆಯುತ್ತವೆ. ಒಂದು, ಈ ದಿನಗಳಲ್ಲಿ ಅಪರಿಚಿತರಾದ ಪಿತೃಗಳಿಗೂ ಶ್ರಾದ್ಧವನ್ನು ಮಾಡಬಹುದಾದ ಸದವಕಾಶವಾದರೆ, ಜಾತಿ–ನೀತಿಗಳೆಲ್ಲವನ್ನೂ ಮೀರಿ, ಗತಿಸಿದ ಬಾಂಧವರಿಗೆ ಸಂತೋಷವನ್ನು ಉಂಟುಮಾಡುವುದು ಇನ್ನೊಂದು. ಜನರು ಗತಿಸಿದವರಿಗೆ ಕೃತಜ್ಞರಾಗಿರುವುದು ನಿಜವೇ ಆದರೂ ಜೀವನದ ಬಿರುಗಾಳಿಗೆ ಸಿಲುಕಿ ಏನನ್ನೂ ಮಾಡಲು ಸಾಧ್ಯವಾಗದಿರಬಹುದು. ಹೆಣ್ಣು ಗಂಡನ ಮನೆಯ ಪರಿಸರಕ್ಕೆ ಹೊಂದಿಕೊಳ್ಳಬೇಕಾಗುವುದರಿಂದ, ತನ್ನ ಮಕ್ಕಳ ಲಾಲನೆ–ಪೋಷಣೆ ಮಾಡಬೇಕಾಗಿರುವುದರಿಂದ ತಂದೆ-ತಾಯಿಯ ಅಪೇಕ್ಷೆಯನ್ನು ಪೂರ್ಣಗೊಳಿಸುವುದು ಕೆಲವೊಮ್ಮೆ ಸಾಧ್ಯವಾಗಲಾರದು. ಇಂತಹ ಸನ್ನಿವೇಶಗಳಲ್ಲಿ ಮಹಾಲಯ ಶ್ರಾದ್ಧ ಎಲ್ಲರನ್ನೂ ಪ್ರಸನ್ನಗೊಳಿಸುವ ಸುಲಭೋಪಾಯವಾಗುತ್ತದೆ. ಅದರ ಅನುಷ್ಠಾನದಿಂದ ಗೊತ್ತಿರಲಿ, ಗೊತ್ತಿಲ್ಲದಿರಲಿ – ಗತಿಸಿದವರೆಲ್ಲರಿಗೂ ಅನ್ನ-ನೀರು ದೊರೆಯುತ್ತದೆ. ಇಲ್ಲಿ ಅನ್ನ-ನೀರು ಕೊಟ್ಟರೆ ಮಾತ್ರ ಪರಲೋಕದಲ್ಲಿ ಅದು ಲಭಿಸುತ್ತದೆ. ಇದು ಯಾವುದೋ ಒಂದು ಜಾತಿಗೆ ಸೀಮಿತವಾದುದಲ್ಲ.

ಇದಕ್ಕೆ ಬೇಕಾದುದು ಜಾತಿಯಲ್ಲ, ಶ್ರದ್ಧೆ. ಶ್ರದ್ಧೆಯಿಲ್ಲದೆ ಇದನ್ನು ಮಾಡಿದರೂ ಫಲವಿಲ್ಲ. ಈ ಕಾರಣದಿಂದಲೇ ಇದನ್ನು ಶ್ರಾದ್ಧವೆನ್ನುತ್ತಾರೆ. ಅದನ್ನು ಮಂತ್ರ ಸಹಿತವಾಗಿ ಮಾಡುವಂತೆ, ಮಂತ್ರವಿಲ್ಲದೆಯೂ ಮಾಡುತ್ತಾರೆ. ತಾವೇ ಮಾಡಲು ಸಾಧ್ಯವಿಲ್ಲದಿದ್ದರೆ, ಬೇರೆಯವರಿಂದಲೂ ಮಾಡಿಸುತ್ತಾರೆ.

ಈ ಪಕ್ಷದ ಒಂದೊಂದು ದಿನದಲ್ಲಿಯೂ ಶ್ರಾದ್ಧವನ್ನು ಮಾಡಬಹುದಾದರೂ ಅಮಾವಾಸ್ಯೆಯು ಅತ್ಯಂತ ಶ್ರೇಷ್ಠವೆನ್ನಲಾಗಿದೆ. ಅದು ಸರ್ವ ಪಿತೃ ಅಮಾವಾಸ್ಯೆ. ಅಂದರೆ, ಎಲ್ಲಾ ಪಿತೃಗಳ ತಿಥಿ. ಅದು ಎಲ್ಲಾ ಮಾತೃಗಳ ತಿಥಿಯೂ ಹೌದು. ಅಂದು ತಮ್ಮ ವಂಶದ ಗತಿಸಿದವರೆಲ್ಲರಿಗೂ ಒಂದೇ ಪ್ರಯತ್ನದಿಂದ ಶ್ರಾದ್ಧ ಮಾಡಬಹುದು. ಅದಕ್ಕೆ ಪ್ರತಿಯಾಗಿ ಪಿತೃಗಳು ಆರೋಗ್ಯವನ್ನೂ ಆಯುಷ್ಯವನ್ನೂ ಸಂಪತ್ತನ್ನೂ ಸಂತಾನವನ್ನೂ ದಯಪಾಲಿಸುತ್ತಾರೆ ಎಂದು ಪುರಾಣಗಳಲ್ಲಿದೆ.

ಮಹಾಲಯ ಅಮಾವಾಸ್ಯೆಯಂದು ಶ್ರಾದ್ಧ ಮಾಡಿದರೆ ಗಯೆಯಲ್ಲಿ ಶ್ರಾದ್ಧ ಮಾಡಿದ ಫಲ ಬರುತ್ತದೆ ಎನ್ನಲಾಗಿದೆ. ವಾರ್ಷಿಕ ಶ್ರಾದ್ಧ ಮಾಡಲು ಮರೆತು ಹೋದರೆ, ಅಥವಾ ಸಾಧ್ಯವಾಗದಿದ್ದರೆ, ಆ ದಿನ ಶ್ರಾದ್ಧ ಮಾಡಿ ಪಿತೃಗಳನ್ನು ಸಂತುಷ್ಟಿಗೊಳಿಸಬಹುದು.

ವಿದ್ಯುತ್: ನಾಲ್ಕು ದಿನಕ್ಕಾಗುವಷ್ಟು ಮಾತ್ರ ಕಲ್ಲಿದ್ದಲು ದಾಸ್ತಾನು

ನವದೆಹಲಿ (ಪಿಟಿಐ): ದೇಶದ 64 ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಕೇವಲ ನಾಲ್ಕು ದಿನಗಳಿಗೆ ಸಾಕಾಗುವಷ್ಟು ಕಲ್ಲಿದ್ದಲು ಸಂಗ್ರಹವಿದೆ. 25 ಉಷ್ಣ ಸ್ಥಾವರಗಳಲ್ಲಿ ಕೇವಲ 7 ದಿನಗಳಿಗೆ ಸಾಕಾಗುವಷ್ಟು ಕಲ್ಲಿದ್ದಲು ಸಂಗ್ರಹವಿದೆ. ಸಂಗ್ರಹ ಮುಗಿದರೆ, ವಿದ್ಯುತ್ ಉತ್ಪಾದನೆ ಮತ್ತು ಪೂರೈಕೆ ಸ್ಥಗಿತವಾಗುತ್ತದೆ ಎಂದು ಕೇಂದ್ರೀಯ ವಿದ್ಯುತ್ ಪ್ರಾಧಿಕಾರವು ಹೇಳಿದೆ.

ಕಲ್ಲಿದ್ದಲು ಗಣಿಗಳಿರುವ ಪ್ರದೇಶದಲ್ಲಿ ಆಗಸ್ಟ್ ಮತ್ತು ಸೆಪ್ಟೆಂಬರ್ ನಲ್ಲಿ ಭಾರಿ ಮಳೆಯಾಗಿದೆ. ಆ ಅವಧಿಯಲ್ಲಿ ಕಲ್ಲಿದ್ದಲು ತೆಗೆಯಲು ಸಾಧ್ಯವಾಗಿಲ್ಲ. ಹೀಗಾಗಿ ಉಷ್ಣ ವಿದ್ಯುತ್ ಸ್ಥಾವರಗಳಿಗೆ ಕಲ್ಲಿದ್ದಲು ಪೂರೈಕೆಯಾಗಿಲ್ಲ. ಇರುವ ಕಲ್ಲಿದ್ದಲನ್ನೇ ಪೂರ್ಣ ಪ್ರಮಾಣದಲ್ಲಿ ಬಳಕೆ ಮಾಡಿರುವ ಕಾರಣ, ಕಲ್ಲಿದ್ದಲಿನ ಸಂಗ್ರಹ ಮುಗಿಯುತ್ತಾ ಬಂದಿದೆ. ಸೆಪ್ಟೆಂಬರ್ ಕೊನೆಯ ವಾರದಲ್ಲಿ ಕಲ್ಲಿದ್ದಲಿನ ಉತ್ಪಾದನೆ ಸಾಮಾನ್ಯ ಸ್ಥಿತಿಗೆ ಮರಳಿದೆ. ಆದರೆ, ಹಲವು ಉಷ್ಣ ವಿದ್ಯುತ್ ಸ್ಥಾವರಗಳು ಗಣಿಗಳಿಂದ 1,500 ಕಿ.ಮೀ.ಗೂ ಹೆಚ್ಚು ದೂರವಿರುವ ಕಾರಣ, ಪೂರೈಕೆ ಸಾಧ್ಯವಾಗಿಲ್ಲ ಎಂದು ಪ್ರಾಧಿಕಾರವು ತಿಳಿಸಿದೆ.

2–3 ದಿನದಲ್ಲಿ ಸಹಜ ಸ್ಥಿತಿಗೆ?: ದೇಶದ ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಮುಂದಿನ 2–3 ದಿನಗಳಲ್ಲಿ ಕಲ್ಲಿದ್ದಲು ದಾಸ್ತಾನು ಪ್ರಮಾಣವು ಏರಿಕೆಯಾಗುತ್ತ ಹೋಗಲಿದೆ ಎಂದು ಕಲ್ಲಿದ್ದಲು ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ದೇಶದಾದ್ಯಂತ ವಿವಿಧೆಡೆ ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಕಲ್ಲಿದ್ದಲು ಕೊರತೆ ಕಾಡುತ್ತಿರುವಂತೆಯೇ ಈ ಹೇಳಿಕೆ ಹೊರಬಿದ್ದಿದೆ. ‘ಸೋಮವಾರದಿಂದ ಪರಿಸ್ಥಿತಿ ಸುಧಾರಿಸುತ್ತಿದೆ. 2–3 ದಿನದಲ್ಲಿ ಸರಿಹೋಗಲಿದೆ. ದಾಸ್ತಾನು ಪ್ರಮಾಣ ಏರಿಕೆಯಾಗಲಿದೆ’ ಎಂದು ಹೇಳಿದರು.

ಕೋಲ್ ಇಂಡಿಯಾ (ಸಿಐಎಲ್) ಅಧಿಕಾರಿಯೊಬ್ಬರ ಪ್ರಕಾರ, ಸದ್ಯ ವಿವಿಧ ಉಷ್ಣ ವಿದ್ಯುತ್ ಸ್ಥಾವರಗಳಿಗೆ ನಿತ್ಯ 14 ಲಕ್ಷ ಟನ್ ಕಲ್ಲಿದ್ದಲು ಪೂರೈಕೆ ಆಗುತ್ತಿದೆ. ಇದನ್ನು ಹೆಚ್ಚಿಸಲಿದ್ದು, ಕೆಲವೇ ದಿನಗಳಲ್ಲಿ ಈ ಪ್ರಮಾಣ 15 ಲಕ್ಷ ಟನ್‌ಗೆ ಏರಿಕೆಯಾಗಲಿದೆ.

ಕೋಲ್ ಇಂಡಿಯಾ ಲಿಮಿಟೆಡ್ ಸಂಸ್ಥೆಯು ದೇಶೀಯವಾಗಿ ಶೇ 80ರಷ್ಟು ಪ್ರಮಾಣದಷ್ಟು ಕಲ್ಲಿದ್ದಲು ಪೂರೈಸಲಿದೆ. ಅಲ್ಲದೆ, ವಿದ್ಯುತ್ ಸ್ಥಾವರಗಳು ಕಳೆದ ಅಕ್ಟೋಬರ್ ತಿಂಗಳಿನಿಂದ ಇದೇ ವರ್ಷದ ಫೆಬ್ರುವರಿ ತಿಂಗಳವರೆಗೂ ಕಲ್ಲಿದ್ದಲು ಎತ್ತುವರಿ ಮಾಡಿಲ್ಲ. ಉಷ್ಣ ವಿದ್ಯುತ್ ಸ್ಥಾವರಗಳು ತಮ್ಮಲ್ಲಿದ್ದ ದಾಸ್ತಾನನ್ನೇ ಬಳಕೆ ಮಾಡುತ್ತಿದ್ದವು. 22 ದಿನಕ್ಕಾಗುವಷ್ಟು ಕಲ್ಲಿದ್ದಲು ದಾಸ್ತಾನು ಇರಬೇಕು ಎಂಬ ಮಾರ್ಗದರ್ಶಿ ಸೂತ್ರಗಳನ್ನು ಪಾಲಿಸುತ್ತಿರಲಿಲ್ಲ. ವಿದ್ಯುತ್‌ಗೆ ಬೇಡಿಕೆ ಹೆಚ್ಚಿದಂತೆ, ಕಲ್ಲಿದ್ದಲ್ಲಿಗೂ ಬೇಡಿಕೆ ಏರಿಕೆಯಾಗಿದೆ ಎಂದು ತಿಳಿಸಿದರು.

ಒಮ್ಮೆ ಪರಿಸ್ಥಿತಿ ಕೈಮೀರಲು ಆರಂಭಿಸಿದಂತೆ ಉಷ್ಣ ವಿದ್ಯುತ್ ಸ್ಥಾವರಗಳು ಕೋಲ್ ಇಂಡಿಯಾ ಸಂಸ್ಥೆಯತ್ತ ಬೆರಳು ತೋರಿಸುತ್ತಿವೆ ಎಂದು ಅಧಿಕಾರಿ ತಿಳಿಸಿದರು. ಸಂಸ್ಥೆಯು ಬೇಡಿಕೆಗೆ ಸ್ಪಂದಿಸಲು ಯತ್ನಿಸುತ್ತಿದೆ. ಇದಕ್ಕೆ ಕಾಲಾವಕಾಶಬೇಕು ಎಂದು ಹೇಳಿದರು.

ಸಿಐಎಲ್ ನಿರ್ದೇಶಕ (ಮಾರುಕಟ್ಟೆ) ಎಸ್.ಎನ್.ತಿವಾರಿ ಅವರು, ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಕಲ್ಲಿದ್ದಲು ದಾಸ್ತಾನು ಹೆಚ್ಚಿಸುವ ಹೊಣೆ ಸಂಸ್ಥೆಯದು. ನಾವು ಸಹಜ ಸ್ಥಿತಿಗೆ ತರಲು ಯತ್ನಿಸುತ್ತಿದ್ದೇವೆ. ಸದ್ಯ, ಪೂರೈಕೆಗಿಂತಲೂ ಬೇಡಿಕೆ ಹೆಚ್ಚಾಗಿದೆ ಎಂದು ತಿಳಿಸಿದರು.

ವಾಸ್ತವವಾಗಿ ಹಣಕಾಸು ವರ್ಷದ ಪ್ರಥಮಾರ್ಧದಲ್ಲಿ ಸಿಐಎಲ್ ಸುಮಾರು 2.46 ಕೋಟಿ ಟನ್ ಅಷ್ಟು ಪೂರೈಸಿದೆ. ಈ ವಲಯದಿಂದ ಬೇಡಿಕೆಯೂ ಹೆಚ್ಚಿತ್ತು. ದೇಶೀಯ ಅಗತ್ಯ ಪೂರೈಸಲು ಹೆಚ್ಚುವರಿ 10ರಿಂದ–12ಲಕ್ಷ ಟನ್ ಪೂರೈಸಬೇಕಾದ ಹೊಣೆ ಇತ್ತು. ವಿದೇಶದಿಂದ ಕಲ್ಲಿದ್ದಲು ಆಮದು ಮಾಡಿಕೊಳ್ಳುತ್ತಿದ್ದ ಕಂಪನಿಗಳು, ಅಲ್ಲಿ ದರ ಏರಿದ್ದರಿಂದ ದೇಶಿಯವಾಗಿ ಬೇಡಿಕೆ ಹೆಚ್ಚಿಸಲಾಯಿತು ಎಂದರು.

‘ವಾಯುಪಡೆ ಬಲವರ್ಧನೆಗೆ ಕ್ರಮ’

ಪ್ರಜಾವಾಣಿ ವಾರ್ತೆ


ವಿ.ಆರ್.ಚೌಧರಿ

ನವದೆಹಲಿ: ಭಾರತೀಯ ವಾಯುಪಡೆಗೆ ವಿವಿಧ ಯುದ್ಧ ವಿಮಾನಗಳ ಯೋಜಿಸಿರುವಂತೆ ಸಕಾಲದಲ್ಲಿ ಸೇರ್ಪಡೆಯಾದರೂ ಮಂಜೂರಾಗಿರುವ ಎಲ್ಲ 42ಯುದ್ಧ ಸಜ್ಜಿತ ಘಟಕಗಳ ಪೂರ್ಣ ಸಾಮರ್ಥ್ಯವನ್ನು ಮುಂದಿನ ಒಂದು ದಶಕದಲ್ಲಿ ಹೊಂದುವ ಸಾಧ್ಯತೆಗಳು ಕಡಿಮೆ ಎಂದು ವಾಯುಪಡೆಯ ಮುಖ್ಯಸ್ಥರಾದ ವಿ.ಆರ್.ಚೌಧರಿ ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ತೇಜಸ್ ಹಗುರ ಯುದ್ಧವಿಮಾನ ಎಂಕೆ–1ನ ನಾಲ್ಕು ಘಟಕ, ಅತ್ಯಾಧುನಿಕ ಮಧ್ಯಮ ಕ್ರಮಾಂಕದ ಯುದ್ಧ ವಿಮಾನಗಳ 5–6 ಘಟಕ, ದೇಶೀಯ ಜೆಟ್ ವಿಮಾನಗಳ ಅಭಿವೃದ್ಧಿ ಪ್ರಗತಿಯಲ್ಲಿರುವುದು, ಮಧ್ಯಮ ಬಹುಪಯೋಗಿ ಯುದ್ಧವಿಮಾನಗಳ 6 ಘಟಕಗಳು (ಜಾಗತಿಕ ಟೆಂಡರ್ ಅಂತಿಮವಾಗಿಲ್ಲ) ಸಕಾಲದಲ್ಲಿ ಸೇರ್ಪಡೆಯಾದರೂ ಮುಂದಿನ ಒಂದು ದಶಕದಲ್ಲಿ ಒಟ್ಟು 35 ಘಟಕಗಳಷ್ಟೇ ವಾಯುಪಡೆಯಲ್ಲಿರಲಿವೆ ಎಂದರು.

ಹಳೆಯದಾದ ಯುದ್ಧ ವಿಮಾನಗಳ ವಿಲೇವಾರಿ ಮತ್ತು ಹೊಸ ಯುದ್ಧ ವಿಮಾನಗಳ ಸೇರ್ಪಡೆ ಪ್ರಕ್ರಿಯೆಯು ಚಾಲ್ತಿಯಲ್ಲಿದೆ. ಪಾಕಿಸ್ತಾನ ಮತ್ತು ಚೀನಾದ ಜೊತೆಗಿನ ಸಂಭವನೀಯ ಯುದ್ಧಕ್ಕೆ ಭಾರತ ಸಜ್ಜಾಗಬೇಕು ಎಂಬ ಪರಿಸ್ಥಿತಿ ಹಿನ್ನೆಲೆಯಲ್ಲಿ, ಒಂದು ವೇಳೆ ಬಹುಪಯೋಗಿ ಯುದ್ಧ ವಿಮಾನ ಸೇರ್ಪಡೆ ಕಾರ್ಯಗತಗೊಂಡರೂ ಪೂರ್ಣ ಸಾಮರ್ಥ್ಯ ಹೊಂದುವ ವಾಯುಪಡೆಯ ಗುರಿ ಈಡೇರುವುದಿಲ್ಲ ಎಂದು ಅವರು ತಿಳಿಸಿದರು.

ಬೀದಿ ಬದಿ ವ್ಯಾಪಾರಿಗಳ ಗೋಳು ಕೇಳುವವರೇ ಇಲ್ಲ: ಸರ್ಕಾರದ ಪರಿಹಾರ ಮೊತ್ತ ಬಹುಪಾಲು ಮಂದಿಗೆ ತಲುಪಿಯೇ ಇಲ್ಲ

‘ಬದುಕು ಸಾಕೆನಿಸಿದೆ; ಭಗವಂತನಿಗೂ ಕರುಣೆ ಇಲ್ಲ’

• ಜಿ.ಶಿವಕುಮಾರ

ಚಿಕ್ಕಮ್ಮ ಅವರು ಗ್ರಾಹಕರೊಬ್ಬರಿಗೆ ಹೂವು ನೀಡುತ್ತಿರುವುದು (ಎಡಚಿತ್ರ), ತಲೆಮೇಲೆ ಹೂವಿನ ಬುಟ್ಟಿ ಹೊತ್ತು ಮನೆ ಮನೆಗೆ ಹೋಗಿ ಹೂವು ಮಾರುವ ರುಕ್ಮಿಣಿ –ಪ್ರಜಾವಾಣಿ ಚಿತ್ರಗಳು/ ಅನೂಪ್ ರಾಘ.ಟಿ.

ಬೆಂಗಳೂರು: ‘ಕಿರಿಯ ಮಗ ಕಂಪನಿಯೊಂದರಲ್ಲಿ ಕೆಲಸಕ್ಕೆ ಸೇರಿದ್ದ. ತಿಂಗಳಿಗೆ ₹40 ಸಾವಿರ ಸಂಬಳ ಬರುತ್ತಿತ್ತು. ಕೋವಿಡ್ ಕಾರಣ ಕಂಪನಿಗೆ ಬೀಗ ಬಿತ್ತು. ಕೆಲಸವಿಲ್ಲದೇ ಆತ ಮನೆಯಲ್ಲಿದ್ದಾನೆ. ಇಬ್ಬರು ಹೆಣ್ಣು ಮಕ್ಕಳು, ಮೊಮ್ಮಕ್ಕಳು, ಹೆಂಡತಿ, ನಾದಿನಿ ಹೀಗೆ ಸಂಸಾರ ದೊಡ್ಡದಿದೆ. ಈ ಇಳಿ ವಯಸ್ಸಿನಲ್ಲಿ ಅವರನ್ನೆಲ್ಲಾ ಹೇಗೆ ಸಾಕಬೇಕೆಂಬ ಯೋಚನೆ ಕಾಡುತ್ತಿದೆ. ಆತ್ಮಹತ್ಯೆ ಬಿಟ್ಟರೆ ಬೇರೆ ಯಾವ ದಾರಿಯೂ ನಮಗೆ ತೋಚುತ್ತಿಲ್ಲ’....

ಶ್ರೀನಿವಾಸನಗರದ 9ನೇ ತಿರುವಿನ ಬಳಿ ಪೂಜಾ ಸಾಮಗ್ರಿ ಮಾರುತ್ತಿದ್ದ ಬಿ.ಆರ್.ವಾಸುದೇವ್ ಹೀಗೆ ಹೇಳುತ್ತಾ ಗದ್ಗದಿತರಾದರು.

ಮೊಮ್ಮಕ್ಕಳೊಂದಿಗೆ ಆಟವಾಡುತ್ತಾ ವೃದ್ಧಾಪ್ಯ ಜೀವನ ಕಳೆಯಬೇಕಿದ್ದ ಅವರು ತುತ್ತಿನ ಚೀಲ ತುಂಬಿಸಿಕೊಳ್ಳುವುದಕ್ಕಾಗಿ 70ನೇ ವಯಸ್ಸಿನಲ್ಲೂ ವ್ಯಾಪಾರ ಮಾಡುವ ಅನಿವಾರ್ಯಕ್ಕೆ ಸಿಲುಕಿದ್ದಾರೆ.

ರಾಜ್ಯದ ವಿವಿಧೆಡೆ ಬೀದಿ ಬದಿ ವ್ಯಾಪಾರ ಮಾಡುತ್ತಾ ಬದುಕು ಸಾಗಿಸುತ್ತಿರುವವರನ್ನು ಮಾತಿಗೆಳೆದರೆ ಇಂತಹ ನೂರಾರು ನೋವಿನ ಕಥೆಗಳು ತೆರೆದುಕೊಳ್ಳುತ್ತವೆ.

ಸಾಲ ಕೇಳಲು ಬ್ಯಾಂಕ್‌ಗೆ ಹೋದರೆ ಬೈಯ್ದು ಆಚೆ ಕಳುಹಿಸುತ್ತಾರೆ. ಸ್ವಂತ ಬಲದ ಮೇಲೆ ವ್ಯಾಪಾರ ಮಾಡುವಷ್ಟು ಹಣ ಕೆಲವರ ಬಳಿ ಇರುವುದಿಲ್ಲ. ಅಂತಹವರು ಫೈನಾನ್ಸ್ ಕಂಪನಿಗಳಿಗೆ ಎಡತಾಕುತ್ತಾರೆ. ಅವರು ಕೇಳಿದಷ್ಟು ಬಡ್ಡಿಗೆ ಸಾಲ ಪಡೆದು ವ್ಯಾಪಾರ ಮಾಡುವುದು ಅನಿವಾರ್ಯವಾಗಿದೆ.

‘ಹತ್ತು ವರ್ಷದಿಂದ ಮನೆಯೊಂದರಲ್ಲಿ ಬಾಡಿಗೆ ಇದ್ದೆವು. ಅವರು ಕಟ್ಟಡ ನೆಲಸಮ ಮಾಡುವುದಾಗಿ ಹೇಳಿ ಅಲ್ಲಿಂದ ಹೊರಹಾಕಿದರು. ಬಳಿಕ ಗಿರಿನಗರದ ವ್ಯಕ್ತಿಯೊಬ್ಬರು ಆಶ್ರಯ ನೀಡಿದ್ದರು. ಈಗ ಅವರೂ ಮನೆ ಖಾಲಿ ಮಾಡುವಂತೆ ಹೇಳುತ್ತಿದ್ದಾರೆ. ಎಲ್ಲಿ ಹೋಗಬೇಕು, ಮುಂದೇನು ಮಾಡಬೇಕು ಎಂಬುದೇ ಗೊತ್ತಾಗುತ್ತಿಲ್ಲ. ಸಂಬಂಧಿಕರಂತೂ ಹತ್ತಿರ ಸೇರಿಸಿಕೊಳ್ಳುವುದಿಲ್ಲ. ನಾನು ಅಧಿಕ ರಕ್ತದೊತ್ತಡ ಮತ್ತು ಮಧುಮೇಹದಿಂದ ಬಳಲುತ್ತಿದ್ದೇನೆ. ಆಸ್ಪತ್ರೆಗೆ ಹೋಗಿ ತಪಾಸಣೆ ಮಾಡಿಸಿಕೊಳ್ಳಲೂ ಹಣವಿಲ್ಲ. ಒಮ್ಮೊಮ್ಮೆ ವ್ಯಾಪಾರವೇ ಆಗುವುದಿಲ್ಲ. ಆಗ ಖಾಲಿ ಹೊಟ್ಟೆಯಲ್ಲಿ ಮಲಗುವುದು ಅನಿವಾರ್ಯ. ಮೊಮ್ಮಕ್ಕಳ ಮುಖ ನೋಡಿದರೆ ಕರುಳು ಕಿತ್ತು ಬಂದಂತಾಗುತ್ತದೆ. ಅವರೇನು ಪಾಪ ಮಾಡಿದ್ದರೋ’ ಎನ್ನುವಾಗ ಅವರ ಕಣ್ಣುಗಳು ಹನಿಗೂಡಿದವು.

ಬದುಕು ಬೀದಿಗೆ ತಂದ ಕೋವಿಡ್

‘ಕಚೇರಿಗೆ ಅಲೆಯೋದೇ ಆಯಿತು’

‘ಪ್ರತಿಯೊಬ್ಬರಿಗೂ ₹2 ಸಾವಿರ ಪರಿಹಾರ ನೀಡುವುದಾಗಿ ಯಡಿಯೂರಪ್ಪ ಹೇಳಿದ್ದರು. ಸಂಬಂಧಪಟ್ಟ ಅಧಿಕಾರಿಗಳನ್ನು ವಿಚಾರಿಸಿದರೆ ಹತ್ತಾರು ದಾಖಲೆಗಳನ್ನು ಕೇಳಿದರು. ದಲ್ಲಾಳಿಗಳು ಒಂದಷ್ಟು ಹಣವನ್ನೂ ಪಡೆದುಕೊಂಡರು. ಬಳಿಕ ಕೆಲಸ ಬಿಟ್ಟು ಕಚೇರಿಗೆ ಅಲೆದು ಅಲೆದು ಸಾಕಾಯಿತು. ಕೊನೆಗೆ ಆ ಹಣದ ಆಸೆಯನ್ನೇ ಕೈಬಿಟ್ಟೆ’ ಎಂದು ಶಿವಮೊಗ್ಗದ ಸೋಮಶೇಖರ್ ಬೇಸರ ವ್ಯಕ್ತಪಡಿಸಿದರು.

1.76 ಲಕ್ಷ ಮಂದಿಗೆ ತಲಾ ₹2 ಸಾವಿರ ಪರಿಹಾರ ನೀಡಲಾಗಿದೆ ಎಂದು ಸರ್ಕಾರ ಹೇಳುತ್ತಿದೆ. ಈ ಪೈಕಿ ಶೇ 50ರಷ್ಟು ಮಂದಿಗೆ ಹಣವೇ ಸಿಕ್ಕಿಲ್ಲ. ಕೆಲ ಬ್ಯಾಂಕ್‌ಗಳು ಈ ಹಣವನ್ನು ಹಳೆ ಸಾಲಕ್ಕೆ ಜಮೆ ಮಾಡಿಕೊಂಡಿವೆ

–ಸಿ.ಇ.ರಂಗಸ್ವಾಮಿ, ರಾಜ್ಯ ಘಟಕದ ಅಧ್ಯಕ್ಷ, ಕರ್ನಾಟಕ ಬೀದಿ ಬದಿ ವ್ಯಾಪಾರಿ ಸಂಘಟನೆಗಳ ಒಕ್ಕೂಟ.

ಮೊದಲು ಗೋಬಿ ಮಂಚೂರಿ ವ್ಯಾಪಾರ ಮಾಡುತ್ತಿದ್ದೆ. ಲಾಕ್‌ಡೌನ್‌ನಿಂದಾಗಿ ತುಂಬಾ ನಷ್ಟವಾಯಿತು. ಹೀಗಾಗಿ ತಳ್ಳುಗಾಡಿಯಲ್ಲಿ ಸೊಪ್ಪಿನ ವ್ಯಾಪಾರ ಶುರು ಮಾಡಿದ್ದೇನೆ. ದಿನಕ್ಕೆ ₹500 ದುಡಿಮೆಯಾದರೆ ಹೆಚ್ಚು

–ಗೋವಿಂದರಾಜು, ವ್ಯಾಪಾರಿ, ಮೈಸೂರು.

‘ಲಾಕ್‌ಡೌನ್ ಸಮಯದಲ್ಲಿ ನಾವು ಅನುಭವಿಸಿದ ಕಷ್ಟ ಶತ್ರುಗಳಿಗೂ ಬರಬಾರದು. ಒಂದು ಹೊತ್ತು ಊಟ ಸಿಕ್ಕರೆ ಸಾಕು ಎಂಬ ದೈನೇಸಿ ಸ್ಥಿತಿಯಲ್ಲೇ ದಿನಗಳನ್ನು ದೂಡಿದ್ದೆವು’ ಎಂದರು.

‘ಸೊಂಟಕ್ಕೆ ಬೆಲ್ಟ್ ಕಟ್ಟಿಕೊಂಡು ವ್ಯಾಪಾರ ಮಾಡ್ತಿದೀನಿ’: ‘10 ವರ್ಷಗಳಿಂದಲೂ ತರಕಾರಿ ವ್ಯಾಪಾರವನ್ನೇ ನಂಬಿಕೊಂಡು ಜೀವನ ಸಾಗಿಸುತ್ತಿದ್ದೇನೆ. ಮೊದಲು ತಳ್ಳುಗಾಡಿಯಲ್ಲಿ ಬೀದಿಬೀದಿ ಸುತ್ತುತ್ತಿದ್ದೆ. ಸೊಂಟ ನೋವು ಕಾಣಿಸಿಕೊಂಡ ನಂತರ ತಳ್ಳುಗಾಡಿ ವ್ಯಾಪಾರ ನಿಲ್ಲಿಸಿದೆ. ಆಸ್ಪತ್ರೆಗೆ ತೋರಿಸಿದಾಗ ವಿಶ್ರಾಂತಿ ಪಡೆಯುವಂತೆ ವೈದ್ಯರು ಸೂಚಿಸಿದ್ದರು. ಮನೆಯಲ್ಲಿ ಮಲಗಿಬಿಟ್ಟರೆ ಹೊಟ್ಟೆ ತುಂಬಬೇಕಲ್ಲ. ಹೀಗಾಗಿ ಸೊಂಟಕ್ಕೆ ಬೆಲ್ಟ್ ಕಟ್ಟಿಕೊಂಡೇ ವ್ಯಾಪಾರ ನಡೆಸುತ್ತಿದ್ದೇನೆ’ ಎಂದು 55 ವರ್ಷದ ಶಂಕರ್ ತಮ್ಮ ಕಷ್ಟ ಬಿಚ್ಚಿಟ್ಟರು.

‘ದಿನವಿಡೀ ನಿಂತುಕೊಂಡು ವ್ಯಾಪಾರ ಮಾಡೋದು ಕಷ್ಟ. ಒಮ್ಮೊಮ್ಮೆ ಜೀವ ಹಿಂಡಿದಂತಾಗುತ್ತದೆ. ಅದನ್ನೆಲ್ಲಾ ಸಹಿಸಿಕೊಂಡೇ ದಿನ ದೂಡುತ್ತಿದ್ದೇನೆ. ಒಮ್ಮೆ ತರಕಾರಿಗಳನ್ನು ತಂದರೆ ಅದು ಖಾಲಿಯಾಗಲು ಮೂರು ದಿನ ಬೇಕಾಗುತ್ತದೆ. ಒಂದಷ್ಟು ತರಕಾರಿಗಳು ಕೊಳೆತೇ ಹೋಗುತ್ತವೆ. ಬಡ್ಡಿ ಕಟ್ಟದಿದ್ದರೆ ಸಾಲ ಕೊಟ್ಟವರು ಮನೆ ಮುಂದೆ ಬಂದು ಗಲಾಟೆ ಮಾಡುತ್ತಾರೆ. ಬಾಡಿಗೆ ಕಟ್ಟದಿದ್ದರೆ ಮನೆ ಖಾಲಿ ಮಾಡಿಸುತ್ತಾರೆ. ಹೀಗಾಗಿ ನೋವನ್ನೆಲ್ಲಾ ಸಹಿಸಿಕೊಂಡೇ ಕೆಲಸ ಮಾಡಬೇಕು. ಅದು ಅನಿವಾರ್ಯ ಕೂಡ’ ಎಂದು ಭಾವುಕರಾದರು.

‘ಮಕ್ಕಳು ದೂರ ತಳ್ಳಿದ್ರು’

‘ಮಕ್ಕಳನ್ನು ಸಾಕಿ ಸಲುಹಿದ್ದೆ. ಇಳಿ ವಯಸ್ಸಿನಲ್ಲಿ ಅವರು ದೂರ ತಳ್ಳಿಬಿಟ್ರು. ಹೀಗಾಗಿ ಅತ್ತೆಯ ಜೊತೆ ಬೇರೆ ಮನೆಯಲ್ಲಿ ವಾಸವಾಗಿದ್ದೇನೆ. ನಾನೇ ದುಡಿದು ಅವರನ್ನೂ ಸಾಕುತ್ತಿದ್ದೇನೆ’ ಎಂದು 61 ವರ್ಷದ ಚಿಕ್ಕಮ್ಮ ಬೇಸರ ತೋಡಿಕೊಂಡರು.

‘ಅಪ್ಪ, ಅಮ್ಮನಿಗೆ ಮೂರು ಹೊತ್ತು ಊಟ ಹಾಕಲೂ ಆಗದಿದ್ದ ಮೇಲೆ ಅವರ ಹಂಗಿನಲ್ಲೇಕೆ ಬದುಕಬೇಕು. 30 ವರ್ಷಗಳಿಂದ ಹೂವು ಮತ್ತು ವೀಳ್ಯದೆಲೆ ವ್ಯಾಪಾರ ಮಾಡುತ್ತಿದ್ದೇನೆ. ಈಗ ಕಣ್ಣು ಕಾಣುವುದಿಲ್ಲ. ಎದ್ದು ಓಡಾಡುವುದಕ್ಕೂ ಕಷ್ಟ. ಹಾಗಂತ ಮನೆಯಲ್ಲಿ ಕೂರುವಂತಿಲ್ಲ. ಅವರಿವರ ಸಹಾಯ ಪಡೆದು ಮನೆಯಿಂದ ವ್ಯಾಪಾರದ ಸ್ಥಳಕ್ಕೆ ನಡೆದುಕೊಂಡೇ ಬರುತ್ತೇನೆ. ಅಕ್ಕಪಕ್ಕದ ವ್ಯಾಪಾರಿಗಳು ಟೇಬಲ್ ಜೋಡಿಸಿಕೊಡುತ್ತಾರೆ. ಬೆಳಿಗ್ಗೆ ಮಾರುಕಟ್ಟೆಗೆ ಹೋಗುವವರಿಂದ ಹೂವು ತರಿಸಿಕೊಂಡು ವ್ಯಾಪಾರ ಮಾಡುತ್ತಿದ್ದೇನೆ’ ಎಂದರು.

‘ಮಕ್ಕಳು ಬೆಳೆದು ದೊಡ್ಡವರಾದ ಮೇಲೆ ನಮ್ಮನ್ನು ನೋಡಿಕೊಳ್ಳುವುದಿಲ್ಲ. ಅತ್ತೆಗೆ 90 ವರ್ಷ ವಯಸ್ಸು. ಅವರ ಮೂವರೂ ಮಕ್ಕಳು ತೀರಿಕೊಂಡಿದ್ದಾರೆ. ಅವರೂ ವೀಳ್ಯದೆಲೆ ವ್ಯಾಪಾರ ಮಾಡುತ್ತಿದ್ದರು. ಎಲ್ಲಾದರೂ ಬಿದ್ದು ಪೆಟ್ಟು ಮಾಡಿಕೊಂಡರೆ ಕಷ್ಟ ಎಂದು ಮನೆಯಲ್ಲೇ ಇರುವುದಕ್ಕೆ ಹೇಳಿದ್ದೇನೆ. ಇರುವಷ್ಟು ದಿನ ಹೇಗೋ ಜೀವನ ಮಾಡಬೇಕಲ್ಲ’ ಎಂದು ಹೇಳುತ್ತಾ ಕಣ್ಣೀರು ಒರೆಸಿಕೊಂಡರು.

₹ 2 ಸಾವಿರ ಯಾರಿಗೆ ಕೊಟ್ರು?

‘ಲಾಕ್‌ಡೌನ್‌ನಿಂದಾಗಿ ಬದುಕು ಬೀದಿಗೆ ಬಂದಿತ್ತು. ನಮಗೆಲ್ಲಾ ₹ 2 ಸಾವಿರ ನೀಡುವುದಾಗಿ ಮುಖ್ಯಮಂತ್ರಿ ಯಡಿಯೂರಪ್ಪ ಘೋಷಿಸಿದ್ದರು. ಆ ಹಣ ಇದುವರೆಗೂ ಕೈಸೇರಿಲ್ಲ’ ಎಂದು ಭದ್ರಾವತಿಯ ಸುಗುಣ ಹೇಳಿದರು.

‘ಮಕ್ಕಳ ವಿದ್ಯಾಭ್ಯಾಸ, ಮನೆ ಬಾಡಿಗೆಗೆ ಹಣ ಹೊಂದಿಸುವುದೇ ಕಷ್ಟವಾಗಿದೆ. ಹೀಗಾಗಿ ಮನೆ ಕೆಲಸದ ಜೊತೆಗೆ ಹೂವಿನ ವ್ಯಾಪಾರವನ್ನೂ ಮಾಡುತ್ತಿದ್ದೇನೆ. ಈಗ ಮೊದಲಿನಷ್ಟು ವ್ಯಾಪಾರ ಇಲ್ಲ. ಹಾಕಿದ ಬಂಡವಾಳ ವಾಪಸ್ ಬಂದರೆ ಸಾಕು ಎನ್ನುವ ಸ್ಥಿತಿ ಇದೆ. ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದೆ. ಅಡುಗೆ ಅನಿಲ ದರವನ್ನೂ ಹೆಚ್ಚಿಸಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ನಮ್ಮಂತಹವರು ಹೇಗೆ ಬದುಕಬೇಕು’ ಎಂದು ಪ್ರಶ್ನಿಸಿದರು.

‘ಪರಿಹಾರ ಕೊಡಿಸುವುದಾಗಿ ನಮ್ಮಿಂದಲೇ ₹100 ಹಣ ಪಡೆದುಕೊಂಡರು. ಗುರುತಿನ ಚೀಟಿ ಮಾಡಿಸಬೇಕೆಂದು ಹೇಳಿದರು. ಅದಕ್ಕಾಗಿ ಕೆಲಸ ಬಿಟ್ಟು ಅಲೆದದ್ದೇ ಆಯಿತು. ಅದರಿಂದ ಪ್ರಯೋಜನವಂತೂ ಆಗಲಿಲ್ಲ. ಅಧಿಕಾರಿಗಳು ನಮ್ಮ ಸಮಸ್ಯೆಗಳನ್ನು ಕಿವಿಗೆ ಹಾಕಿಕೊಳ್ಳಲೇ ಇಲ್ಲ’ ಎಂದರು.

ಅಂಕಿ-ಅಂಶಗಳು

5 ಲಕ್ಷ ರಾಜ್ಯದಲ್ಲಿರುವ ಬೀದಿಬದಿ ವ್ಯಾಪಾರಿಗಳು

2.45 ಲಕ್ಷ ಸಮೀಕ್ಷೆಗೆ ಒಳಪಟ್ಟವರು

1.20 ಲಕ್ಷ ಗುರುತಿನ ಚೀಟಿ ಪಡೆದಿರುವವರು

1.10 ಲಕ್ಷ ಬೀದಿ ಬದಿ ವ್ಯಾಪಾರದಲ್ಲಿ ತೊಡಗಿರುವ ಮಹಿಳೆಯರ ಅಂದಾಜು ಸಂಖ್ಯೆ

‘ಉತ್ತಮ ಆಪದ್ಬಾಂಧವ’ ಪ್ರಶಸ್ತಿ ಘೋಷಿಸಿದ ಕೇಂದ್ರ

ನವದೆಹಲಿ: ರಸ್ತೆ ಅಪಘಾತಗಳಲ್ಲಿ ತೊಂದರೆಗೆ ಒಳಗಾದವರಿಗೆ ತುರ್ತು ನೆರವು ನೀಡಲು ಸಾರ್ವಜನಿಕರನ್ನು ಪ್ರೇರೇಪಿಸುವ ಸಲುವಾಗಿ ಕೇಂದ್ರ ರಸ್ತೆ ಸಾರಿಗೆ ಹಾಗೂ ಹೆದ್ದಾರಿಗಳ ಸಚಿವಾಲಯ ಹೊಸ ಯೋಜನೆಗೆ ಚಾಲನೆ ನೀಡಿದೆ.

ಅಪಘಾತ ಸಂಭವಿಸಿದ ಸಂದರ್ಭದಲ್ಲಿ ಸಂತ್ರಸ್ತರ ನೆರವಿಗೆ ಧಾವಿಸಿ, ಅವರ ಜೀವ ಉಳಿಸುವವರಿಗೆ ಈ ಯೋಜನೆಯಡಿ ‘ಉತ್ತಮ ಆಪದ್ಬಾಂಧವ’ ಎಂಬ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ಈ ಯೋಜನೆ ಅ. 15ರಿಂದ ಜಾರಿಗೆ ಬರಲಿದ್ದು, 2026ರ ಮಾರ್ಚ್ 31ರವರೆಗೆ ಜಾರಿಯಲ್ಲಿರುವುದು. ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಪ್ರಧಾನ ಕಾರ್ಯದರ್ಶಿಗಳು ಹಾಗೂ ಸಾರಿಗೆ ಇಲಾಖೆ ಕಾರ್ಯದರ್ಶಿಗಳಿಗೆ ಸಚಿವಾಲಯ ಈ ಸಂಬಂಧ ಪತ್ರ ಬರೆದಿದೆ.

ರಸ್ತೆ ಅಪಘಾತ ಸಂಭವಿಸಿದ ಸಂದರ್ಭದಲ್ಲಿ ಗಾಯಾಳುಗಳನ್ನು ತ್ವರಿತವಾಗಿ ಆಸ್ಪತ್ರೆಗೆ ದಾಖಲಿಸಿ, ಅವರ ಜೀವ ಉಳಿಸುವವರಿಗೆ ₹ 5,000 ನಗದು ಬಹುಮಾನ ನೀಡಲಾಗುತ್ತದೆ. ‘ಆಪದ್ಬಾಂಧವ’ರ ಪೈಕಿ, ಒಂದು ವರ್ಷದ ಅವಧಿಯಲ್ಲಿ ಗಮನಾರ್ಹ ಸೇವೆ ಕಾರ್ಯ ಮಾಡಿರುವ 10 ಜನರಿಗೆ ರಾಷ್ಟ್ರಮಟ್ಟದ ಪ್ರಶಸ್ತಿಯನ್ನು ನೀಡಲಾಗುವುದು. ಈ ಪ್ರಶಸ್ತಿ ತಲಾ ₹ 1 ಲಕ್ಷ ನಗದು ಒಳಗೊಂಡಿರುತ್ತದೆ ಎಂದು ಸಚಿವಾಲಯ ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೊಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	400
ಅಡಿಕೆ	
ಬಂಟ್ವಾಳ	
ಕೋಕ	10000-25000
ಹೊಸತು	25000-50000
ಪುತ್ತೂರು	
ಹೊಸತು	35500-50000
ಸಿದ್ದಾಪುರ	
ಬಿಳಿಗೋಟು	35699-40309
ಕೋಕ	24699-37899
ಚಾಲಿ	44899-47509
ಕೆಂಪುಗೋಟು	27599-35369
ರಾಶಿ	44269-46009
ತಟ್ಟಿಬೆಟ್ಟೆ	34269-40089
ಶಿರಸಿ	
ಬೆಟ್ಟೆ	38569-44999
ಬಿಳಿಗೋಟು	13069-41878
ಚಾಲಿ	38609-47639
ರಾಶಿ	38869-47309
ಯಲ್ಲಾಪುರ	
ಬಿಳಿಗೋಟು	32889-41629
ಕೋಕ	22122-33612
ಚಾಲಿ	42898-47569
ಕೆಂಪುಗೋಟು	31199-35400
ರಾಶಿ	43316-48489
ತಟ್ಟಿಬೆಟ್ಟೆ	37030-42699
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	46009-50529
ಗೊಬರಲು	16000-32450
ರಾಶಿ	43099-49100
ಸರಕು	50509-74996
ಸಾಗರ	
ಬಿಳಿಗೋಟು	25288-40099
ಕೋಕ	26099-39169
ಚಾಲಿ	34609-45099
ಕೆಂಪುಗೋಟು	33569-38009
ರಾಶಿ	36219-47699
ಸಿಪ್ಪೆಗೋಟು	18100-25892
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	278-511
ದ್ವಿತಳಿ (ಬಿ.ವಿ)	287-533

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ		ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13850	13200	13475	200.35 ಸೆಂಟ್ಸ್
ಎಸಿ	6325	4800	5375	
ಆರ್‌ಪಿ	6150	6100	6325	ಲಂಡನ್
ಆರ್‌ಸಿ	3560	3500	3675	2148 ಡಾಲರ್ಸ್

ವಸತಿ ಯೋಜನೆಗೆ ಅಡ್ಡಿಯಾಗಿದ್ದ ಎಸ್‌ಪಿ ಸರ್ಕಾರ: ಮೋದಿ ವಾಗ್ದಾಳಿ


ಉತ್ತರಪ್ರದೇಶದ ಲಖನೌದಲ್ಲಿ ಮಂಗಳವಾರ ‘ಅಜಾದಿ@55 ನ್ಯೂ ಅರ್ಬನ್ ಇಂಡಿಯಾ: ಟ್ರಾನ್ಸ್‌ಫಾರ್ಮಿಂಗ್ ಅರ್ಬನ್ ಲ್ಯಾಂಡ್‌ಸ್ಕೇಪ್ ಕಾನ್ಫರೆನ್ಸ್‌ಕಮ್ ಎಕ್ಸ್‌ಪೋ’ದಲ್ಲಿ ಪ್ರಧಾನಿ ಮೋದಿ ಅವರು ವಸತಿ ಯೋಜನೆಯ ಮಾದರಿಯನ್ನು ವೀಕ್ಷಿಸಿದರು – ಪಿಟಿಐ ಚಿತ್ರ

ಲಖನೌ (ಪಿಟಿಐ): ‘ಉತ್ತರ ಪ್ರದೇಶದಲ್ಲಿ ಹಿಂದೆ ಆಳ್ವಿಕೆ ನಡೆಸಿದ ಸರ್ಕಾರ ಕೇಂದ್ರದ ವಸತಿ ಯೋಜನೆಗಳ ಅನುಷ್ಠಾನಕ್ಕೆ ಅಡ್ಡಿಯುಂಟು ಮಾಡುವ ಮೂಲಕ, ರಾಜ್ಯದ ಬಡವರಿಗೆ ಮನೆ ನಿರ್ಮಿಸಿಕೊಡಲು ಆಸಕ್ತಿ ತೋರಲಿಲ್ಲ’ ಎಂದು ಪ್ರಧಾನಿ ನರೇಂದ್ರ ಮೋದಿ ಹಿಂದಿನ ಸಮಾಜವಾದಿ ಪಕ್ಷದ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಮಂಗಳವಾರ ಪಿಎಂಎವೈ-ಯು ಯೋಜನೆಯ 75 ಸಾವಿರ ಫಲಾನುಭವಿಗಳಿಗೆ ವರ್ಚುವಲ್ ರೂಪದಲ್ಲಿ ಕೀಗಳನ್ನು ಹಸ್ತಾಂತರಿಸಿ ಮಾತನಾಡಿದ ಅವರು, ‘2017ಕ್ಕೂ ಹಿಂದೆ, ಉತ್ತರ ಪ್ರದೇಶಕ್ಕೆ ಕೇಂದ್ರ ಸರ್ಕಾರ, ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ (ಪಿಎಂಎವೈ) ಬಡವರಿಗೆ ಮನೆ ನಿರ್ಮಿಸಿಕೊಡಲು ₹18 ಸಾವಿರ ಕೋಟಿ ಮಂಜೂರು ಮಾಡಿತ್ತು. ಆದರೆ, ಆ ಸರ್ಕಾರ 18 ಮನೆಗಳನ್ನೂ ನಿರ್ಮಾಣ ಮಾಡಲಿಲ್ಲ’ ಎಂದು ಆರೋಪಿಸಿದರು.

‘ಆದರೆ, ಈಗ ಯೋಗಿ ಆದಿತ್ಯ ನಾಥ ನೇತೃತ್ವದ ಸರ್ಕಾರ ಇದೇ ಯೋಜನೆಯಡಿ ಉತ್ತರ ಪ್ರದೇಶದಲ್ಲಿ 9 ಲಕ್ಷ ಮನೆಗಳನ್ನು ನಿರ್ಮಾಣ ಮಾಡಿದೆ. 14 ಲಕ್ಷ ಮನೆಗಳು ನಿರ್ಮಾಣ ಹಂತದಲ್ಲಿವೆ’ ಎಂದು ಮೋದಿ ಹೇಳಿದರು.

75 ಸಾವಿರ ಫಲಾನುಭವಿಗಳಿಗೆ ಮನೆ ಹಸ್ತಾಂತರ: ಪ್ರಧಾನ ಮಂತ್ರಿ ಆವಾಸ್ ಯೋಜನೆ–ನಗರ(ಪಿಎಂಎವೈ-ಯು) ಯೋಜನೆಯಡಿ ಉತ್ತರ ಪ್ರದೇಶದಲ್ಲಿ ನಿರ್ಮಾಣಗೊಂಡ 75 ಸಾವಿರ ಮನೆಗಳ ಕೀಲಿಗಳನ್ನು ಮೋದಿ ಅವರು ಇಲ್ಲಿ ವರ್ಚುವಲ್ ರೂಪದಲ್ಲಿ ಫಲಾನುಭವಿಗಳಿಗೆ ಹಸ್ತಾಂತರಿಸಿದರು.

ಇಲ್ಲಿ ನಡೆದ ‘ಅಜಾದಿ @75–ನ್ಯೂ ಅರ್ಬನ್ ಇಂಡಿಯಾ: ಟ್ರಾನ್ಸ್‌ಫಾರ್ಮಿಂಗ್ ಅರ್ಬನ್ ಲ್ಯಾಂಡ್‌ಸ್ಕೇಪ್’ ಕುರಿತು ವಿಚಾರಣ ಸಂಕಿರಣ ಮತ್ತು ಎಕ್ಸ್‌ಪೊ ಕಾರ್ಯಕ್ರಮವನ್ನು ಉದ್ಘಾಟಿಸಿದ ಅವರು, ಪಿಎಂಎವೈ–ಯು ಫಲಾನುಭವಿಗಳಿಗೆ ಆನ್‌ಲೈನ್ ಮೂಲಕ ಕೀಗಳನ್ನು ಹಸ್ತಾಂತರಿಸಿದರು. ನಂತರ ಫಲಾನುಭವಿಗಳೊಂದಿಗೆ ಸಂವಾದ ನಡೆಸಿದರು.

‘ಮಕ್ಕಳ ಮಾನಸಿಕ ಆರೋಗ್ಯ: ಶಿಕ್ಷಕರಿಗೆ ಬೇಕಿದೆ ತರಬೇತಿ’



ನವದೆಹಲಿ (ಪಿಟಿಐ): ಮಕ್ಕಳಲ್ಲಿನ ಮಾನಸಿಕ ಆರೋಗ್ಯ ಸಮಸ್ಯೆಗಳ ಬಗ್ಗೆ ಗಮನಹರಿಸಲು ಶಿಕ್ಷಕರಿಗೆ ಸೂಕ್ತ ತರಬೇತಿ ನೀಡಬೇಕಿದೆ ಎಂದು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಮಂಗಳವಾರ ತಿಳಿಸಿದರು.

ಯುನಿಸೆಫ್‌ನ ‘ದಿ ಸ್ಟೇಟ್ ಆಫ್ ದಿ ವರ್ಲ್ಡ್ಸ್ ಚಿಲ್ಡ್ರನ್ 2021 - ಆನ್ ಮೈ ಮೈಂಡ್: ಮಕ್ಕಳ ಮಾನಸಿಕ ಆರೋಗ್ಯ ಉತ್ತೇಜಿಸುವುದು, ರಕ್ಷಿಸುವುದು ಮತ್ತು ಕಾಳಜಿ ವಹಿಸುವುದು’ ಜಾಗತಿಕ ಪ್ರಮುಖ ಪ್ರಕಟಣೆ ಬಿಡುಗಡೆ ಮಾಡಿ ಅವರು ಮಾತನಾಡಿದರು.

‘ವಿಶ್ವದ ಶೇ 14ರಷ್ಟು ಮಕ್ಕಳು ಮಾನಸಿಕ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇದು ಗಂಭೀರ ಸಮಸ್ಯೆ. ನಾವು ಅದನ್ನು ಸಮಯಕ್ಕೆ ಸರಿಯಾಗಿ ಪರಿಹರಿಸದಿದ್ದರೆ, ಅದು ಸಮಾಜದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ’ ಎಂದು ಸಚಿವರು ಕಳವಳ ವ್ಯಕ್ತಪಡಿಸಿದರು.

ಮೂವರು ವಿಜ್ಞಾನಿಗಳಿಗೆ ‘ಭೌತವಿಜ್ಞಾನ ನೊಬೆಲ್’


ಸುಕುರೊ ಮನಬೆ


ಕ್ಲಾಸ್ ಹ್ಯಾಸಲ್‌ಮನ್

ಜಾರ್ಜಿಯೊ ಪಾರಿಸಿ

ಸ್ಟಾಕ್‌ಹೋಮ್ (ರಾಯಿಟರ್ಸ್/ಎಎಫ್‌ಪಿ): ವಿಜ್ಞಾನಿಗಳಾದ ಸುಕುರೊ ಮನಬೆ, ಕ್ಲಾಸ್ ಹ್ಯಾಸಲ್‌ಮನ್ ಹಾಗೂ ಜಾರ್ಜಿಯೊ ಪಾರಿಸಿ ಅವರಿಗೆ ಜಂಟಿಯಾಗಿ 2021ನೇ ಸಾಲಿನ ಭೌತವಿಜ್ಞಾನ ನೊಬೆಲ್ ಪ್ರಶಸ್ತಿಯನ್ನು ಮಂಗಳವಾರ ಘೋಷಿಸಲಾಗಿದೆ.

‘ಸಂಕೀರ್ಣವಾಗಿರುವ ವಿಶ್ವದ ಭೌತಿಕ ರಚನೆಯ ವಿಶ್ಲೇಷಣೆ ಹಾಗೂ ಹವಾಮಾನ ಬದಲಾವಣೆ ಕುರಿತು ಕೈಗೊಂಡ ಸಂಶೋಧನೆಯನ್ನು ಪರಿಗಣಿಸಿ’ ಈ ಪ್ರಶಸ್ತಿಯನ್ನು ಜಂಟಿಯಾಗಿ ಮೂವರು ವಿಜ್ಞಾನಿಗಳಿಗೆ ನೀಡಲಾಗಿದೆ ಎಂದು ರಾಯಲ್ ಸ್ವೀಡಿಶ್ ಅಕಾಡೆಮಿ ಆಫ್ ಸೈನ್ಸಸ್ ತಿಳಿಸಿದೆ.

ಈ ಪ್ರತಿಷ್ಠಿತ ಪ್ರಶಸ್ತಿಯ ಬಹುಮಾನದ ಮೊತ್ತ ₹ 8.56 ಕೋಟಿ (1.15 ಮಿಲಿಯನ್ ಡಾಲರ್).

ಜಪಾನ್ ಮೂಲದ ಮನಬೆ ಅವರು ಅಮೆರಿಕದ ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದಲ್ಲಿ ಹವಾಮಾನವಿಜ್ಞಾನ ವಿಭಾಗದಲ್ಲಿ ಹಾಗೂ ಹ್ಯಾಸಲ್‌ಮನ್ ಅವರು ಜರ್ಮನಿಯ ಹ್ಯಾಂಬರ್ಗ್‌ನಲ್ಲಿರುವ ಮ್ಯಾಕ್ಸ್ ಪ್ಲ್ಯಾಂಕ್ ಇನ್‌ಸ್ಟಿಟ್ಯೂಟ್ ಆಫ್ ಮಿಟಿಯೊರಾಲಜಿಯಲ್ಲಿ ಪ್ರಾಧ್ಯಾಪಕರಾಗಿದ್ದಾರೆ.

ಪಾರಿಸಿ ಅವರು ಅವರು ಇಟಲಿಯ ಸೇಪಿಯಂಜಾ ಯುನಿವರ್ಸಿಟಿ ಆಫ್ ರೋಮ್‌ನಲ್ಲಿ ಪ್ರಾಧ್ಯಾಪಕ.

‘ವಾತಾವರಣದಲ್ಲಿ ಇಂಗಾಲದ ಡೈಆಕ್ಸೈಡ್ ಮಟ್ಟದಲ್ಲಿನ ಹೆಚ್ಚಳಕ್ಕೆ ತಕ್ಕಂತೆ, ಭೂಮಿಯ ಮೇಲ್ಮೈಯ ಉಷ್ಣಾಂಶದಲ್ಲಿ ಯಾವ ರೀತಿ ಹೆಚ್ಚಳ ಕಂಡುಬರುತ್ತದೆ ಎಂಬುದನ್ನು ವಿವರಿಸುವ ಮಾದರಿಯನ್ನು ಮನಬೆ ಸಿದ್ಧಪಡಿಸಿದ್ದಾರೆ.

ಉಗ್ರರಿಂದ ಮೂವರು ನಾಗರಿಕರ ಹತ್ಯೆ

ಶ್ರೀನಗರ (ಪಿಟಿಐ): ಇಲ್ಲಿನ ಇಕ್ಬಾಲ್ ಉದ್ಯಾನದಲ್ಲಿ ಕಾಶ್ಮೀರ ಪಂಡಿತ, ಶ್ರೀನಗರದ ಪ್ರಮುಖ ಔಷಧ ಅಂಗಡಿ ಮಾಲೀಕ ಮಖಾನ್ ಲಾಲ್ ಬಿಂದ್ರೂ ಮಂಗಳವಾರ ಶಂಕಿತ ಉಗ್ರರ ಗುಂಡಿಗೆ ಬಲಿಯಾಗಿದ್ದಾರೆ. ಒಂದು ಗಂಟೆಯೊಳಗೆ ಪ್ರತ್ಯೇಕ ಘಟನೆಗಳಲ್ಲಿ ಬಿಂದ್ರೂ ಸೇರಿ ಮೂವರು ನಾಗರಿಕರು ಉಗ್ರರ ದಾಳಿಗೆ ಬಲಿಯಾಗಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಬೇಲ್‌ಪುರಿ ಮಾರಾಟಗಾರ ವಿರೇಂದರ್ ಮತ್ತು ಮೊಹಮ್ಮದ್ ಶಫಿ ಎಂಬುವವರನ್ನೂ ಉಗ್ರರು ಹತ್ಯೆಗೈದಿದ್ದಾರೆ. ಬಿಂದ್ರೂ (68) ತಮ್ಮ ಔಷಧ ಅಂಗಡಿಯಲ್ಲಿ ಔಷಧಿಗಳನ್ನು ವಿತರಿಸುತ್ತಿರುವಾಗ ಹಂತಕರು ಗುಂಡು ಹಾರಿಸಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಗುಂಡೇಟಿನಿಂದ ಗಾಯಗೊಂಡ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಲ್ಲಿ ಅವರು ಮೃತಪಟ್ಟಿರುವುದಾಗಿ ವೈದ್ಯರು ಘೋಷಿಸಿದರು ಎಂದೂ ಅವರು ಹೇಳಿದರು. ಕಾಶ್ಮೀರದಿಂದ ವಲಸೆ ಹೋಗದೆ ಅಲ್ಲಿಯೇ ಉಳಿದಿದ್ದ ಕೆಲವೇ ಕಾಶ್ಮೀರ ಪಂಡಿತರಲ್ಲಿ ಬಿಂದ್ರೂ ಸಹ ಒಬ್ಬರು.

ಬಾಹ್ಯಾಕಾಶದಲ್ಲಿ ಸಿನಿಮಾ ಶೂಟಿಂಗ್!

ಮಾಸ್ಕೊ (ಎಎಫ್‌ಪಿ): ಮೊದಲ ಬಾರಿಗೆ ಬಾಹ್ಯಾಕಾಶದಲ್ಲಿ ಸಿನಿಮಾವೊಂದನ್ನು ಚಿತ್ರೀಕರಿಸುವ ಐತಿಹಾಸಿಕ ಪ್ರಯತ್ನಕ್ಕೆ ರಷ್ಯಾದ ಚಿತ್ರ ತಂಡ ಸಜ್ಜಾಗಿದ್ದು, ಈ ಸಂಬಂಧ ಮಂಗಳವಾರ ರಷ್ಯಾದ ನಟಿ ಮತ್ತು ನಿರ್ದೇಶಕರು ಅಂತರರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದತ್ತ ಪ್ರಯಾಣ ಬೆಳೆಸಿದ್ದಾರೆ.

ಈ ಮೂಲಕ, ಕಳೆದ ವರ್ಷ ನಟ ಟಾಮ್ ಕ್ರೂಸ್, ನಾಸಾ ಮತ್ತು ಎಲಾನ್ ಮಸ್ಕ್ ಸ್ಪೇಸ್ ಎಕ್ಸ್ ಜಂಟಿಯಾಗಿ ಘೋಷಿಸಿದ್ದ ‘ಮಿಷನ್ ಇಂಪಾಸಿಬಲ್’ ಹಾಲಿವುಡ್ ಸಿನಿಮಾ ಯೋಜನೆಯನ್ನು ಹಿಂದಿಕ್ಕಲು ರಷ್ಯಾದ ಸಿಬ್ಬಂದಿ ಸಜ್ಜಾಗಿದ್ದಾರೆ.

37ರ ಹರೆಯದ ನಟಿ ಯೂಲಿಯಾ ಪೆರೆಸಿಲ್ಡ್ ಮತ್ತು 38 ವರ್ಷದ ಚಲನಚಿತ್ರ ನಿರ್ದೇಶಕ ಕ್ಲಿಮ್ ಶಿಪೆಂಕೊ ಅವರು, ಅನುಭವಿ ಗಗನಯಾತ್ರಿ ಆಂಟನ್ ಶ್ಕಾಪ್ಲೆರೋವ್ ನೇತೃತ್ವದಲ್ಲಿ ಸೋಯುಜ್ ಎಂಎಸ್ -19 ಬಾಹ್ಯಾಕಾಶ ನೌಕೆಯಲ್ಲಿ ಬಾಹ್ಯಾಕಾಶಕ್ಕೆ ತೆರಳಿದ್ದಾರೆ. ಈ ತಂಡ 12 ದಿನಗಳ ಕಾಲ ಅಂತರರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದಲ್ಲಿ ‘ಚಾಲೆಂಜ್’ ಸಿನಿಮಾಗಾಗಿ ದೃಶ್ಯಗಳನ್ನು ಚಿತ್ರೀಕರಿಸಲಿದ್ದಾರೆ. ಇಲ್ಲಿವರೆಗೂ ಗೌಪ್ಯವಾಗಿಡಲಾಗಿದ್ದ ಚಲನಚಿತ್ರದ ಕಥಾವಸ್ತುವನ್ನು ರಷ್ಯಾದ ಬಾಹ್ಯಾಕಾಶ ಸಂಸ್ಥೆ ರೋಸ್ಕೋಸ್ಮೋಸ್ ಬಹಿರಂಗಪಡಿಸಿದೆ. ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ತೆರಳಿದ್ದ ಗಗನಯಾನಿಯೊಬ್ಬರನ್ನು ರಕ್ಷಿಸುವ ಸಲುವಾಗಿ ಶಸ್ತ್ರಚಿಕಿತ್ಸಕಿಯೊಬ್ಬರನ್ನು ಅಂತರಿಕ್ಷಕ್ಕೆ/ಬಾಹ್ಯಾಕಾಶಕ್ಕೆ ಕಳುಹಿಸುವರೋಚಕ ಕಥಾಹಂದರವನ್ನು ಈ ಸಿನಿಮಾ ಹೊಂದಿದೆ ಎಂದು ಬಾಹ್ಯಾಕಾಶ ಸಂಸ್ಥೆ ತಿಳಿಸಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,691
ಇಂದಿನ ಅಂತ್ಯ	17,822
▲	131
ದಿನದ ಗರಿಷ್ಠ	17,833

ವಿನಿಮಯ ದರ

$ ಡಾಲರ್	74.44
£ ಪೌಂಡ್	101.42
€ ಯುರೊ	86.38
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹440
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹450

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1445 (1455)
ಸೋಯಾ (ರಿಫೈನ್ಡ್)	₹1340 (1332)
ಸೂರ್ಯಕಾಂತಿ (ರಿಫೈನ್ಡ್)	₹1385(1385)
ಪಾಮೋಲಿನ್	₹1225 (1218)

ಬೆಂಗಳೂರು ಈರುಳ್ಳಿ ಧಾರಣೆ

	ಕ್ವಿಂಟಲ್‌ಗೆ
ದೊಡ್ಡ	₹2500-3000
ಮಧ್ಯಮ	₹2000-2500
ಸಣ್ಣ	₹500-1500

ಸೇವಾ ವಲಯದ ಚಟುವಟಿಕೆ ಹೆಚ್ಚಳ

ನವದೆಹಲಿ (ಪಿಟಿಐ): ದೇಶದ ಸೇವಾ ವಲಯದ ಚಟುವಟಿಕೆಗಳು ಸೆಪ್ಟೆಂಬರ್‌ನಲ್ಲಿ ಬೆಳವಣಿಗೆಯ ಹಾದಿಯಲ್ಲಿಯೇ ಮುಂದುವರಿದಿವೆ. ಆದರೆ, ಆಗಸ್ಟ್‌ನಲ್ಲಿ ದಾಖಲಾಗಿದ್ದ 18 ತಿಂಗಳ ಗರಿಷ್ಠ ಮಟ್ಟಕ್ಕೆ ಹೋಲಿಸಿದರೆ ಸೆಪ್ಟೆಂಬರ್‌ನಲ್ಲಿ ಚಟುವಟಿಕೆಗಳ ಪ್ರಮಾಣ ತುಸು ತಗ್ಗಿದೆ.

ಬೇಡಿಕೆ ಚುರುಕು ಪಡೆದಿದ್ದು, ಕೋವಿಡ್ ಸಂಬಂಧಿತ ನಿರ್ಬಂಧಗಳು ಸಡಿಲವಾಗಿದ್ದು ಸೇವಾ ವಲಯದ ಚಟುವಟಿಕೆಗಳ ಬೆಳವಣಿಗೆಗೆ ಕಾರಣ ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಇಂಡಿಯಾ ಸರ್ವಿಸಸ್ ಬ್ಯುಸಿನೆಸ್ ಆ್ಯಕ್ಟಿವಿಟಿ ಸೂಚ್ಯಂಕವು ಸೆಪ್ಟೆಂಬರ್‌ನಲ್ಲಿ 55.2 ಅಂಶದಷ್ಟು ಇತ್ತು. ಇದು ಆಗಸ್ಟ್‌ನಲ್ಲಿ 56.7ರಷ್ಟಿತ್ತು. ಇದು 50ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇದ್ದರೆ ಚಟುವಟಿಕೆಗಳು ಬೆಳವಣಿಗೆ ಕಂಡಿವೆ ಎಂದೂ 50ಕ್ಕಿಂತ ಕಡಿಮೆ ಇದ್ದರೆ ಕುಸಿತ ಕಂಡಿವೆ ಎಂದೂ ಅರ್ಥೈಸಲಾಗುತ್ತದೆ.

‘ಆಗಸ್ಟ್‌ನ ಮಟ್ಟಕ್ಕಿಂತ ಸೆಪ್ಟೆಂಬರ್‌ನಲ್ಲಿ ಚಟುವಟಿಕೆಗಳ ಪ್ರಮಾಣ ತಗ್ಗಿದ್ದರೂ, 2020ರ ಫೆಬ್ರುವರಿ ನಂತರದ ಎರಡನೆಯ ವೇಗದ ಬೆಳವಣಿಗೆ ದಾಖಲಾಗಿದೆ’ ಎಂದು ಐಎಚ್‌ಎಸ್ ಮರ್ಕಿಟ್ ಸಂಸ್ಥೆ ಹೇಳಿದೆ. ಬೇಡಿಕೆಯಲ್ಲಿ ಹೆಚ್ಚಳವಾದುದರಿಂದಾಗಿ ದೇಶದ ಸೇವಾ ವಲಯದ ಕಂಪನಿಗಳು ಸೆಪ್ಟೆಂಬರ್‌ನಲ್ಲಿ ಹೆಚ್ಚಿನ ನೇಮಕಾತಿ ನಡೆಸಿವೆ. ಇದರಿಂದಾಗಿ ಸತತ ಒಂಬತ್ತು ತಿಂಗಳುಗಳಿಂದ ನಡೆದಿದ್ದ ಉದ್ಯೋಗ ಕಡಿತವು ಈ ವಲಯದಲ್ಲಿ ಕೊನೆಗೊಂಡಿದೆ.

‘ಸೆಪ್ಟೆಂಬರ್ ತಿಂಗಳಿನಲ್ಲಿ ದೇಶದ ಕಂಪನಿಗಳು ಹೊಸ ಕೆಲಸಗಳನ್ನು ವಹಿಸಿಕೊಂಡಿವೆ’ ಎಂದು ಐಎಚ್‌ಎಸ್ ಮರ್ಕಿಟ್ ಸಂಸ್ಥೆಯ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನಾ ಡಿ ಲಿಮಾ ಹೇಳಿದ್ದಾರೆ. ಹೆಚ್ಚುತ್ತಿರುವ ಹಣದುಬ್ಬರ, ಸೇವಾ ವಲಯದ ವೆಚ್ಚಗಳು ಏರಿಕೆ ಆಗುತ್ತಿರುವುದು ಬೆಳವಣಿಗೆಗೆ ಅಡ್ಡಿ ಎಂದು ಸಂಸ್ಥೆ ಅಂದಾಜು ಮಾಡಿದೆ.

ಸೇವಾ ವಲಯ ಹಾಗೂ ತಯಾರಿಕಾ ವಲಯಗಳ ಚಟುವಟಿಕೆಗಳನ್ನು ಒಟ್ಟಾಗಿ ತಿಳಿಸುವ ಸೂಚ್ಯಂಕವು ಸೆಪ್ಟೆಂಬರ್‌ನಲ್ಲಿ 55.3ಕ್ಕೆ ತಲುಪಿದೆ. ಇದು ಆಗಸ್ಟ್‌ನಲ್ಲಿ 55.4ರಷ್ಟು ಇತ್ತು.

ದೇಶದ ಆರ್ಥಿಕತೆ ‘ಸ್ಥಿರ’: ಮೂಡಿಸ್

ನವದೆಹಲಿ: ಭಾರತದ ಅರ್ಥ ವ್ಯವಸ್ಥೆ ಕುರಿತ ತನ್ನ ಮುನ್ನೋಟವನ್ನು ಜಾಗತಿಕರೇಟಿಂಗ್ಸ್‌ಸಂಸ್ಥೆಮೂಡಿಸ್‌ಪರಿಷ್ಕರಿಸಿದೆ. ದೇಶದ ಅರ್ಥ ವ್ಯವಸ್ಥೆಯನ್ನು ‘ನಕಾರಾತ್ಮಕ’ ಎಂದು ಈ ಹಿಂದೆ ವರ್ಗೀಕರಿಸಿದ್ದ ಮೂಡೀಸ್ ಈಗ, ವ್ಯವಸ್ಥೆಯು ‘ಸ್ಥಿರ’ವೆಂದು ವರ್ಗೀಕರಣ ಮಾಡಿದೆ. ಅರ್ಥ ವ್ಯವಸ್ಥೆಯು ಕುಸಿತ ಕಾಣುವ ಅಪಾಯಗಳು ತಗ್ಗುತ್ತಿವೆ ಎಂದು ಹೇಳಿದೆ.

ಆದರೆ, ಸಾಲದ ಹೊರೆ ಹಾಗೂ ಸಾಲ ಪಡೆಯುವ ವಿಚಾರದಲ್ಲಿ ಹೆಚ್ಚಿನ ಸಾಮರ್ಥ್ಯ ಇಲ್ಲದಿರುವುದರಿಂದ ಎದುರಾಗಬಹುದಾದ ಅಪಾಯಗಳು ಉಳಿದುಕೊಂಡಿವೆ ಎಂದು ಸಂಸ್ಥೆ ಎಚ್ಚರಿಸಿದೆ. ಆರ್ಥಿಕ ಚೇತರಿಕೆಯು ನಡೆಯುತ್ತಿದೆ. ಆರ್ಥಿಕ ಚಟುವಟಿಕೆಗಳು ಚುರುಕು ಪಡೆಯುತ್ತಿವೆ. ಮುಂದಿನ ಕೆಲವು ವರ್ಷಗಳಲ್ಲಿ ವಿತ್ತೀಯ ಕೊರತೆಯು ಹಂತಹಂತವಾಗಿ ಕಡಿಮೆ ಆಗುತ್ತದೆ ಎಂದು ಸಂಸ್ಥೆ ಹೇಳಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರವು 2019ರ ಮಟ್ಟಕ್ಕಿಂತ ಹೆಚ್ಚಿನದಾಗಿರಲಿದೆ ಎಂದು ಅಂದಾಜು ಮಾಡಿದೆ.

ಪ್ರಶ್ನೋತ್ತರ

ಯು.ಪಿ.ಪುರಾಣಿಕ್
ಬ್ಯಾಂಕಿಂಗ್-ಹಣಕಾಸು ತಜ್ಞ
uppuranik@gmail.com
ಮೊ: 9448015300

ಅಶೋಕ್, ಊರುಬೇಡ

- **ಪ್ರಶ್ನೆ:** ನಾನು ಕಿರಾಣಿ ಅಂಗಡಿ ಇಟ್ಟುಕೊಂಡಿದ್ದೇನೆ. ಬ್ಯಾಂಕ್‌ನಿಂದ ಸಾಲ ಪಡೆದು ವ್ಯಾಪಾರ ವಿಸ್ತರಿಸಬೇಕೆಂದಿದ್ದೇನೆ. ಬ್ಯಾಂಕ್‌ಗೆ ಹೋಗಿ ವಿಚಾರಿಸಿದಾಗ ಓ.ಡಿ. (ಓವರ್ ಡ್ರಾಫ್ಟ್) ತೆಗೆದುಕೊಳ್ಳಿ ಎಂದು ಹೇಳಿದರು. ಸಾಲ ಮತ್ತು ಓ.ಡಿ. ಇವುಗಳ ವ್ಯತ್ಯಾಸ, ಸಾಧಕ-ಬಾಧಕ ತಿಳಿಸಿ.

ಉತ್ತರ: ಬ್ಯಾಂಕ್‌ನಲ್ಲಿ ಸಾಲ ಪಡೆದಲ್ಲಿ ಸಾಲಕ್ಕೆ ಮಾಸಿಕ ಸಮಾನ ಕಂತು (ಇಎಂಐ) ಇರುತ್ತದೆ. ಹೀಗೆ ಕಂತುಗಳನ್ನು ತುಂಬುತ್ತಾ ಸಾಲ ತೀರಿಸಬೇಕು. ಆದರೆ ಓ.ಡಿ. ಹಾಗಲ್ಲ. ಇಲ್ಲಿ ಸಾಲದ ರೀತಿಯಲ್ಲಿ ಮರುಪಾವತಿ ಇರುವುದಿಲ್ಲ. ವರ್ಷದಲ್ಲಿ ಒಮ್ಮೆ ಓ.ಡಿ. ಮಿತಿಯನ್ನು ಸಂಪೂರ್ಣ ತುಂಬಿ ಕ್ರೆಡಿಟ್ ಬ್ಯಾಲೆನ್ಸ್‌ಗೆ ತಂದರೆ ಸಾಕು. ಬಡ್ಡಿ ಮಾತ್ರ ಪ್ರತೀ ತಿಂಗಳೂ ತುಂಬುತ್ತಾ ಬರಬೇಕು. ಓ.ಡಿ.ಯಲ್ಲಿ ಯಾವಾಗ ಬೇಕಾದರೂ ಹಣ ತುಂಬುವ ಹಾಗೂ ವಾಪಾಸ್ ಪಡೆಯುವ ಸವಲತ್ತು ಇರುತ್ತದೆ. ನೀವು ಪಡೆದಷ್ಟೂ ಹಣಕ್ಕೆ ಪಡೆದಷ್ಟು ದಿನಗಳವರೆಗೆ ಮಾತ್ರ ಬಡ್ಡಿ ವಿಧಿಸುತ್ತಾರೆ. ಸಾಲ ಆದರೆ ಒಮ್ಮೆ ತುಂಬಿದ ಹಣ ವಾಪಾಸ್ ಪಡೆಯುವಂತಿಲ್ಲ. ವ್ಯಾಪಾರಸ್ಥರಿಗೆ ಓ.ಡಿ. ತುಂಬಾ ಅನುಕೂಲ. ಇಲ್ಲಿ ಚೆಕ್ ಸೌಲಭ್ಯ ಕೂಡಾ ಇದೆ. ಪ್ರತೀ ದಿನ ಎಷ್ಟಾದರಷ್ಟು ಹಣ ಓ.ಡಿ.ಗೆ ತುಂಬಬಹುದಾದ್ದರಿಂದ ಬಡ್ಡಿ ಕಡಿಮೆ ಆಗುತ್ತದೆ. ಜೊತೆಗೆ ಕಟ್ಟಿದ ಹಣವನ್ನು ಯಾವಾಗ ಬೇಕಾದರೂ ವಾಪಸ್ ಪಡೆಯಬಹುದು. ಈ ವಿಚಾರದಲ್ಲಿ ನಿಮಗೆ ಒಂದು ಸಲಹೆ. ಬ್ಯಾಂಕ್‌ನಿಂದ ಓ.ಡಿ. ಸೌಲಭ್ಯ ಪಡೆದಲ್ಲಿ ಸಾಲದ ರೀತಿಯಲ್ಲಿ ಕಂತು ತುಂಬುವ ಅವಶ್ಯಕತೆ ಇಲ್ಲದೇ ಇರುವುದರಿಂದ ಕಂತಿಗೆ ಸರಿಸಮನಾಗಿ ಒಂದು ಆರ್.ಡಿ. ಮಾಡಿ. ಇದರಿಂದ ಉಳಿತಾಯ ಆಗುವುದರ ಜೊತೆಗೆ ವರ್ಷಾಂತ್ಯಕ್ಕೆ ಓ.ಡಿ. ಕ್ರೆಡಿಟ್ ಬ್ಯಾಲೆನ್ಸ್ ತರಲೂ ಅನುಕೂಲವಾಗುತ್ತದೆ.

ಹೆಸರು ಬೇಡ, ಧಾರವಾಡ

- **ಪ್ರಶ್ನೆ:** ನಾನು ನಿವೃತ್ತ ಸರ್ಕಾರಿ ನೌಕರ. ವಯಸ್ಸು 72 ವರ್ಷ. ಪಿಂಚಣಿ ₹ 32,000. ಈಗಿರುವ ಮನೆ ಮೇಲೆ ಮೊತ್ತೊಂದು ಮನೆ ಕಟ್ಟಬೇಕೆಂದಿದ್ದೇನೆ. ನನ್ನ ಮಗ ಬೆಂಗಳೂರಿನಲ್ಲಿ ಐ.ಟಿ. ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಾನೆ. ಅವನ ಸಂಬಳ ತಿಂಗಳಿಗೆ ₹ 63,500. ಅವನು ಬೇರೆ ಊರಿನಲ್ಲಿ ಇರುವುದರಿಂದ ಹಾಗೂ ನನಗೆ 72 ವರ್ಷ ವಯಸ್ಸು ಆಗಿರುವುದರಿಂದ ಬ್ಯಾಂಕ್‌ನಲ್ಲಿ ಸಾಲ ಕೊಡುವುದಿಲ್ಲ. ಸೂಕ್ತ ಸಲಹೆ ಕೊಡಿ.

ಉತ್ತರ: ಗೃಹ ಸಾಲ ದೀರ್ಘಾವಧಿಯದ್ದಾಗಿರುವುದರಿಂದ ಹಿರಿಯ ನಾಗರಿಕರಿಗೆ ಬ್ಯಾಂಕ್‌ಗಳಲ್ಲಿ ಸಾಲ ಸಿಗುವುದಿಲ್ಲ. ನಿಮ್ಮ ಮಗನಿಗೆ ಉತ್ತಮ ವರಮಾನ ಇರುವುದರಿಂದ ನೀವು ಪ್ರಥಮ ಸಾಲಗಾರರಾಗಿ ನಿಮ್ಮ ಮಗ ಸಹ ಸಾಲಗಾರರಾಗಿ ಬ್ಯಾಂಕ್‌ನಲ್ಲಿ ಸಾಲ ಪಡೆಯಬಹುದು. ನಿಮ್ಮ ಮಗ ಬೇರೆ ಊರಿನಲ್ಲಿ ಇರುವ ಒಂದೇ ಕಾರಣಕ್ಕೆ ಬ್ಯಾಂಕ್‌ನಲ್ಲಿ ಸಾಲ ಕೊಡುವುದಿಲ್ಲ ಎಂದು ಹೇಳುವಂತಿಲ್ಲ. ಆದರೆ ಈ ಸಾಲ ಮರುಪಾವತಿಸುವ ಸಂಪೂರ್ಣ ಜವಾಬ್ದಾರಿ ನಿಮ್ಮ ಮಗನ ಮೇಲೆ ಇರುತ್ತದೆ ಹಾಗೂ ಅದೇ ರೀತಿ ಬ್ಯಾಂಕ್‌ಗೆ ಕಾಗದ ಪತ್ರ ಮಾಡಿಕೊಡಬೇಕಾಗುತ್ತದೆ. ಇದರ ಬದಲಾಗಿ ನಿಮ್ಮ ಮಗ ಬೆಂಗಳೂರಿನಲ್ಲಿ ಒಂದು ಫ್ಲ್ಯಾಟ್ ಅಥವಾ ಮನೆಯನ್ನು 30 ವರ್ಷಗಳ ಅವಧಿಯ ಗೃಹ ಸಾಲದಿಂದ ಪಡೆದಲ್ಲಿ ಅದರಿಂದ ಅವರಿಗೂ ತಾವು ಸ್ವಂತ ಮನೆ ಮಾಡಿದ ಖುಷಿ ಇರುತ್ತದೆ ಹಾಗೂ ಸಾಲದ ಬಡ್ಡಿಯಲ್ಲಿ ಆದಾಯ ತೆರಿಗೆ ಉಳಿಸಬಹುದು. ಇಂತಹ ಯೋಜನೆ ಸಣ್ಣ ವಯಸ್ಸಿನಲ್ಲಿಯೇ ಮಾಡಿದರೆ ಬೇಡದ ಖರ್ಚುಗಳಿಗೆ ಕಡಿವಾಣ ಹಾಕಬಹುದು. ಜೀವನದ ಸಂಜೆಯಲ್ಲಿ ಸ್ವಂತ ಮನೆಯಲ್ಲಿ ವಾಸಿಸುವ ಸಂತಸವೂ ಇರುತ್ತದೆ.

ಹೆಸರು ಬೇಡ, ಶಿವಮೊಗ್ಗ

- **ಪ್ರಶ್ನೆ:** ನನ್ನ ಮೊಮ್ಮಗಳ ಸಲುವಾಗಿ ಸುಕನ್ಯಾ ಸಮೃದ್ಧಿ ಯೋಜನೆ ಪ್ರಾರಂಭಿಸಲು ಸಲಹೆ ನೀಡಿ. ಯೋಜನೆ ಪ್ರಾರಂಭಿಸಿದ ಮೊದಲು ಕಟ್ಟಿದಷ್ಟೇ ಹಣವನ್ನು ಪ್ರತಿ ತಿಂಗಳೂ ಕಟ್ಟಬೇಕೇ? ಹೆಚ್ಚಿಗೆ ಹಣ ತುಂಬಲು ಅವಕಾಶ ಇದೆಯೇ? ಪ್ರತಿ ತಿಂಗಳೂ ₹ 1,000 ಪಾವತಿಸುವುದಾದರೆ ಎಷ್ಟು ವರ್ಷ ತುಂಬಬೇಕು? ಈ ಖಾತೆಯನ್ನು ಬ್ಯಾಂಕ್‌ಗಳಲ್ಲಿಯೂ ತೆರೆಯಬಹುದೇ?

ಉತ್ತರ: ಸುಕನ್ಯಾ ಸಮೃದ್ಧಿ ಯೋಜನೆಯ ಅಡಿ, 10 ವರ್ಷಗಳ ಒಳಗಿನ ಹೆಣ್ಣು ಮಕ್ಕಳ ಹೆಸರಿನಲ್ಲಿ ಪೋಷಕರು ಖಾತೆ ತೆರೆಯಬಹುದು. ಖಾತೆ ತೆರೆಯುವಾಗ ಮಗುವಿನ ಆಧಾರ್ ಸಂಖ್ಯೆ ಮತ್ತು ಜನನ ಪತ್ರ ಕೊಡಬೇಕಾಗುತ್ತದೆ. ವಾರ್ಷಿಕ ಕನಿಷ್ಠ ₹ 100 ಗರಿಷ್ಠ ₹ 1.50 ಲಕ್ಷ ಈ ಖಾತೆಗೆ ಜಮಾ ಮಾಡಬಹುದು. ಖಾತೆ ಪ್ರಾರಂಭವಾದ 14 ವರ್ಷಗಳವರೆಗೆ ಮಾತ್ರ ಹಣ ಜಮಾ ಮಾಡಬಹುದು. ಈ ಠೇವಣಿ ತೆರಿಗೆಯಿಂದ ಮುಕ್ತವಾಗಿದೆ. ಠೇವಣಿ ಮೊತ್ತದ ಶೇಕಡ 50ರಷ್ಟನ್ನು ಮಗುವಿಗೆ 18 ವರ್ಷ ತುಂಬಿದಾಗ ಮದುವೆ ಅಥವಾ ವಿದ್ಯಾಭ್ಯಾಸದ ಕಾರಣಕ್ಕೆ ಹಿಂದಕ್ಕೆ ಪಡೆಯಬಹುದು. ಖಾತೆಯ ಪೂರ್ಣ ಅವಧಿ 21 ವರ್ಷ. ಈ ಖಾತೆಯನ್ನು ಅಂಚೆ ಕಚೇರಿ ಹಾಗೂ ಬ್ಯಾಂಕ್‌ಗಳಲ್ಲಿ ತೆರೆಯಬಹುದು. ಆರ್.ಡಿ. ಖಾತೆಯಂತೆ ಪ್ರಥಮ ವರ್ಷ ಕಟ್ಟಿದ ಮೊತ್ತವನ್ನು ಪ್ರತೀ ತಿಂಗಳೂ ಕಟ್ಟುವ ಅವಶ್ಯಕತೆ ಇಲ್ಲ. ₹ 100ರಿಂದ ₹ 1.50 ಲಕ್ಷ ಮೊತ್ತವನ್ನು ವರ್ಷದಲ್ಲಿ ಯಾವಾಗ ಬೇಕಾದರೂ ಪಾವತಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಉತ್ತರ ಸಿಕ್ಕದೆ ಎಂದು ಭಾವಿಸುತ್ತೇನೆ. ❖

ಇಂಧನ ದರ ಇನ್ನಷ್ಟು ಹೆಚ್ಚಳ ಸಾಧ್ಯತೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಮಂಗಳವಾರ ಪೆಟ್ರೋಲ್ ದರವನ್ನು ಲೀಟರಿಗೆ 25 ಪೈಸೆ ಮತ್ತು ಡೀಸೆಲ್ ದರವನ್ನು ಲೀಟರಿಗೆ 30 ಪೈಸೆ ಹೆಚ್ಚಿಸಿವೆ. ಇದರಿಂದಾಗಿ ದೇಶದಾದ್ಯಂತ ಇಂಧನ ದರಗಳು ಗರಿಷ್ಠ ಮಟ್ಟವನ್ನು ತಲುಪಿವೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆಯು ಏಳು ವರ್ಷಗಳ ಗರಿಷ್ಠ ಮಟ್ಟ ತಲುಪಿರುವ ಕಾರಣ, ದೇಶಿ ಮಾರುಕಟ್ಟೆಯಲ್ಲಿ ತೈಲೋತ್ಪನ್ನಗಳ ಬೆಲೆಯು ‘ಗಣನೀಯವಾಗಿ’ ಹೆಚ್ಚಳವಾಗುವ ಸಾಧ್ಯತೆ ಇದೆ.

ಬ್ರೆಂಟ್ ಕಚ್ಚಾತೈಲ ದರವು ಬ್ಯಾರೆಲ್‌ಗೆ 82.37 ಡಾಲರ್‌ಗಳಿಗೆ ತಲುಪಿದ್ದರೆ, ವೆಸ್ಟ್ ಟೆಕ್ಸಾಸ್ ಇಂಟರ್‌ಮಿಡಿಯೇಟ್ ದರ್ಜೆಯ ಕಚ್ಚಾ ತೈಲ ದರವು ಬ್ಯಾರೆಲ್‌ಗೆ 77.76 ಡಾಲರ್‌ಗೆ ಏರಿಕೆ ಆಗಿದೆ. ತೈಲ ಉತ್ಪಾದನೆ ಹೆಚ್ಚಿಸದೆ ಇರಲು ಒಪೆಕ್+ ಒಕ್ಕೂಟ ತೀರ್ಮಾನಿಸಿದೆ.

ಮಂಗಳವಾರದ ದರ ಹೆಚ್ಚಳದಿಂದಾಗಿ ಬೆಂಗಳೂರಿನಲ್ಲಿ ಪೆಟ್ರೋಲ್ ದರ ₹ 106.17 ಮತ್ತು ಡೀಸೆಲ್ ದರ ₹ 96.62ಕ್ಕೆ ತಲುಪಿದೆ. ದೆಹಲಿಯಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 102.64 ಮತ್ತು ಡೀಸೆಲ್ ದರ ₹ 91.07ಕ್ಕೆ ತಲುಪಿದೆ. ಕಚ್ಚಾ ತೈಲ ಬೆಲೆಯು ತಗ್ಗಬಹುದು ಎಂಬ ನಿರೀಕ್ಷೆಯಲ್ಲಿ ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ತೈಲೋತ್ಪನ್ನಗಳ ಬೆಲೆಯಲ್ಲಿ ಗಣನೀಯ ಹೆಚ್ಚಳ ಮಾಡಿರಲಿಲ್ಲ. ಆದರೆ, ಕಚ್ಚಾತೈಲದ ಬೆಲೆ ತಗ್ಗುವ ಸಾಧ್ಯತೆ ಇಲ್ಲ. ಹಾಗಾಗಿ, ತೈಲೋತ್ಪನ್ನಗಳ ಬೆಲೆ ಏರಿಕೆಯು ದೊಡ್ಡ ಮಟ್ಟದಲ್ಲಿ ಆಗಬಹುದು ಎಂದು ಮೂಲಗಳು ತಿಳಿಸಿವೆ.

‘ಒಟ್ಟಾಗಿ ಸಮಸ್ಯೆ ನಿವಾರಿಸಬೇಕು’

ರಾಯ್‌ಪುರ (ಪಿಟಿಐ): ದೇಶದಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ದರ ಅಂತರರಾಷ್ಟ್ರೀಯ ತೈಲ ದರದ ಮೇಲೆ ಅವಲಂಬಿತವಾಗಿದೆ. ಕೇಂದ್ರ ಮತ್ತು ರಾಜ್ಯಗಳು ಒಟ್ಟಾಗಿ ಇಂಧನ ದರ ಏರಿಕೆಯ ಸಮಸ್ಯೆಯನ್ನು ನಿಭಾಯಿಸಬೇಕು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಇಂಧನ ದರ ಹೆಚ್ಚಾಗುತ್ತಿದೆ. ಇದರಿಂದ ಜನಸಾಮಾನ್ಯರ ಮೇಲೆ ಹೊರೆಯಾಗುತ್ತಿದೆ. ಈ ಸಮಸ್ಯೆಯನ್ನು ಕೇಂದ್ರ ಮತ್ತು ರಾಜ್ಯಗಳು ಒಟ್ಟಾಗಿಯೇ ನಿವಾರಿಸಬೇಕಿದೆ’ ಎಂದಿದ್ದಾರೆ.

ಮುಂಬೈ ಧಾರಣೆ

ಶೇಂಗಾ

5-10-2021

ಜಾವಾ 70/80(ಹೊಸ)	10650-10700
ಜಾವಾ 80/90(ಹೊಸ)	10250-10300
ದಪ್ಪ ಮಧ್ಯಪ್ರದೇಶ(ಹೊಸ)	10550-10600
ದಪ್ಪ ಗುಜರಾತ್(ಹೊಸ)	9600-9700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1455 (1460)
ಒಂದು ವಾರದ ಡೆಲಿವರಿ	1450 (1455)
ಸೋಯಾ ಕಚ್ಚಾ	1295 (1287)
ಪಾಮ್ ವಾರದ ಡೆಲಿವರಿ	1230 (1222)
ಸೂರ್ಯಕಾಂತಿ ಎಣ್ಣೆ ಕಚ್ಚಾ	1315 (1315)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
46,400 (46,150)
ಬೆಳ್ಳಿ ಕೆ.ಜಿ 60,850 (60,050)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪುಣ್ಯಸ್ಮರಣೆ
ಶ್ರೀ ಎಂ. ರಾಮಯ್ಯ (20-02-1922 to 28-09-2008)
ವೆಂಕಟಮ್ಮ (09-01-2016)
ಜೀವನ ಒಂದು ಪಯಣ, ಕೆಲವರು ಸಹೃದಯಿಯಾಗಿ, ರೈತನಾಗಿ, ಕೈಗಾರಿಕೋದ್ಯಮಿಯಾಗಿ ಸಣ್ಣ ಪ್ರಮಾಣದ ಘಟಕದಿಂದ ಖ್ಯಾತಿ ಪಡೆದ ಬೃಹತ್ ಪ್ರಮಾಣದ ಕೈಗಾರಿಕೆಯ ಸ್ಥಾಪನೆ ಮಾಡಿ, ದೊಡ್ಡ ಉದ್ಯಮಿಯಾಗಿ ಉಜ್ವಲ ಪಥವನ್ನು ಸ್ವಯಂ ರೂಪಿಸಿಕೊಳ್ಳುತ್ತಾರೆ. ಈ ಸಾಧನೆಯ ಹಾದಿ ಸುಗಮವೇನೂ ಇರುವುದಿಲ್ಲ. ಆದರೆ, ದಿವಂಗತ ಶ್ರೀ ರಾಮಯ್ಯನವರು ಇಂಥ ಕಠಿಣ ಹಾದಿಯನ್ನು ದಿಟ್ಟ ಮನಸ್ಸಿನಿಂದ ಕ್ರಮಿಸಿದರು, ದೊಡ್ಡ ಉದ್ಯಮಿಯಾದರು ಇಂಜಿನೀಯರಿಂಗ್ ಉದ್ದಿಮೆಗಳ ಸಮೂಹದಿಂದ ಶೈಕ್ಷಣಿಕ ಸಂಸ್ಥೆಗಳ ಸರಣಿ ಸ್ಥಾಪನೆವರೆಗೆ ಯಶೋಗಾದೆ ಮೆರೆದರು, ಹೆಮ್ಮೆಪಟ್ಟರು, ಹಿರಿಮೆಗೆ ಪಾತ್ರರಾದರು. ಮುನ್ನಡೆಯ ಹಾದಿಯಲ್ಲಿ ಅಡ್ಡ ಬಂದ ಅಡಚಣೆಗಳು ಗುರಿ ಸಾಧನೆಯ ಪಯಣಕ್ಕೆ ಮೆಟ್ಟಿಲುಗಳಾಗಿ ಮಾರ್ಪಟ್ಟವು. ಇವರ ಧ್ಯೇಯ ಮತ್ತು ಸಾಧನೆಯು ನಮ್ಮೆಲ್ಲರಿಗೂ ದಿವ್ಯ ಚೇತನವಾಗಿದೆ.
ದುಃಖತಪ್ತ: ಪುತ್ರರಾದ ಪಿ.ಆರ್.ಕೃಷ್ಣಪ್ಪ, ಪಿ.ಆರ್.ಶ್ರೀನಿವಾಸ್, ಮೊಮ್ಮಗ ಆರ್.ಕೆ.ರಘುರಾಮ್, ಪುತ್ರಿ, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು.

1ನೇ ವರ್ಷದ ಪುಣ್ಯಸ್ಮರಣೆ
ಶ್ರೀ ಐ ಎಂ ಪೊನ್ನಪ್ಪ (DIG Rtd. BSF)
ನಿರ್ದೇಶಕರು
ಶ್ರೀ ಲಕ್ಷ್ಮಿ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್
ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು, ನಿಮ್ಮ ಆದರ್ಶ, ಮಾರ್ಗದರ್ಶನ ನಮಗೆಂದೆಂದೂ ಸ್ಫೂರ್ತಿ, ಅನುಪಮ ಹಾಗೂ ಅನುಕರಣೀಯ
~ ಇಂದ ~
ಶ್ರೀ ಲಕ್ಷ್ಮಿ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್
ಶ್ರೀ ಲಕ್ಷ್ಮಿ ಮಲ್ಟಿ ಸ್ಪೆಷಾಲಿಟಿ ಹಾಸ್ಪಿಟಲ್
ಮಾಗಡಿ ಮುಖ್ಯ ರಸ್ತೆ, ಸುಂಕದಕಟ್ಟೆ, ಬೆಂಗಳೂರು-560 091.

ಉತ್ತರ ಕ್ರಿಯಾದಿ
ದಿನಾಂಕ 25-9-2021ನೇ ಶನಿವಾರ ನನ್ನ ಪೂಜ್ಯ ಪತಿ ಶ್ರೀ ಶಂಭಯ್ಯರವರು (ಹಿರಿಯ ಕಾರ್ಮಿಕ ಮುಖಂಡರು, ಬಿನ್ನಿ ಮಿಲ್, ಬೆಂಗಳೂರು) ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ದಿನಾಂಕ 06-10-2021ನೇ ಬುಧವಾರ ಬೆಳಿಗ್ಗೆ 11:30 ರಿಂದ ಉತ್ತರ ಕ್ರಿಯಾದಿ ಸಮಾರಾಧನೆಯನ್ನು ಹೆಗ್ಗೂರು ಗ್ರಾಮ, ಬನ್ನೂರು ಹೋಬಳಿ, ಟಿ.ನರಸಿಪುರ ತಾಲ್ಲೂಕು, ಮೈಸೂರು ಜಿಲ್ಲೆ ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.
ಇಂತಿ ದುಃಖತಪ್ತರು: ಶ್ರೀಮತಿ ಗುರಮ್ಮ ಮತ್ತು ಮಕ್ಕಳು ಹಾಗೂ ಕುಟುಂಬವರ್ಗದವರು.
Ph:9945643506, 7811872578

LOOKING TO BUILD, BUY OR SELL A PROPERTY
Please refer Classifieds on Sunday

For Online Classified Booking
Name Change / Education / Property / Job / Services & many more
Log on to :
dhclassifieds.com

Smt. Lakshmamma
(W/o A.Muni Reddy, class I KPWD contractor)
Expired on 5th October 2021
We have been blessed as a family to have received unconditional love and affection from you.
You will be deeply missed. We love you!
Rest in peace
Last rites will be held today at 3pm at Hongasandra, Bangalore-560068
Bereaved- AMR Family

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers
ಕವಿ ಲಾಜಿಸ್ಟಿಕ್ಸ್ : ಬೆಂಗಳೂರು ಲೋಕಲ್ ನಲ್ಲಿ ಚಲಾಯಿಸಲು ಡ್ರೈವರ್ಸ್ ಬೇಕಾಗಿದ್ದಾರೆ, ಹೆವಿ ಡ್ರೈವಿಂಗ್ ಲೈಸೆನ್ಸ್ ನೊಂದಿಗೆ ನಂ.4/1, 2ನೇ ಮುಖ್ಯ ರಸ್ತೆ, ಶ್ರೀರಾಂಪುರಂ, ಬೆಂಗಳೂರು21: 9738421001, 9886683188

General
ಮಹಿಳೆಯರು ಬೇಕಾಗಿದ್ದಾರೆ: ಬೆಂಗಳೂರಿನ ಮನೆಗಳಲ್ಲಿ ಅಡುಗೆ ಮಾಡಲು, ಚಿಕ್ಕ ಮಕ್ಕಳನ್ನು ನೋಡಿಕೊಳ್ಳಲು, ವಯಸ್ಕರನ್ನು ನೋಡಿಕೊಳ್ಳಲು, ಮನೆಕೆಲಸ ಮಾಡಲು, ಹಾಗು ಟೆಲಿ ಕಾಲರ್ಸ್‌ಗಳು, ಸಂಬಳ 10000-15000/- ಉಚಿತ ಆಹಾರ, ವಸತಿ ನೀಡಲಾಗುತ್ತದೆ. 7338556119/ 8197566700

WANTED CUTTING master and tailors for Tshirt stiching for Libey fashionz. 9972588991

✓ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಐಟಿಐ, ಡಿಪ್ಲೊಮಾದವರು 16,600-62000/-. ವಸತಿಯೂಟದೊಂದಿಗೆ 8123884588, 8123884788

✓ ಕರ್ನಾಟಕದಾದ್ಯಂತ ಹೆಸರಾಂತ 450 ಕಂಪನಿ ಹಾಗೂ Office ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ ನೇರನೇಮಕಾತಿ, ವಸತಿಯೂಟದೊಂದಿಗೆ 16,200-65,000/- 7022366461, 8904049301

Multiple Vacancy
NABARD CONSULTANCY SERVICES Pvt. Ltd.
(A wholly owned subsidiary of NABARD)
Corporate Office: NABARD Tower, 24 Rajendra Place New Delhi - 110125
Regional Office: 46, NABARD Towers, Kempegowda Rd, Bengaluru, Karnataka 560009
RECRUITMENT NOTICE
(Advt Ref No: NABCONS/CO-HR/ 007/PBCS/2021-22 Dated: 06.10.2021)
Online applications are invited from Indian citizens for vacancies as Project Based Contract Staff for the posts: (i) State Coordinator (01 Post), (ii) Project Consultant – Finance (01 Post), (iii) Project Consultant – Finance & Recovery (01 Post), (iv) Project Consultant- IT & MIS (01 Post), (v) Project Consultant – M&E (01 Post) & (vi) Associate Project Consultant (06 Post) in Bengaluru, Karnataka for execution of DDU-GKY Projects. For detailed advertisement and instructions, visit website: http://www.nabcons.com/Recruitment.aspx
Last date for submission of online application: 15 October 2021
Sd/-
Managing Director

Hospital & Medical Jobs
WANTED PHARMACISTS to work all over Karnataka (with Diploma in Pharmacy Certificate) plz send the CV to email: raghu_sgr2@yahoo.co.in / poojyaya2005@gmail.com/
Or only WhatsApp : 9845996744 / 9341366744

Part-Time Jobs
✓ ಕನ್ನಡ ಮತ್ತು ಇಂಗ್ಲೀಷ್ ಓದಲು, ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503

Marketing & Sales
LOOKING FOR Sales Staff in Bangalore Showroom with 6 to 8 years experience in Jewellery. Salary starting from 25000 up to 35000. Food and Accommodation shall be provided by the Company. Contact B.B. Jewellers 9986577790

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂ ನರ್ಸ್ ಗಳು ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9880545002

Wanted
ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ, ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು ಉಚಿತ ಊಟ ವಸತಿ ಸಂಬಳ 10,000 ರಿಂದ 15,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು -56 ಸಂಪರ್ಕಿಸಿ : 9606523337, 9606385001

ಭವಿಷ್ಯ
Astrology
ಕೊಳ್ಳೇಗಾಲದ ಪ್ರಸಿದ್ಧ ತಾಂತ್ರಿಕರು ನುಡಿದಂತೆ ನಡೆಯುವುದು, ಅಸಾಧ್ಯವಾದದ್ದು ಇಲ್ಲಿ ಸಾಧ್ಯ, ದಾಂಪತ್ಯ ಕಲಹ, ಶತ್ರುಗಳ ಕಾಟ, ಮಾಟಮಂತ್ರ, ವಾಮಾಚಾರ, ಸ್ತ್ರೀಪುರುಷ ವಶೀಕರಣ, ಚೌಡಿಮಂತ್ರ ಶಕ್ತಿಯಿಂದ ಸಶ್ಮಾನ ಕಾಳಿಯ ಬಲಿಷ್ಠ ಪ್ರಯೋಗಗಳಿಂದ 3ದಿನದಲ್ಲಿ ಶಾಶ್ವತ ಪರಿಹಾರ ಗ್ಯಾರಂಟಿ ಪ್ರಧಾನ ತಾಂತ್ರಿಕ ವೆಂಕಟೇಶ ಮೂರ್ತಿ: ಉತ್ತರಹಳ್ಳಿ ಬೆಂಗಳೂರು: 9686748656
ಶಕ್ತಿಶಾಲಿ ಮಹಾಲಕ್ಷ್ಮಿ ಯಂತ್ರ ವ್ಯಾಪಾರ ಅಭಿವೃದ್ಧಿ, ಹಣಕಾಸಿನ ಸಮಸ್ಯೆಯಿಂದ ಆರ್ಥಿಕ ಅಭಿವೃದ್ಧಿ ಹೊಂದಲು ಲಕ್ಷ್ಮಿಯಂತ್ರ ಕೊಡಲಾಗುತ್ತದೆ Rs.999 ಹಾಗೂ ಎಲ್ಲಾ ಕಠಿಣ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ: 9606701007, 8892501007
★॥ಸಿಗಂದೂರು ಚೌಡೇಶ್ವರಿ॥★ ವಶೀಕರಣಆಗಬೇಕಾದವರಿಗೆ ಹಚ್ಚುವುದಾಗಲಿ, ತಿನ್ನಿಸುವುದಾಗಲಿ, ಬಟ್ಟೆ, ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ7 ಗಂಟೆಗಳಲ್ಲಿ ಉಚಿತ ಪರಿಹಾರ. 9845153558
॥ಉಚಿತ ಭವಿಷ್ಯ॥ ಅಷ್ಟಮಂಗಳ ಪ್ರಶ್ನೆಯಿಂದ ನಿಮ್ಮ ಜೀವನದ ಸಕಲಸಂಕಷ್ಟಗಳು ನಿವಾರಣೆ, ಸ್ತ್ರೀಪುರುಷ ವಶೀಕರಣ ಕೇವಲ 1ಗಂಟೆಯಲ್ಲಿ 101% ಮಾಡಿಕೊಡುತ್ತಾರೆ. ಕರೆಮಾಡಿ. 9538486472
“ವಶೀಕರಣಯಂತ್ರ” ಜನವಶೀಕರಣ, ಲಕ್ಷ್ಮಿವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರು ವಶೀಕರಣ, ಕೇವಲ 2001 ರೂಪಾಯಿ ಗುರೂಜಿ ಮಹೇಶ್ 9686999517

ಪ್ರವಾಸ
Travel
ವಿಮಾನ, ರೈಲಿನಲ್ಲಿ 13-11-2021, ಪುರಿ, ಕೊನಾರ್ಕ್, ಭುವನೇಶ್ವರ್ 11500/- 22-11-2021, ಹೈದರಾಬಾದ್, 5999/- 29-11-2021 ಕಾಶಿ 3999/- ಅನುಗ್ರಹಯಾತ್ರಾ 9880079351
10.11.2021, 4 ದಿನಗಳ ಗೋವಾ, ದೂದ್- ಸಾಗರ್. 24.11.2021, 12 ದಿನಗಳ ಗುಜರಾತ್, ಮಧ್ಯಪ್ರದೇಶ. 18.11.2021, 12 ದಿನಗಳ ಕಾಶಿ, ನೇಪಾಳ, ಮುಕ್ತಿನಾಥ. 11.11.2021, 12 ದಿನಗಳ ಸಂಪೂರ್ಣ ರಾಜಸ್ಥಾನ್. 11.11.2021 11 ದಿನಗಳ ಪುರಿ, ಕೊಲ್ಕತಾ, ಡಾರ್ಜೀಲಿಂಗ್. ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್ ಬೆಂಗಳೂರು. 9880847001, 9342848791
ಶ್ರೀ ಮಹಾಲಕ್ಷ್ಮಿ ಟ್ರಾವೆಲ್ಸ್. 15-10-2021 ಆಂಧ್ರಪ್ರದೇಶ, ತೆಲಂಗಾಣ 8 ದಿನಗಳ ಪ್ರವಾಸ, 15-11-2021.ಒರಿಸ್ಸಾ, ಕಾಶಿ 8 ದಿನಗಳ ಪ್ರವಾಸ. 9880621353

ಸಾರ್ವಜನಿಕ ಪ್ರಕಟಣೆ
ಎಚ್ಚರಿಕೆ ಸೂಚನೆ
ಎಚ್ಚರಿಕೆ ಸೂಚನೆ
CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

BOOK YOUR CLASSIFIEDS ONLINE
5 EASY STEP TO BOOK YOUR CLASSIFIEDS ADS ONLINE
5 Easy steps to book your ads
1 LOG INTO WWW.DHCLASSIFIEDS.COM
2 CHOOSE THE CATEGORY
3 CHOOSE THE AD DATES
4 COMPOSE THE MATTER
5 CONFIRM AND PAY
REAL ESTATE, NAME CHANGE, EDUCATION, HEALTH, MATRI, ASTRO, JOB, AUTO
condition apply*
WWW.DHCLASSIFIEDS.COM
FOR MORE INFORMATION
CONTACT 9880856233 | 9886213331
Email: santhoshkumar@deccanherald.co.in
ಕ್ಲಾಸಿಫೈಡ್ಸ್

ರಾಯಲ್ ಚಾಲೆಂಜರ್ಸ್ ಬೆಂಗಳೂರು–ಹೈದರಾಬಾದ್ ಮುಖಾಮುಖಿ ಇಂದು

ಉನ್ನತ ಸ್ಥಾನಕ್ಕೇರುವತ್ತ ಕೊಹ್ಲಿ ಚಿತ್ತ

ಅಬುಧಾಬಿ (ಪಿಟಿಐ): ಪ್ಲೇ ಆಫ್ ಹಂತಕ್ಕೆ ಪ್ರವೇಶಿಸಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಅಂಕಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರುವ ಛಲದಲ್ಲಿದೆ.

ಬುಧವಾರ ನಡೆಯಲಿರುವ ಪಂದ್ಯದಲ್ಲಿ ಆರ್‌ಸಿಬಿ ಸನ್‌ರೈಸರ್ಸ್ ವಿರುದ್ಧ ಸೆಣಸಲಿದೆ. ಕೇನ್ ವಿಲಿಯಮ್ಸನ್ ನಾಯಕತ್ವದ ಹೈದರಾಬಾದ್ ಈಗಾಗಲೇ ಪ್ಲೇ ಆಫ್ ಹಾದಿಯಿಂದ ಹೊರಬಿದ್ದಿದೆ.

ಆರ್‌ಸಿಬಿ ಮೂರನೇ ಸ್ಥಾನದಲ್ಲಿದೆ. 12 ಪಂದ್ಯಗಳಿಂದ 16 ಅಂಕ ಗಳಿಸಿರುವ ವಿರಾಟ್ ಕೊಹ್ಲಿ ಬಳಗವು ಇನ್ನುಳಿದಿರುವ ಎರಡೂ ಪಂದ್ಯಗಳಲ್ಲಿ ಗೆದ್ದರೆ 20 ಅಂಕಗಳಿಗೇರಲಿದೆ. ತಲಾ 13 ಪಂದ್ಯಗಳನ್ನಾಡಿರುವ ಡೆಲ್ಲಿ 20 ಮತ್ತು ಚೆನ್ನೈ ಸೂಪರ್ ಕಿಂಗ್ಸ್ 18 ಅಂಕಗಳೊಂದಿಗೆ ಕ್ರಮವಾಗಿ ಮೊದಲೆರಡು ಸ್ಥಾನಗಳಲ್ಲಿವೆ. ಆರ್‌ಸಿಬಿಯು ಶುಕ್ರವಾರ ತನ್ನ ಕೊನೆಯ ಪಂದ್ಯದಲ್ಲಿ ಡೆಲ್ಲಿಯನ್ನು ಎದುರಿಸಲಿದೆ.

ಸತತ ಮೂರು ಪಂದ್ಯಗಳ ಜಯದಿಂದ ಆತ್ಮವಿಶ್ವಾಸ ಹೆಚ್ಚಿಸಿಕೊಂಡಿರುವ ವಿರಾಟ್ ಬಳಗವು ಗೆಲುವಿನ ಓಟ ಮುಂದುವರಿಸುವತ್ತ ಚಿತ್ತ ನೆಟ್ಟಿದೆ. ಸತತ ಮೂರು ಪಂದ್ಯಗಳಲ್ಲಿ ಅರ್ಧಶತಕ ಗಳಿಸಿರುವ ಗ್ಲೆನ್ ಮ್ಯಾಕ್ಸ್‌ವೆಲ್ ಅವರನ್ನು ನಿಯಂತ್ರಿಸುವುದು ಎದುರಾಳಿ ಬೌಲರ್‌ಗಳ ಮುಂದಿರುವ ಪ್ರಮುಖ ಸವಾಲು.

ವಿರಾಟ್ ಮತ್ತು ದೇವದತ್ತ ಪಡಿಕ್ಕಲ್ ಉತ್ತಮ ಅರಂಭ ನೀಡಿದರೆ, ಭರತ್, ಮ್ಯಾಕ್ಸ್‌ವೆಲ್ ಮತ್ತು ಎಬಿ ಡಿವಿಲಿಯರ್ಸ್ ದೊಡ್ಡ ಮೊತ್ತವನ್ನು ಪೇರಿಸುವ ವಿಶ್ವಾಸ ಮೂಡಿಸಿದ್ದಾರೆ. ಬೌಲಿಂಗ್ ವಿಭಾಗದಲ್ಲಿ ಹರ್ಷಲ್ ಪಟೇಲ್, ಸ್ಪಿನ್ನರ್ ಯಜುವೇಂದ್ರ ಚಾಹಲ್ ಅಮೋಘ ಲಯದಲ್ಲಿದ್ದಾರೆ. ಮೊಹಮ್ಮದ್ ಸಿರಾಜ್ ಮತ್ತು ಶಾಬಾಜ್ ಅಹಮದ್ ಕೂಡ ಎದುರಾಳಿಗಳಿಗೆ ಒತ್ತಡ ಹಾಕಬಲ್ಲ ಪರಿಣತರು.

ಸನ್‌ರೈಸರ್ಸ್ ತಂಡವು ಈ ಪಂದ್ಯದಲ್ಲಿಯೂ ಡೇವಿಡ್ ವಾರ್ನರ್ ಮತ್ತು ಕರ್ನಾಟಕದ ಮನೀಷ್ ಪಾಂಡೆಯವರನ್ನು ಕಣಕ್ಕಿಳಿಸುವುದು ಅನುಮಾನವಾಗಿದೆ. ಅಬ್ದುಲ್ ಸಮದ್ ಅವರನ್ನು ಬಿಟ್ಟರೆ ಉಳಿದ ಬ್ಯಾಟ್ಸ್‌ಮನ್‌ಗಳಿಂದ ಛಲದ ಆಟವು ಕಂಡುಬಂದಿಲ್ಲ. ಜೇಸನ್ ಹೋಲ್ಡರ್ ಮತ್ತು ಭುವನೇಶ್ವರ್ ಕುಮಾರ್ ತಮ್ಮ ಆಲ್‌ರೌಂಡ್ ಆಟಕ್ಕೆ ಕುದುರಿಕೊಂಡರೆ, ಆರ್‌ಸಿಬಿ ಕನಸಿಗೆ ಅಡ್ಡಗಾಲು ಹಾಕಬಹುದು.

ವಿರಾಟ್ ಕೊಹ್ಲಿ

ತಂಡಗಳು: ವಿರಾಟ್ ಕೊಹ್ಲಿ (ನಾಯಕ), ದೇವದತ್ತ ಪಡಿಕ್ಕಲ್, ಎಬಿ ಡಿವಿಲಿಯರ್ಸ್, ಶ್ರೀಕರ್ ಭರತ್, ಗ್ಲೆನ್ ಮ್ಯಾಕ್ಸ್‌ವೆಲ್, ಹರ್ಷಲ್ ಪಟೇಲ್, ಡೇನಿಯಲ್ ಕ್ರಿಸ್ಟಿಯನ್, ಕೈಲ್ ಜೆಮಿಸನ್, ಶಾಬಾಜ್ ಅಹಮದ್, ಮೊಹಮ್ಮದ್ ಸಿರಾಜ್, ಯಜುವೇಂದ್ರ ಚಾಹಲ್, ಪವನ್ ದೇಶಪಾಂಡೆ, ಸಚಿನ್ ಬೇಬಿ.
ಸನ್‌ರೈಸರ್ಸ್ ಹೈದರಾಬಾದ್: ಕೇನ್ ವಿಲಿಯಮ್ಸನ್ (ನಾಯಕ), ಜಾನಿ ಬೆಸ್ಟೊ, ಪ್ರಿಯಂ ಗರ್ಗ್, ವೃದ್ಧಿಮಾನ್ ಸಹಾ, ಅಬ್ದುಲ್ ಸಮದ್, ಜೇಸನ್ ಹೋಲ್ಡರ್, ಕೇದಾರ್ ಜಾಧವ್, ಮೊಹಮ್ಮದ್ ನಬಿ, ವಿಜಯಶಂಕರ್, ಭುವನೇಶ್ವರ್ ಕುಮಾರ್, ಜೆ. ಸುಚಿತ್, ಜೇಸನ್ ರಾಯ್, ರಶೀದ್ ಖಾನ್, ಸಂದೀಪ್ ಶರ್ಮಾ, ಡೇವಿಡ್ ವಾರ್ನರ್, ಮನೀಷ್ ಪಾಂಡೆ.

ಪಂದ್ಯ ಆರಂಭ: 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಕೆ.ಎಲ್.ರಾಹುಲ್	ಪಂಜಾಬ್	528
ಋತುರಾಜ್	ಚೆನ್ನೈ	521
ಶಿಖರ್ ಧವನ್	ಡೆಲ್ಲಿ	501

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹರ್ಷಲ್	ಆರ್‌ಸಿಬಿ	26
ಆವೇಶ್ ಖಾನ್	ಡೆಲ್ಲಿ	22
ಬೂಮ್ರಾ	ಮುಂಬೈ	19

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ಡೆಲ್ಲಿ ಕ್ಯಾಪಿಟಲ್ಸ್	13	10	3	00	00	20
ಚೆನ್ನೈ ಸೂಪರ್ ಕಿಂಗ್ಸ್	13	9	4	00	00	18
ಬೆಂಗಳೂರು	12	8	4	00	00	16
ಕೋಲ್ಕತ್ತ ನೈಟ್‌ರೈಡರ್ಸ್	13	6	7	00	00	12
ಮುಂಬೈ ಇಂಡಿಯನ್ಸ್	13	6	7	00	00	12
ಪಂಜಾಬ್	13	5	8	00	00	10
ರಾಜಸ್ಥಾನ	13	5	8	00	00	10
ಹೈದರಾಬಾದ್	12	2	10	00	00	4

* ಮಂಗಳವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ನೈಲ್ ದಾಳಿಗೆ ಒಲಿದ ಜಯ

ಇಶಾನ್ ಕಿಶನ್ ಸ್ಫೋಟಕ ಬ್ಯಾಟಿಂಗ್: ರಾಜಸ್ಥಾನ್ ಮಣಿಸಿದ ಮುಂಬೈ

ಶಾರ್ಜಾ: ಬಲಗೈ ವೇಗಿ ನೇಥನ್ ಕೌಲ್ಟರ್ ನೈಲ್ ಮತ್ತು ಜಿಮ್ಮಿ ನಿಶಾಮ್ ಅವರ ವೇಗದ ದಾಳಿಯ ಮುಂದೆ ರಾಜಸ್ಥಾನ್ ರಾಯಲ್ಸ್ ತಂಡವು ಕುಸಿಯಿತು. ಮುಂಬೈ ಇಂಡಿಯನ್ಸ್ 8 ವಿಕೆಟ್‌ಗಳಿಂದ ಜಯಿಸಿತು.

ಮಂಗಳವಾರ ಇಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ್ ರಾಯಲ್ಸ್ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 90 ರನ್‌ಗಳ ಅಲ್ಪಮೊತ್ತ ಪೇರಿಸಿತು. ಅದಕ್ಕುತ್ತರವಾಗಿ ಮುಂಬೈ ತಂಡವು 8.2 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 94 ರನ್ ಗಳಿಸಿ ಜಯಿಸಿತು. ಇಶಾನ್ ಕಿಶನ್ (ಔಟಾಗದೇ 50) ಮಿಂಚಿದರು.

ನಾಯಕ ರೋಹಿತ್ ಶರ್ಮಾ (22) ಮತ್ತು ಸೂರ್ಯಕುಮಾರ್ ಯಾದವ್ (13) ಕೊಡುಗೆ ನೀಡಿದರು.

ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಹಾಲಿ ಚಾಂಪಿಯನ್ ಮುಂಬೈ ತಂಡದ ನಾಯಕನ ನಿರ್ಧಾರವನ್ನು ಬೌಲಿಂಗ್ ಪಡೆ ಸಮರ್ಥಿಸಿಕೊಂಡಿತು. ಕೌಲ್ಟರ್ ನೈಲ್ ನಾಲ್ಕು, ನಿಶಾಮ್ ಮೂರು ಮತ್ತು ಜಸ್‌ಪ್ರೀತ್ ಬೂಮ್ರಾ ಎರಡು ವಿಕೆಟ್ ಗಳಿಸಿದರು.ರಾಯಲ್ಸ್ ತಂಡದ ಎವಿನ್ ಲೂಯಿಸ್ (24) ಮತ್ತು ಯಶಸ್ವಿ ಜೈಸ್ವಾಲ್ (12) ಉತ್ತಮ ಆರಂಭ ನೀಡುವ ಪ್ರಯತ್ನದಲ್ಲಿದ್ದರು. ಆದರೆ, ಕೌಲ್ಟರ್ ನೈಲ್ ಅದಕ್ಕೆ ಆಸ್ಪದ ಕೊಡಲಿಲ್ಲ. ನಾಲ್ಕನೇ ಓವರ್‌ನಲ್ಲಿ ಜೈಸ್ವಾಲ್ ವಿಕೆಟ್ ಗಳಿಸಿದರು.ನಂತರದ 63 ರನ್‌ಗಳ ಅಂತರದಲ್ಲಿ ಎಂಟು ವಿಕೆಟ್‌ಗಳು ಪತನವಾದವು. ಆರನೇ ಓವರ್‌ನಲ್ಲಿ ಎವಿನ್ ಲೂಯಿಸ್‌ಗೆ ಬೂಮ್ರಾ ಮತ್ತು ಅದರ ನಂತರದ ಓವರ್‌ನಲ್ಲಿ ನಿಶಾಮ್, ನಾಯಕ ಸಂಜು ಸ್ಯಾಮ್ಸನ್ ಅವರ ವಿಕೆಟ್ ಗಳಿಸಿದರು. ಸ್ಫೋಟಕ ಶೈಲಿಯ ಬ್ಯಾಟ್ಸ್‌ಮನ್ ಶಿವಂ ದುಬೆ ವಿಕೆಟ್ ಕಿತ್ತ ನಿಶಾಮ್, ರಾಹುಲ್ ತೆವಾಟಿಯಾ (12 ರನ್) ಆಟಕ್ಕೂ ಅಡ್ಡಿಯಾದರು.

ಇತ್ತ ಕೌಲ್ಟರ್ ನೈಲ್ ಗ್ಲೆನ್ ಫಿಲಿಪ್ಸ್, ಡೇವಿಡ್ ಮಿಲ್ಲರ್ ಮತ್ತು ಯುವ ಆಟಗಾರ ಚೇತನ್ ಸಕಾರಿಯಾ ವಿಕೆಟ್‌ಗಳನ್ನುಕಿತ್ತು ತಮ್ಮ ಬುಟ್ಟಿಗೆ ಹಾಕಿಕೊಂಡರು. ಚೊಚ್ಚಲ ಪಂದ್ಯವಾಡಿದ ದೆಹಲಿ ಹುಡುಗ ಕುಲದೀಪ್ ಯಾದವ್ ನಾಲ್ಕು ಎಸೆತ ಎದುರಿಸಿದರೂ ಖಾತೆ ತೆರೆಯದೇ ಔಟಾಗದೆ ಉಳಿದರು. ಅವರೊಂದಿಗೆ ಬಾಂಗ್ಲಾದ ಮುಸ್ತಫಿಜುರ್ ರೆಹಮಾನ್ (ಔಟಾಗದೆ 8) ಕೂಡ ವಿಕೆಟ್ ಉಳಿಸಿಕೊಂಡರು.

ಸ್ಕೋರ್ ಕಾರ್ಡ್

ರಾಜಸ್ಥಾನ್ ರಾಯಲ್ಸ್ 9 ವಿಕೆಟ್‌ಗೆ 90 (20 ಓವರ್)
ಎವಿನ್ ಎಲ್‌ಬಿಡಬ್ಲ್ಯು ಬೂಮ್ರಾ 23 (19ಎ, 4X3, 6X1), ಜೈಸ್ವಾಲ್ ಸಿ ಕಿಶನ್ ಬಿ ಕೌಲ್ಟರ್ ನೈಲ್ 12 (9ಎ, 4X3), ಸಂಜು ಸಿ ಜಯಂತ್ ಬಿ ನಿಶಾಮ್ 3 (6ಎ), ಶಿವಂ ಬಿ ನಿಶಾಮ್ 3 (8ಎ), ಫಿಲಿಪ್ ಬಿ ಕೌಲ್ಟರ್‌ನೈಲ್ 4 (13ಎ), ಮಿಲ್ಲರ್ ಎಲ್‌ಬಿಡಬ್ಲ್ಯು ಕೌಲ್ಟರ್‌ನೈಲ್ 15 (23ಎ), ತೆವಾಟಿಯಾ ಸಿ ಕಿಶನ್ ಬಿ ನಿಶಾಮ್ 12 (20ಎ), ಗೋಪಾಲ್ ಸಿ ಕಿಶನ್ ಬಿ ಬೂಮ್ರಾ 0 (1ಎ), ಸಕಾರಿಯಾ ಬಿ ಕೌಲ್ಟರ್‌ನೈಲ್ 6 (11ಎ, 4X1), ಕುಲದೀಪ್ ಔಟಾಗದೆ 0 (4ಎ), ಮುಸ್ತಫಿಜುರ್ ಔಟಾಗದೆ 8 (7ಎ, 6X1).
ಇತರೆ :(ನೋಬಾಲ್ 1, ವೈಡ್ 2) 3
ವಿಕೆಟ್ ಪತನ: 1–27 (ಯಶಸ್ವಿ ಜೈಸ್ವಾಲ್, 3.4), 2–41 (ಎವಿನ್ ಲೂಯಿಸ್, 5.3), 3–41 (ಸಂಜು ಸ್ಯಾಮ್ಸನ್, 6.1), 4–48 (ಶಿವಂ ದುಬೆ, 8.3), 5–50 (ಗ್ಲೆನ್ ಫಿಲಿಪ್, 9.4), 6–71 (ರಾಹುಲ್ ತೆವಾಟಿಯಾ, 14.6), 7–74 (ಶ್ರೇಯಸ್ ಗೋಪಾಲ್, 15.6), 8–76 (ಡೇವಿಡ್ ಮಿಲ್ಲರ್, 16.4), 9–82 (ಚೇತನ್ ಸಕಾರಿಯಾ, 18.4).
ಬೌಲಿಂಗ್: ಟ್ರೆಂಟ್ ಬೌಲ್ಟ್ 4–0–24–0, ಜಯಂತ್ ಯಾದವ್ 2–0–17–0, ಜಸ್‌ಪ್ರೀತ್ ಬೂಮ್ರಾ 4–0–14–2, ನೇಥನ್ ಕೌಲ್ಟರ್ ನೈಲ್ 4–0–14–4, ಜೇಮ್ಸ್ ನಿಶಾಮ್ 4–0–12–3, ಕೀರನ್ ಪೊಲಾರ್ಡ್ 2–0–9–0

ಮುಂಬೈ ಇಂಡಿಯನ್ಸ್ 2 ವಿಕೆಟ್‌ಗೆ 94 (8.2 ಓವರ್)
ರೋಹಿತ್ ಸಿ ಜೈಸ್ವಾಲ್ ಬಿ ಸಕಾರಿಯಾ 22 (13ಎ, 4X1, 6X2), ಕಿಶನ್ ಔಟಾಗದೆ 50 (25 ಎಸೆತ, 4X5, 6X3), ಸೂರ್ಯಕುಮಾರ್ ಸಿ ಲೊಮ್ರೊರ್ (ಬದಲಿ) ಬಿ ಮುಸ್ತಫಿಜುರ್ 13 (8ಎ, 4X3), ಹಾರ್ದಿಕ್ ಔಟಾಗದೆ 5 (6ಎ)
ಇತರೆ :(ಲೆಗ್‌ಬೈ 1, ನೋಬಾಲ್ 2, ವೈಡ್ 1) 4
ವಿಕೆಟ್ ಪತನ: 1–23 (ರೋಹಿತ್ ಶರ್ಮಾ, 3.2). 2–56 (ಸೂರ್ಯಕುಮಾರ್ ಯಾದವ್, 5.4)
ಬೌಲಿಂಗ್: ಮುಸ್ತಫಿಜುರ್ ರೆಹಮಾನ್ 2.2–0–32–1, ಚೇತನ್ ಸಕಾರಿಯಾ 3–1–36–1, ಶ್ರೇಯಸ್ ಗೋಪಾಲ್ 1–0–9–0, ಕುಲದೀಪ್ ಯಾದವ್ 2–0–16–0

ಫಲಿತಾಂಶ: ಮುಂಬೈ ಇಂಡಿಯನ್ಸ್‌ಗೆ 8 ವಿಕೆಟ್ ಜಯ

ಯಶಸ್ವಿ ಜೈಸ್ವಾಲ್ ವಿಕೆಟ್ ಗಳಿಸಿದ ಮುಂಬೈ ತಂಡದ ನೇಥನ್ ಕೌಲ್ಟರ್‌ನೈಲ್(ಬಲ) ಅವರನ್ನು ನಾಯಕ ರೋಹಿತ್ ಶರ್ಮಾ ಅಭಿನಂದಿಸಿದರು– ಪಿಟಿಐ ಚಿತ್ರ

ಅಂಪೈರಿಂಗ್ ಲೋಪಗಳಿಗೆ ಗಾವಸ್ಕರ್ ಕಿಡಿ

ದುಬೈ (ಪಿಟಿಐ): ಐಪಿಎಲ್ ಟೂರ್ನಿಯಲ್ಲಿ ಆಗುತ್ತಿರುವ ಅಂಪೈರಿಂಗ್ ಲೋಪಗಳ ಬಗ್ಗೆ ಭಾರತ ತಂಡದ ಮಾಜಿ ನಾಯಕ ಸುನೀಲ್ ಗಾವಸ್ಕರ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸೋಮವಾರ ಡೆಲ್ಲಿ ಕ್ಯಾಪಿಟಲ್ಸ್ ಮತ್ತು ಚೆನ್ನೈ ಸೂಪರ್ ಕಿಂಗ್ಸ್ ನಡುವಣ ಪಂದ್ಯದಲ್ಲಿ ಅಂಪೈರ್ ಅನಿಲ್ ಚೌಧರಿ ಅವರು ನೋಬಾಲ್ ತೀರ್ಪು ಬದಲಿಸಿ ವೈಡ್ ಬಾಲ್ ನೀಡಿದ್ದರು. ಈ ಕುರಿತು ಸ್ಟಾರ್ ಸ್ಪೋರ್ಟ್ಸ್ ವೀಕ್ಷಕ ವಿವರಣೆಯಲ್ಲಿ ಗಾವಸ್ಕರ್ ಕಿಡಿ ಕಾರಿದ್ದಾರೆ.

‘ಆ ಎಸೆತವು ನೋಬಾಲ್ ಆಗಿರುವುದು ಸ್ಪಷ್ಟವಾಗಿತ್ತು. ಈ ಹಿಂದೆ ಟಿವಿ ಅಂಪೈರ್‌ಗಳ ಕೆಲವು ತೀರ್ಪುಗಳು ಸೋಲು–ಗೆಲುವು ನಿರ್ಧರಿಸುವ ಮಟ್ಟಿಗೆ ಪರಿಣಾಮ ಬೀರಿದ್ದಿದೆ. ಆದ್ದರಿಂದ ಇಂತಹ ತಪ್ಪುಗಳು ನಡೆಯಬಾರದು’ ಎಂದಿದ್ದಾರೆ. ಪಂದ್ಯದಲ್ಲಿ ಡ್ವೇನ್ ಬ್ರಾವೊ ಹಾಕಿದ್ದ ಆ ಎಸೆತವು ಆಫ್‌ಸ್ಟಂಪಿನಾಚೆ ಪುಟಿದಿತ್ತು.

ಸಂಕ್ಷಿಪ್ತ ಸುದ್ದಿ

ದಿನೇಶ್ ನಾಯಕ

ಚೆನ್ನೈ (ಪಿಟಿಐ): ದಿನೇಶ್ ಕಾರ್ತಿಕ್ ಅವರು ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಆಡಲಿರುವ ತಮಿಳುನಾಡು ತಂಡದ ನಾಯಕತ್ವ ವಹಿಸಲಿದ್ದಾರೆ ಎಂದು ತಮಿಳುನಾಡು ಕ್ರಿಕೆಟ್ ಸಂಸ್ಥೆ ಪ್ರಕಟಿಸಿದೆ.

ತಂಡ ಇಂತಿದೆ: ದಿನೇಶ್ ಕಾರ್ತಿಕ್ (ನಾಯಕ), ವಿಜಯಶಂಕರ್ (ಉಪನಾಯಕ), ವಾಷಿಂಗ್ಟನ್ ಸುಂದರ್, ಟಿ. ನಟರಾಜನ್, ಸಂದೀಪ್ ವಾರಿಯರ್, ಆರ್. ಸಾಯಿಕಿಶೋರ್, ಬಾಬಾ ಅಪರಾಜಿತ್, ಎನ್. ಜಗದೀಶನ್, ಮುರುಗನ್ ಅಶ್ವಿನ್, ಎಂ. ಶಾರೂಖ್ ಖಾನ್, ಸಿ. ಹರಿ ನಿಶಾಂತ್, ಎಂ. ಸಿದ್ಧಾರ್ಥ್, ವಿ. ಗಂಗಶ್ರೀಧರ್ ರಾಜು, ಎಂ. ಮೊಹಮ್ಮದ್, ಜೆ. ಕೌಶಿಕ್, ಆರ್. ಸಂಜಯ್ ಯಾದವ್, ಆರ್. ಸಿಲಂಬರಸನ್, ಆರ್. ವಿವೇಕ್ ರೈ, ಬಿ. ಸಾಯಿ ಸುದರ್ಶನ್, ಪಿ. ಸರವಣ .

ಬಾಕ್ಸಿಂಗ್: ಲವ್ಲಿನಾಗೆ ನೇರಪ್ರವೇಶ


ಲವ್ಲಿನಾ ಬೊರ್ಗೊಹೈನ್

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್ ಮಹಿಳೆಯರ ಬಾಕ್ಸಿಂಗ್‌ನಲ್ಲಿ ಕಂಚಿನ ಪದಕ ಜಯಿಸಿರುವ ಲವ್ಲಿನಾ ಬೊರ್ಗೊಹೈನ್ ಅವರಿಗೆ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ಗೆ ನೇರಪ್ರವೇಶ ನೀಡಲು ಭಾರತ ಬಾಕ್ಸಿಂಗ್ ಫೆಡರೇಷನ್ ನಿರ್ಧರಿಸಿದೆ.

ತಂಡದ ಉಳಿದ ಬಾಕ್ಸರ್‌ಗಳನ್ನು ಹಿಸಾರ್‌ನಲ್ಲಿ ಇದೇ 21ರಿಂದ ನಡೆಯಲಿರುವ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಆಯ್ಕೆ ಮಾಡಲಾಗುವುದು. ಅದರಲ್ಲಿ ಚಿನ್ನದ ಪದಕಗಳನ್ನು ಗೆದ್ದವರು ಅವಕಾಶ ಗಿಟ್ಟಿಸುವರು ಎಂದು ಭಾರತ ಬಾಕ್ಸಿಂಗ್ ಫೆಡರೇಷನ್ ತಿಳಿಸಿದೆ.

ಪ್ರೀಕ್ವಾರ್ಟರ್‌ಗೆ ಅಪೂರ್ವಾ

ಬೆಂಗಳೂರು: ಕರ್ನಾಟಕದ ಅಪೂರ್ವಾ ಎಸ್.ಬಿ. ಅವರು ತಮಿಳುನಾಡಿನ ವೇದಾ ವರ್ಷಿತಾ ಅವರಿಗೆ ಸೋಲುಣಿಸಿ ಎಐಟಿಎ ಮಹಿಳೆಯರ ಟೆನಿಸ್ ಟೂರ್ನಿಯಲ್ಲಿ ಪ್ರೀಕ್ವಾರ್ಟರ್‌ಫೈನಲ್‌ಗೆ ಕಾಲಿಟ್ಟರು. ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಟೂರ್ನಿಯ ಮೊದಲ ಸುತ್ತಿನ ಪಂದ್ಯದಲ್ಲಿ ಅಪೂರ್ವಾ ಅವರಿಗೆ 7-5, 6-1ರಿಂದ ಜಯ ಒಲಿಯಿತು.

ಮಂದಾನ ಭವಿಷ್ಯದ ನಾಯಕಿ: ರಾಮನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವಕಪ್ ಕ್ರಿಕೆಟ್ ಟೂರ್ನಿ ಸಮೀಪಿಸುತ್ತಿರುವ ಈ ಹೊತ್ತಿನಲ್ಲಿ ತಂಡದ ನಾಯಕತ್ವವನ್ನು ಬದಲಿಸುವುದು ಸೂಕ್ತವಲ್ಲ. ಒಂದೊಮ್ಮೆ ವಿಶ್ವಕಪ್ ಟೂರ್ನಿ ಮುಗಿದ ನಂತರ ಫಲಿತಾಂಶ ಏನೇ ಇದ್ದರೂ ನಾಯಕತ್ವ ಬದಲಾವಣೆ ಮಾಡಬೇಕು. ಭಾರತ ಮಹಿಳಾ ತಂಡದ ಭವಿಷ್ಯದ ನಾಯಕಿಯಾಗಲು ಸ್ಮೃತಿ ಮಂದಾನ ಸೂಕ್ತ ಆಟಗಾರ್ತಿ ಎಂದು ಮಾಜಿ ಕ್ರಿಕೆಟಿಗ ಡಬ್ಲ್ಯು. ವಿ. ರಾಮನ್ ಹೇಳಿದ್ದಾರೆ.

ಮಂಗಳವಾರ ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್ ಆಯೋಜಿಸಿದ್ದ ಮಾಧ್ಯಮ ಸಂವಾದದಲ್ಲಿ ಅವರು ಮಾತನಾಡಿದರು.

‘ನಾಯಕತ್ವಕ್ಕೆ ವಯಸ್ಸಿನ ಹಂಗಿಲ್ಲ. ಯುವ ಆಟಗಾರ್ತಿ ಮಂದಾನ ಅವರಿಗೆ ನಾಯಕಿಯಾಗಿ ಕಾರ್ಯನಿರ್ವಹಿಸುವ ಎಲ್ಲ ಗುಣಗಳೂ ಇವೆ. ಅವರು ಉತ್ತಮ ಬ್ಯಾಟರ್ ಆಗಿರುವುದರ ಜೊತೆಗೆ ಪಂದ್ಯದ ಪ್ರತಿ ಮಜಲುಗಳನ್ನು ಸೂಕ್ಷ್ಮವಾಗಿ ಅವಲೋಕಿಸಬಲ್ಲ ಚಾಕಚಕ್ಯತೆ ಹೊಂದಿದ್ದಾರೆ. ಅಷ್ಟೇ ಅಲ್ಲ. ಕಳೆದ ಕೆಲವು ವರ್ಷಗಳಿಂದ ಅವರು ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಆಡಿರುವ ಅನುಭವ ಹೊಂದಿದ್ದಾರೆ’ ಎಂದು ರಾಮನ್ ಹೇಳಿದರು.

ಡಬ್ಲ್ಯು.ವಿ. ರಾಮನ್

ಸ್ಮೃತಿ 2013ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. 25 ವರ್ಷದ ಮಂದಾನ ಈಚೆಗೆ ಆಸ್ಟ್ರೇಲಿಯಾ ಎದುರಿನ ಪಿಂಕ್ ಬಾಲ್ ಟೆಸ್ಟ್‌ನಲ್ಲಿ ಶತಕ ಬಾರಿಸಿದ್ದರು.

ಆಸ್ಟ್ರೇಲಿಯಾ ಎದುರು ನಡೆಯಲಿರುವ ಟಿ20 ಕ್ರಿಕೆಟ್ ಸರಣಿಯಲ್ಲಿ ಅವರು ತಂಡದ ಉಪನಾಯಕಿಯಾಗಿದ್ದಾರೆ. ಟೆಸ್ಟ್ ಮತ್ತು ಏಕದಿನ ಕ್ರಿಕೆಟ್ ತಂಡಕ್ಕೆ 38 ವರ್ಷದ ಮಿಥಾಲಿ ರಾಜ್ ಮತ್ತು ಚುಟುಕು ಕ್ರಿಕೆಟ್ ತಂಡಕ್ಕೆ ಹರ್ಮನ್‌ಪ್ರೀತ್ ಕೌರ್ ನಾಯಕತ್ವ ವಹಿಸಿದ್ದಾರೆ.

‘ಹರ್ಮನ್‌ಪ್ರೀತ್ ಕೌರ್ ತಂಡಕ್ಕೆ ಮರಳಿರುವುದು ಉತ್ತಮ ಸಂಗತಿ. ಆಸ್ಟ್ರೇಲಿಯಾ ಎದುರಿನ ಟಿ20 ಸರಣಿಯಲ್ಲಿ ಅವರು ತಂಡವನ್ನು ಉತ್ತಮ ನಡೆಸುವ ವಿಶ್ವಾಸವಿದೆ. ಬ್ಯಾಟಿಂಗ್‌ನಲ್ಲಿ ಲಯ ಕಂಡುಕೊಳ್ಳುವ ನಿರೀಕ್ಷೆಯೂ ಇದೆ’ ಎಂದು ಹೇಳಿದರು.

ಕಾಮನ್‌ವೆಲ್ತ್ ಗೇಮ್ಸ್; ಹಿಂದೆ ಸರಿದ ಭಾರತ ಹಾಕಿ ತಂಡ

ನವದೆಹಲಿ (ಪಿಟಿಐ): ಕೋವಿಡ್ ಬಿಕ್ಕಟ್ಟು ಮತ್ತು ದೇಶದ ನಾಗರಿಕರಿಗೆ ಇಂಗ್ಲೆಂಡ್‌ನಲ್ಲಿ ತೋರುತ್ತಿರುವ ಕ್ಯಾರಂಟೈನ್ ನಿಯಮಗಳಲ್ಲಿನ ತಾರತಮ್ಯವನ್ನು ಉಲ್ಲೇಖಿಸಿ ಭಾರತವು 2022ರ ಕಾಮನ್‌ವೆಲ್ತ್ ಗೇಮ್ಸ್ ಹಾಕಿ ಸ್ಪರ್ಧೆಯಿಂದ ಹಿಂದೆ ಸರಿದಿದೆ.

ಹಾಕಿ ಇಂಡಿಯಾದ ಈ ನಿರ್ಧಾರವನ್ನು ಅಧ್ಯಕ್ಷ ಜ್ಞಾನೇಂದ್ರೊ ನಿಂಗೊಂಬಮ್ ಅವರು ಭಾರತ ಒಲಿಂಪಿಕ್ ಸಂಸ್ಥೆಯ (ಐಒಎ) ಅಧ್ಯಕ್ಷ ನರೀಂದರ್ ಬಾತ್ರಾ ಅವರಿಗೆ ತಿಳಿಸಿದ್ದಾರೆ.

ಬರ್ಮಿಂಗ್‌ಹ್ಯಾಮ್‌ನಲ್ಲಿ (ಜುಲೈ 28ರಿಂದ ಆಗಸ್ಟ್ 8) ನಡೆಯಲಿರುವ ಕಾಮನ್‌ವೆಲ್ತ್ ಗೇಮ್ಸ್ ಮತ್ತು ಚೀನಾದ ಹ್ಯಾಂಗ್‌ಜೊನಲ್ಲಿ ನಿಗದಿಯಾಗಿರುವ ಏಷ್ಯನ್ ಗೇಮ್ಸ್ (ಸೆಪ್ಟೆಂಬರ್ 10ರಿಂದ 25) ನಡುವೆ ಕೇವಲ 32-ದಿನದ ವಿರಾಮವಿದೆ. ಅಲ್ಲದೆ ಕೋವಿಡ್‌ನಿಂದ ಹೆಚ್ಚು ಬಾಧಿತವಾಗಿರುವ ದೇಶಗಳಲ್ಲಿ ಒಂದಾದ ಇಂಗ್ಲೆಂಡ್‌ಗೆ ತನ್ನ ಆಟಗಾರರನ್ನು ಕಳುಹಿಸುವ ಅಪಾಯವನ್ನು ಮೇಲೆಳೆದುಕೊಳ್ಳಲು ಬಯಸಿಲ್ಲ ಎಂದು ಹಾಕಿ ಇಂಡಿಯಾ ವಾದಿಸಿದೆ.

ಇಂಗ್ಲೆಂಡ್ ಇತ್ತೀಚೆಗೆ ಭಾರತದ ಕೋವಿಡ್ ಲಸಿಕೆ ಪ್ರಮಾಣಪತ್ರಗಳಿಗೆ ಮಾನ್ಯತೆ ನೀಡಲು ನಿರಾಕರಿಸಿತ್ತು. ದೇಶದಿಂದ ತೆರಳುವ ಪ್ರಯಾಣಿಕರಿಗೆ, ಸಂಪೂರ್ಣ ಲಸಿಕೆ ಹಾಕಿದ್ದರೂ 10 ದಿನಗಳ ಕಠಿಣ ಕ್ವಾರಂಟೈನ್ ಅವಧಿ ಪೂರ್ಣಗೊಳಿಸುವ ನಿಯಮ ಜಾರಿ ಮಾಡಿತ್ತು.

ಭುವನೇಶ್ವರದಲ್ಲಿ ನಡೆಯಲಿರುವ ಎಫ್‌ಐಎಚ್ ಪುರುಷರ ಜೂನಿಯರ್ ವಿಶ್ವಕಪ್‌ನಲ್ಲಿ ತಾನು ಭಾಗವಹಿಸುವುದಿಲ್ಲ ಎಂದು ಇಂಗ್ಲೆಂಡ್ ಪ್ರಕಟಿಸಿತ್ತು.

ಭಾರತ ಹಾಕಿ ತಂಡದ ನಾಯಕ ಮನ್‌ಪ್ರೀತ್ ಸಿಂಗ್ (ಬಲ) ಮತ್ತು ಕೋಚ್ ಗ್ರಹಾಂ ರೀಡ್– ಪಿಟಿಐ ಚಿತ್ರ

ಭವಿಷ್ಯದ ಟೂರ್ನಿಗಳತ್ತ ಚಿತ್ತ: ರೀಡ್

ಬೆಂಗಳೂರು (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತ ತಂಡವು ಐತಿಹಾಸಿಕ ಕಂಚಿನ ಪದಕ ಜಯಿಸಿದ ಬಳಿಕ ನಡೆಯುತ್ತಿರುವ ರಾಷ್ಟ್ರೀಯ ಶಿಬಿರದಲ್ಲಿ ಮುಂಬರುವ ಟೂರ್ನಿಗಳಿಗೆ ಸಜ್ಜುಗೊಳ್ಳುವ ಆದ್ಯತೆ ಇರಲಿದೆ ಎಂದು ಪುರುಷರ ಹಾಕಿ ತಂಡದ ಮುಖ್ಯ ತರಬೇತುದಾರ ಗ್ರಹಾಂ ರೀಡ್ ಹೇಳಿದ್ದಾರೆ.

ಕೋವಿಡ್‌ನಿಂದಾಗಿ ಹಲವು ಸವಾಲುಗಳನ್ನು ಎದುರಿಸುತ್ತಿದ್ದರೂ ಟೋಕಿಯೊ ಒಲಿಂಪಿಕ್ಸ್‌ಗೆ ಮುನ್ನ ಬೆಂಗಳೂರಿನಲ್ಲಿರುವ ಭಾರತ ಕ್ರೀಡಾ ಪ್ರಾಧಿಕಾರ ಕೇಂದ್ರವು (ಸಾಯ್) ಆಟಗಾರರಿಗೆ ನೀಡಿದ ನೆರವಿನ ಕುರಿತು ಅವರು ಸಂತಸ ವ್ಯಕ್ತಪಡಿಸಿದರು.

ಇಲ್ಲಿಯ ಸಾಯ್ ಕೇಂದ್ರದಲ್ಲಿ ಸೋಮವಾರದಿಂದ ತರಬೇತಿ ಶಿಬಿರ ಆರಂಭವಾಗಿದೆ.

ಕೋವಿಡ್ ಸಂಬಂಧಿತ ಎಲ್ಲ ನಿಯಮಾವಳಿಗಳನ್ನು ಶಿಬಿರದಲ್ಲಿ ಕಟ್ಟುನಿಟ್ಟಾಗಿ ಅನುಸರಿಸಲಾಗುತ್ತಿದೆ. ಎಲ್ಲಾ ಆಟಗಾರರು ಮತ್ತು ಸಹಾಯಕ ಸಿಬ್ಬಂದಿ ರ್‍ಯಾಪಿಡ್ ಆ್ಯಂಟಿಜೆನ್ ಪರೀಕ್ಷೆಗೆ (ಆರ್‌ಎಟಿ) ಒಳಗಾಗಿದ್ದಾರೆ. ಕ್ಯಾರಂಟೈನ್ ನಿಯಮದ ಪ್ರಕಾರ ಪ್ರತ್ಯೇಕ ಕೊಠಡಿಗಳಲ್ಲಿ ತಂಗಿದ್ದಾರೆ ಎಂದು ಸಾಯ್‌ನ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಐಪಿಎಲ್: ಹೊಸ ತಂಡಗಳಿಗೆ ಮೌಲ್ಯವರ್ಧನೆ ಖಚಿತ– ನೆಸ್

ನವದೆಹಲಿ (ಪಿಟಿಐ): ಮುಂದಿನ ಬಾರಿಯ ಐಪಿಎಲ್ ಟೂರ್ನಿಗೆ ಸೇರ್ಪಡೆಗೊಳ್ಳಲಿರುವ ಎರಡು ಹೊಸ ತಂಡಗಳು ನಿಗದಿಯಾಗಿರುವ ಮೂಲಬೆಲೆಗಿಂತ ದುಪ್ಪಟ್ಟು ಮೌಲ್ಯಕ್ಕೆ ಹರಾಜಾಗುವ ಸಾಧ್ಯತೆ ಇದೆ ಎಂದು ಪಂಜಾಬ್ ಕಿಂಗ್ಸ್ ಫ್ರ್ಯಾಂಚೈಸಿಯ ಸಹಮಾಲೀಕ ನೆಸ್ ವಾಡಿಯಾ ಹೇಳಿದ್ದಾರೆ.

ಮುಂದಿನ ವರ್ಷದ ಐಪಿಎಲ್‌ನಲ್ಲಿ 10 ತಂಡಗಳು ಕಣಕ್ಕಿಳಿಯಲಿವೆ. ಹೊಸ ಎರಡು ತಂಡಗಳನ್ನು ಇದೇ 25ರಂದು ಪ್ರಕಟಿಸಲಾಗುತ್ತಿದೆ. ತಂಡದ ಮೂಲಬೆಲೆಯನ್ನು ಎರಡು ಸಾವಿರ ಕೋಟಿ ರೂಪಾಯಿ ನಿಗದಿ ಮಾಡಲಾಗಿದೆ. ಫ್ರ್ಯಾಂಚೈಸಿಗಳ ಖರೀದಿಗಾಗಿ ಬಿಡ್ ನಡೆಯಲಿದೆ.

ಈ ಕುರಿತು ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿರುವ ವಾಡಿಯಾ, ‘ಸದ್ಯ ಫ್ರ್ಯಾಂಚೈಸಿಯ ಮೂಲಬೆಲೆಯನ್ನು ಎರಡು ಸಾವಿರ ಕೋಟಿ ರೂಪಾಯಿ ಇದೆ. ಇದು ಸಾಂಪ್ರದಾಯಿಕವಾಗಿ ಇಟ್ಟಿರುವುದಾಗಿದೆ. ಆದರೆ, ಈ ಬೆಲೆಯು ಶೇ 50ರಿಂದ 100ರವರೆಗೂ ಬಿಡ್‌ನಲ್ಲಿ ಏರಿಕೆಯಾಗಬಹುದು. ಕನಿಷ್ಠ ಮೂರು ಸಾವಿರ ಕೋಟಿಗಿಂತ ಹೆಚ್ಚಿನ ಮೌಲ್ಯಕ್ಕೆ ಏರಬಹುದು’ ಎಂದಿದ್ದಾರೆ.

‘ಎರಡು ಹೊಸ ತಂಡಗಳ ಸೇರ್ಪಡೆಯಿಂದ ಯಾವುದೇ ತೊಂದರೆಯಿಲ್ಲ. ಒಳ್ಳೆಯ ಬೆಳವಣಿಗೆ ಇದು. ಐಪಿಎಲ್ ಎಂಬುದು ಅತ್ಯುತ್ಕೃಷ್ಟ ಮತ್ತು ಪ್ರತಿಷ್ಠಿತ ಉತ್ಪನ್ನವಾಗಿದೆ. ತಂಡಗಳ ಸಂಖ್ಯೆ ಹೆಚ್ಚುವುದರಿಂದ ಇಡೀ ಟೂರ್ನಿಯ ಮೌಲ್ಯವು ಏರಲಿದೆ. ಅಧಿಕೃತ ಪ್ರಸಾರಕರಿಗೆ ಇದರಿಂದ ಬಹಳ ಪ್ರಯೋಜನವಾಗಲಿದೆ’ ಎಂದು ವಾಡಿಯಾ ಅಭಿಪ್ರಾಯಪಟ್ಟಿದ್ದಾರೆ.

ಕೆಎಸ್‌ಸಿಎ ಗುಂಪು ಒಂದು ಮೂರನೇ ಡಿವಿಷನ್ ಲೀಗ್ ಟೂರ್ನಿಯಲ್ಲಿ ವಿಜೇತ ಹನುಮಂತನಗರ ಕ್ರಿಕೆಟ್ ಕ್ಲಬ್ ತಂಡ. ಅಂತಿಮ ಲೀಗ್ ಪಂದ್ಯದಲ್ಲಿ ತಂಡವು ಉತ್ತಮ ರನ್‌ರೇಟ್ ಆಧಾರದಲ್ಲಿ ಮಲ್ಲೇಶ್ವರಂ ಜಿಮಖಾನಾ ತಂಡವನ್ನು ಮಣಿಸಿತು. ನಿಂತವರು (ಎಡದಿಂದ): ರಕ್ಷಿತ್, ಶಿವಕುಮಾರ್, ಅಮಿತ್, ಚಿರಂಜೀವಿ, ತಾನ್ಸ್, ಅರ್ನವ್, ಆಶ್ವಿಜ್. ಕುಳಿತವರು: ಭರತ್ ಗೌಡ, ಗಗನ್, ಎಸ್.ಕೆ. ಮೊಯಿನುದ್ದೀನ್, ಮಿಥುನ್, ರೋಷನ್ ಹಾಗೂ ವಿಕ್ರಮ್.

ವಿಶ್ವ ಜೂನಿಯರ್ ಶೂಟಿಂಗ್ ಚಾಂಪಿಯನ್‌ಷಿಪ್

ವಿಶ್ವದಾಖಲೆಯೊಂದಿಗೆ ಚಿನ್ನ ಗೆದ್ದ ಐಶ್ವರ್ಯ ಪ್ರತಾಪ್

ಲಿಮಾ, ಪೆರು (ಪಿಟಿಐ): ಅದ್ಭುತ ಸಾಮರ್ಥ್ಯ ತೋರಿದ ಭಾರತದ ಯುವ ಶೂಟರ್ ಐಶ್ವರ್ಯಪ್ರತಾಪ್ ಸಿಂಗ್ ಥೋಮರ್, ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ವಿಶ್ವದಾಖಲೆ ಸ್ಕೋರ್‌ನೊಂದಿಗೆ ಚಿನ್ನದ ಪದಕ ಕೊರಳಿಗೇರಿಸಿಕೊಂಡರು. ಪುರುಷರ 50 ಮೀಟರ್ಸ್ ರೈಫಲ್ ತ್ರಿ ಪೊಸಿಷನ್ಸ್‌ನಲ್ಲಿ ಅವರಿಗೆ ಪದಕ ಒಲಿಯಿತು.

ಸೋಮವಾರ ಅರ್ಹತಾ ಸುತ್ತಿನಲ್ಲಿ ಅವರು 1185 ಸ್ಕೋರ್ ದಾಖಲಿಸಿ ವಿಶ್ವ ಜೂನಿಯರ್ ವಿಭಾಗದಲ್ಲಿನ ದಾಖಲೆಯನ್ನು ಸರಿಗಟ್ಟಿದರು. ಫೈನಲ್‌ನಲ್ಲಿ 463.4 ಸ್ಕೋರ್ ಗಳಿಸಿ 2019ರಲ್ಲಿ ಜೆಕ್ ಗಣರಾಜ್ಯದ ಫಿಲಿಪ್ ನೆಪೆಚಾಲ್ (462.9) ನಿರ್ಮಿಸಿದ್ದ ದಾಖಲೆಯನ್ನು ಅಳಿಸಿ ಹಾಕಿದರು.

ಈ ವಿಭಾಗದಲ್ಲಿ ಫ್ರಾನ್ಸ್‌ನ ಲೂಕಾಸ್ ಕ್ರಿಜ್ಸ್ (456.5) ಬೆಳ್ಳಿ ಪದಕ ಗೆದ್ದುಕೊಂಡರೆ, ಕಂಚಿನ ಪದಕವು ಅಮೆರಿಕದ ಗವಿನ್ ಬಾರ್ನಿಕ್ (446.6) ಅವರ ಪಾಲಾಯಿತು.

ಇದೇ ವಿಭಾಗದಲ್ಲಿ ಸ್ಪರ್ಧಿಸಿದ್ದ ಭಾರತದ ಸಂಸ್ಕಾರ್ ಹವೇಲಿಯಾ 11ನೇ ಸ್ಥಾನ ಗಳಿಸಿದರು. ಪಂಕಜ್ ಮುಖೇಜಾ, ಸಾರ್ತಜ್ ತಿವಾನ ಮತ್ತು ಗುರ್ಮನ್ ಸಿಂಗ್ ಅವರು ಕ್ರಮವಾಗಿ 15, 16 ಮತ್ತು 22ನೇ ಸ್ಥಾನಕ್ಕೆ ಸಮಾಧಾನಪಡಬೇಕಾಯಿತು.

ಚಿನ್ನ ಗೆದ್ದ ಐಶ್ವರಿಪ್ರತಾಪ್ ಸಿಂಗ್ ಥೋಮರ್ ಪಿಟಿಐ ಚಿತ್ರ

ಇದಕ್ಕೂ ಮೊದಲು ಯುವ ತಾರೆ ಮನು ಭಾಕರ್ ಅವರನ್ನು ಮೀರಿಸಿದ ಭಾರತದ 14 ವರ್ಷ ವಯಸ್ಸಿನ ಶೂಟರ್ ನಾಮ್ಯಾ ಕಪೂರ್ ಮಹಿಳೆಯರ 25 ಮೀಟರ್ಸ್ ಪಿಸ್ತೂಲ್ ವಿಭಾಗದಲ್ಲಿ ಚಿನ್ನ ತಮ್ಮದಾಗಿಸಿಕೊಂಡಿದ್ದರು.

ಸೋಮವಾರ ನಡೆದ ಫೈನಲ್‌ನಲ್ಲಿ ನಾಮ್ಯಾ ಅವರು 36 ಸ್ಕೋರ್ ದಾಖಲಿಸಿದರು. ಫ್ರಾನ್ಸ್‌ನ ಕ್ಯಾಮಿಲೆ ಜೆಡ್ರ್ರಜಿವಿಸ್ಕಿ (33) ಹಾಗೂ ಭಾರತದ ಮನು (31) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.

ಸದ್ಯ ಭಾರತವು ಎಂಟು ಚಿನ್ನ, ಆರು ಬೆಳ್ಳಿ ಮತ್ತು ಮೂರು ಕಂಚು ಸೇರಿದಂತೆ ಒಟ್ಟು 17 ಪದಕಗಳೊಂದಿಗೆ ಚಾಂಪಿಯನ್‌ಷಿಪ್‌ನಲ್ಲಿ ಅಗ್ರಸ್ಥಾನದಲ್ಲಿದೆ.

ಟೋಕಿಯೊ ಒಲಿಂಪಿಕ್ಸ್ ಬಳಿಕ ಹಲವು ವಿಭಾಗಗಳಲ್ಲಿ ನಡೆಯುತ್ತಿರುವ ಮೊದಲ ಶೂಟಿಂಗ್ ಚಾಂಪಿಯನ್‌ಷಿಪ್ ಇದಾಗಿದ್ದು, 32 ದೇಶಗಳ ಸುಮಾರು 370 ಕ್ರೀಡಾಪಟುಗಳು ಭಾಗವಹಿಸಿದ್ದಾರೆ.

ಟಿ20 ವಿಶ್ವಕಪ್‌ಗೆ ಸ್ಯಾಮ್ ಕರನ್ ಇಲ್ಲ

ಸ್ಯಾಮ್ ಕರನ್

ಲಂಡನ್ (ಪಿಟಿಐ): ಬೆನ್ನುನೋವಿನ ಹಿನ್ನೆಲೆಯಲ್ಲಿ ಇಂಗ್ಲೆಂಡ್‌ನ ಆಲ್‌ರೌಂಡರ್ ಸ್ಯಾಮ್ ಕರನ್ ಅವರು ಐಸಿಸಿ ಟಿ20 ವಿಶ್ವಕಪ್ ಟೂರ್ನಿಯಿಂದ ಹೊರಗುಳಿಯಲಿದ್ದಾರೆ. ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ (ಇಸಿಬಿ) ಮಂಗಳವಾರ ಈ ವಿಷಯ ತಿಳಿಸಿದೆ.

‘ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಶನಿವಾರ ನಡೆದ ರಾಜಸ್ಥಾನ ರಾಯಲ್ಸ್ ವಿರುದ್ಧದ ಪಂದ್ಯದ ನಂತರ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಸ್ಯಾಮ್ ಕರನ್ ಬೆನ್ನುನೋವಿನಿಂದ ಬಳಲಿದ್ದರು. ಸ್ಕ್ಯಾನ್ ಮಾಡಿದಾಗ ಗಾಯವಾಗಿದ್ದು ಗೊತ್ತಾಗಿದೆ‘ ಎಂದು ಇಸಿಬಿ ಹೇಳಿದೆ.

ಇನ್ನೆರಡು ದಿನಗಳಲ್ಲಿ ಅವರು ಇಂಗ್ಲೆಂಡ್‌ಗೆ ತೆರಳಲಿದ್ದು, ಅಲ್ಲಿಯ ವೈದ್ಯರ ತಂಡದಿಂದ ಮತ್ತೊಮ್ಮೆ ಪರೀಕ್ಷೆಗೆ ಒಳಗಾಗಲಿದ್ದಾರೆ.

ಸ್ಯಾಮ್ ಸಹೋದರ ಟಾಮ್ ಕರನ್ ಅವರನ್ನು ಇಂಗ್ಲೆಂಡ್ ತಂಡಕ್ಕೆ ಸೇರಿಸಲಾಗಿದೆ.

ಬೆಂಗಳೂರಿನಲ್ಲಿ ಡಿ.22ರಿಂದ ಪ್ರೊ ಕಬಡ್ಡಿ ಲೀಗ್ ಕಲರವ

ಬೆಂಗಳೂರು (ಪಿಟಿಐ): ಪ್ರೊ ಕಬಡ್ಡಿ ಲೀಗ್‌ನ (ಪಿಕೆಎಲ್) ಎಂಟನೇ ಆವೃತ್ತಿಯ ಟೂರ್ನಿಗೆ ಬೆಂಗಳೂರು ಆತಿಥ್ಯ ವಹಿಸಲಿದೆ. ಡಿಸೆಂಬರ್ 22ರಿಂದ ಪಂದ್ಯಗಳು ನಡೆಯಲಿದ್ದು, ಕೋವಿಡ್ ಪಿಡುಗಿನ ಹಿನ್ನೆಲೆಯಲ್ಲಿ ಪ್ರೇಕ್ಷಕರಿಗೆ ಅವಕಾಶ ನೀಡಿಲ್ಲ ಎಂದು ಲೀಗ್‌ನ ಆಯೋಜಕರು ತಿಳಿಸಿದ್ದಾರೆ.

ಟೂರ್ನಿಗಾಗಿ ಆಟಗಾರರ ಹರಾಜು ಪ್ರಕ್ರಿಯೆ ಆಗಸ್ಟ್ 29ರಿಂದ 31ರವರೆಗೆ ಮುಂಬೈನಲ್ಲಿ ನಡೆದಿತ್ತು.

‘ಆಟಗಾರರು ಮತ್ತು ಎಲ್ಲಾ ಭಾಗೀದಾರರ ಆರೋಗ್ಯ ಮತ್ತು ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು, ಈ ವರ್ಷ ಲೀಗ್ ಅನ್ನು ಪ್ರೇಕ್ಷಕರ ಅನುಪಸ್ಥಿತಿಯಲ್ಲಿ ಬೆಂಗಳೂರಿನಲ್ಲಿ ಮಾತ್ರ ಆಯೋಜಿಸಲಾಗುತ್ತದೆ’ ಎಂದು ಈ ಕ್ರೀಡಾಕೂಟ ಆಯೋಜಕ ಸಂಸ್ಥೆ ಮಶಾಲ್ ಸ್ಪೋರ್ಟ್ಸ್ ತಿಳಿಸಿದೆ.

‘ಮಹತ್ವದ ಟೂರ್ನಿಗಳನ್ನು ಆಯೋಜಿಸಲು ಬೇಕಾದ ಎಲ್ಲ ಸೌಲಭ್ಯಗಳು, ಸುರಕ್ಷಾ ವ್ಯವಸ್ಥೆಗಳು ಬೆಂಗಳೂರಿನಲ್ಲಿವೆ. ಪಿಕೆಎಲ್ ಆಯೋಜಿಸಲು ನಾವು ಕಾತರರಾಗಿದ್ದೇವೆ‘ ಎಂದು ಮಶಾಲ್ ಸ್ಪೋರ್ಟ್ಸ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅನುಪಮ್ ಗೋಸ್ವಾಮಿ ತಿಳಿಸಿದ್ದಾರೆ.

ಸರ್ಕಾರದ ಕೋವಿಡ್ ತಡೆ ನಿಯಮಾವಳಿಗಳು ಅನುಸರಿಸಲು ಲೀಗ್ ಆಯೋಜಕರು, ಮಾರ್ಗಸೂಚಿಗಳನ್ನು ರಚಿಸಲಿದ್ದಾರೆ. ಕಟ್ಟುನಿಟ್ಟಿನ ಸುರಕ್ಷತಾ ಕ್ರಮಗಳು ಮತ್ತು ಬಯೋಬಬಲ್ ರಚಿಸಲು ವಿಶೇಷ ಸಂಸ್ಥೆಗಳೊಂದಿಗೆ ಕಾರ್ಯನಿರ್ವಹಿಸಲಿದ್ದಾರೆ.

ಪ್ರಶ್ನೆಯ ಗುಟ್ಟು ಮಾಡಿರಿ ರಟ್ಟು
ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲಾ ಓದುಗರಿಗೆ ಧನ್ಯವಾದಗಳು. ಸ್ಪರ್ಧೆಗೆ 40000ಕ್ಕೂ ಅಧಿಕ ಪ್ರತಿಕ್ರಿಯೆ ಬಂದಿದ್ದು, ಹೆಚ್ಚು ಪ್ರಶ್ನೆಗಳಿಗೆ ಸರಿ ಉತ್ತರ ಕಳುಹಿಸಿದವರಲ್ಲಿ 1 ಬಂಪರ್ ಬಹುಮಾನ, 3 ಸ್ಪೆಷಲ್ ಬಹುಮಾನ ಮತ್ತು 220 ಪ್ರತಿ ದಿನ ವಿಜೇತರನ್ನು ಆಯ್ಕೆ ಮಾಡಲಾಗಿದೆ. ವಿವರಗಳಿಗೆ www.bit.ly/pvguttuwinners ಗೆ ಭೇಟಿ ಕೊಡಿ.
ಪೂಜಾ B S, ಚನ್ನಪಟ್ಟಣ ವಾಟರ್ ಪ್ಯೂರಿಫೈರ್ ವಿಜೇತರು